ಮಾನವಿಕ ಕರ್ಣಾಟಕ

ಸಂಪುಟ ೧೯ ; ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೯

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೯ ; ಸಂಚಿಕೆ ೧

ಜನವರಿ ೧೯೮೯ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೯

MANAVIKA KARNATAKA, Kannada Quarterly of the *University of Mysore*, Volume 19, Number 1, January 1989, Edited by Dr. M. V. Srinivas and Sri M. N. Nanjundaraje Urs.

ಪ್ರಧಾನ ಸಂಪಾದಕರು

ಡಾ. ಜೀ. ಶಂ. ಪರಮಶಿವಯ್ಯ

ಸಂಪಾದಕರು

ಡಾ. ಎಂ. ವಿ. ಶ್ರೀನಿವಾಸ್
ಎಂ. ಎನ್. ನಂಜುಂಡರಾಜೇ ಅರಸ್

ಪ್ರಕಾಶಕರು

ಕೆ. ಟಿ. ವೀರಪ್ಪ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦ ೦೦೬

ಮುದ್ರಕರು

ಎನ್. ಹನುಮಯ್ಯ
ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೫೭೦ ೦೦೬

ವಿಷಯಸೂಚಿ

ಲೇಖಕರ ಸೂಚಿ

ಆರ್. ಆರ್. ಕುಲಕರ್ಣಿ	ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿಕಲಾ ಕಾಲೇಜು, ಶಿವಮೊಗ್ಗ
ಯಮುನಾಬಾಯಿ ಆರ್. ರಾವ್	'ಶ್ರೀ', ೪೦೯,/೨ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು
ಹರೀಶ್	ಕ್ಷೇತ್ರಸಹಾಯಕ, ಮಾನವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
ಬಿ. ಎನ್. ಮಂಜುನಾಥಯ್ಯ	ಪ್ರವಾಚಕರು, ಶಿಕ್ಷಣಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
ಡಾ. ಸಿ. ಎಸ್. ರಾಮಚಂದ್ರ	ಉಪನ್ಯಾಸಕರು, ಭಾಷಾಶಾಸ್ತ್ರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
ಡಾ. ಆರ್. ಇಂದಿರಾ	ಪ್ರವಾಚಕರು, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
ಎಂ. ಬಿ. ಸೋಮಣ್ಣ	ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
ಹೆಚ್. ಪಿ. ದೇವಕಿ	ಉಪನ್ಯಾಸಕರು, ಸಂಸ್ಕೃತ ವಿಭಾಗ, ಮಾನಸಗಂಗೋತ್ರಿ, ಮೈಸೂರು
ಎಂ. ಎಸ್. ಚಂದ್ರಶೇಖರಪ್ಪ	ಉಪನ್ಯಾಸಕರು, ಸಮಾಜಕಾರ್ಯ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಡಾ|| ಆರ್. ಆರ್. ಕುಲಕರ್ಣಿ

ಕರ್ನಾಟಕ ರಾಜ್ಯದಲ್ಲಿ ಜಿಲ್ಲೆಗಳು ಹಾಗೂ ತಾಲ್ಲೂಕುಗಳ ಮರುವಿಂಗಡಣೆಗಾಗಿ ನಡೆದುಬಂದ ದಾರಿ

ಹಿಂದಿನ ಲೇಖನದಲ್ಲಿ ಪುನರ್ಘಟಿತ ಕರ್ನಾಟಕ ರಾಜ್ಯವು ನಿರ್ಮಾಣ ಹೊಂದಿದ ನಂತರ ಜಿಲ್ಲೆಗಳು ಹಾಗೂ ತಾಲ್ಲೂಕುಗಳ ಆಡಳಿತ ವ್ಯವಸ್ಥೆಯನ್ನು ಕುರಿತು ವಿವರಿಸಲಾಗಿದೆ. ಆದರೆ 1956ರ ನವೆಂಬರ್ 1ರಿಂದಲೂ ಜಿಲ್ಲೆಗಳು, ತಾಲ್ಲೂಕುಗಳು ಮರುವಿಂಗಡನೆ ಹೊಂದಬೇಕು ಎಂಬ ಅಭಿಪ್ರಾಯವನ್ನು ಅನೇಕರು ವ್ಯಕ್ತ ಮಾಡುತ್ತ ಬಂದಿದ್ದಾರೆ. ನಮ್ಮ ರಾಜ್ಯ ಸರಕಾರವು ಈ ವಿಷಯವನ್ನು ಕುರಿತು ಸಾಕಷ್ಟು ಪರಿಶೀಲಿಸಿದೆ ಹಾಗೂ ಅನೇಕ ಸಮಿತಿಗಳನ್ನು ನಿಯಮಿಸಿ ಅವುಗಳು ಸಲ್ಲಿಸಿದ ವರದಿಗಳ ಬಗ್ಗೆ ಸಾಕಷ್ಟು ಪರಿಶೀಲನೆ ಮಾಡಿದೆ. ಸುಮಾರು ಮೂರು ದಶಕಗಳ ಕಾಲಗತಿಸಿದರೂ ಅದರ ಬಗ್ಗೆ ಯಾವುದೇ ನಿರ್ದಿಷ್ಟ ನಿರ್ಣಯ ಕೈಕೊಳ್ಳಲು ಸಾಧ್ಯವಾಗಿಲ್ಲ. ಡೋಲಾಯಮಾನ ಧೋರಣೆಯ ಅನುಸರಣೆಯ ಮೂಲಕ ವಿಷಯವು ನೆನೆಗುದಿಗೆ ಬೀಳುತ್ತಾ ನಡೆದಿದೆ. ರಾಷ್ಟ್ರವು ಎದುರಿಸುತ್ತಿರುವ ಕೆಲವೊಂದು ದುರ್ಧರ ಪ್ರಸಂಗಗಳ ಒತ್ತಡವೂ ಈ ವಿಳಂಬಕ್ಕೆ ಕಾರಣವಾಗಿರಬಹುದು.

ಕರ್ನಾಟಕ ಸರಕಾರವು ಈ ದಿಶೆಯಲ್ಲಿ ಕಾಲಕಾಲಕ್ಕೆ ಮಾಡಿದ ಪ್ರಯತ್ನಗಳ ಒಂದು ಪಕ್ಷಿ ನೋಟವು ಅತ್ಯವಶಕವೆನಿಸುತ್ತದೆ.

ಒಟ್ಟು ರಾಜ್ಯದಲ್ಲಿ 19 ಜಿಲ್ಲೆಗಳು ಹಾಗೂ 175 ತಾಲ್ಲೂಕುಗಳಿರುತ್ತವೆ. ವಿಜಾಪುರ ಜಿಲ್ಲೆಯು ರಾಜ್ಯದಲ್ಲಿಯೇ ಹೆಚ್ಚು ವಿಸ್ತೃತವಾದ ಜಿಲ್ಲೆಯಾಗಿದೆ. ಕೊಡಗು ಜಿಲ್ಲೆಯು ವಿಸ್ತೀರ್ಣದಲ್ಲಿ ಅತ್ಯಂತ ಚಿಕ್ಕ ಜಿಲ್ಲೆಯಾಗಿದೆ. ತಾಲ್ಲೂಕುಗಳಲ್ಲಿ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಅತ್ಯಂತ ವಿಸ್ತೀರ್ಣವಾದ ತಾಲ್ಲೂಕಾಗಿದೆ. ಚಿಕ್ಕಮಂಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕು ಅತ್ಯಂತ ಕಡಿಮೆ ವಿಸ್ತೀರ್ಣವನ್ನು ಹೊಂದಿ ಚಿಕ್ಕ ತಾಲ್ಲೂಕಾಗಿದೆ. ಇದು ನಮ್ಮ ರಾಜ್ಯವು ಹೊಂದಿರುವ ಪ್ರಾದೇಶಿಕ ಕಾರ್ಯ ಕ್ಷೇತ್ರದಬಂದು ಸ್ಥೂಲವಾದ ಆಡಳಿತಾತ್ಮಕ ವ್ಯವಸ್ಥೆಯಾಗಿದೆ.

ಕಾಲಕಾಲಕ್ಕೆ ಕರ್ನಾಟಕ ಸರಕಾರದಿಂದ ನಿಯುಮಿಸಲ್ಪಟ್ಟ ಸಮಿತಿಗಳು ಸಲ್ಲಿಸಿದ ವರದಿಗಳಲ್ಲಿ ವ್ಯಕ್ತವಾದ ಅಭಿಪ್ರಾಯುಗಳನ್ನು ಪ್ರಸ್ತುತ ಪಡಿಸಿದರೆ ಹೆಚ್ಚು ಪ್ರಾಸಂಗಿಕವೆನಿಸುತ್ತದೆ. ಆ ವರದಿಗಳಲ್ಲಿ ವ್ಯಕ್ತವಾದ ವಿಚಾರಗಳ ಸಾರ ಸಂಗ್ರಹ ವನ್ನು ಕೆಳಗೆ ಕಾಣಿಸಲಾಗಿದೆ.

1. ಸತ್ಯಶೋಧನ ಸಮಿತಿಯು ಅಭಿಪ್ರಾಯುಗಳು.

ರಾಜ್ಯಗಳ ಪುನರ್‌ವಿಂಗಡನೆಯು ಸಮಯುದಲ್ಲಿ ಹಳೆಯು ಮೈಸೂರು ಸರಕಾರವು 1954ರಲ್ಲಿ ವಿಲೀನವಾಗಲಿರುವ ಪ್ರದೇಶಗಳ ಬಗ್ಗೆ ಅಂಕಿಸಂಖ್ಯೆಗಳನ್ನು ಕಲೆಹಾಕಲು ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಸತ್ಯಶೋಧನ ಸಮಿತಿಯನ್ನು ನಿಯುಮಿಸಿತ್ತು. ಆ ವರದಿಯು—“ಈಗಿದ್ದ ಜಿಲ್ಲೆಗಳು ಅತ್ಯಂತ ವಿಸ್ತಾರವಾಗಿದ್ದ ಸಂಗತಿ ನಮಗೆ ಕಂಡು ಬಂದಿದೆ. ಅವುಗಳ ದಕ್ಷ ನಿರ್ವಹಣೆಗಾಗಿ ಜಿಲ್ಲೆಗಳನ್ನು ಹಾಗೂ ತಾಲ್ಲೂಕುಗಳನ್ನು ನಿರ್ವಹಣೆಗೆ ಅನುಕೂಲವಾಗುವಂತೆ ಪರಿವರ್ತಿಸಬೇಕು.”—ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿತು.

2. ಹೈದ್ರಾಬಾದ ಮಿತವ್ಯಯು ಸಮಿತಿಯು ಅಭಿಪ್ರಾಯುಗಳು.

1949ರಲ್ಲಿ ಹಿಂದಿನ ಹೈದ್ರಾಬಾದ ಸರಕಾರವು ಮಿತವ್ಯಯು ಸಮಿತಿಯನ್ನು ನಿಯುಮಿಸಿತ್ತು. ಆ ಸಮಿತಿಯು ಕೆಲವೊಂದು ವಿಚಾರಗಳನ್ನು ವ್ಯಕ್ತಮಾಡಿತು.— “ಹೈದ್ರಾಬಾದ ಸಂಸ್ಥಾನದ ಜಿಲ್ಲೆಗಳ ಕಥೆ ವಿಚಿತ್ರವಾಗಿದೆ. ಅವುಗಳ ಇತಿಹಾಸವು ಅಲ್ಲಿಯ ಆಳರಸರು ಎಸಗಿದ ಮೂರ್ಖಕೃತಿಗಳ ಹಾಗೂ ಪ್ರಜೆಗಳ ದುರ್ದೈವದ ಒಂದು ದಾಖಲೆಯಾಗಿದೆ.”—ಎಂಬ ಅಭಿಪ್ರಾಯುವನ್ನು ವ್ಯಕ್ತಮಾಡಿತು.

3. ಗೋರವಾಲಾ ಸಮಿತಿಯು ಅಭಿಪ್ರಾಯುಗಳು.

ನೂತನ ಕರ್ನಾಟಕ ರಾಜ್ಯವು ಪುನರ್ಘಟಿತಗೊಂಡನಂತರ ನಿವೃತ್ತ ಐ.ಸಿ.ಎಸ್. ಅಧಿಕಾರಿಗಳಾದ ಶ್ರೀ ಎ. ಡಿ. ಗೋರವಾಲಾ ಅವರ ನೇತೃತ್ವದಲ್ಲಿ ಒಂದು ಸಮಿತಿ ಯನ್ನು ಸರಕಾರವು ನಿಯುಮಿಸಿತು. ಆ ಸಮಿತಿಯು 1958ರ ಮೇ 11ರಂದು ತನ್ನ ವರದಿಯನ್ನು ಸಲ್ಲಿಸಿತು. ಆ ವರದಿಯ 55 ಹಾಗೂ 56ನೆಯ ಪುಟಗಳಲ್ಲಿ ವ್ಯಕ್ತ ವಾದ ವಿಚಾರಗಳನ್ನು ಇಲ್ಲಿ ಯಥಾವತ್ತಾಗಿ ವ್ಯಕ್ತಮಾಡಲಾಗಿದೆ. ಮೈಸೂರು ರಾಜ್ಯದ 19 ಜಿಲ್ಲೆಗಳನ್ನು 16 ಜಿಲ್ಲೆಗಳನ್ನಾಗಿ ಪರಿವರ್ತಿಸಬೇಕು. ಬೀದರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಾದ ಬೀದರ, ಹುಮ್ನಾಬಾದ, ಬಾಲ್ಕಿ ಹಾಗೂ ಸಂತಪೂರ, ಭೀಮಾನದಿಯ ಉತ್ತರಕ್ಕಿರುವ ಗುಲ್ಬರ್ಗಾ ಜಿಲ್ಲೆಯ ಏಳು ತಾಲೂಕುಗಳನ್ನು— ಗುಲ್ಬರ್ಗಾ, ಚಿತಾಪೂರ, ಯಾದಗೀರ, ಅಫಜಲಪೂರ, ಚಿಂಚೋಳಿ, ಆಳಂದ ಹಾಗೂ ಸೇಡಂ ಇವುಗಳನ್ನೆಲ್ಲ ಸೇರಿಸಿ ಒಂದು ಹೊಸ ಜಿಲ್ಲೆಯನ್ನು ನಿರ್ಮಿಸಬೇಕು. ಈ ಹೊಸ ಜಿಲ್ಲೆಯು 14,25,000ದಷ್ಟು ಜನಸಂಖ್ಯೆಯನ್ನು ಹಾಗೂ 6,263

ಚದುರ ಮೈಲಿಗಳಷ್ಟು ಪ್ರದೇಶವನ್ನು ಹೊಂದುವದು. ಗುಲ್ಬರ್ಗಾ ಜಿಲ್ಲೆಯ ಇನ್ನುಳಿದ ಮೂರು ತಾಲ್ಲೂಕುಗಳಾದ ಶಹಾಪೂರ, ಸುರಪೂರ, ಹಾಗೂ ಜೇವರಗಿ ತಾಲ್ಲೂಕುಗಳನ್ನು ರಾಯಚೂರು ಜಿಲ್ಲೆಯ ಆರು ತಾಲ್ಲೂಕುಗಳೊಂದಿಗೆ ಸೇರಿಸಿ ಹೊಸ ಜಿಲ್ಲೆಯನ್ನು ನಿರ್ಮಿಸಬೇಕು. ಈ ಹೊಸಜಿಲ್ಲೆಯು 9,90,000ದಷ್ಟು ಜನಸಂಖ್ಯೆಯನ್ನು ಹಾಗೂ 5,833 ಚದುರ ಮೈಲಿಗಳಷ್ಟು ಪ್ರದೇಶವನ್ನು ಹೊಂದುವುದು. ಈಗಿದ್ದ ಬಳ್ಳಾರಿ ಜಿಲ್ಲೆಯು ರಾಯಚೂರು ಜಿಲ್ಲೆಯ ಇನ್ನುಳಿದ ಮೂರು ತಾಲ್ಲೂಕುಗಳಾದ ಸಿಂಧನೂರು, ಗಂಗಾವತಿ ಹಾಗೂ ಕೊಪ್ಪಳ ತಾಲ್ಲೂಕುಗಳನ್ನೊಳಗೊಂಡು ಹೊಸ ಜಿಲ್ಲೆಯಾಗಿ ಪರಿವರ್ತನೆಗೊಳ್ಳಬೇಕು. ಬಳ್ಳಾರಿ ಜಿಲ್ಲೆಯು 10,67,000 ದಷ್ಟು ಜನಸಂಖ್ಯೆಯನ್ನು ಹಾಗೂ 5,500 ಚದುರ ಮೈಲಿಗಳಷ್ಟು ಪ್ರದೇಶವನ್ನು ಹೊಂದುವುದು. ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳನ್ನು ಸೇರ್ಪಡೆಮಾಡಿ ಒಂದೇ ಜಿಲ್ಲೆಯನ್ನಾಗಿ ಪರಿವರ್ತಿಸಬೇಕು. ಆ ಜಿಲ್ಲೆಯು 10,81,000ದಷ್ಟು ಜನ ಸಂಖ್ಯೆಯನ್ನು ಹಾಗೂ 6,834 ಚದುರು ಮೈಲುಗಳಷ್ಟು ಪ್ರದೇಶವನ್ನು ಹೊಂದುವುದು. ಹಾಸನ ಹಾಗೂ ಮಂಡ್ಯಜಿಲ್ಲೆಗಳನ್ನು ಸೇರಿಸಿ ಒಂದು ಹೊಸ ಜಿಲ್ಲೆಯನ್ನು ನಿರ್ಮಿಸಿದರೆ 14,32,000ದಷ್ಟು ಜನಸಂಖ್ಯೆಯುನ್ನು ಹಾಗೂ 4,551 ಚದುರು ಮೈಲಿಗಳಷ್ಟು ಪ್ರದೇಶವನ್ನು ಹೊಂದಿ ಒಂದು ಚೊಕ್ಕ ಜಿಲ್ಲೆ ಯಾಗುತ್ತದೆ. ಅತ್ಯಂತ ಚಿಕ್ಕ ಜಿಲ್ಲೆಯಾದ ಕೊಡಗು ಜಿಲ್ಲೆಯನ್ನು ನೆರೆಯ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿಸಬೇಕೆಂದು ಸಮಿತಿಯು ಶಿಫಾರಸು ಮಾಡಬಹುದಾಗಿತ್ತು. ಆದರೆ ಫಜಲಾಲಿಯವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ರಾಜ್ಯಪುನರ್ಘಟನಾ ಆಯೋಗವು ಕೊಡಗಿನ ಐಕ್ಯತೆಯನ್ನು ಕಾಯ್ದುಕೊಳ್ಳಬೇಕೆಂದು ವ್ಯಕ್ತಮಾಡಿದ ಅಭಿಪ್ರಾಯವನ್ನು ಅನುಲಕ್ಷಿಸಿ ಆ ಸೂಚನೆಯನ್ನು ಕೈಬಿಡಲಾಯಿತು. ಈ 16 ಜಿಲ್ಲೆಗಳು ಈಗಿದ್ದ ನಾಲ್ಕು ವಿಭಾಗಗಳ ಬದಲಾಗಿ ಮೂರು ವಿಭಾಗಗಳಲ್ಲಿ ಸೇರ್ಪಡೆ ಗೊಳ್ಳುತ್ತವೆ. ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಹಾಗೂ ವಿಜಾಪುರ ಜಿಲ್ಲೆಗಳು ಒಂದು ವಿಭಾಗದಲ್ಲಿ ಸೇರಿಕೊಳ್ಳುತ್ತವೆ ಆ ವಿಭಾಗವು 29,331 ಚದುರ ಮೈಲಿ ಗಳಷ್ಟು ಪ್ರದೇಶವನ್ನು ಹಾಗೂ 94,44,000ದಷ್ಟು ಜನಸಂಖ್ಯೆಯನ್ನು ಹೊಂದು ವುದು. ಎರಡನೆಯ ವಿಭಾಗದಲ್ಲಿ ದಕ್ಷಿಣಕನ್ನಡ, ಕೊಡಗು, ಶಿವಮೊಗ್ಗ, ಧಾರವಾಡ, ಚಿತ್ರದುರ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳು ಸೇರಿಕೊಳ್ಳುತ್ತವೆ. ಈ ಹೊಸ ವಿಭಾಗವು 24,939 ಚದುರ ಮೈಲಿಗಳಷ್ಟು ಪ್ರದೇಶವನ್ನು ಹಾಗೂ 56,03,711 ರಷ್ಟು ಜನಸಂಖ್ಯೆಯನ್ನು ಹೊಂದುವುದು.

ಮೂರನೆ ವಿಭಾಗದಲ್ಲಿ ಮಂಡ್ಯ, ತುಮಕೂರು, ಕೋಲಾರ, ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳನ್ನು ಸೇರಿಸಬೇಕು. ಈ ವಿಭಾಗವು 19,290ರಷ್ಟು ಚದುರ ಮೈಲಿಗಳ ಪ್ರದೇಶವನ್ನು ಹಾಗೂ 72,64,(00ದಷ್ಟು ಜನಸಂಖ್ಯೆಯನ್ನು ಹೊಂದುವುದು. ಈ ಮೂರೂ ವಿಭಾಗಗಳಿಗೆ ಮಂಡ್ಯ, ಶಿವಮೊಗ್ಗ ಹಾಗೂ

ಬಾಗಲಕೋಟೆಗಳ ಕೇಂದ್ರಸ್ಥಳವಾಗಬೇಕು. ವಿಭಾಗಾಧಿಕಾರಿಗಳು ದೊಡ್ಡನಗರ ಗಳಲ್ಲಿ ಕೇಂದ್ರ ಕಾರ್ಯಾಲಯ ಹೊಂದುವುದಕ್ಕಿಂತ ಸಾಧಾರಣ ನಗರಗಳಲ್ಲಿಯೇ ಅವರ ಕೇಂದ್ರ ಕಾರ್ಯಾಲಯ ಸ್ಥಾಪಿತವಾಗಬೇಕೆಂಬ ತತ್ತ್ವಕ್ಕನುಗುಣವಾಗಿ ಈ ಸಲಹೆ ಮಾಡಲಾಗಿದೆ. ಈ ರೀತಿಯಾಗಿ ಜಿಲ್ಲೆಗಳನ್ನು ಹಾಗೂ ವಿಭಾಗಗಳನ್ನು ಕಡಿಮೆ ಮಾಡುವುದರಿಂದ ಉಳಿತಾಯವು ಹೆಚ್ಚಾಗಿ ದಕ್ಷತೆಗೂ ಬಾಧಕವೆನಿಸಲಾರದು. ಈ ವರದಿಯನ್ನು ಸರಕಾರವು ವಿಧಾನಮಂಡಲದ ಅವಗಾಹನೆಗಾಗಿ ಸಾದರಪಡಿಸಿತು. ಆಡಳಿತ ಘಟಕಗಳ ಪುನರ್ವಿಂಗಡನೆ ಸಮಸ್ಯೆಯ ಬಗ್ಗೆ ಅತ್ಯಂತ ತೀವ್ರ ಮನೋ ಭಾವನೆಗಳು ವ್ಯಕ್ತವಾದವು. ಆದರೆ ಆಗಿನ ಮುಖ್ಯಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರು ಸದಸ್ಯರ ಮನೋಭಾವನೆಯನ್ನರಿತುಕೊಂಡು ಒಂದು ಹೇಳಿಕೆಯನ್ನು ನೀಡಿದರು. ಈ ಸರಕಾರವು ಜಿಲ್ಲೆಗಳು ಹಾಗೂ ತಾಲ್ಲೂಕುಗಳ ಸಂಖ್ಯೆಯ ವಿಷಯ ವಾಗಿ ಹಾಗೂ ಪುನರ್ವಿಂಗಡನೆಯ ವೆಚ್ಚವನ್ನು ಕುರಿತು ಯಾವುದೇ ಒಂದು ನಿರ್ದಿಷ್ಟ ತೀರ್ಮಾನವನ್ನು ಕೈಕೊಂಡಿಲ್ಲವೆಂದೂ ಹಾಗೂ ಪುನರ್ವಿಂಗಡನೆ ಮಾಡಬೇಕೆಂಬ ನಿರ್ಧಾರವನ್ನು ಕೈಕೊಂಡರೆ ಸರಕಾರವು ಒಂದು ನ್ಯಾಯಾಧಿಕಾರಿಯನ್ನು ನೇಮಿಸಿ ಅವರ ಮೂಲಕ ಸಂಪೂರ್ಣ ವಿವರಗಳನ್ನು ಕಲೆಹಾಕಿ ಅವುಗಳನ್ನು ಕೂಲಂಕುಷ ವಾಗಿ ಪರಿಶೀಲಿಸಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂಬ ಹೇಳಿಕೆಯನ್ನು ಇತ್ತರು. ಇದರಿಂದಾಗಿ ಸಮಸ್ಯೆಯು ನೆನೆಗುದಿಗೆ ಬಿದ್ದಿತು.

ಭಾರತೀಯ ಸಂಖ್ಯಾಶಾಸ್ತ್ರದ ಸಂಸ್ಥೆಯ ವರದಿ

ಕಲ್ಕತ್ತಾದಲ್ಲಿರುವ ಭಾರತೀಯ ಸಂಖ್ಯಾಶಾಸ್ತ್ರ ಸಂಶೋಧನ ಹಾಗೂ ತರಬೇತಿ ಶಾಲೆಯು ಕರ್ನಾಟಕದಲ್ಲಿಯ ವಿಭಾಗಗಳ ಹಾಗೂ ಜಿಲ್ಲೆಗಳ ಬಗ್ಗೆ ಅಭ್ಯಾಸ ವನ್ನು ಕೈಕೊಂಡಿತು. 1960 ಏಪ್ರಿಲ್ ತಿಂಗಳಲ್ಲಿ "ಮೈಸೂರು ರಾಜ್ಯದಲ್ಲಿ ಯೋಜನಾ ಪ್ರದೇಶಗಳು" ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಕಟಿತವಾಯಿತು. ಈ ಅಭ್ಯಾಸತಂಡವು ಈಗಿದ್ದ ಜಿಲ್ಲೆಗಳ ಸಂಖ್ಯೆಯನ್ನು 21ಕ್ಕೆ ಹಾಗೂ ವಿಭಾಗಗಳ ಸಂಖ್ಯೆಯನ್ನು 6ಕ್ಕೆ ಏರಿಸಬೇಕೆಂದು ಶಿಫಾರಸು ಸಲ್ಲಿಸಿತು. ಭಾರತದಲ್ಲಿಯ ಎಲ್ಲ ಜಿಲ್ಲೆಗಳ ವಿಸ್ತೀರ್ಣವನ್ನು ಕುರಿತು ಪರಿಶೀಲನೆಯನ್ನು ಕೈಕೊಂಡಿತು. ಎಲ್ಲ ಜಿಲ್ಲೆ ಗಳ ಪ್ರದೇಶ ಹಾಗೂ ಜನಸಂಖ್ಯೆಯ ಬಗ್ಗೆ ವಿವರಗಳನ್ನು ಕಲೆಹಾಕಿತು. 4,000 ಚದುರ ಮೈಲಿಗಳಷ್ಟು ಪ್ರದೇಶವನ್ನು ಹೊಂದಿದ ಹಾಗೂ ಒಂದು ದಶಲಕ್ಷ ಜನ ಸಂಖ್ಯೆಯನ್ನು ಹೊಂದಿದ ಜಿಲ್ಲೆಯು ಹಾಗೂ 750 ಚದುರ ಮೈಲುಗಳಷ್ಟು ಪ್ರದೇಶವನ್ನು ಹೊಂದಿದ ಮತ್ತು 1,50,000 ಜನಸಂಖ್ಯೆಯನ್ನು ಹೊಂದಿದ ತಾಲ್ಲೂಕು ದಕ್ಷ ಆಡಳಿತಕ್ಕಾಗಿ ಹಾಗೂ ಅಭಿವೃದ್ಧಿ ಯೋಜನೆಗಳ ಕಾರ್ಯಾಚರಣೆ ಗಾಗಿ ಅಸಮರ್ಪಕವೆನಿಸುತ್ತವೆಂಬ ಅಭಿಪ್ರಾಯವನ್ನು ವ್ಯಕ್ತಮಾಡಿತು. ಈ ಪ್ರದೇಶ ಹಾಗೂ ಜನಸಂಖ್ಯೆಯ ತತ್ತ್ವಗಳನ್ನು ಅನುಸರಿಸಿದರೆ ಕರ್ನಾಟಕದಲ್ಲಿಯ

ಜಿಲ್ಲೆಗಳ ಗಡಿಹೊಂದಾಣಿಕೆಯು ಅವಶ್ಯವಾಗಿರುತ್ತದೆ ಎಂಬ ವಿಚಾರವನ್ನು ವ್ಯಕ್ತ ಮಾಡಿತು. ಬಿಜಾಪುರ, ಗುಲ್ಬರ್ಗಾ, ಧಾರವಾಡ, ಬೆಳಗಾವಿ, ಮೈಸೂರು ಹಾಗೂ ತುಮಕೂರು ಎಂಬ 6 ಜಿಲ್ಲೆಗಳು ರಾಜ್ಯದ ½ ದಷ್ಟು ಜನಸಂಖ್ಯೆ ಹಾಗೂ ಪ್ರದೇಶ ವನ್ನು ಹೊಂದಿರುತ್ತವೆ. ಬಿಜಾಪುರ ಜಿಲ್ಲೆಯು ಪ್ರಾದೇಶಿಕವಾಗಿ ಅತಿದೊಡ್ಡ ದಾಗಿರುತ್ತದೆ. (6,563 ಚದುರ ಮೈಲಿಗಳು). ಎರಡನೆಯ ಸ್ಥಾನವನ್ನು ಗುಲ್ಬರ್ಗಾ ಜಿಲ್ಲೆಯು ಪಡೆಯುತ್ತದೆ. (6,271 ಚದುರ ಮೈಲಿಗಳು). ಬೆಂಗಳೂರು ಜಿಲ್ಲೆಯು ಜನಸಂಖ್ಯೆಯ ದೃಷ್ಟಿಯಿಂದ ದೊಡ್ಡದಾಗಿರುತ್ತದೆ. (21,27,061) ಶೇಕಡಾ ಮೂವತ್ತಾರರಷ್ಟು ಜನಸಂಖ್ಯೆಯು ಬೆಂಗಳೂರು ನಗರದಲ್ಲಿಯೇ ನೆಲೆ ಗೊಂಡಿರುತ್ತದೆ. ಪ್ರದೇಶ ಹಾಗೂ ಜನಸಂಖ್ಯೆ ಎರಡರಲ್ಲಿಯೂ ಕೊಡಗು ಜಿಲ್ಲೆ ಚಿಕ್ಕದಾಗಿರುತ್ತದೆ. (1590 ಚದುರ ಮೈಲುಗಳು). ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿಗೆ ಕೊಡಗು ಜಿಲ್ಲೆಯು ಸರಿಸಮಾನವಾಗಿರುತ್ತದೆ. ಅಭ್ಯಾಸ ತಂಡವು ಪ್ರಾದೇಶಿಕ ಮಿತಿಗಳ ಬಗ್ಗೆ ಪ್ರಾದೇಶಿಕ ಯೋಜನಾವ್ಯವಸ್ಥೆಯನ್ನು ಅನುಲಕ್ಷಿಸಿ ತನ್ನ ಶಿಫಾರಸ್ಸುಗಳನ್ನು ಸಲ್ಲಿಸಿತು. ಈ ಪ್ರದೇಶಗಳು ಸಾಧನ ಸಂಪತ್ತು ಗಳ ಬೆಳವಣಿಗೆಯನ್ನು ಆಧಾರವಾಗಿಟ್ಟುಕೊಂಡು ರಚಿತಗೊಳ್ಳಬೇಕು. ಪ್ರತಿಯೊಂದು ಪ್ರದೇಶವು ಕೆಳಗೆ ಕಾಣಿಸಿದ ವಿಶಿಷ್ಟ ಲಕ್ಷಣಗಳನ್ನು ಹೊಂದಿರಬೇಕು.

(ಅ) ಭೌಗೋಲಿಕವಾಗಿ ಸಂಲಗ್ನವಾಗಿರಬೇಕು

(ಆ) ಕಾರ್ಯಾನುಕೂಲವಾಗಿರಬೇಕು

(ಇ) ಸಮಗ್ರ ಪ್ರದೇಶ ಒಂದೇ ಬಗೆಯ ಸಮಸ್ಯೆಗಳನ್ನು ಹೊಂದಿರಬೇಕು

(ಈ) ಪ್ರಾದೇಶಿಕ ವೈಶಿಷ್ಟತೆಯಲ್ಲಿ ಏಕತೆಯನ್ನು ಹೊಂದಿರಬೇಕು

(ಉ) ಪ್ರದೇಶವು ಎಲ್ಲ ಸ್ಥಳಗಳಿಗೆ ಅನುಕೂಲವಾಗಿರುವಂತೆ ಪ್ರಮುಖ ಕೇಂದ್ರ ವನ್ನು ಹೊಂದಿರಬೇಕು. ಇಂತಹ ಪ್ರಮುಖ ಕೇಂದ್ರವು ಸಾಂಸ್ಕೃತಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಪ್ರಾಮುಖ್ಯತೆಯನ್ನು ಪಡೆದಿರಬೇಕು

(ಊ) ಆರ್ಥಿಕ ಆಡಳಿತಕ್ಕೆ ಅನುಕೂಲವಾಗಿರಬೇಕು

ಈ ಮೇಲ್ಕಾಣಿಸಿದ ತತ್ವಗಳನ್ನು ಆಧರಿಸಿ ಮೈಸೂರು ರಾಜ್ಯದಲ್ಲಿಯ ಜಿಲ್ಲೆಗಳು ಸಂಯೋಜಿತ ಆರ್ಥಿಕ ಅಭಿವೃದ್ಧಿಯ ಉದ್ದೇಶಕ್ಕಾಗಿ ಮರುವಿಂಗಡನೆ ಗೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಮಾಡಿತು. ಸಮಗ್ರರಾಷ್ಟ್ರಕ್ಕಾಗಿ ಪ್ರಾದೇಶಿಕ ಆಡಳಿತ ಸೌಧವನ್ನು ಸೂಚಿಸಿತು. ಆ ಸೌಧದಲ್ಲಿ ರಾಷ್ಟ್ರವಲಯ, ರಾಜ್ಯ (ಪ್ರದೇಶ), ವಿಭಾಗ (ಉಪಪ್ರದೇಶ), ಜಿಲ್ಲೆ (ಯೋಜನಾ ಘಟಕ), ತಾಲ್ಲೂಕು (ಅಭಿವೃದ್ಧಿ ಕ್ಷೇತ್ರ) ಹಾಗೂ ಕ್ಷೇತ್ರ (ಹಳ್ಳಿಗಳ ಗುಂಪು) ಎಂಬ ಹಂತಗಳನ್ನು ಸೂಚಿಸಿತು. ಅವುಗಳ ವಿವರಗಳನ್ನು ಈ ಕೆಳಗೆ ಕಾಣಿಸಿದಂತೆ ನಮೂದಿಸಲಾಗಿದೆ.

ಯೋಜನಾ ಪ್ರದೇಶಗಳು

ವಿಭಾಗ ವಿಭಾಗಗಳ ಹಾಗೂ ಜಿಲ್ಲೆಗಳ ಹೆಸರು	ಕೇಂದ್ರ ಸ್ಥಳ	ಪ್ರದೇಶ ಚದುರ ಮೈಲುಗಳು
(ಅ) ಬೆಳಗಾವಿ ವಿಭಾಗ	—	17,160
1. ಬೆಳಗಾವಿ ಜಿಲ್ಲೆ	ಬೆಳಗಾವಿ	4,688
2. ಬಿಜಾಪುರ ಜಿಲ್ಲೆ	ಬಿಜಾಪುರ	4,845
3. ಬಾಗಲಕೋಟೆ ಜಿಲ್ಲೆ	ಬಾಗಲಕೋಟೆ	3,745
4. ಧಾರವಾಡ ಜಿಲ್ಲೆ	ಧಾರವಾಡ	3,882
(ಬ) ಮಂಗಳೂರು ವಿಭಾಗ	—	11,249
5. ಉತ್ತರ ಕನ್ನಡ ಜಿಲ್ಲೆ	ಕಾರವಾರ	3,660
6. ದಕ್ಷಿಣ ಕನ್ನಡ ಜಿಲ್ಲೆ	ಮಂಗಳೂರು	3,238
7. ಶಿವಮೊಗ್ಗ ಜಿಲ್ಲೆ	ಶಿವಮೊಗ್ಗ	4,351
(ಕ) ಮೈಸೂರು ವಿಭಾಗ	—	9,233
8. ಹಾಸನ ಜಿಲ್ಲೆ	ಹಾಸನ	3,917
9. ಕೊಡಗು ಜಿಲ್ಲೆ	ಮಡಿಕೇರಿ	2,188
10. ಮೈಸೂರು ಜಿಲ್ಲೆ	ಮೈಸೂರು	3,128
(ಡ) ಬೆಂಗಳೂರು ವಿಭಾಗ	—	13,212
11. ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು	0,418
12. ಬೆಂಗಳೂರು ಗ್ರಾಮಾಂತರ	ಬೆಂಗಳೂರು	2,788
13. ತುಮಕೂರು ಜಿಲ್ಲೆ	ತುಮಕೂರು	4,058
14. ಮಂಡ್ಯ ಜಿಲ್ಲೆ	ಮಂಡ್ಯ	3,215
15. ಕೋಲಾರ ಜಿಲ್ಲೆ	ಕೋಲಾರ	2,733
(ಸ) ದಾವಣಗೆರೆ ವಿಭಾಗ	—	7,780
16 ದಾವಣಗೆರೆ ಜಿಲ್ಲೆ	ದಾವಣಗೆರೆ	3,786
17. ಚಿತ್ರದುರ್ಗ ಜಿಲ್ಲೆ	ಚಿತ್ರದುರ್ಗ	3,994
(ಳ) ಗುಲ್ಬರ್ಗಾ ವಿಭಾಗ	—	14,898
18. ಬೀದರ ಜಿಲ್ಲೆ	ಬೀದರ	2,666
19 ಗುಲ್ಬರ್ಗಾ ಜಿಲ್ಲೆ	ಗುಲ್ಬರ್ಗಾ	4,324
20. ರಾಯಚೂರು ಜಿಲ್ಲೆ	ರಾಯಚೂರು	4,009
21. ಬಳ್ಳಾರಿ ಜಿಲ್ಲೆ	ಬಳ್ಳಾರಿ	3,899

ಇತ್ತೀಚಿನ ದಿನಗಳಲ್ಲಿ, ಆಡಳಿತದಲ್ಲಿ ಅಭಿವೃದ್ಧಿಯ ಕಡೆಗೆ ಹೆಚ್ಚು ಗಮನವನ್ನು ನೀಡಲಾಗುತ್ತದೆ. ಆದಕ್ಕಾಗಿ ಅಭ್ಯಾಸತಂಡವು ಕರ್ನಾಟಕದಲ್ಲಿ ಆಡಳಿತ ಘಟಕಗಳು ಸಾಧನ ಸಂಪತ್ತುಗಳ ಯೋಜನಾಬದ್ಧವಾದ ಬಳಕೆಯಾಗುವದಕ್ಕಾಗಿ ಅನುಕೂಲವಾಗುವಂತೆ ರಚಿತವಾಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಮಾಡಿತು. ಈಗಿದ್ದ ವಿಭಾಗಗಳು, ಜಿಲ್ಲೆಗಳು ಹಾಗೂ ತಾಲ್ಲೂಕುಗಳು ಕೇವಲ ಆಡಳಿತಾನುಕೂಲವನ್ನು ಮಾತ್ರ ಅವಲಂಬಿಸಿವೆ.

ಸಾಧನ ಸಂಪತ್ತುಗಳ ಹಾಗು ಮಿತವ್ಯಯ ಸಮಿತಿಯ ವಿಚಾರಗಳು :

1960, ಅಕ್ಟೋಬರ್ 7ರಂದು ಈ ಸಮಿತಿಯನ್ನು ಸರಕಾರವು ರಚಿಸಿತು. ಸಮಿತಿಯು ತನ್ನ ವರದಿಯನ್ನು 1962, ಮಾರ್ಚ್ 14ರಂದು ಸಲ್ಲಿಸಿತು. "ಈಗಿದ್ದ ಜಿಲ್ಲೆಗಳು ಹಾಗೂ ತಾಲ್ಲೂಕುಗಳ ಗಾತ್ರಗಳು ನೆರೆಯ ರಾಜ್ಯಗಳಲ್ಲಿಯ ಘಟಕಗಳಿಗಿಂತ ಚಿಕ್ಕವಾಗಿರುತ್ತವೆ. ರಾಜ್ಯದಲ್ಲಿ ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಗಾತ್ರದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಪ್ರದೇಶ ಹಾಗೂ ಜನಸಂಖ್ಯೆಯ ದೃಷ್ಟಿಯಿಂದ ಕೊಡಗು, ಬೀದರ, ಹಾಸನ, ಮಂಡ್ಯ ಹಾಗೂ ಚಿಕ್ಕಮಗಳೂರು ಜಿಲ್ಲೆಗಳು ಚಿಕ್ಕವಾಗಿರುತ್ತವೆ. ಬೆಂಗಳೂರು ಜಿಲ್ಲೆಯು ಹೆಚ್ಚು ಆಡಳಿತಾತ್ಮಕ ಭಾರವನ್ನು ಹೊಂದಿದೆ ಹಾಗೂ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಶೃಂಗೇರಿ ಹಾಗೂ ಯಳಂದೂರ ತಾಲ್ಲೂಕುಗಳು ಚಿಕ್ಕವಾಗಿರುತ್ತವೆ. ಅನೇಕ ಜಿಲ್ಲೆಗಳು ಹಾಗೂ ತಾಲ್ಲೂಕುಗಳು ಐತಿಹಾಸಿಕ ಸಂಗತಿಗಳ ಮೂಲಕವಾಗಿ ರಚಿತವಾಗಿವೆ. ಆಡಳಿತಾತ್ಮಕ ಅಂಶಗಳನ್ನು ನಿರ್ಲಕ್ಷಿಸಲಾಗಿದೆ. ಇದರಿಂದಾಗಿ ಅವುಗಳಲ್ಲಿ ಪ್ರಾದೇಶಿಕ ಸಮತೋಲನ ಕಂಡುಬರುವದಿಲ್ಲ. ಈ ಉದ್ದೇಶಕ್ಕಾಗಿ ರಾಜ್ಯದಲ್ಲಿಯ ಜಿಲ್ಲೆಗಳು ಭೌಗೋಳಿಕ, ಸಂಲಗ್ನತೆ, ವಾಣಿಜ್ಯ, ಹಾಗೂ ಸಾಂಸ್ಕೃತಿಕ ಸಂಬಂಧಗಳು, ಸಾರಿಗೆಸಂಪರ್ಕ ಸೌಲಭ್ಯಗಳು ಮತ್ತು ಸಾರ್ವಜನಿಕ ಅನುಕೂಲತೆ ಇವುಗಳ ಆಧಾರದ ಮೇಲೆ ರಾಜ್ಯದ ಆಡಳಿತದ ನಕಾಶೆಯು ಬದಲಾಗಬೇಕು. ಬಹುಕಾಲದಿಂದಲೂ ಆಗಬೇಕಾದ ಸುಧಾರಣೆಯಿದು. ಆದರೆ ಕೆಲವು ಆಸಕ್ತ ವರ್ಗಗಳು ಇದನ್ನು ವಿರೋಧಿಸುತ್ತವೆ. ಆಡಳಿತ ಘಟಕಗಳು ಅಭಿವೃದ್ಧಿ ಹಾಗೂ ಆಡಳಿತ ಎರಡೂ ಉದ್ದೇಶಗಳನ್ನು ಹೊಂದಿರಬೇಕು. ಅಭಿವೃದ್ಧಿಗಾಗಿಯೇ ಪ್ರತ್ಯೇಕ ವ್ಯವಸ್ಥೆಯ ಹೊಣೆಯನ್ನು ರಾಜ್ಯದ ಬೊಕ್ಕಸವು ಹೊರಲಾರದು. ಈ ಉದ್ದೇಶ ಸಾಧನೆಗಾಗಿ ರಾಜ್ಯದಲ್ಲಿಯ ಜಿಲ್ಲೆಗಳು ಹಾಗೂ ತಾಲ್ಲೂಕುಗಳು ನಿರ್ದಿಷ್ಟ ಪ್ರಮಾಣದ ಆಡಳಿತ ಪ್ರಭಾವವನ್ನು ಹೊಂದಿರಬೇಕು. ಸಮಿತಿಯು ಈ ಕೆಳಗಿನ ಶಿಫಾರಸುಗಳನ್ನು ಸಲ್ಲಿಸಿತು.

1. ಒಂದು ತಾಲ್ಲೂಕಿನ ಪ್ರದೇಶ 750 ಚದುರ ಮೈಲುಗಳಷ್ಟಾಗಿರಬೇಕು. ಹಾಗೂ 2 ಲಕ್ಷದಷ್ಟು ಜನಸಂಖ್ಯೆಯನ್ನು ಹೊಂದಿರಬೇಕು.

2. ಒಂದು ಜಿಲ್ಲೆಯು 8 ತಾಲ್ಲೂಕುಗಳನ್ನು ಹೊಂದಿರಬೇಕು. ಐದು ಸಾವಿರ

ಚದುರಮೈಲಿಗಳಷ್ಟು ಪ್ರದೇಶವನ್ನು ಹಾಗೂ ಹತ್ತೂವರೆ ಲಕ್ಷದಷ್ಟು ಜನಸಂಖ್ಯೆಯನ್ನು ಹೊಂದಿರಬೇಕು. ಈಗಿದ್ದ 171 ತಾಲ್ಲೂಕುಗಳನ್ನು 120 ತಾಲ್ಲೂಕುಗಳಿಗೆ ಹಾಗೂ 19 ಜಿಲ್ಲೆಗಳನ್ನು 15ಕ್ಕೂ ಇಳಿಸಬೇಕು. ಶೃಂಗೇರಿ ಹಾಗೂ ಯಳಂದೂರು ತಾಲ್ಲೂಕುಗಳನ್ನು ರದ್ದುಗೊಳಿಸಬೇಕು. ಈಗಿದ್ದ ಜಿಲ್ಲೆಗಳನ್ನು ಹಾಗೂ ತಾಲ್ಲೂಕುಗಳ ಪುನರ್ಘಟನೆಯಾಗ ಅನೇಕ ತೊಂದರೆಗಳು ಉದ್ಭವಿಸುತ್ತವೆ. ಆದರೆ ಆಡಳಿತಕ್ಕೆ ತೊಂದರೆ ಹಾಗೂ ಜನರಿಗೆ ಅನಾನುಕೂಲತೆಯಾಗದಂತೆ ಹೊಸ ವ್ಯವಸ್ಥೆಯು ರೂಪಗೊಳ್ಳಬೇಕು. ರಾಜ್ಯದಲ್ಲಿಯ ಬೆಂಗಳೂರು ಜಿಲ್ಲೆ ಅತ್ಯಂತ ಹೆಚ್ಚಿನ ಆಡಳಿತ ಭಾರವನ್ನು ಹೊಂದಿರುತ್ತದೆ. ಆದ್ದರಿಂದ ಬೆಂಗಳೂರನ್ನು ನಗರ ಹಾಗೂ ಗ್ರಾಮಾಂತರ ಜಿಲ್ಲೆಯಾಗಿ ಪರಿವರ್ತಿಸಬೇಕು.

ಆಡಳಿತ ಸುಧಾರಣಾ ಸಮಿತಿಯ ವಿಚಾರಗಳು :

ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟ ಆಡಳಿತ ಸುಧಾರಣಾಸಮಿತಿಯು ಈ ವಿಷಯವಾಗಿ ಕೆಲವೊಂದು ವಿಚಾರಗಳನ್ನು ವ್ಯಕ್ತಮಾಡಿತು. ರಾಜ್ಯದಲ್ಲಿಯ ವಾತಾವರಣವು ಉದ್ರಿಕ್ತ ಮನೋಭಾವನೆಗಳಿಂದ ತುಂಬಿದೆ. ಈಗಿದ್ದ ಜಿಲ್ಲೆಗಳ ಪುನರ್ಘಟನೆಯು ಅಷ್ಟೊಂದು ಸುಲಭವಾಗಿಲ್ಲ. ಈ ಕಾರ್ಯದ ಗಾತ್ರವು ಅತ್ಯಂತ ಗುರುತರವಾಗಿದ್ದು ಯಾವುದೇ ಒಂದು ಆಯೋಗವು ಈ ಕೆಲಸವನ್ನು ಕೈಕೊಂಡಲ್ಲಿ ಒಂದು ದಶಕದ ಅವಧಿಯಲ್ಲಿ ಅದನ್ನು ಪೂರೈಸಲು ಅದಕ್ಕೆ ಶಕ್ಯವಾಗಲಿಕ್ಕಿಲ್ಲ. ಪ್ರತಿಯೊಂದು ರಾಜ್ಯವು ಈ ಸಮಸ್ಯೆಯನ್ನು ಪ್ರತ್ಯೇಕವಾಗಿ ಪರಿಹರಿಸುವ ಯತ್ನವನ್ನು ಮಾಡಬೇಕು. ಜನತೆಯೊಂದಿಗೆ ಸಮಾಲೋಚಿಸಿ, ಜನಾಭಿಪ್ರಾಯವನ್ನು ಸಂಗ್ರಹಿಸಿ, ಈ ಕೆಲಸಮಾಡುವದು ಶ್ರೇಯಸ್ಕರ.

ವಾಸುದೇವರಾವ್ ಸಮಿತಿಯ ವಿಚಾರಗಳು :

ಕರ್ನಾಟಕ ಸರಕಾರವು 1973, ಜುಲೈ 13 ರಂದು ವಾಸುದೇವರಾವ ಸಮಿತಿ ಎಂಬ ಏಕಸದಸ್ಯ ಆಯೋಗವನ್ನು ನಿಯಮಿಸಿತು. ಈ ಆಯೋಗವು ರಾಜ್ಯದಲ್ಲಿಯ ಜಿಲ್ಲೆಗಳು ಹಾಗೂ ತಾಲ್ಲೂಕುಗಳ ಪುನರ್ರಚನೆಯ ಸಮಸ್ಯೆಯನ್ನು ಪರಿಶೀಲಿಸಿ 1975 ಮಾರ್ಚ್ ತಿಂಗಳಲ್ಲಿ ತನ್ನ ಅಂತಿಮ ವರದಿಯನ್ನು ಸಲ್ಲಿಸಿತು. ಈ ವರದಿಯು ರಾಜ್ಯದಲ್ಲಿ ಇನ್ನೆರಡುಜಿಲ್ಲೆಗಳನ್ನು–ಗದಗ ಹಾಗೂ ಸುರಪುರ ಜಿಲ್ಲೆಗಳನ್ನು ಹೊಸದಾಗಿ ರಚಿಸಲು ಶಿಫಾರಸು ಮಾಡಿತು. ಈ ವರದಿಯ ಮೇಲೆ ಸರಕಾರವು ಯಾವ ಕ್ರಮವನ್ನು ಕೈಕೊಳ್ಳಲಿಲ್ಲ. ಕರ್ನಾಟಕದ ಭೂಕಂದಾಯ ಕಾನೂನಿಗೆ ತಿದ್ದುಪಡಿ ಮಾಡುವ ಸುಗ್ರೀವಾಜ್ಞೆಯೊಂದನ್ನು 1976 ಜನವರಿ ತಿಂಗಳಲ್ಲಿ ಹೊರಡಿಸಿತು. ಜನರಿಂದ ಯಾವ ಆಕ್ಷೇಪಣೆಗಳನ್ನು ಕೇಳದೆ ನೇರವಾಗಿ ಸರಕಾರವೇ ಜಿಲ್ಲೆ, ತಾಲ್ಲೂಕು ಹಾಗೂ ಹೋಬಳಿಗಳನ್ನು ರಚಿಸಲು ಅಧಿಕಾರವನ್ನು ಪಡೆದು ಕೊಂಡಿತು 1984ರ ವರೆಗೆ ಸರಕಾರವು ಈ ವಿಷಯದಲ್ಲಿ ಸಂಪೂರ್ಣ ಮೌನವನ್ನು ತಳೆದ್ದಿತು. 1984ರ ಮೇ

ತಿಂಗಳಲ್ಲಿ ಸರಕಾರವು ಶ್ರೀ ಹುಂಡೇಕಾರರ ನೇತೃತ್ವದಲ್ಲಿ ಹೊಸದೊಂದು ಸಮಿತಿಯನ್ನು ಜಿಲ್ಲೆಗಳ, ಉಪವಿಭಾಗ, ಹಾಗೂ ತಾಲ್ಲೂಕುಗಳ ಭೌಗೋಳಿಕ ಮಿತಿಗಳ ಪುನರ್ನಿರ್ಧಾರಕ್ಕಾಗಿ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಈಗಾಗಲೇ ಪ್ರಶ್ನಾವಳಿಯ ಮೂಲಕ ತಜ್ಞರಿಂದ, ಆಡಳಿತಗಾರರಿಂದ, ಬುದ್ಧಿಜೀವಿಗಳಿಂದ, ಶಾಸಕರಿಂದ ಮಾಹಿತಿಯನ್ನು ಕಲೆಹಾಕುತ್ತಿರುವದು. ರಾಜ್ಯದ ವಿವಿಧ ಭಾಗಗಳಲ್ಲಿ ಸಂಚರಿಸಿ ಜನತೆಯ ಮೂಲಕ ಹಾಗೂ ಸಂಘಸಂಸ್ಥೆಗಳ ಮೂಲಕ ಮನವಿಗಳನ್ನು ಸ್ವೀಕರಿಸುತ್ತಿರುವದು. ಈ ಸಮಿತಿಯು 1986 ಮಾರ್ಚ 31ರೊಳಗಾಗಿ ತನ್ನ ಅಂತಿಮ ವರದಿಯ ನ್ನು ಸಲ್ಲಿಸಲಿದೆ. ಈ ವರದಿಯ ಬಗ್ಗೆ ಅನೇಕ ಊಹಾಪೋಹಗಳು ಕೇಳಿಬರುತ್ತಿರುವವು. ಈ ಸಮಿತಿಯ ಮೇಲೆ ಅತ್ಯಂತ ಗುರುತರವಾದ ಹೊಣೆಗಾರಿಕೆ ಇರುವದು. 1956 ರಿಂದ 1985 ರವರೆಗೆ ರಾಜ್ಯಸರಕಾರವು ಅನೇಕ ಸಮಿತಿಗಳನ್ನು ನಿಯಮಿಸಿ ವರದಿಗಳನ್ನು ಪಡೆದಿದ್ದರೂ ಯಾವ ನಿರ್ದಿಷ್ಟ ನಿರ್ಣಯವನ್ನು ಕೈಕೊಳ್ಳದಿರುವದು ಅತ್ಯಂತ ವಿಷಾದಕರವಾಗಿದೆ. ಹುಂಡೇಕಾರ ಸಮಿತಿಯು ಸಲ್ಲಿಸುವ ವರದಿಯು ಮೇಲಾದರೂ ಅಂತಿಮ ತೀರ್ಮಾನ ಕೈಕೊಂಡು ನೆನೆಗುದಿಗೆ ಬಿದ್ದಿರುವ ಈ ಸಮಸ್ಯೆಯ ಮೇಲೆ ಸರಕಾರವು ಪರದೆಯನ್ನೆಳೆದರೆ ಸಮಸ್ಯೆಯು ಪರಿಹಾರಗೊಳ್ಳುವದು.

ಬಾಹ್ಯದ ಆಕ್ರಮಣದ ವಿರುದ್ಧ ಅಂತರಂಗದ ಹೋರಾಟವೇ ಎಲ್ಲ ಕ್ರಾಂತಿಗಳ ವಸ್ತು.

—ರವೀಂದ್ರನಾಥ ಠಾಗೋರ್

ಜೀವನದಲ್ಲಿ ಚಿತ್ತದ ವಿಕಾಸವೇ ಮಾನವ ಕುಲದ ಮುನ್ನಡೆ.

—ಸಿಂಪಿ ಲಿಂಗಣ್ಣ

ಪ್ರಗತಿ ಎಂದರೆ ಮೇಲಾದ ಗತಿ, ಅಥವಾ ಒಳ್ಳೆಯದನ್ನು ಗುರಿಯಲ್ಲಿಟ್ಟುಕೊಂಡು ಮುಂದು ಮುಂದಕ್ಕೆ ಹೋಗುವ ನಡಿಗೆ.

—ಡಿ.ವಿ.ಜಿ.

ಸಂಸ್ಕೃತಿಯನ್ನು ಸಹಿಸುವಂಥ ಜನರನ್ನು ನಿರ್ಮಿಸುವುದೇ ಸಂಸ್ಕೃತಿಯ ಮಹತ್ವದ ಸಾಧನೆ ಎನ್ನಬಹುದು.

—ಫ್ರಾಂಕ್‌ಲಿನ್ ಜೋನ್ಸ್

ಮೂಲ : ಎಚ್. ಜಿ. ವೇಲ್ಸ್

ಅನು : ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರಿದುದು)

65. ಯೂರೋಪಿನಲ್ಲಿ ಯುದ್ಧಸನ್ನಾಹ ಮತ್ತು 1914–18ರ ಮಹಾಯುದ್ಧ

ಆನ್ವಯಿಕ ವಿಜ್ಞಾನದಲ್ಲಿ ಆದ ಪ್ರಗತಿಯ ಫಲವಾಗಿ ಅಮೇರಿಕದ "ಹಬೆಹಡಗು ರೈಲುಬಂಡಿಗಳ" ಪ್ರಜಾರಾಜ್ಯ ರೂಪುಗೊಂಡಿತು. "ಹಬೆಹಡಗಿನ ಸಾಮ್ರಾಜ್ಯ"ವಾದ ಅನಿಶ್ಚಿತ ಭವಿಷ್ಯದ ಬ್ರಿಟಿಷ್ ಸಾಮ್ರಾಜ್ಯವೂ ಹಾಗೇ ಪ್ರಪಂಚಾದ್ಯಂತ ಪಸರಿಸಿತು. ಆದರೆ ಜನಸಾಂದ್ರತೆ ದಟ್ಟವಾಗಿದ್ದ ಯೂರೋಪಿನ ಇತರ ರಾಷ್ಟ್ರಗಳ ಮೇಲೆ ಈ ಪ್ರಗತಿಯಿಂದ ಬೇರೆ ವಿಧದ ಪರಿಣಾಮಗಳಾದುವು "ಕುದುರೆ ಬಂಡಿಯ ಯುಗ"ದಲ್ಲಿ ಸ್ಥಿರೀಕರಿಸಲಾಗಿದ್ದ ಸರಹದ್ದುಗಳೊಳಗೇ ಇವು ಇರಬೇಕಾಗಿಬಂತು. ಸಮುದ್ರದಾಚೆಯ ರಾಜ್ಯಗಳಲ್ಲಿ ಅನೇಕವುಗಳಲ್ಲಿ ಬ್ರಿಟನ್ ಆಗಲೇ ಠಾಣ್ಯಹಾಕಿದ್ದುದರಿಂದ ಅಲ್ಲಿ ಹರಡಲು ಇವುಗಳಿಗೆ ಆಗಲಿಲ್ಲ. ರಷ್ಯ ಒಂದಕ್ಕೆ ಮಾತ್ರ ಪೂರ್ವದಿಕ್ಕಿನಲ್ಲಿ ಹರಡಲು ಅಡ್ಡಿಯಿರಲಿಲ್ಲ. ಸೈಬೀರಿಯದ ಮೂಲಕ ಒಂದು ಭಾರೀ ರೈಲು ಮಾರ್ಗ ಹಾಕಿದ ಈ ದೇಶ ಅಲ್ಲಿ ಜಪಾನಿನೊಡನೆ ಕಾದಾಟದಲ್ಲಿ ಸಿಕ್ಕಿ ಹಾಕಿಕೊಳ್ಳುವವರೆಗೂ ಆ ಕಡೆ ನುಗ್ಗಿ ಬಳಿಕ ಆಗ್ನೇಯಾಭಿಮುಖವಾಗಿ ಪರ್ಷಿಯ ಮತ್ತು ಇಂಡಿಯಗಳ ಕಡೆ ನುಗ್ಗಲು ಮೊದಲಿಟ್ಟಿತು. ಬ್ರಿಟನ್ನಿಗೆ ಇದು ಸಹನೆಯಾಗಲಿಲ್ಲ. ಯೂರೋಪಿನ ಇತರ ರಾಜ್ಯಗಳಲ್ಲಿನ ಉಸಿರುಗಟ್ಟಿಸುವ ವಾತಾವರಣ ವಿಪರೀತವಾಗುತ್ತಾ ಹೋಯಿತು. ಮನುಷ್ಯ ಜೀವನಕ್ಕೆ ಹೊಸದಾಗಿ ಒದಗಿದ ಸೌಕರ್ಯಗಳ ಪೂರ್ಣಪ್ರಯೋಜನ ಪಡೆದುಕೊಳ್ಳಬೇಕಾದಲ್ಲಿ ಈ ರಾಷ್ಟ್ರಗಳ ವ್ಯವಹಾರಗಳು ವಿಸ್ತಾರಗೊಳ್ಳಬೇಕಿತ್ತು. ಇದಕ್ಕೆ ಎರಡು ಮಾರ್ಗಗಳಿದ್ದುವು. ಒಂದು, ರಾಷ್ಟ್ರಗಳು ತಾವಾಗಿ ಮುಂದೆ ಬಂದು ಒಕ್ಕೂಟ ರಚಿಸಿಕೊಳ್ಳುವುದು, ಎರಡನೆಯದು ಯಾವುದಾದರೊಂದು ಬಲಿಷ್ಠ ರಾಷ್ಟ್ರ ಇವುಗಳನ್ನು ಬಲಾತ್ಕಾರದಿಂದ ಕೂಡಿಸುವುದು. ನವನಾಗರೀಕ ಚಿಂತನೆಯ ಪ್ರಕಾರ ಇವು ಮೊದಲ

ಮಾರ್ಗ ಹಿಡಿಯಬೇಕಿತ್ತು. ಆದರೆ ಅದುವರೆಗಿನ ರಾಜಕೀಯ ಪದ್ಧತಿಗಳ ಪ್ರಭಾವ ಯೂರೋಪನ್ನು ಎರಡನೆ ದಾರಿಕಡೆ ತಳ್ಳಿತು.

ಮೂರನೆ ನೆಪೋಲಿಯನ್ನನ ಫ್ರೆಂಚ್ ಸಾಮ್ರಾಜ್ಯದ ಪತನ ಮತ್ತು ನೂತನ ಜರ್ಮನ್ ಸಾಮ್ರಾಜ್ಯದ ಪ್ರತಿಷ್ಠಾಪನೆಗಳ ಫಲವಾಗಿ ಜರ್ಮನ್ನರ ನೇತೃತ್ವದಲ್ಲಿ ಯೂರೋಪಿನಲ್ಲಿ ಒಕ್ಕೂಟವೊಂದು ಸ್ಥಾಪಿತವಾಗಬಹುದೆಂದು ಮಾನವರು ಆಸೆ ಮತ್ತು ಭಯಗಳಿಂದ ಎದುರು ನೋಡುವಂತಾಯಿತು. ನಾಲ್ವತ್ತುನಾಲ್ಕು ವರ್ಷಗಳ ಕಾಲ ಯೂರೋಪಿನ ರಾಜಕೀಯವೆಲ್ಲ ಈ ಸಾಧ್ಯತೆಯ ಮೇಲೆ ಕೇಂದ್ರೀಕೃತವಾಗಿದ್ದು ಒಂದು ಬಗೆಯ ಅನಿಶ್ಚಿತ ಶಾಂತಿ ನೆಲಸಿತ್ತು. ಕಾರ್ಲಮನ್ನನ ಕಾಲದಲ್ಲಿ ಸಾಮ್ರಾಜ್ಯ ಒಡೆದುಹೋದಂದಿನಿಂದ ಯೂರೋಪಿನ ಮುಂದಾಳುತನಕ್ಕೆ ಜರ್ಮನಿಯ ಪ್ರತಿ ಸ್ಪರ್ಧಿಯಾಗಿದ್ದ ಫ್ರಾನ್ಸ್ ರಷ್ಯದೊಡನೆ ಮೈತ್ರಿ ಬೆಳೆಸಿ ತನ್ನ ದೌರ್ಬಲ್ಯವನ್ನು ಸರಿಪಡಿಸಿಕೊಳ್ಳಲು ನೋಡಿತು. ಆಸ್ಟ್ರಿಯ ಸಾಮ್ರಾಜ್ಯದೊಡನೆ (ಒಂದನೆ ನೆಪೋಲಿಯನ್ನನ ಕಾಲದಲ್ಲಿ ಇದು ಪವಿತ್ರರೋಮನ್ ಸಾಮ್ರಾಜ್ಯದ ಪಟ್ಟವನ್ನು ಕಳೆದುಕೊಂಡಿತ್ತು) ಗಾಢವಾಗಿ ಮತ್ತು ಹೊಸ ರಾಷ್ಟ್ರವಾದ ಇಟಲಿಯೊಡನೆ ಸ್ವಲ್ಪ ಮಟ್ಟಿಗೆ ಜರ್ಮನಿ ಹೊಂದಿಕೊಂಡಿತು. ಬ್ರಿಟನ್ ಮೊದಮೊದಲು ಯಥಾಪ್ರಕಾರ ಈ ವಿದ್ಯಮಾನಗಳಲ್ಲಿ ಅರ್ಧ ಹೊರಗೆ ಅರ್ಧ ಒಳಗೆ ವ್ಯವಹರಿಸಿತು. ಆದರೆ ಜರ್ಮನಿಯು ದೊಡ್ಡ ಪ್ರಮಾಣದಲ್ಲಿ ಆಕ್ರಮಣಶೀಲ ನೌಕಾದಳವನ್ನು ಬೆಳೆಸಿಕೊಳ್ಳುತ್ತಾ ಹೋದಂತೆ ಇದು ನಿಧಾನವಾಗಿ ಫ್ರಾಂಕೊರಷ್ಯನ್ ಗುಂಪಿಗೆ ಸೇರಲೇಬೇಕಾಯಿತು. ಜರ್ಮನಿಯ ಎರಡನೆ ವಿಲಿಯಂ ಚಕ್ರವರ್ತಿ (1888-1918) ಮಹತ್ವಾಕಾಂಕ್ಷೆಯುಳ್ಳವನಾಗಿದ್ದು ಸಮಯ ಹದಗೊಳ್ಳುವ ಮುಂಚೆಯೇ ಸಮುದ್ರೋತ್ತರಸಾಹಸಗಳಲ್ಲಿ ತೊಡಗಿದನು. ಕಡೆಗೆ ಜರ್ಮನಿಯ ವೈರಿಗಳ ಸಾಲಿಗೆ ಬ್ರಿಟನ್ನಿನೊಡನೆ ಜಪಾನ್ ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನಗಳೂ ಸೇರಿದುವು.

ಈ ಎಲ್ಲ ರಾಷ್ಟ್ರಗಳೂ ಶಸ್ತ್ರ ಬಲವನ್ನು ಬೆಳೆಸಿಕೊಂಡುವು. ವರ್ಷಗಳುರುಳಿದಂತೆ ಈ ರಾಷ್ಟ್ರಗಳ ಉತ್ಪಾದನೆಯಲ್ಲಿ ಬಂದೂಕುಗಳು, ಇತರ ಯುದ್ಧ ಸಲಕರಣೆಗಳು, ಯುದ್ಧ ಹಡಗುಗಳು ಇತ್ಯಾದಿಗಳ ತಯಾರಿಗೆ ಖರ್ಚಾಗುವ ಪ್ರಮಾಣ ಹೆಚ್ಚಾಗುತ್ತ ಹೋಯಿತು. ಎಷ್ಟೋ ಸಲ ರಾಷ್ಟ್ರಗಳ ಮಧ್ಯದ ಸೂಕ್ಷ್ಮ ಸಮತೂಕ ತಪ್ಪಿ ಇನ್ನೇನು ಯುದ್ಧ ಪ್ರಾರಂಭವಾಯಿತೆನ್ನಿಸುತ್ತಿತ್ತು, ಅಷ್ಟರಲ್ಲಿ ಹೇಗೋ ತಪ್ಪಿ ಹೋಗುತ್ತಿತ್ತು. ಅಂತೂ ಕಡೆಗೆ ಯುದ್ಧ ಪ್ರಾರಂಭವಾಗಿಯೇಬಿಟ್ಟಿತು. ಜರ್ಮನಿ ಮತ್ತು ಆಸ್ಟ್ರಿಯಗಳು ಫ್ರಾನ್ಸ್ ಸರ್ಬಿಯ ಮತ್ತು ರಷ್ಯಗಳ ಮೇಲೇರಿಹೋದುವು. ಜರ್ಮನ್ ಸೈನ್ಯಗಳು ಬೆಲ್ಜಿಯಂ ಮೂಲಕ ಹಾದುಹೋದುವು. ತಕ್ಷಣ ಬೆಲ್ಜಿಯಂ ಪರವಾಗಿ ಬ್ರಿಟನ್ ಯುದ್ಧಕ್ಕೆ ಸೇರಿಕೊಂಡಿತು. ಇದರ ಪರಿಣಾಮವಾಗಿ ಬ್ರಿಟನ್ನಿನ ಮಿತ್ರ ಜಪಾನ್ ಯುದ್ಧ ಪ್ರವೇಶಿಸಿತು. ಬಲುಬೇಗ ಜರ್ಮನಿ ಪರವಾಗಿ ಟರ್ಕಿ ಹೋರಾಟಕ್ಕೆ ಬಂದಿತು. 1915ರಲ್ಲಿ ಇಟಲಿ ಆಸ್ಟ್ರಿಯದ ವಿರುದ್ಧ ಯುದ್ಧಕ್ಕೆ ಸೇರಿತು.

ಅದೇ ವರ್ಷದಲ್ಲಿ ಆಕ್ಟೋಬರಿನಲ್ಲಿ ಬಲ್ಗೇರಿಯವು ಕೇಂದ್ರ ಸಾಮ್ರಾಜ್ಯಗಳಾದ ಆಸ್ಟ್ರಿಯ ಹಂಗೇರಿ ಜರ್ಮನಿಗಳ ಕಡೆ ಹೋಯಿತು. 1916ರಲ್ಲಿ ರುಮೇನಿಯ 1917ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಚೀನಗಳು ಜರ್ಮನಿಯ ವಿರುದ್ಧ ಯುದ್ಧದಲ್ಲಿ ಪಾಲ್ಗೊಳ್ಳಲೇಬೇಕಾಯಿತು. ಈ ಭಾರೀ ಅನಾಹುತನಡೆಯಲು ಯಾರು ಯಾರು ಎಷ್ಟರಮಟ್ಟಿಗೆ ಕಾರಣರು ಎಂದು ಹೊಣೆಹೊರಿಸುವುದು ಈ ಗ್ರಂಥದ ವ್ಯಾಪ್ತಿಯಲ್ಲಿಲ್ಲ. ಈ ಯುದ್ಧ ಏಕೆ ಆಯಿತು ಅನ್ನುವುದೂ ಅಂಥ ದೊಡ್ಡ ಪ್ರಶ್ನೆ ಅಲ್ಲ. ಹೀಗಾಗಬಹುದೆಂಬುದನ್ನು ಮುಂಚೆಯೇ ಊಹಿಸಿ ಅದನ್ನು ತಪ್ಪಿಸಲು ಏಕೆ ಸಾಧ್ಯವಾಗಲಿಲ್ಲ ಎನ್ನುವುದು ಅದಕ್ಕಿಂತ ಕುತೂಹಲಕರ ಸಂಗತಿ. ರಾಷ್ಟ್ರಗಳು ಬಿಚ್ಚುಮನಸ್ಸಿನಿಂದ ಉದಾರವಾಗಿ ವರ್ತಿಸಿದ್ದರೆ ಯೂರೋಪಿನಲ್ಲಿ ಒಗ್ಗಟ್ಟನ್ನು ತಂದು ಈ ಅನಾಹುತವನ್ನು ತಪ್ಪಿಸಬಹುದಾಗಿತ್ತು. ಲಕ್ಷಗಟ್ಟಲೆ ಜನರು ಸ್ವದೇಶ ಪ್ರೇಮದಿಂದಲೋ ಮೌಢ್ಯದಿಂದಲೋ ಉದಾಸೀನತೆಯಿಂದಲೂ ಇದನ್ನು ಅರಿತುಕೊಳ್ಳಲಿಲ್ಲವೆನ್ನುವುದು ಯುದ್ಧ ನಡೆಯಲು ಕೆಲವರು ಅನುವು ಮಾಡಿಕೊಟ್ಟರು ಎನ್ನುವುದಕ್ಕಿಂತ ತೀವ್ರವಾಗಿ ಆಲೋಚಿಸಬೇಕಾದ ವಿಷಯ

ಈ ಯುದ್ಧದ ಘಟನೆಗಳ ವಿವರಗಳನ್ನು ಇಲ್ಲಿ ತಿಳಿಸುವುದು ಅಸಾಧ್ಯ ಆಧುನಿಕ ಅನ್ವಯಿಕ ವಿಜ್ಞಾನದ ಪ್ರಗತಿಯ ಫಲವಾಗಿ ಯುದ್ಧದ ಸ್ವರೂಪವೇ ತೀವ್ರ ಬದಲಾವಣೆಗೊಳಗಾಗಿದೆ ಎಂದು ಕೇವಲ ಕೆಲವೇ ತಿಂಗಳುಗಳಲ್ಲಿ ತಿಳಿಯಿತು ಭೌತ ವಿಜ್ಞಾನವು ಮಾನವನಿಗೆ ಶಕ್ತಿನೀಡುತ್ತದೆ, ಲೋಹಗಳ ಬಳಕೆಯಲ್ಲಿ, ಪ್ರಯಾಣ ಮಾಡುವಲ್ಲಿ, ರೋಗಚಿಕಿತ್ಸೆಯಲ್ಲಿ ಎಲ್ಲದರಲ್ಲಿ ಶಕ್ತಿನೀಡುತ್ತದೆ. ಇದು ಒಳ್ಳೆಯದಕ್ಕೆ ಉಪಯೋಗವಾತ್ತದೆಯೋ ಕೆಡುಕುಮಾಡಲು ಉಪಯೋಗವಾಗುತ್ತದೆಯೋ ಎನ್ನುವುದು ಪ್ರಪಂಚದ ಜನರ ರಾಜಕೀಯ ಹಾಗೂ ನೈತಿಕ ಬುದ್ಧಿಮಟ್ಟವನ್ನವಲಂಬಿಸಿರುತ್ತದೆ. ಯೂರೋಪಿನ ಸರ್ಕಾರಗಳು ಓಬೀರಾಯನಕಾಲದ ದ್ವೇಷ ಮತ್ತು ಸಂಶಯಗಳ ಸುಳಿಯಲ್ಲೇ ಇದ್ದುವು. ಅವುಗಳಿಗೆ ಈಗ ಎಂದೂ ಇಲ್ಲದಿದಷ್ಟು ವಿನಾಶಕಾರರ ಹಾಗೂ ಪ್ರತಿರೋಧಕ ಶಕ್ತಿಗಳು ಸಿಕ್ಕಿದುವು. ಪ್ರಪಂಚಕ್ಕೇ ಬೆಂಕಿ ಹತ್ತಿದಂತಿತ್ತು ಈ ಯುದ್ಧ ವಿಜಯಗಳು ಮತ್ತು ಪರಾಜಿತರು ಇಬ್ಬರಿಗೂ ಅವರ ಮಧ್ಯದ ಮೂಲ ವಿವಾದಕ್ಕೆ ಮಿತಿಮೀರಿ ಏನೂ ಹೋಲಿಕೆಯಿಲ್ಲದಷ್ಟು ನಷ್ಟ ಸಂಕಷ್ಟಗಳುಂಟಾದುವು. ಯುದ್ಧದ ಮೊದಲ ಹಂತದಲ್ಲಿ ಜರ್ಮನರು ಪ್ಯಾರಿಸ್ ಮೇಲೆ ಭಯಂಕರ ರೀತಿಯಲ್ಲಿ ನುಗ್ಗಿದರು ಮತ್ತು ರಷ್ಯನರು ಇದೇ ರೀತಿ ಪೂರ್ವ ಪ್ರಷ್ಯವನ್ನು ಆಕ್ರಮಿಸಿದರು. ಈ ಎರಡೂ ಕಡೆ ಆಕ್ರಮಣಕಾರರನ್ನು ಎದುರಿಸಿ ಹಿಂದಿರುಗಿಸಲಾಯಿತು. ಬಳಿಕ ರಕ್ಷಣಾತ್ಮಕ ಯುದ್ಧ ಕ್ರಮಗಳು ಉತ್ತಮಗೊಂಡವು. ಕಂದಕಗಳಲ್ಲಿದ್ದುಕೊಂಡೇ ಯುದ್ಧಮಾಡುವ ಪದ್ಧತಿ ಶೀಘ್ರವಾಗಿ ವ್ಯಾಪಿಸಿತು. ಕಡೆಗೆ ಏನಾಯಿತೆಂದರೆ ಪರಸ್ಪರ ವಿರೋಧಿಗಳಾದ ಸೈನ್ಯಗಳು ಯೂರೋಪಿನ ಆಗಲಕ್ಕೂ ವ್ಯಾಪಿಸಿದ ಕಂದಕಗಳಲ್ಲಿ ಎಷ್ಟೋಕಾಲ ಸುಮ್ಮನೆ ಕಾಲ ಕಳೆಯುವಂತಾಯಿತು. ಇವು ಮುಂದುವರಿಯ ಬೇಕೆಂದರೆ ಅಪಾರ

ಜೀವಹಾನಿ ಸಂಭವಿಸುತ್ತಿತ್ತು. ಒಂದೊಂದು ಸೈನ್ಯದಲ್ಲೂ ಮಿಲಿಯನ್ ಗಟ್ಟಲೆ ಸೈನಿಕರಿದ್ದರು ಒಂದೊಂದು ಸೈನ್ಯಕ್ಕೂ ಬೆಂಬಲವಾಗಿ ಆ ದೇಶದ ಇಡೀ ಜನತೆಯೇ ಆಹಾರ ಶಸ್ತ್ರ ಸರಬರಾಜು ಮಾಡಲು ನಿಂತಿರುತಿತ್ತು. ಯುದ್ಧ ಚಟುವಟಿಕೆಗಳಿಗೆ ಬೇಕಾಗುವಂಥದಲ್ಲದೆ ಬೇರೆ ಯಾವ ವಿಧದ ಉತ್ಪಾದನೆಯೂ ಹೆಚ್ಚು ಕಡಿಮೆ ನಿಂತೇ ಹೋಗಿತ್ತು. ಶಕ್ತರಾದ ಗಂಡಸರೆಲ್ಲ ಸೈನ್ಯಗಳಲ್ಲೋ ನೌಕಾದಳಗಳಲ್ಲೋ ಇವುಗಳಿಗೆ ಸಾಮಾನು ಒದಗಿಸುತ್ತಿದ್ದ ತತ್ಕಾಲಕ್ಕೆ ಹೇಗೋ ಅಳವಡಿಸಿದ ಕಾರ್ಖಾನೆಗಳಲ್ಲೋ ಇದ್ದರು. ಕೈಗಾರಿಕಾ ಕ್ಷೇತ್ರದಲ್ಲಿ ಎಷ್ಟೋ ಕಡೆ ಗಂಡಸರ ಸ್ಥಾನಕ್ಕೆ ಹೆಂಗಸರೇ ಬಂದರು. ಯುದ್ಧದಲ್ಲಿ ತೊಡಗಿದ್ದ ದೇಶಗಳಲ್ಲಿ ಬಹುಶಃ ಅರ್ಧ ಜನ ಈ ಸಮಯದಲ್ಲಿ ತಮ್ಮ ವೃತ್ತಿಯನ್ನು ಬದಲಾಯಿಸಿದರು. ಸಾಮಾಜಿಕವಾಗಿ ಎಷ್ಟೋ ಜನರನ್ನು ಬೇರುಕಿತ್ತು ಬೇರೆಡೆ ನೆಟ್ಟಂತಾಯಿತು. ಯುದ್ಧಕ್ಕೆ ತತ್ಕಾಲಕ್ಕೆ ಏನೇನು ಬೇಕೋ ಅಷ್ಟಕ್ಕಾಗಿ ಮಾತ್ರ ಶಿಕ್ಷಣ ಮತ್ತು ವೈಜ್ಞಾನಿಕ ಕಾರ್ಯ ನಡೆಯುತ್ತಿತ್ತು. ಯುದ್ಧಕ್ಕೆ ಸಂಬಂಧಿಸಿದ ನಿಯಂತ್ರಣ ಕ್ರಮಗಳು ಮತ್ತು ಪ್ರಚಾರದ ಅವಶ್ಯಕತೆಗಳಿಂದಾಗಿ ವರ್ತಮಾನ ಪ್ರಸಾರವೂ ತೀರಾ ಕುಂಠಿತವಾಯಿತು.

ಯುದ್ಧದ ಈ ರೀತಿ ಬಿಕ್ಕಟ್ಟಿನ ಪರಿಸ್ಥಿತಿ ನಿಧಾನವಾಗಿ ಒಂದು ರೀತಿಯ ಯುದ್ಧ ತಂತ್ರಕ್ಕೆಡೆಗೊಟ್ಟಿತು. ಯುದ್ಧಮಾಡುತ್ತಿರುವವರ ಮೇಲೆ ವಾಯುಮಾರ್ಗವಾಗಿ ಆಕ್ರಮಣ ಮಾಡುವುದು ಮತ್ತು ಸೈನ್ಯಗಳ ಹಿಂದೆಹೋಗಿ ಅಲ್ಲಿ ಯೋಧರಿಗಾಗಿ ಇರುವ ಆಹಾರ ಸಾಮಗ್ರಿಗಳನ್ನು ನಾಶಮಾಡುವುದು. ಬಂದೂಕುಗಳ ಗಾತ್ರ ಮತ್ತು ಹಾರುದೂರಗಳು ಒಂದೇ ಸಮನೆ ಉತ್ತಮಗೊಳ್ಳುತಾ ಹೋದುವು. ವಿಷವಾಯು ಬಾಂಬುಗಳು ಮತ್ತು ಸಣ್ಣ ಚಲಿಸುವ ಕೋಟೆಗಳು ಎನ್ನಬಹುದಾದ ಟ್ಯಾಂಕುಗಳೂ ಮುಂತಾದ ಜಾಣತನದ ಸಾಧನಗಳೂ ಬಳಕೆಗೆ ಬಂದುವು. ಇವೆಲ್ಲವುಗಳ ಉದ್ದೇಶ ಕಂದಕಗಳಲ್ಲಿದ್ದ ಸೈನಿಕರ ಪ್ರತಿರೋಧ ಶಕ್ತಿಯನ್ನು ಮುರಿಯುವುದೇ ಆಗಿತ್ತು. ಇವೆಲ್ಲವುಗಳಲ್ಲಿ ವಾಯು ಆಕ್ರಮಣವೇ ಅತ್ಯಂತ ಕ್ರಾಂತಿಕಾರಿಯಾದುದು. ಎರಡೇ ಆಯಾಮಗಳಲ್ಲಿ ನಡೆಯುತ್ತಿದ್ದ ಹೋರಾಟ ಈಗ ಮೂರನೆ ಆಯಾಮವನ್ನು ಹೊಕ್ಕಿತು. ಇದುವರೆಗೆ ಎರಡು ಸೈನ್ಯಗಳು ಭೂಮಿಯ ಮೇಲೆ ಪಯಣಿಸಿಬಂದು ಒಂದನ್ನೊಂದು ಸಂಧಿಸಿದಲ್ಲಿ ಮಾತ್ರ ಯುದ್ಧ ನಡೆಯುತ್ತಿತ್ತು. ಈಗ ಅದು ಎಲ್ಲೆಲ್ಲೂ ನಡೆಯಲಾರಂಭಿಸಿತು. ಮೊದಲು ಜೆಪ್ಲಿನ್ ಬಳಿಕ ಬಾಂಬು ಹಾಕುವ ವಿಮಾನ ಹೀಗೆ ಉಪಯೋಗಕ್ಕೆ ಬಂದುವು. ಕಾದಾಟವು ಮೊದಲಿನ ರಣರಂಗದ ಮೇಲೆ ಹಾದು ಅದರಾಚೆ ಹೋಗಿ ಅಲ್ಲಿರುತ್ತಿದ್ದ ಸಾಮಾನ್ಯ ನಾಗರೀಕ ಚಟುವಟಿಕೆಗಳೆಲ್ಲದರಲ್ಲೂ ತಲೆಹಾಕಿತು. ಅದರ ಕಾರ್ಯಕ್ಷೇತ್ರ ವಿಸ್ತಾರವಾಗುತ್ತಲೇ ಹೋಯಿತು. ನಾಗರೀಕ ಯುದ್ಧ ವ್ಯವಹಾರಗಳಲ್ಲಿ ಅದುವರೆಗೆ ನಡೆಸಿಕೊಂಡುಬರುತ್ತಿದ್ದ ನಾಗರೀಕರು ಯೋಧರು ಎಂಬ ಪ್ರತ್ಯೇಕತಾಭಾವನೆ ಅಳಿಸಿಹೋಯಿತು. ಆಹಾರ ಬೆಳೆಯುವವರು, ಬಟ್ಟೆ ಹೊಲಿಯುವವರು, ಮರ ಕಡಿಯುವವರು ಮನೆ ರಿಪೇರಿ

ಮಾಡುವವರು ರೈಲ್ವೆ ನಿಲ್ದಾಣಗಳು ಮಳಿಗೆಗಳು ಎಲ್ಲರನ್ನೂ ಎಲ್ಲವನ್ನೂ ನಾಶ ಮಾಡಬೇಕು ಎಂಬುದೇ ಯುದ್ಧನೀತಿಯಾಯಿತು. ತಿಂಗಳುಗಳು ಕಳೆದಂತೆ ವಾಯು ಯುದ್ಧ ಮತ್ತೂ ಕ್ರೂರವಾಗುತ್ತಾ ಹರಡುತ್ತಾ ಹೋಯಿತು. ಕಡೆಗೆ ಯುರೋಪಿನಲ್ಲಿ ಎಷ್ಟೋ ಕಡೆ ವಿಶಾಲವಾದ ಪ್ರದೇಶಗಳು ಸದಾಕಾಲ ಆಕ್ರಮಣ ಕ್ಕೊಳಗಾಗಿರು ವಂತೆಯೇ ಇದ್ದುವು. ರಾತ್ರಿ ವಿಮಾನದಾಳಿ ಸಾಮಾನ್ಯವಾಗಿ ಹೋಯಿತು. ಇಂಥ ಧಾಳಿಗಳಿಗೆ ಸುಲಭವಾಗಿ ಸಿಗುತ್ತಿದ್ದ ಲಂಡನ್ ಪ್ಯಾರಿಸ್ಸುಗಳಲ್ಲಿ ಪ್ರತಿರಾತ್ರಿ ಯಾರಿಗೂ ನಿದ್ದೆಯೂ ಇಲ್ಲದೆ ಹೋಯಿತು. ಬಾಂಬುಗಳ ಸಿಡಿತ ಮತ್ತು ವಿಮಾನ ನಾಶಕ ಬಂದೂಕುಗಳ ಹೊಡೆತಗಳಿಂದ ತಡೆಯಲಾರದಷ್ಟು ಗಲಾಟೆಯಾಗುತ್ತಿತ್ತು. ಅಗ್ನಿಶಾಮಕ ದಳದ ವಾಹನಗಳು ಮತ್ತು ಆ್ಯಂಬುಲೆನ್ಸ್ ಗಾಡಿಗಳು ಕತ್ತಲು ಕವಿದ ನಿರ್ಜನ ರಸ್ತೆಗಳಲ್ಲಿ ದಡದಡನೆ ಓಡಾಡುತ್ತಿದ್ದುವು. ಮುದುಕರು ಮತ್ತು ಮಕ್ಕಳ ಶರೀರ ಮತ್ತು ಮನಸ್ಸುಗಳ ಮೇಲೆ ಇದರಿಂದ ಅತ್ಯಂತ ಹಾನಿಕರ ಪರಿಣಾಮ ಉಂಟಾಯಿತು. ಯಾರಿಗೂ ನಿಶ್ಚಿಂತೆಯೆಂಬುದೇ ಇರಲಿಲ್ಲ. ಮುಕ್ಕಾಲುಪಾಲು ಜನರು ಜನ ಹಿಂದೆಂದೂ ಇಲ್ಲದಷ್ಟು ತೊಂದರೆಗೊಳಗಾಗಿದ್ದರು.

1918ರ ನವೆಂಬರಿನಲ್ಲಿ ಹೋರಾಟ ಕೊನೆಗಂಡಿತು. ಆ ವರ್ಷದ ವಸಂತದಲ್ಲಿ ಮಹತ್ತರ ಪ್ರಯತ್ನಮಾಡಿ ಜರ್ಮನ್ನರು ಇನ್ನೇನು ಪ್ಯಾರಿಸ್ಸಿನ ಹತ್ತಿರ ಬಂದಿದ್ದರು. ಆದರೆ ಆ ವೇಳೆಗೆ ಕೇಂದ್ರ ಬಲಗಳ ಶಕ್ತಿ ಕುಸಿದು ಹೋಯಿತು. ಅವರ ಚೈತನ್ಯ ಮತ್ತು ಸಾಮಗ್ರಿಶಕ್ತಿ ಎರಡೂ ಮುಗಿದು ಹೋಗಿದ್ದುವು

66: ರಷ್ಯದ ನೂತನ ವ್ಯವಸ್ಥೆ

ಈ ಕೇಂದ್ರ ಬಲಗಳು ಕುಸಿಯುವುದಕ್ಕೆ ಒಂದು ವರ್ಷಕ್ಕಿಂತಲೂ ಮೊದಲೇ ಬೈಜಾಂಟೈನ್ ಸಾಮ್ರಾಜ್ಯದ ಮುಂದುವರಿಕೆಯೆಂದು ಹೇಳಿಕೊಳ್ಳುತ್ತಿದ್ದ ರಷ್ಯದ ಅರ್ಧಂಬರ್ಧ ಪೌರ್ವಾತ್ಯ ಮಾದರಿಯ ರಾಜಪ್ರಭುತ್ವ ಬಿದ್ದುಹೋಗಿತ್ತು. ಯುದ್ಧಕ್ಕೆ ಕೆಲವು ವರ್ಷ ಮೊದಲಿನಿಂದಲೇ ಈ ಆಡಳಿತ ಒಳಗಿನಿಂದ ಗೆದ್ದಲು ತಿಂದಂತೆ ಆಗಿಹೋಗಿತ್ತು. ರಾಜನ ಆಸ್ಥಾನ ಧಾರ್ಮಿಕನ ಸೋಗುಹಾಕಿದ್ದ ರಾಸ್ಪುಟನ್ ಎಂಬೊಬ್ಬ ವಿಲಕ್ಷಣ ಮೋಸಗಾರನ ಪ್ರಭಾವಕ್ಕೆ ಒಳಗಾಗಿತ್ತು. ಸೈನ್ಯ ಮತ್ತು ಸೈನ್ಯೇತರ ಆಡಳಿತಗಳೆಲ್ಲ ಅತೀವ ಅವ್ಯವಸ್ಥೆ ಮತ್ತು ಭ್ರಷ್ಟಾಚಾರಗಳಿ ಗೊಳಗಾಗಿದ್ದುವು. ಯುದ್ಧ ಪ್ರಾರಂಭವಾದಾಗ ರಷ್ಯದಲ್ಲಿ ದೇಶ ಪ್ರೇಮ ಒಂದು ಉತ್ಸಾಹದ ಬುಗ್ಗೆಯನ್ನೇ ಎಬ್ಬಿಸಿತು. ಬಹು ದೊಡ್ಡದಾದ ಒಂದು ಸೈನ್ಯವನ್ನು ಒತ್ತಾಯದಿಂದ ಕೂಡಿಸಲಾಯಿತು. ಇದಕ್ಕೆ ಸಾಕಷ್ಟು ಸರಿಯಾದ ಸಾಮಾನು ಸರಂಜಾಮುಗಳೂ ಇರಲಿಲ್ಲ. ದಕ್ಷರಾದ ಕೆಲಸ ಬಲ್ಲ ಅಧಿಕಾರಿಗಳೂ ಇರಲಿಲ್ಲ. ಸರಿಯಾದ ಸರಬರಾಜೂ ಇಲ್ಲದ ಮಾರ್ಗದರ್ಶನವೂ ಇಲ್ಲದ ಈ ಭಾರೀ ಸೇನೆಯನ್ನು ಜರ್ಮನಿ ಮತ್ತು ಆಸ್ಟ್ರಿಯಗಳ ಕಡೆ ನುಗ್ಗಿಸಿದರು.

ಯುದ್ಧಗಳ ಜೊತೆ ಜೊತೆಗೇ ಮಹಾ ಜಾಡ್ಯಗಳೂ ಬರುತ್ತವೆ. ಆದರೆ ಈ ಯುದ್ಧದ ಅಂತ್ಯದವರೆಗೆ—ಅಂದರೆ 1918ರ ವರೆಗೆ ಹೀಗಾಗಲಿಲ್ಲ. ನಾಲ್ಕು ವರ್ಷಗಳ ಕಾಲ ಆಧುನಿಕ ವೈದ್ಯಶಾಸ್ತ್ರ ಆ ರೀತಿಯ ಅಂಟುರೋಗ ಬರದಂತೆ ತಡೆಹಿಡಿದಿತ್ತು. ಬಳಿಕ ಪ್ರಪಂಚದ ಎಲ್ಲೆಡೆಯಲ್ಲೂ ಇನ್‌ಫ್ಲೂಯೆಂಜಾ ತಲೆದೋರಿ ಅನೇಕ ಮಿಲಿಯನ್ ಜನಗ ಸಾವಿಗೆ ಕಾರಣವಾಯಿತು. ರೋಗದಂತೆ ಕ್ಷಾಮವನ್ನೂ ಕೆಲಕಾಲ ತಡೆಹಿಡಿದಿಡಲಾಗಿತ್ತು. ಆದರೆ 1918ರ ಆರಂಭದಲ್ಲಿ ಯೂರೋಪಿನ ಬಹು ಭಾಗ ಕೃತಕ ನಿಯಂತ್ರಣೆಗೊಳಪಟ್ಟ ಒಂದು ರೀತಿ ಅರ್ಧಕ್ಷಾಮದಲ್ಲಿತ್ತು. ಪ್ರಪಂಚದ ಎಲ್ಲ ಪ್ರದೇಶಗಳಿಂದಲೂ ರೈತರು ಅನೇಕರು ಯುದ್ಧಮಾಡಲು ಹೋಗಿದ್ದುದರಿಂದ ಆಹಾರ ಉತ್ಪಾದನೆ ಕಡಿಮೆಯಾಗಿ ಹೋಗಿತ್ತು. ಆಹಾರದ ಸಾಗಣೆಗೂ ಹಂಚಿಕೆಗೂ ಬೇಕಾದಷ್ಟು ಅಡ್ಡಿಗಳು ಬಂದುವು. ಆಹಾರತುಂಬಿದ ಹಡಗುಗಳನ್ನು ಸಬ್‌ಮೆರೀನುಗಳು ಮುಳುಗಿಸುತ್ತಿದ್ದುವು. ದೇಶಗಳ ನಡುವಿನ ಎಲ್ಲೆಗಳಲ್ಲಿ ನಿರ್ಬಂಧಗಳಿದ್ದುದರಿಂದ ವಾಡಿಕೆಯ ವಾಣಿಜ್ಯ ಮಾರ್ಗಗಳು ನಿರುಪಯುಕ್ತವಾಗಿದ್ದುವು. ಪ್ರಪಂಚಾದ್ಯಂತ ಸಾರಿಗೆವ್ಯವಸ್ಥೆ ಹದಗೆಟ್ಟು ಹೋಗಿತ್ತು. ಕಡಿಮೆಯಾಗುತ್ತಿದ್ದ ಆಹಾರ ದಾಸ್ತಾನುಗಳನ್ನು ಸರಕಾರಗಳೇ ವಹಿಸಿಕೊಂಡು ರೇಷನ್ ವ್ಯವಸ್ಥೆಯನ್ನು ಜಾರಿಗೆ ತಂದುವು. ಈ ವ್ಯವಸ್ಥೆ ಕಷ್ಟಮಟ್ಟಿಗೆ ಯಶಸ್ವಿಯಾಯಿತು. ಯುದ್ಧದ ನಾಲ್ಕನೆಯ ವರ್ಷದ ಹೊತ್ತಿಗೆ ಪ್ರಪಂಚವಲ್ಲೆಲ್ಲ ಆಹಾರ ಅಷ್ಟೇ ಅಲ್ಲದೆ ಬಟ್ಟೆಬರೆ, ವಸತಿ ಸೌಕರ್ಯ ಮತ್ತಿತರ ಬಳಕೆ ಸಾಮಾನುಗಳೆಲ್ಲದರ ಕೊರತೆಯಿಂದ ಜನ ಕೊಳಲುತ್ತಿದ್ದರು. ವ್ಯವಹಾರ ಮತ್ತು ಆರ್ಥಿಕ ವ್ಯವಸ್ಥೆಗಳು ತೀರಾ ಹದಗೆಟ್ಟುಹೋಗಿದ್ದುವು.

1914ರ ಸೆಪ್ಟೆಂಬರಿನಲ್ಲಿ ಹೀಗೆ ರಷ್ಯದ ಸೈನ್ಯ ಪೂರ್ವ ಪ್ರಷ್ಯಕ್ಕೆ ನುಗ್ಗಿದುದರಿಂದ ಮೊದಲು ಫ್ರಾನ್ಸಿನ ಮೇಲೆ ಯಶಸ್ವಿಯಾಗಿ ನುಗ್ಗಿದ್ದ ಜರ್ಮನರ ಗಮನ ಇತ್ತ ಕಡೆ ತಿರುಗಿತೆಂಬುದರಲ್ಲಿ ಸಂಶಯವಿಲ್ಲ. ಫ್ರಾನ್ಸಿನ ಮೇಲೆ ನಡೆದ ಈ ನಿರ್ಣಾಯಕ ಮೊದಲ ದಾಳಿಯಿಂದ ಫ್ರಾನ್ಸು ಸಂಪೂರ್ಣವಾಗಿ ಪತನವಾಗುವುದನ್ನು ಸರಿಯಾದ ಮಾರ್ಗದರ್ಶನವಿಲ್ಲದ ರಷ್ಯ ಸೈನ್ಯದಲ್ಲಿದ್ದ ಲಕ್ಷೋಪಲಕ್ಷ ಬಡ ರೈತರ ಸಂಕಷ್ಟ ಸಾವುಗಳು ತಪ್ಪಿಸಿದುವು. ಈ ಬಡಸಾಯಿಗಳಿಗೆ ಪಶ್ಚಿಮ ಯೂರೋಪವು ಚಿರಋಣಿಯಾಗಿರಬೇಕು. ವಿಸ್ತಾರ ಆ ಪ್ರದೇಶದಲ್ಲಿ ಹಸರಿದ್ದ ಸುಸಂಘಟಿತವಲ್ಲದಿದ್ದ ಈ ಸಾಮ್ರಾಜ್ಯಕ್ಕೆ ಈ ಯುದ್ಧದ ಭಾರ ಅತಿಯಾಗಿ ಹೋಯಿತು. ಬಂದೂಕುಗಳು ಮತ್ತು ಬಂದೂಕಿನ ಮದ್ದುಗುಂಡುಗಳನ್ನು ಸಹಕೊಡದೆ ರಷ್ಯದ ಸಾಮಾನ್ಯ ಸಿಪಾಯಿಗಳನ್ನು ರಣರಂಗಕ್ಕೆ ಕಳುಹಿಸಲಾಗುತ್ತಿತ್ತು. ಇವರ ಮೇಲ್ಪಟ್ಟ ಅಧಿಕಾರಿಗಳು ಹಾಗೂ ಜನರಲ್ಲುಗಳು ತಮ್ಮ ರಣೋತ್ಸಾಹದ ಅಮಲಿನಲ್ಲಿ ಈ ಸಿಪಾಯಿಗಳನ್ನು ಅನ್ಯಾಯವಾಗಿ ಹಾಳುಮಾಡಿದರು. ಮೂಕ ಪ್ರಾಣಿಗಳಂತೆ ಈ ಸಿಪಾಯಿಗಳೂ ಮೌನವಾಗಿ ಎಲ್ಲ ಸಹಿಸಿಕೊಂಡಿದ್ದಂತೆ ತೋರಿತು. ಆದರೂ ಎಂಥಾ ಅಜ್ಞಾನಿಗಳ ಸಹನಾಶಕ್ತಿಗೂ ಒಂದು ಮಿತಿ ಇರುತ್ತದೆ. ವಂಚನೆಗೊಳಗಾಗಿ ದುಃಸ್ಥಿತಿಗಿಳಿದ ಈ ಜನರ ಸೈನ್ಯ

ತ್ಸಾರನ ಬಗೆಗೆ ತೀವ್ರವಾದ ಜುಗುಪ್ಸೆ ಬೆಳೆಯುತ್ತಿತ್ತು. ರಷ್ಯದ ಪಾಶ್ಚಾತ್ಯ ಮಿತ್ರರಿಗೆ 1915ರ ಅಂತ್ಯದಿಂದ ಮುಂದೆ ಆದೇಶದ ವಿಷಯ ಆತಂಕ ಹುಟ್ಟಿಸುವಂತಿತ್ತು. 1916ರಲ್ಲಿ ರಷ್ಯ ಆಕ್ರಮಣ ಪ್ರವೃತ್ತಿ ಬಿಟ್ಟು ಆತ್ಮರಕ್ಷಣೆಯಲ್ಲಿ ನಿರತವಾಯಿತು. ಅದು ಜರ್ಮನಿಯೊಡನೆ ಪ್ರತ್ಯೇಕ ಕೌಲುಮಾಡಿಕೊಳ್ಳಬಹುದೆಂಬ ವದಂತಿಗಳೂ ಹರಡಿದುವು.

1916ರ ಡಿಸೆಂಬರ್ 16ರಂದು ಪೆಟ್ರೋಗ್ರಾಡಿನ ಭೋಜನಕೂಟವೊಂದರಲ್ಲಿ ರಾಸ್‌ಪುಟಿನ್ನನ ಕೊಲೆಯಾಯಿತು ಕಾಲಮೀರಿದ ಮೇಲೆ ತ್ಸಾರ್ ಪ್ರಭುತ್ವವನ್ನು ಸುವ್ಯವಸ್ಥಿತಗೊಳಿಸಲು ಪ್ರಯತ್ನ ನಡೆಯಿತು. ಮಾರ್ಚ್ ಹೊತ್ತಿಗೆ ಒಂದಾದ ಮೇಲೊಂದರಂತೆ ಘಟನಾವಳಿಗಳು ನಡೆದುವು. ಆಹಾರಕ್ಕಾಗಿ ನಡೆದ ದೊಂಬಿಗಳು ಪೆಟ್ರೊಗ್ರಾಡಿನಲ್ಲಿ ಬಂಡಾಯದ ರೂಪ ತಾಳಿದುವು. ದುಮಾ ಎಂದು ಕರೆಯುತ್ತಿದ್ದ ಪ್ರತಿನಿಧಿ ಸಭೆಯನ್ನು ಹತ್ತಿಕ್ಕಲು ಪ್ರಯತ್ನ ನಡೆಯಿತು. ಉದಾರ ಪಕ್ಷದ ಮುಖಂಡರನ್ನು ಸೆರೆಯಲ್ಲಿಡಲೂ ಪ್ರಯತ್ನಿಸಲಾಯಿತು. ಲ್ವೋಫ್ ಎಂಬ ಶ್ರೀಮಂತ ಸರ್ದಾರನ ಕೈಕೆಳಗೆ ಒಂದು ಹಂಗಾಮಿ ಸರ್ಕಾರ ರಚನೆಯಾಯಿತು. ಮಾರ್ಚ್ 15ರಂದು ಕ್ಸಾರ್ ಪದವಿ ತ್ಯಾಗಮಾಡಿದನು. ಹತೋಟಿ ಮೀರಿ ತೀವ್ರ ಮಾರ್ಗಕ್ಕೆ ಹೋಗದಂಥ ಮಿತಗಾಮಿ ಕ್ರಾಂತಿ ಬಹುಶಃ ಹೊಸತ್ಸಾರನ ಅಧೀನದಲ್ಲಿ ನಡೆಯಬಹುದೆಂದು ಕೆಲಕಾಲ ಎನ್ನಿಸಿತು. ಆದರೆ ಜನಸಾಮಾನ್ಯರ ನಂಬಿಕೆ ಪೂರ್ಣನಾಶವಾಗಿದೆಯೆಂದೂ ಇಂಥ ರಾಜಿ ಮನೋಭಾವ ಅವರಲ್ಲಿಲ್ಲವೆಂದೂ ಬಹು ಬೇಗ ತಿಳಿದು ಬಂತು. ಯೂರೋಪಿನ ಹಳೆವ್ಯವಸ್ಥೆ, ತ್ಸಾರ್‌ಗಳು, ಯುದ್ಧಗಳು, ಪ್ರಬಲ ರಾಷ್ಟ್ರಗಳು ಇವೆಲ್ಲದರ ಬಗ್ಗೆ ರಷ್ಯನ್ನರ ಮನಸ್ಸು ರೋಸಿಹೋಗಿತ್ತು. ಅವರಿಗೆ ಬಿಡುಗಡೆ ಬೇಕಾಗಿತ್ತು, ಅದೂ ಸಹಿಸಲಸಾಧ್ಯವಾದ ಸಂಕಷ್ಟಗಳಿಂದ, ಅತಿಶೀಘ್ರವಾಗಿ ರಷ್ಯದ ಮಿತ್ರರಿಗೆ ಆದೇಶದ ನಿಜಸ್ಥಿತಿಯ ಬಗ್ಗೆ ಏನೂ ತಿಳಿದಿರಲಿಲ್ಲ. ರಷ್ಯ ದೇಶದ ಬದಲು ತ್ಸಾರನ ಆಸ್ಥಾನದಲ್ಲೇ ದೃಷ್ಟಿನೆಟ್ಟಿದ್ದ ದೊಡ್ಡಸ್ತಿಕೆ ಜನರಾದ ಇವರು ಈ ಹೊಸ ಪರಿಸ್ಥಿತಿಯಲ್ಲಿ ಒಂದೇ ಸಮನೆ ಎಡವುತ್ತಾ ನಡೆದರು. ಈ ರಾಯಭಾರಿಗಳಿಗೆ ಪ್ರಜಾಪ್ರಾತಿನಿಧ್ಯದಲ್ಲಿ ಸ್ವಲ್ಪವೂ ವಿಶ್ವಾಸವಿರಲಿಲ್ಲ. ಈ ಹೊಸ ಸರ್ಕಾರವನ್ನು ಸಾಧ್ಯವಿದ್ದಷ್ಟೂ ಪೇಚಿನಲ್ಲಿ ಸಿಕ್ಕಿಸಬೇಕೆಂಬ ಮನೋಭಾವ ಸ್ಪಷ್ಟವಾಗಿತ್ತು. ಆಕರ್ಷಕ ವ್ಯಕ್ತಿತ್ವದ ವಾಗ್ಮಿ ಕೆರೆನ್‌ಸ್ಕಿ ರಷ್ಯದ ಈ ಪ್ರತಿನಿಧಿ ಸರ್ಕಾರದ ಮುಖಂಡನಾಗಿದ್ದನು. ಸಾಮಾಜಿಕ ಕ್ರಾಂತಿಯೇ ಗುರಿಯಾಗಿದ್ದ ತೀವ್ರಗಾಮಿ ಕ್ರಾಂತಿಕಾರಿದಳಗಳು ಸ್ವದೇಶದಲ್ಲಿ ಕೆರೆನ್‌ಸ್ಕಿಯನ್ನು ಎದುರಿಸಿದರೆ ಪರದೇಶಗಳ ಮಿತ್ರ ಸರ್ಕಾರಗಳು ಈತನನ್ನು ತಾತ್ಸಾರದಿಂದ ನೋಡುತ್ತಿದ್ದರು. ರಷ್ಯದ ರೈತರಿಗೆ ಸ್ವದೇಶದಲ್ಲಿ ಭೂಮಿ ಬೇಕಾಗಿತ್ತು; ದೇಶದ ಹೊರಗೆ ಯುದ್ಧ ನಿಲ್ಲಬೇಕಾಗಿತ್ತು. ಇವುಗಳಲ್ಲಿ ಯಾವುದನ್ನೂ ಸಾಧಿಸಲೂ ಕೆರೆನ್‌ಸ್ಕಿ ರಷ್ಯದ ಮಿತ್ರರಾಷ್ಟ್ರಗಳು ಅವಕಾಶ ಕೊಡಲಿಲ್ಲ. ಸೋತು ಸುಣ್ಣವಾಗಿದ್ದ ತಮ್ಮ ಮಿತ್ರರಾಷ್ಟ್ರ ತಿರುಗೊಮ್ಮೆ

ಹೊಸದಾಗಿ ಧಾಳಿ ನಡೆಸಬೇಕೆಂದು ಫ್ರೆಂಚರು ಬ್ರಿಟಿಷರು ಒಂದೇ ಸಮನೆ ರಷ್ಯದ ಮೇಲೆ ಒತ್ತಡ ಹೇರುತ್ತಿದ್ದರು. ಅಷ್ಟರಲ್ಲೇ ಜರ್ಮನ್ನರು ಭೂ ಜಲ ಮಾರ್ಗಗಳೆರಡರ ಮೂಲಕ ರೀಗದ ಮೇಲೆ ರಭಸದ ಧಾಳಿ ನಡೆಸಿದಾಗ ಬ್ರಿಟಿಷ್ ನೌಕಾಧಿಪತಿಗಳು ಭಯಪಟ್ಟು ಬಾಲ್ಟಿಕ್ ಸಮುದ್ರಕ್ಕೆ ಸಹಾಯಕ್ಕಾಗಿ ಪಡೆ ಕಳುಹಿಸಲು ಹಿಂದೆಗೆದರು. ಹೊಸದಾಗಿ ಸ್ಥಾಪನೆಯಾದ ರಷ್ಯದ ಪ್ರಜಾಪ್ರಭುತ್ವ ಯಾರ ಸಹಾಯವೂ ಇಲ್ಲದೆ ಹೋರಾಡಬೇಕಾಯಿತು. ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಸಂಗತಿಯೊಂದಿದೆ. ಅದೇನೆಂದರೆ ಪ್ರಬಲ ನೌಕಾಪಡೆಯನ್ನು ಪಡೆದಿದ್ದರೂ, ಲಾರ್ಡ್‌ಫಿಷರ್ (1841–1920) ಅತ್ಯಂತ ಕಳಕಳಿಯಿಂದ ಹೇಳಿದರೂ ಬ್ರಿಟಿಷರು ಮತ್ತು ಅವರ ಮಿತ್ರರು ಯುದ್ಧ ನಡೆದಷ್ಟು ಕಾಲವೂ ಎಲ್ಲೋ ಅಲ್ಲಿ ಇಲ್ಲಿ ಸಬ್‌ಮೆರೀನ್ ಪ್ರಯೋಗಿಸಿದುದರಹೊರತು ಬಾಲ್ಟಿಕ್ ಪ್ರದೇಶದಲ್ಲಿ ಜರ್ಮನರದೇ ಮೇಲುಗೈಯಾಗಿರಲು ಬಿಟ್ಟುಕೊಟ್ಟಿದ್ದರು.

ರಷ್ಯದ ಸಾಮಾನ್ಯ ಜನರಂತೂ ಏನೇ ಬರಲಿ ಎಷ್ಟೇ ಕಷ್ಟನಷ್ಟಗಳೊದಗಲಿ ಯುದ್ಧ ನಿಲ್ಲಿಸಲೇಬೇಕೆಂಬ ದೃಢ ಸಂಕಲ್ಪ ಹೊಂದಿದ್ದರು. ಪೆಟ್ರೊಗ್ರಾಡಿನಲ್ಲಿ ಕೆಲಸಗಾರರು ಮತ್ತು ಸಾಮಾನ್ಯ ಸಿಪಾಯಿಗಳನ್ನು ಪ್ರತಿನಿಧಿಸುತ್ತಿದ್ದ ಸೋವಿಯತ್ ಎಂಬ ಹೆಸರಿದ್ದ ಒಂದು ಸಂಸ್ಥೆ ಹುಟ್ಟಿಕೊಂಡಿತು. ಸ್ಟಾಕ್‌ಹೋಮಿನಲ್ಲಿ ಸಮಾಜವಾದಿಗಳ ಅಂತರರಾಷ್ಟ್ರೀಯ ಸಮ್ಮೇಳನ ಕರೆಯಬೇಕೆಂದು ಈ ಸಂಸ್ಥೆ ಕೂಗೆಬ್ಬಿಸಿತು. ಇದೇ ಸಮಯದಲ್ಲಿ ಬರ್ಲಿನ್ನಿನಲ್ಲಿ ಆಹಾರಕ್ಕಾಗಿ ದೊಂಬಿಗಳೇಳುತ್ತಿದ್ದುವು. ಆಸ್ಟ್ರಿಯ ಮತ್ತು ಜರ್ಮನಿಗಳಲ್ಲೂ ಜನ ಯುದ್ಧದಿಂದ ಬೇಸುತ್ತಿದ್ದರು. ಮುಂದೆ ನಡೆದಿದ್ದನ್ನು ನೋಡಿದರೆ ಅಂಥ ಸಮ್ಮೇಳನ ನಡೆದಿದ್ದರೆ 1917ರಲ್ಲೇ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಮಂಜಸವಾದ ಶಾಂತಿ ಉಂಟಾಗುತ್ತಿತ್ತೆಂದೂ ಜರ್ಮನಿಯಲ್ಲಿ ಕ್ರಾಂತಿಯಾಗುತ್ತಿತ್ತು ಎಂದೂ ಎನಿಸುತ್ತದೆ. ಈ ಸಮ್ಮೇಳನ ನಡೆಯಲು ಅವಕಾಶ ಮಾಡಿಕೊಡುವಂತೆ ತನ್ನ ಪಾಶ್ಚಿಮಾತ್ಯ ಮಿತ್ರರನ್ನು ಬಹುವಾಗಿ ಕೇಳಿಕೊಂಡರೂ ಪ್ರಪಂಚದಾದ್ಯಂತ ಸಮಾಜವಾದ ಮತ್ತು ಪ್ರಜಾಪ್ರಭುತ್ವ ಹರಡಿಬಿಡುವುದೆಂಬ ಭಯದಿಂದ ಅವರು ಅದಕ್ಕೆ ಒಪ್ಪಲಿಲ್ಲ. ಬ್ರಿಟಿಷ್ ಲೇಬರ್ ಪಕ್ಷದ ಕೆಲವರು ಮಾತ್ರ ಇದಕ್ಕೆ ಒಪ್ಪಿಗೆ ಇತ್ತಿದ್ದರು. ಹೀಗೆ ತನ್ನ ಮಿತ್ರರಿಂದ ನೈತಿಕ ಬೆಂಬಲವೂ ಇಲ್ಲದೆ ಭೌತಿಕ ಸಹಾಯವೂ ಇಲ್ಲದೆ ಈ ತೊಂದರೆಯಲ್ಲಿದ್ದ ಈ ಮಿತವಾದಿ ರಷ್ಯನ್ ಆಡಳಿತ ಹೇಗೆ ಹೇಗೋ ಹೋರಾಟ ಮುಂದುವರಿಸಿ ಕಡೆಗೆ ಜುಲೈ ತಿಂಗಳಿಗೆ ಅಂತಿಮವಾಗಿ ಏನಾದರೂ ಆಗಲಿ ಎಂಬ ಧೋರಣೆಯಿಂದ ಒಂದು ಧಾಳಿಯ ಪ್ರಯತ್ನ ಮಾಡಿತು. ಇದರಲ್ಲಿ ಮೊದಲು ಸ್ವಲ್ಪ ಜಯ ದೊರೆತರೂ ಬಳಿಕ ರಷ್ಯನರ ಭೀಕರ ಕಗ್ಗೊಲೆಯಲ್ಲಿ ಇದು ಕೊನೆಗಂಡಿತು.

ರಷ್ಯದ ಜನರ ಸಹನೆ ಮೇರೆಮೀರಿತು. ರಷ್ಯದ ಸೈನ್ಯ ಪಡೆಗಳಲ್ಲಿ ಅದರಲ್ಲಿಯೂ ಉತ್ತರ ದಿಕ್ಕಿನ ರಣರಂಗಗಳಲ್ಲಿ ಸೈನಿಕರು ದಂಗೆಯೆದ್ದರು. 1917ರ ನವೆಂಬರ್

17ರಲ್ಲಿ ಕೆರೆನ್‌ಸ್ಕಿ ಸರ್ಕಾರ ಉರುಳಿತು. ಸೋವಿಯತ್‌ಗಳು ಅಧಿಕಾರ ವಹಿಸಿಕೊಂಡುವು. ಲೆನಿನ್ನನ ನೇತೃತ್ವದಲ್ಲಿದ್ದ ಬಾಲ್ಷೆವಿಕ್ ಸಮಾಜವಾದಿಗಳು ಇದರಲ್ಲಿ ಪ್ರಬಲರಾಗಿದ್ದರು. ಪಾಶ್ಚಿಮಾತ್ಯ ಸರ್ಕಾರಗಳು ಏನಾದರೂ ಮಾಡಲಿ ತಾವಂತೂ ಶಾಂತಿ ಒಪ್ಪಂದ ಮಾಡಿಕೊಳ್ಳುವುದೇ ಸರಿಯೆಂದು ಈ ಸರ್ಕಾರ ಶಪಥ ಮಾಡಿತು. ಹಾಗೆಯೇ 1918ರ ಮಾರ್ಚ್ ಎರಡರಂದು ಬ್ರೆಸ್ಟ್–ಲಿಟೋವ್‌ಸ್ಕ್‌ನಲ್ಲಿ ರಷ್ಯ ಜರ್ಮನಿಗಳ ಮಧ್ಯೆ ಪ್ರತ್ಯೇಕವಾದ ಶಾಂತಿ ಒಪ್ಪಂದಕ್ಕೆ ಸಹಿ ಬಿತ್ತು.

ಕೆರೆನ್‌ಸ್ಕಿ ಆಡಳಿತದ ಭಾಷಣ ಚತುರರು ಮತ್ತು ಸಂವಿಧಾನನ್ಯಾಯತಜ್ಞರಿಗೂ ಈ ಬಾಲ್ಷೆವಿಕ್ ಸಮಾಜವಾದಿಗಳಿಗೂ ತುಂಬ ವ್ಯತ್ಯಾಸವಿದ್ದುದು ಬಹಬೇಗನೇ ಸ್ಪಷ್ಟವಾಯಿತು. ಇವರು ಅತೀವ ಶ್ರದ್ಧೆಯಿಂದ ಉನ್ಮತ್ತರಾದ ಮಾರ್ಕ್ಸ್‌ವಾದದ ಕಮ್ಯೂನಿಸ್ಟರಾಗಿದ್ದರು. ಪ್ರಪಂಚದಲ್ಲಿ ಎಲ್ಲ ಕಡೆಯೂ ಸಮಾಜಕ್ರಾಂತಿಯಾಗವುದಕ್ಕೆ ರಷ್ಯದ ಅಧಿಕಾರ ಪ್ರಾಪ್ತಿ ಬರಿ ಒಂದು ಪೀಠಿಕೆ ಎಂದು ಇವರು ನಂಬಿದ್ದರು. ಸಂಪೂರ್ಣ ಅನನುಭವ ಮತ್ತು ಪರಿಪೂರ್ಣ ಶ್ರದ್ಧೆಗಳಿಂದ ಉದ್ಭವವಾದ ಉತ್ಸಾಹದಿಂದ ಇವರು ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಬದಲಾಯಿಸಲು ಹೊರಟರು. ಪಶ್ಚಿಮ ಯೂರೋಪ್ ಮತ್ತು ಅಮೆರಿಕಗಳ ಸರ್ಕಾರಗಳಿಗೆ ಈ ಅಸಾಮಾನ್ಯವಾದ ಪ್ರಯೋಗದಲ್ಲಿ ಮಾರ್ಗದರ್ಶನ ಮತ್ತು ಸಹಾಯ ಮಾಡಲು ತಕ್ಕಷ್ಟು ತಿಳಿವಳಿಕೆಯಾಗಲೀ ಶಕ್ತಿಯಾಗಲೀ ಇರಲಿಲ್ಲ. ಬಾಲ್ಷೆವಿಕರನ್ನು ಅಧಿಕಾರಚೋರರೆಂದು ಪರಿಗಣಿಸಿ ಅವರಿಗೆ ಅಪಖ್ಯಾತಿ ತರಬೇಕೆಂದು ವೃತ್ತಪತ್ರಿಕೆಗಳೂ ರಷ್ಯಾಕ್ಕೇನಾದರೂ ಸರಿ ತಮಗೇನಾದರೂ ಸರಿ ಅವರನ್ನು ಹಾಳು ಮಾಡಬೇಕೆಂದು ವಿವಿಧ ದೇಶಗಳ ಆಡಳಿತ ವರ್ಗಗಳೂ ಕಂಕಣ ಕಟ್ಟಿನಿಂತುವು. ಜುಗುಪ್ಸೆ ತರುವಂಥ ಅವಲಕ್ಷಣದ ಸುಳ್ಳು ಸುಳ್ಳುಕತೆಗಳ ಪ್ರಚಾರ ಪ್ರಪಂಚದ ವೃತ್ತಪತ್ರಿಕಾ ಪ್ರಪಂಚದಲ್ಲಿ ಯಾವ ಅಡೆತಡೆಯಿಲ್ಲದೆ ನಡೆಯಿತು. ಬಾಲ್ಷೆವಿಕ್ ಮುಖಂಡರು ನಂಬಲು ಅಸಾಧ್ಯವಾದಂಥ ರಕ್ತಪಿಪಾಸುಗಳಾದ ಪಿಶಾಚಿಗಳೆಂದೂ ಅಪಾರ ಐಶ್ವರ್ಯ ಲೂಟಿ ಹೊಡೆದು ವಿಷಯಲಂಪಟರಾಗಿ ಭೋಗ ಜೀವನ ನಡೆಸುತ್ತಿದ್ದಾರೆಂದೂ ಇವರ ಮುಂದೆ ರಾಸ್‌ಪುಟಿನ್ ಕಾಲದ ಪೌರನ ಆಸ್ಥಾನದವರು ಅತ್ಯಂತ ಪರಿಶುದ್ಧರೆಂದೂ ಪತ್ರಿಕೆಗಳಲ್ಲಿ ಬರೆಯಲಾಗುತ್ತಿತ್ತು. ದಣಿದು ಹೋಗಿದ್ದ ರಷ್ಯದ ಮೇಲೆ ಆಕ್ರಮಣ ಪಡೆಗಳನ್ನು ಕಳುಹಿಸಲಾಯಿತು. ದಂಗೆ ಕೋರರು ದಾಳಿಕಾರರನ್ನು ಆ ಯುದ್ಧಗಳು ಮತ್ತು ಸಹಾಯಧನಕೊಟ್ಟು ಪ್ರೋತ್ಸಾಹಿಸಲಾಯಿತು. ಬಾಲ್ಷೆವಿಕ್ ಸರ್ಕಾರದಿಂದ ಭಯಪಟ್ಟಿದ್ದ ಶತ್ರುಗಳಿಗೆ ಎಂಥ ಹೋರಾಟ ವಿಧಾನವೂ ಹೇಯವಾದುದು, ಪೈಶಾಚಿಕವಾದುದು ಎನ್ನಿಸಲಿಲ್ಲ. ಐದು ವರ್ಷಕಾಲ ನಡೆದ ತೀವ್ರ ಹೋರಾಟದಿಂದ ಬಸವಳಿದು ಗೊಂದಲಕ್ಕೊಳಗಾಗಿದ್ದ ಬಾಲ್ಷೆವಿಕರು 1919ರಲ್ಲಿ ಆರ್ಕೇಂಜಲಿನಲ್ಲಿ ಬ್ರಿಟಿಷ್ ಸೈನ್ಯ, ಪೂರ್ವಸೈಬೀರಿಯದಲ್ಲಿ ಜಪಾನಿ ಆಕ್ರಮಣಕಾರರು, ದಕ್ಷಿಣದಲ್ಲಿ ರುಮೇನಿಯ ಗ್ರೀಕ್ ಹಾಗೂ ಫ್ರೆಂಚ್ ಪಡೆಗಳು, ಸೈಬೀರಿಯದಲ್ಲಿ ರಷ್ಯದ ನೌಕಾಧಿಪತಿ ಅಡ್ಮಿರಲ್ ಕಲ್ಚಾಕ್, ಕ್ರಿಮಿಯದಲ್ಲಿ

ಫ್ರೆಂಚರ ನೌಕಾದಳದ ಸಹಾಯ ಪಡೆದಿದ್ದ ಜನರಲ್ ಡೆನಿಕಿಸ್ ಇವರೆಲ್ಲರ ಜೊತೆ ಹೋರಾಡುತ್ತಿದ್ದರು. ಅದೇ ವರ್ಷ ಜುಲೈಯಲ್ಲಿ ಜನರಲ್ ಯುಡೆನಿಚ್ಚನ ನೇತೃತ್ವದಲ್ಲಿ ಒಂದು ಎಸ್ತೋನಿಯನ್ ಸೈನ್ಯ ಹೆಚ್ಚು ಕಡಿಮೆ ಪೀಟರ್ಸ್‌ಬರ್ಗ್‌ವರೆಗೂ ಬಂದಿತ್ತು. ಫ್ರೆಂಚರ ಚಿತಾವಣೆಯ ಮೇಲೆ ಪೋಲರು 1920ರಲ್ಲಿ ರಷ್ಯದ ಮೇಲೆ ನುಗ್ಗಿ ಬಂದರು. ತನ್ನ ತಾಯ್ನಾಡನ್ನು ತಾನೇ ಅಕ್ರಮಿಸಿ ಹಾಳು ಮಾಡುತ್ತಿದ್ದ ಜನರಲ್ ಡೆನಿಕಿನ್ನನ ಸ್ಥಾನಕ್ಕೆ ಜನರಲ್ ಎಂಬ ಪ್ರತಿಗಾಮಿ ನಾಯಕ ಬಂದನು. 1921ರ ಮಾರ್ಚಿಯಲ್ಲಿ ಕೊನ್‌ಸ್ಟ್ಯಾಟನಲ್ಲಿ ನಾವಿಕರು ದಂಗೆಯೆದ್ದರು. ಲೆನಿನ್ನನ ಅಧ್ಯಕ್ಷತೆಯಲ್ಲಿ ರಷ್ಯದ ಸರ್ಕಾರ ಈ ಎಲ್ಲ ಧಾಳಿಗಳನ್ನು ಗೆದ್ದು ಜೀವವುಳಿಸಿಕೊಂಡಿತು. ಅವರ ದಾರ್ಢ್ಯ ಅಚ್ಚರಿಗೊಳಿಸುವಂತಿತ್ತು. ವರ್ಣಿಸಲು ಅಶಕ್ಯವಾದ ತೊಂದರೆಗಳಲ್ಲೂ ರಷ್ಯದ ಸಾಮಾನ್ಯಜನ ಒಂದೇ ಮನಸ್ಸಿನಿಂದ ಈ ಸರ್ಕಾರಕ್ಕೆ ಬೆಂಬಲ ನೀಡಿದರು. 1921ರ ಅಂತ್ಯದ ಹೊತ್ತಿಗೆ ಬ್ರಿಟನ್ ಮತ್ತು ಇಟಲಿಗಳೆರಡೂ ಕಮ್ಯೂನಿಸ್ಟ್ ಸರ್ಕಾರಕ್ಕೆ ಒಂದು ರೀತಿಯ ಮನ್ನಣೆ ಕೊಟ್ಟರು.

ವಿದೇಶೀಯರ ಹಸ್ತಕ್ಷೇಪ ಮತ್ತು ಆಂತರಿಕ ದಂಗೆಗಳನ್ನೆದುರಿಸಿದುದಕ್ಕಿಂತ ಕಮ್ಯೂನಿಸ್ಟ್ ಧ್ಯೇಯಗಳ ಆಧಾರದ ಮೇಲೆ ರಷ್ಯದಲ್ಲಿ ಒಂದು ಹೊಸ ಸಾಮಾಜಿಕ ವ್ಯವಸ್ಥೆತರುವುದು ಬಾಲ್ಷೆವಿಕ್ ಸರ್ಕಾರಕ್ಕೆ ಹೆಚ್ಚು ಕಷ್ಟವಾಯಿತು. ರಷ್ಯದ ರೈತನೆಂದರೆ ಜಮೀನಿಗಾಗಿ ಹಂಬಲಿಸುವ ಒಬ್ಬ ಸಣ್ಣ ಹಿಡುವಳಿದಾರನಾಗಿದ್ದನು. ಅವನ ಮನಸ್ಸು ಮತ್ತು ಮಾರ್ಗಗಳಿಗೂ ಕಮ್ಯೂನಿಸಮ್ಮಿಗೂ ಅಪಾರದೂರ ಇತ್ತು. ಇವನು ಕಮ್ಯೂನಿಸಮ್ಮಿಗೆ ಒಗ್ಗಿಕೊಳ್ಳುವುದು ತಿಮಿಂಗಿಲ ಹಕ್ಕಿಯಂತೆ ಹಾರುವಷ್ಟೇ ಕಷ್ಟವಾಗುತ್ತಿತ್ತು. ರಷ್ಯದ ದೊಡ್ಡದೊಡ್ಡ ಭೂಮಾಲಿಕರ ಜಮೀನು ಕ್ರಾಂತಿಯ ಫಲವಾಗಿ ಇವನಿಗೆ ಸಿಕ್ಕಿತ್ತು. ಆದರೆ ಚಲಾಯಿಸಿ ಉಪಯೋಗಿಸಲು ಬರುವ ಹಣ ಸಿಗುವಂತಿದ್ದರೆ ಮಾತ್ರ ಇವನು ಆಹಾರ ಬೆಳೆಯಲು ಸಿದ್ಧನಿದ್ದ. ಕ್ರಾಂತಿ ಇತರ ವಿಷಯಗಳೊಂದಿಗೆ ಹಣದ ಬೆಲೆಯನ್ನೂ ಅಳಿಸಿಹಾಕಿತ್ತು. ಹಣಕ್ಕೆ ಬೆಲೆ ಇಲ್ಲದಂತೆ ಮಾಡಿತ್ತು. ಯುದ್ಧದ ಪರಿಣಾಮವಾಗಿ ರೈಲ್ವೆವ್ಯವಸ್ಥೆ ಹಾಳಾಗಿತ್ತು. ಇದು ಕೃಷಿ ಉತ್ಪಾದನೆಯ ಮೇಲೂ ಪ್ರಭಾವ ಬೀರಿತ್ತು. ಈಗಲಂತೂ ಪ್ರತಿ ರೈತನೂ ತನಗೆಷ್ಟುಬೇಕೋ ಅಷ್ಟು ಮಾತ್ರ ಆಹಾರ ಬೆಳೆದುಕೊಳ್ಳುವಷ್ಟಕ್ಕೆ ಕೃಷಿ ಉತ್ಪಾದನೆ ಇಳಿಯಿತು. ಪಟ್ಟಣಗಳ ಜನ ಉಪವಾಸ ಬೀಳುವಂತಾಯಿತು. ಕಮೂನಿಸ್ಟ್ ತತ್ತ್ವಗಳ ಪ್ರಕಾರ ಔದ್ಯಮಿಕ ಉತ್ಪಾದನೆ ನಡೆಸಲು ಆತುರದಲ್ಲಿ ಹೇಗೆ ಹೇಗೊ ನಡೆಸಿದ ಪ್ರಯತ್ನಗಳು ಸಫಲವಾಗಲಿಲ್ಲ. ಒಂದು ನವನಾಗರೀಕತೆ ಪೂರ್ತಿ ಕುಸಿದು ಹೋದರೆ ಹೇಗಿರುತ್ತದೆ ಎಂಬುದರ ಪ್ರಪ್ರಥಮ ನಿದರ್ಶನವಾಯಿತು 1920ರಲ್ಲಿ ಈ ದೇಶ ರೈಲ್ವೆಗಳು ತುಕ್ಕು ಹಿಡಿದು ನಿಷ್ಪ್ರಯೋಜಕವಾಗುತ್ತಿದ್ದುವು. ಊರುಗಳು ಪಾಳುಬೀಳುತ್ತಿದ್ದುವು. ಎಲ್ಲ ಕಡೆ ಜನ ಸಾಯುತ್ತಿದ್ದರು. ಇಷ್ಟಾದರೂ ತನ್ನ ಗಡಿಗಳೆಡೆಗೆ ಬಂದಿದ್ದ ಶತ್ರುಗಳೊಡನೆ ಈ ದೇಶ ಹೋರಾಡಿತು. 1921ರಲ್ಲಿ

ಸರಿಯಾಗಿ ಮಳೆ ಬರಲಿಲ್ಲ, ಯುದ್ಧದಿಂದ ಹಾಳಾಗಿದ್ದ ಆಗ್ನೇಯ ಪ್ರಾಂತ್ಯಗಳಲ್ಲಿ ಕ್ಷಾಮ ತಲೆದೋರಿ ಮಿಲಿಯನ್ ಗಟ್ಟಲೆ ಜನರಿಗೆ ಹೊಟ್ಟೆಗಿಲ್ಲದೆ ಹೋಯಿತು.

ಜನರಿಗೊದಗಿದ ಈ ಸಂಕಷ್ಟಗಳು ಮತ್ತು ರಷ್ಯ ಇವುಗಳಿಂದ ಚೇತರಿಸಿಕೊಂಡಿದ್ದು ಇವೆಲ್ಲ ಇತ್ತೀಚಿನ ಘಟನೆಗಳು. ಇವುಗಳಿಗೂ ಇಂದಿನ ವಿವಾದಗಳಿಗೂ ಸಮೀಪ ಸಂಬಂಧವಿರುವುದರಿಂದ ಇಲ್ಲಿ ಅವುಗಳನ್ನು ಚರ್ಚಿಸುತ್ತಿಲ್ಲ.

ಈ ಕಷ್ಟಕರ ಪರಿಸ್ಥಿತಿಗಳಸಲುವಾಗಿ ದೇಶದ ಪುನರ್ನಿರ್ಮಾಣ ಕ್ರಿಯೆಯನ್ನು ಸ್ವಲ್ಪ ನಿದಾನವಾಗಿ ನಡೆಸಬೇಕೆಂದು ನಿರ್ಧರಿಸಲಾಯಿತು. ಸರ್ಕಾರ ಒಂದು ನೂತನ ಆರ್ಥಿಕ ನೀತಿಯನ್ನು ಘೋಷಿಸಿತು. ಖಾಸಗಿ ಸ್ವತ್ತು ಮತ್ತು ಖಾಸಗಿ ಉದ್ಯಮಗಳಿಗೆ ಇದರಲ್ಲಿ ಹೆಚ್ಚಿನ ಸ್ವಾತಂತ್ರ್ಯಕೊಡಲಾಯಿತು. ಉತ್ಪಾದನಾ ಚಟುವಟಿಕೆಗಳು ಸ್ವಲ್ಪ ಮಟ್ಟಿಗೆ ಪೂರ್ವಸ್ಥಿತಿಗೆ ಬರಲಾರಂಭಿಸಿದುವು. ರಷ್ಯಾ ಸಮಾಜವಾದಿ ರಾಷ್ಟ್ರ ನಿರ್ಮಾಣದಿಂದ ಕೊಂಚ ಪಕ್ಕಕ್ಕೆ ತಿರುಗಿ ಅದಕ್ಕೆ ನೂರು ವರ್ಷಗಳ ಹಿಂದೆ ಅಮೆರಿಕದಲ್ಲಿದ್ದಂಥ ವಿದ್ಯಮಾನಗಳಿಗೆ ಸಮಾನಾಂತರ ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳುತ್ತಿರುವಂತೆ ತೋರಿತು. ಅಮೆರಿಕದ ಚಿಕ್ಕ ರೈತರನ್ನು ಹೋಲುವ ಕುಲಾಕರೆಂಬ ಹೆಸರಿದ್ದ ಅನುಕೂಲಸ್ಥ ರೈತವರ್ಗ ಮುಂದೆ ಬಂದಿತು. ಸಣ್ಣಸಣ್ಣ ಸ್ವತಂತ್ರ ವ್ಯಾಪಾರಿಗಳು ಹೆಚ್ಚಿದರು. ಆದರೆ ತನ್ನಧ್ಯೇಯಗಳನ್ನು ಈ ರೀತಿ ಬಿಟ್ಟುಕೊಟ್ಟು ಅಮೆರಿಕಕ್ಕಿಂತ ನೂರುವರ್ಷಗಳ ಹಿಂದೆ ಬೀಳಲು ಕಮ್ಯೂನಿಸ್ಟ್ ಪಾರ್ಟಿ ಸಿದ್ಧವಿರಲಿಲ್ಲ. ದೇಶವನ್ನು ತಿರುಗಿ ಕಮ್ಯುನಿಸ್ಟ್ ಬೆಳವಣಿಗೆಯ ಮಾರ್ಗಕ್ಕೆ ತರಲು 1928ರಲ್ಲಿ ಬಲವಾದ ಪ್ರಯತ್ನ ಮೊದಲಾಯಿತು.

ಸರ್ಕಾರೀರಂಗದಲ್ಲಿ ಉದ್ಯಮಗಳನ್ನು ತ್ವರಿತವಾಗಿ ಹೆಚ್ಚಿಸಲು, ಅವರಲ್ಲೂ ಭಾರೀ ಉದ್ಯಮಗಳಿಗೆ ಸೇರಿದ ಪ್ರಧಾನ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲು ಒಂದು ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದರು. ಇದೇ ಸಮಯದಲ್ಲಿ ಕೃಷಿರಂಗದಲ್ಲಿ ಬಿಡರೈತರ ಸ್ಥಾನದಲ್ಲಿ ಸಾಮುದಾಯಿಕ ವ್ಯವಸಾಯಪದ್ಧತಿಯನ್ನು ಜಾರಿಗೆ ತರಲಾಯಿತು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅನೇಕ ತೊಂದರೆಗಳಿದ್ದುವು. ಮುಖ್ಯವಾಗಿ ಜನರು ನಿರಕ್ಷರ ಕುಕ್ಷಿಗಳಾಗಿದ್ದು ಹಿಂದುಳಿದಿದ್ದುದು, ದಕ್ಷರಾದ ಮೇಲ್ವಿಚಾರಕರು ಮತ್ತು ತಾಂತ್ರಿಕ ತಜ್ಞರು ಸಾಕಷ್ಟು ಜನರಿಲ್ಲದಿದ್ದುದು, ಪಾಶ್ಚಿಮಾತ್ಯದೇಶಗಳು ಸ್ವಲ್ಪವೂ ಸಹಾನುಭೂತಿಯಿಲ್ಲದೆ ಬೇಕೆಂತಲೇ ಈ ರಾಷ್ಟ್ರಕ್ಕೆ ವಿರುದ್ಧವಾಗಿ ವರ್ತಿಸಿದ್ದುದು ಇವುಗಳಿಂದ ಈ ಕಾರ್ಯದಲ್ಲಿ ತುಂಬ ತೊಂದರೆಯಾಯಿತು. ಆದರೂ ಔದ್ಯಮಿಕ ಕ್ಷೇತ್ರದಲ್ಲಿ ತಕ್ಕಷ್ಟು ಕಾರ್ಯ ನಡೆಯಿತು. ಎಷ್ಟೋ ಸಲ ಅನವಶ್ಯಕವಾಗಿ ದುಂದುಖರ್ಚು ಆಗುತ್ತಿತ್ತು. ಯಾವುದು ಮುಖ್ಯ ಯಾವುದು ಅಮುಖ್ಯ ಎಂಬ ವಿವೇಚನೆ ಇರುತ್ತಿರಲಿಲ್ಲ. ಆದರೂ ಬೇಕಾದಷ್ಟು ಸಾಧನೆಯಾಯಿತು ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಇಂಥ ದಿಟ್ಟತನದ ಶೀಘ್ರ ಬದಲಾವಣೆಗಳಿಂದ ಕೃಷಿರಂಗದ ಮೇಲಾದ ಪ್ರಭಾವ ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. 1933–34ರ ಚಳಿಗಾಲದಲ್ಲಿ ಅಪಾರವಾದ ಆಹಾರ ಕೊರತೆ ಉಂಟಾಯಿತು.

ಖಾಸಗಿ ಲಾಭನಷ್ಟ ತತ್ತ್ವದ ಬಂಡವಾಳಶಾಹಿ ವ್ಯವಸ್ಥೆಯ ಪರಿಣಾಮಗಳನ್ನು ಪರಿಶೀಲಿಸುತ್ತಿದ್ದ ಪ್ರಪಂಚದ ಉಳಿದ ದೇಶಗಳು ರಷ್ಯದ ಈ ಪ್ರಯೋಗವನ್ನು ಕುತೂಹಲ, ಅಪನಂಬಿಕೆ ಹಾಗೂ ಗೌರವಗಳಿಂದ ವೀಕ್ಷಿಸುತ್ತಿದ್ದುವು. ಆ ಹಳೆ ವ್ಯವಸ್ಥೆಯೂ ದುರ್ದೆಶೆಯಲ್ಲಿತ್ತು. ಒಟ್ಟು ಜನಸಂಖ್ಯೆಯಲ್ಲಿ ಪದಾರ್ಥಗಳನ್ನು ಕೊಂಡುಕೊಳ್ಳುವ ಸಾಮರ್ಥ್ಯವಿರುವವರ ಸಂಖ್ಯೆ ಬರಬರುತ್ತಾ ಕಡಿಮೆಯಾಗುತ್ತಿತ್ತು. ಸಮಾಜದ ಮುನ್ನಡೆಯ ವೇಗ ಬಲುಬೇಗ ಕುಗ್ಗುತ್ತಿತ್ತು. ಹಳೆ ವ್ಯವಸ್ಥೆಯ ಬಗ್ಗೆ ಸಂತೃಪ್ತಿ ಹೊರಟು ಹೋಗಿತ್ತು. ಪ್ರಪಂಚದಲ್ಲಿ ಎಲ್ಲ ಕಡೆ "ಯೋಜನೆ" ಎಂಬ ಪದ ಹರಡಿತು. ಆರ್ಥಿಕ ಒತ್ತಡಗಳು ಹೆಚ್ಚಿದಂತೆ ಹೆಚ್ಚು ಹೆಚ್ಚು "ಯೋಜನೆ" ಗಳು ಮುಂದೆ ಬಂದುವು. 1933ರ ಹೊತ್ತಿಗೆ ಹೆಸರು ಪಡೆದ ರಾಜ್ಯನೀತಿಜ್ಞರೆಲ್ಲರೂ ಒಂದೊಂದು ಯೋಜನೆಯನ್ನು ಮುಂದಿಡುತ್ತಿದ್ದರು. ಇವರೆಲ್ಲರಿಂದ ರಷ್ಯಕ್ಕೆ ಇಷ್ಟಾದರೂ ಗೌರವ ಸಂದಿತು.

1933 ರಲ್ಲಿ ಪೈರು ಸರಿಯಾಗಿ ಬರದಿದ್ದರೂ 1934ರ ವರೆಗೆ ರಷ್ಯದಲ್ಲಿ ಯೋಜನೆಗಳೆಲ್ಲ ಯಶಸ್ವಿಯಾಗಿದ್ದ ಚಿಹ್ನೆಗಳು ತೋರುತ್ತಿದ್ದುವು ಉತ್ಪಾದನೆ ಹೆಚ್ಚಿತು. ಪಶುಪ್ರಾಣಿಗಳ ಸಂಖ್ಯೆ ಏರಿತು. ಅನೇಕಾನೇಕ ಯೂರೋಪಿಯನ್ ಮತ್ತು ಅಮೆರಿಕನ್ ಪ್ರವಾಸಿಗಳು ಅಲ್ಲಿಗೆ ಹೋಗಿ ವೋಡ್ಕ ಹಾಗೂ ಕಾವಿಯಾರ್‌ಗಳನ್ನು ಸೇವಿಸಿ ಸಂತೋಷಪಟ್ಟರು. ಆರ್ಕ್ಟಿಕ್ ಭೂ ಸಂಶೋಧನೆ ಮತ್ತು ತಳಿ ವಿಜ್ಞಾನದಲ್ಲಿ ವಿಶೇಷವಾಗಿ ಅತ್ಯುತ್ತಮ ವೈಜ್ಞಾನಿಕ ಸಂಶೋಧನೆ ನಡೆಯಿತು. ಡ್ನೈಪ್ರೊಸ್ಟ್ರೋಯ್ ಅಣೆಕಟ್ಟು ಮತ್ತು ತುರ್ಕ್-ಸೈಬೀರಿಯ ರೈಲ್ವೆಗಳಂಥ ದೊಡ್ಡ ದೊಡ್ಡ ನಿರ್ಮಾಣ ಕಾರ್ಯಗಳು ನಡೆದುವು. ಸಾಕಷ್ಟು ಪುನರ್ನಿರ್ಮಾಣ ಮತ್ತು ಸಾಧನ ಸಲಕರಣೆಗಳನ್ನು ಸಜ್ಜುಗೊಳಿಸುವುದು ನಡೆದುವು. ಆದರೆ ಯಾವುದೇ ವಿಧವಾದ ಟೀಕೆಯನ್ನು ಕಠಿಣವಾಗಿ ಅದುಮಿಹಾಕಲಾಗುತ್ತಿತ್ತು. ರಾಜಾರೋಷವಾಗಿ ಸರ್ಕಾರಕ್ಕೆ ವಿರೋಧ ತೋರಿಸಲು ಆದುದರಿಂದ ಅವೆಲ್ಲಾ ರಹಸ್ಯ ಭೂಗತ ಮಾರ್ಗ ಹಿಡಿಯುತ್ತಿತ್ತು. ವಿರೋಧವನ್ನು ಅದುಮಿಡುತ್ತಾಹೋದಷ್ಟೂ ಅದಕ್ಕೆ ಅಪರಾಧದ ಬಣ್ಣ ಬರುತ್ತದೆ. ಈ ನೂತನ ವ್ಯವಸ್ಥೆಯ ಜೀವನಾಡಿಗೇ ಅದರಲ್ಲಿನ ಒಡಕುಗಳಿಂದ ಅಪಾಯವಾಗುವಂತಿತ್ತು. ಲೆನಿನ್ನನ ಅಕಾಲ ಮರಣದ ನಂತರ ಅಧಿಕಾರಕ್ಕಾಗಿ ಟ್ರಾಟ್ಸ್ಕಿ ಮತ್ತು ಸ್ಟಾಲಿನ್ನರ ನಡುವೆ ಬಿರುಸಾದ ಘರ್ಷಣೆ ನಡೆಯಿತು. ತೀಕ್ಷ್ಣ ಬುದ್ಧಿಯ ಟ್ರಾಟ್ಸ್ಕಿಯು ಮುಂದಾಳುತನದಲ್ಲಿ 1919-20 ರಲ್ಲಿ ಈ ಹೊಸ ಪ್ರಜಾರಾಜ್ಯ ತನಗೆ ಒದಗಿದ ವಿಪತ್ತುಗಳಿಂದ ಪಾರಾಗಿತ್ತು. ಸ್ಟಾಲಿನ್ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದನು. ಇವರಿಬ್ಬರಿಗೂ ಲೆನಿನನಿಗಿದ್ದ ಹಿರಿಯ ಸ್ಥಾನ ಇರಲಿಲ್ಲ. ಟ್ರಾಟ್ಸ್ಕಿ ಬುದ್ಧಿವಂತ ಆದರೆ ಜಂಬದ ಮನುಷ್ಯ. ಸ್ಟಾಲಿನ್ ಕಠಿಣ ಹಠವಾದಿ 1927ರಲ್ಲಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯಿಂದ ಹೊರಹಾಕಲ್ಪಟ್ಟಿದ್ದ ಟ್ರಾಟ್ಸ್ಕಿ 1928ರ ಜೂನ್‌ನಲ್ಲಿ ದೇಶಬಿಟ್ಟು

ಹೋದನು. ಟರ್ಕಿ, ಫ್ರಾನ್ಸ್, ನಾರ್ವೆ ಕೊಟ್ಟಕೊನೆಗೆ ಮೆಕ್ಸಿಕೊವಿಗೆ ಹೋದ. ಈತ ತನ್ನ ಹಳೆಯ ಸಹಕಾರ್ಯಕರ್ತರ ವಿರುದ್ಧ ಒಂದೇ ಸಮನೆ ಅತ್ಯಂತ ನಿಷ್ಠುರ ವಾದ ವಾದಗಳನ್ನು ನಡೆಸುತ್ತಿದ್ದನು. ಇದರಿಂದ ಪ್ರಪಂಚಾದ್ಯಂತ "ಎಡ" ಪಕ್ಷ ಸೀಳಾಗಿ ಎರಡು ವಿರುದ್ಧ ಬಣಗಳಾದುವು.

ಅವಿಧೇಯರಾದ ಅಧಿಕಾರಿಗಳು ಮತ್ತು ನೌಕರರು ಸೇರಿ ಸ್ಟಾಲಿನ್ನನ ಆಡಳಿತದ ವಿರುದ್ಧ ಗುಪ್ತವಾಗಿ ಹೋರಾಟ ನಡೆಸುತ್ತಿದ್ದರೆಂಬ ವದಂತಿಯಿತ್ತು. ಆದರೆ ಆ ಸಮಯದ ಆಗುಹೋಗುಗಳು ಇನ್ನೂ ಅಸ್ಪಷ್ಟವಾಗಿಯೇ ಇವೆ, ಆಡಳಿತಕ್ಕೆ ವಿರೋಧ ಇದ್ದಿದ್ದೇನೋ ನಿಜ. ಅವಿಧೇಯತೆಯೂ ಇತ್ತು, ವಿಧ್ವಂಸಕ ಕೃತ್ಯ ಗಳೂ ನಡೆಯುತ್ತಿದ್ದುವು. ಲೆನಿನ್ನನ ಕಾಲದಲ್ಲೂ ಸಹ ವ್ಯವಸ್ಥಿತವಲ್ಲದ ಇಂಥ ಪ್ರತಿ ಭಟನೆ ಬಹುಶಃ ನಡೆಯುತ್ತಿತ್ತು. ಆದರೆ ಲೆನಿನ್ನನ ಸಾವಿನ ನಂತರ ಈ ವಿರೋಧ ಸುಸಂಘಟಿತವಾಯಿತು. ಸ್ವಲ್ಪ ಕಾಲ ಸೋವಿಯತ್ ಸರ್ಕಾರ ಈ ಘರ್ಷಣೆಯಲ್ಲಿ ತಕ್ಕಷ್ಟು ತಾಳ್ಮೆಯಿಂದಲೇ ನಡೆದುಕೊಂಡಿತು. ಕೆಲವು ಬ್ರಿಟಿಷ್ ಇಂಜಿನಿಯರುಗಳೂ ಸೇರಿದಂತೆ ಹಲವು ಜವಾಬ್ದಾರಿಯುತ ಅಧಿಕಾರಿಗಳನ್ನು ಅವರು ಉದ್ದೇಶಪೂರ್ವಕ ವಾಗಿ ರಷ್ಯದ ಆಧುನೀಕರಣ ಮತ್ತು ತಾಂತ್ರಿಕ ಅಭಿವೃದಿಗೆ ಅಡ್ಡಿ ಮಾಡುತ್ತಿರುವ ರೆಂಬ ಆರೋಪದ ಮೇಲೆ ವಿಚಾರಣೆಗೆ ಗುರಿಮಾಡಲಾಯಿತು. ಅನಂತರ ನಡೆದ ವಿಚಾರಣೆಗಳಲ್ಲಿ ಒಳಸಂಚು ಮತ್ತು ರಾಜಕೀಯ ಅಪರಾಧಗಳು ಮುಂದೆ ಬಂದುವು. ಈ ವಿಚಾರಣೆಗಳಲ್ಲಿ ಆರೋಪಿಗಳಾಗಿದ್ದವರಲ್ಲಿ ಹೆಚ್ಚಿನವರಿಗೆ ಬಂಧನ ಇಲ್ಲವೇ ಗಡೀಪಾರಿನ ಶಿಕ್ಷೆ ವಿಧಿಸಲಾಗುತ್ತಿತ್ತು. 1934ರ ಡಿಸೆಂಬರ್ ಒಂದನೆ ತಾರೀಖು ಸ್ಟಾಲಿನ್ ಬಹಳ ವಿಶ್ವಾಸವಿಟ್ಟುಕೊಂಡಿದ್ದ ಕಿರೋವ್ ತನ್ನ ಕೆಲಸದ ಕೋಣೆಯಲ್ಲಿ ಕೊಲೆಯಾದನು. ಈ ಆಘಾತದ ನಂತರ ಸ್ಟಾಲಿನ್ ಬಹಳ ಕಠಿಣನಾದನು. ಹಳೆಯ ಸಹಕಾರ್ಯಕರ್ತರಲ್ಲೂ ಸಹ ವಿರೋಧಿ ಭಾವನೆ ಬೆಳೆಯುತ್ತಾ ಹೋದಂತೆ ಸ್ಟಾಲಿನ್ನನಲ್ಲಿ ಒಂಟಿತನದ ಭಾವನೆಯೂ ಬೆಳೆಯುತ್ತಾ ಹೋಯಿತು. ಕಡೆಗೆ ಲೇಖಕ ಮಾಕ್ಸಿಂ ಗೋರ್ಕಿಯನ್ನು ಬಿಟ್ಟರೆ ಇವನಿಗೆ ಬೇರೆ ಆಪ್ತರೇ ಉಳಿಯಲಿಲ್ಲ. ಗೋರ್ಕಿ 1936ರಲ್ಲಿ ನಿಧನನಾದನು. ಬಳಿಕ ಒಂದಾಗುತ್ತಲೊಂದರಂತೆ ರಾಜಕೀಯ ವಿಚಾರಣೆ ಗಳು ನಡೆದುವು. ಇವುಗಳಲ್ಲಿ ಸಾಕ್ಷ್ಯಪಡೆಯುವುದರಲ್ಲಿ ನಿರ್ದಯತೆ ಅತಿಯಾಯಿತು. ಮರಣದಂಡನೆ ವಿಧಿಸುವುದು ಸಾಮಾನ್ಯವಾಗಿ ಹೋಯಿತು. ಹೀಗೆ ಒಬ್ಬ ರಾಗುತ್ತಲೊಬ್ಬರಂತೆ ಮೊದಲಿನ ಬಾಲ್ಶೆವಿಕ್ ಮುಖಂಡರು ಮಡಿದರು. ಕಡೆಗೆ ಇಬ್ಬರೋ ಮೂವರೋ ಉಳಿದುಕೊಂಡರು. ಗೋರ್ಕಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರನ್ನು ಆತನ ಸಾವಿಗೆ ಕಾರಣರಾದರು ಎಂಬ ಅಸಂಬದ್ಧ ಆರೋಪ ಹೊರಿಸಿ ಗುಂಡಿಕ್ಕಿಕೊಲ್ಲಲಾಯಿತು. ದಿನದಿನ ಕಳೆದಂತೆ ಸ್ಟಾಲಿನ್ ನಿರಂಕುಶಪ್ರಭುವಾದನು. ಒಮ್ಮೆ ಇಟ್ಟ ಹೆಜ್ಜೆ ಹಿಂಗೆದುಕೊಳ್ಳುವುದಾಗಲೀ ರಾಜಿಯಾಗಲೀ ಈತನ ವ್ಯವಹಾರ ದಲ್ಲಿ ಇರಲೇ ಇಲ್ಲ. ಆದರೂ ರಷ್ಯದ ಭೌತಜೀವನದಲ್ಲಿ ಒಳ್ಳೆಚಟುವಟಿಕೆ ಇದ್ದು ಪ್ರಗತಿ

ಯಾಗುತ್ತಿದೆ. ಕ್ರಮೇಣ ಜನರ ಕಷ್ಟಗಳು ಕಡಿಮೆಯಾಗುತ್ತಿವೆ ಮತ್ತು ಜನತೆಯಲ್ಲಿ ಅಂತಹ ಅತೃಪ್ತಿ ಅಶಾಂತಿಗಳೇನೂ ಇಲ್ಲ.

67. League of Nations

1914-18ರ ಮಹಾಯುದ್ಧ ಅದೆಷ್ಟು ಭಯಂಕರ ಮತ್ತು ಸಂಕಷ್ಟಕರವಾಗಿತ್ತೆಂದರೆ ಅನೇಕರು ಈ ಯುದ್ಧದಿಂದ ಮಾನವ ಚರಿತ್ರೆಯಲ್ಲಿ ಒಂದು ಯುಗದ ಅಂತ್ಯವಾಗಿ ಖಂಡಿತವಾಗಿಯೂ ಒಂದು ಹೊಸ ಉತ್ತಮ ಯುಗಕ್ಕೆ ಇದರಿಂದ ನಾಂದಿ ಆಗಿಯೇತೀರುವುದೆಂದೂ ನಂಬಿದರು. ಉಳಿದವರ ಅಭಿಪ್ರಾಯ ಏನೇ ಇರಲಿ ಈ ಯುದ್ಧದಲ್ಲಿ ಗೆದ್ದವರಿಗಂತೂ ಹೀಗೆ ಆಗದೆ ಇರುವುದು ಅಸಾಧ್ಯ ಎನಿಸಿತು. ಮನುಷ್ಯರ ಮನಸ್ಸು ನಡೆದುಕೊಳ್ಳುವುದೇ ಹೀಗೆ. ಎಂಥ ಕಷ್ಟ ಬಂದರೂ ಅದಕ್ಕೊಂದು ಪರಿಹಾರ ಇದ್ದೇ ಇರುತ್ತದೆ ಎಂದು ಎಲ್ಲರೂ ನಂಬುತ್ತಾರೆ. ತಮ್ಮಲ್ಲಿ ಏನೇನೋ ಸದ್ಗುಣಗಳಿವೆಯೆಂದು ಜನ ಭಾವಿಸಿಕೊಳ್ಳುತ್ತಾರೆ. ಅವುಗಳ ಬಗ್ಗೆ ವಿಧಿಗೆ ಏನೂ ಆಸಕ್ತಿ ಇರುವುದಿಲ್ಲ ಎಂದು ಒಪ್ಪಿಕೊಳ್ಳುವುದು ಅವರಿಗೆ ಅತಿ ಕಷ್ಟ, ಆಗ ಇದ್ದ ಇಂಥ ಭಾವನೆಗಳೆಲ್ಲ ಜನರ ಮನಸ್ಸಿನಿಂದ ಈಗ ನಿಧಾನವಾಗಿ ಅಳಿಸಿ ಹೋಗುತ್ತಾ ಇವೆ. ಘೋರವಾದ ಈ ಮಹಾ ಯುದ್ಧ ಯಾವುದಕ್ಕೂ ನಾಂದಿಯೂ ಆಗಲಿಲ್ಲ, ಮಂಗಳವನ್ನೂ ಹಾಡಲಿಲ್ಲ, ಏನನ್ನೂ ನಿರ್ಣಯಿಸಲೂ ಇಲ್ಲ ಎನ್ನುವುದನ್ನು ಇದೀಗ ತಾನೇ ಜನ ಗೊತ್ತುಮಾಡಿ ಕೊಳ್ಳುತ್ತಿದ್ದಾರೆ. ಈ ಯುದ್ಧ ಕೋಟಿಗಟ್ಟಲೆ ಜನರ ಪ್ರಾಣ ಹರಣ ಮಾಡಿತು, ಪ್ರಪಂಚವನ್ನು ಹಾಳುಗೆಡವಿ ದಾರಿದ್ರ್ಯವನ್ನು ತಂದಿತು. ಈ ವಿಶ್ವ ನಿಜಕ್ಕೂ ಅಪಾಯಕಾರಿ, ಅದಕ್ಕೆ ನಮ್ಮ ಮೇಲೆ ಯಾವ ರೀತಿಯ ಸಹಾನುಭೂತಿಯೂ ಇಲ್ಲ, ಇಂಥ ವಿಶ್ವದಲ್ಲಿ ಯಾವ ಮುಂದಾಲೋಚನೆ ಮಾಡುವ ಕಷ್ಟಕ್ಕೇ ಹೋಗದೆ ಮೂಢರಾಗಿ ಗೊಂದಲದಲ್ಲಿ ಜೀವಿಸುತ್ತಿದ್ದೇವೆ ಎನ್ನುವುದನ್ನು ಭೀಕರ ರೀತಿಯಲ್ಲಿ ಈ ಯುದ್ಧ ನಮಗೆ ತೋರಿಸಿ ಕೊಟ್ಟಿತು. ಅದರ ಅತ್ಯುತ್ತಮ ಅಂಶ ಇಷ್ಟೇ ಎನ್ನಬಹುದು ರಾಷ್ಟ್ರೀಯ ಮತ್ತು ಸಾಮ್ರಾಜ್ಯವಾದಗಳಿಂದ ಬರುವ ದುರಾಸೆ ಅದರ ಫಲವಾದ ಸ್ವಾರ್ಥಭಾವ ಮತ್ತು ಭಾವೋದ್ರೇಕಗಳೇನೂ ಈ ಯುದ್ಧದಿಂದ ಕಡಿಮೆಯಾಗಲಿಲ್ಲ. ಯುದ್ಧದಿಂದಾದ ದಣಿವಿನಿಂದ ಪ್ರಪಂಚ ಸಾಕಷ್ಟು ಚೇತರಿಸಿಕೊಳ್ಳುತ್ತಲೂ ಮತ್ತೊಮ್ಮೆ ಅಂಥವೇ ಅನಾಹುತಕ್ಕೆ ಈ ರಾಗ ದ್ವೇಷಗಳು ಎಡೆ ಮಾಡಿಕೊಡುವ ಸಂಭಾವ್ಯತೆ ಬಲವಾಗಿತ್ತು. ಯುದ್ಧ ಮತ್ತು ಕ್ರಾಂತಿಗಳಿಂದ ಮನುಷ್ಯರಿಗಾಗುವ ಪ್ರಯೋಜನ ಇಷ್ಟೆ. ಬಹಳ ಒರಟಾದ ರೀತಿಯಲ್ಲಿ ನೋವು ನರಳಿಕೆಗಳನ್ನು ತಂದು ಜನಪ್ರಗತಿಗೆ ಅಡ್ಡವಾಗಿರುವ ಮತ್ತು ತಮ್ಮ ಕಾಲ ಮೀರಿ ಉಳಿದುಕೊಂಡಿರುವ ಅಪ್ರಯೋಜಕ ವಿಷಯಗಳನ್ನೂ ಇವು ನಾಶ ಮಾಡುತ್ತವೆ. ಈ ಮಹಾ ಯುದ್ಧ ಅನೇಕ ರಾಜಪ್ರಭುತ್ವಗಳನ್ನು ಗುಡಿಸಿ ಹಾಕಿತು. ಆದರೂ ಇನ್ನೂ ಸಹ ಯೂರೋಪಿನಲ್ಲಿ ಅನೇಕ ಧ್ವಜಗಳು ಹಾರಾಡುತ್ತಲೇ ಇದ್ದುವು ಮತ್ತು

ಗಡಿ ರೇಖೆಗಳು ಜನರನ್ನು ಕೆರಳಿಸುತ್ತಲೇ ಇದ್ದುವು. ಭಾರೀ ಸೈನ್ಯಗಳು ಹೊಸ ಹೊಸ ಯುದ್ಧ ಸಲಕರಣೆಗಳನ್ನು ಸಂಗ್ರಹಿಸುತ್ತಲೇ ಇದ್ದುವು.

ವರ್ಸೈಲ್‌ನಲ್ಲಿ ನಡೆದ ಶಾಂತಿ ಸಮ್ಮೇಳನವು ಯುದ್ಧದ ಘರ್ಷಣೆಗಳು ಮತ್ತು ಅಪಜಯಗಳ ಜಾಡನ್ನೇ ಹಿಡಿದು ತಾರ್ಕಿಕವಾಗಿ ಒಂದು ನಿರ್ಧಾರಕ್ಕೆ ಬರುವುದಕ್ಕಿಂತ ಹೆಚ್ಚೇನನ್ನೂ ಮಾಡಲು ಸಮರ್ಥವಾಗಿರಲಿಲ್ಲ. ಜರ್ಮನ್ನರು, ಆಸ್ಟ್ರಿಯನ್ನರು, ತುರ್ಕರು ಮತ್ತು ಬಲ್ಗೇರಿಯನ್ನರಿಗೆ ಇದರ ಚರ್ಚೆಗಳಲ್ಲಿ ಭಾಗವಹಿಸಲು ಪರವಾನಿಗೆ ಇರಲಿಲ್ಲ. ಈ ಸಮ್ಮೇಳನದ ನಿರ್ಣಯಗಳನ್ನೆಲ್ಲ ಅವರು ಸ್ವೀಕರಿಸಲೇ ಬೇಕಾಗಿತ್ತು. ಅದು ವಿಜಯಿಗಳ ಸಮ್ಮೇಳನವಾಗಿತ್ತು. ಅದಕ್ಕಾಗಿ ಆರಿಸಿಕೊಂಡ ಸ್ಥಳ ಮನುಜ ಕುಲದ ಯೋಗಕ್ಷೇಮ ದೃಷ್ಟಿಯಿಂದ ಬಹಳ ದುರದೃಷ್ಟಕರವಾದುದಾಗಿತ್ತು. ವಿಜಯೋನ್ಮಾದದಲ್ಲಿ ಅತ್ಯಂತ ಅಸಂಸ್ಕೃತ ರೀತಿಯಲ್ಲಿ 1871ರಲ್ಲಿ ನೂತನ ಜರ್ಮನ್ ಸಾಮ್ರಾಜ್ಯ ಸ್ಥಾಪನೆಯನ್ನು ಜರ್ಮನ್ನರು ಘೋಷಿಸಿದ್ದು ಇದೇ ಸ್ಥಳದಲ್ಲಿ. ಆ ದೃಶ್ಯ ವನ್ನು ಅದೇ ಕನ್ನಡಿಗಳ ಕೈಸಾಲೆಯಲ್ಲಿಯೇ ನಾಟಕೀಯವಾಗಿ ವಿಪರ್ಯಾಸ ಮಾಡು ತ್ತಿದ್ದರೆಂಬ ತೀಕ್ಷ್ಣ ಸೂಚನೆ ಬರದಿರಲು ಸಾಧ್ಯವಿರಲಿಲ್ಲ.

ಈ ಮಹಾ ಯುದ್ಧದ ಮೊದಲ ಹಂತಗಳಲ್ಲಿ ಕಂಡು ಬರುತ್ತಿದ್ದ ಅಲ್ಪ ಸ್ವಲ್ಪ ಉದಾತ್ತಭಾವನೆಗಳೂ ಬಹು ಬೇಗನೆ ಮಾಯವಾಗಿ ಹೋಗಿದ್ದುವು. ಜಯಶೀಲರಾದ ರಾಷ್ಟ್ರಗಳ ಜನರು ತಾವೆಷ್ಟು ಕಷ್ಟ ಸಂಕಟಗಳನ್ನು ಅನುಭವಿಸ ಬೇಕಾಯಿತೆಂದು ತೀವ್ರವಾಗಿ ಚಿಂತಿಸುತ್ತಿದ್ದರು. ಸೋತು ಹೋದ ರಾಷ್ಟ್ರಗಳ ಜನರೂ ಈ ಯುದ್ಧಕ್ಕೆ ತಮ್ಮಷ್ಟೇ ಬೆಲೆ ತೆತ್ತರೆಂಬುದು ಇವರ ಗಮನಕ್ಕೆ ಬರಲಿಲ್ಲ. ಯೂರೋಪಿನ ರಾಷ್ಟ್ರ ಗಳೆಲ್ಲ ಪರಸ್ಪರ ಪ್ರತಿಸ್ಪರ್ಧಿಗಳಾಗಿದ್ದು ಇವುಗಳ ಮಧ್ಯೆ ಸಂಧಾನ ನಡೆಸುವಂಥ ಒಂದು ಸಾರ್ವರಾಷ್ಟ್ರಿತವಾದ ಒಂದು ವ್ಯವಸ್ಥೆ ಇಲ್ಲದುದರಿಂದ ಸಹಜವಾಗಿಯೇ ಈ ಯುದ್ಧ ಸಂಭವಿಸಲೇ ಬೇಕಾಯಿತು. ಸಣ್ಣ ವಿಸ್ತೀರ್ಣದ ಪ್ರದೇಶದಲ್ಲಿ ಅನೇಕ ಸರ್ವತಂತ್ರ ಸ್ವತಂತ್ರ ರಾಷ್ಟ್ರಗಳು ಇದ್ದು ಅವುಗಳ ಬಳಿ ಪ್ರಬಲವಾದ ಆಯುಧಗಳು ಶೇಖರ ವಾದಲ್ಲಿ ಯುದ್ಧ ಸಂಭವಿಸಲೇಬೇಕು ಎನ್ನುವುದು ತರ್ಕಶಾಸ್ತ್ರ ಸಮ್ಮತವಾದ ಸಂಗತಿ. ಕೋಳಿಗಳು ಮೊಟ್ಟೆಯಿಡುತ್ತವೆ ಎನ್ನುವುದು ಎಷ್ಟು ಸತ್ಯವೋ ಯುದ್ಧಕ್ಕೋಸರ ಸಜ್ಜಾದ ದೇಶಗಳು ರಣರಂಗಕ್ಕಿಳಿದೇ ಇಳಿಯುತ್ತವೆ ಎನ್ನುವುದೂ ಅಷ್ಟೇ ಸತ್ಯ. ಆದರೆ ಸಂಗ್ರಾಮದಿಂದ ಸೋತು ಸುಣ್ಣವಾಗಿದ್ದ ಈ ವಿಜಯಿ ರಾಷ್ಟ್ರಗಳು ಇದನ್ನು ಗಣನೆಗೇ ತರಲಿಲ್ಲ. ಪರಾಜಿತ ರಾಷ್ಟ್ರಗಳ ಜನರೇ ಎಲ್ಲ ಕಷ್ಟ ನಷ್ಟಗಳಿಗೂ ನೈತಿಕ ವಾಗಿ ಹಾಗೂ ಭೌತಿಕವಾಗಿ ಹೊಣೆಯೆಂದು ಅವರನ್ನು ನಡೆಸಿಕೊಂಡರು. ಒಂದು ವೇಳೆ ಯುದ್ಧದ ಫಲಿತಾಂಶ ತಿರುಗು ಮುರುಗಾಗಿದ್ದರೆ ಈಗ ಪರಾಜಿತರಾಗಿದ್ದವರೂ ಇವರ ವಿಷಯದಲ್ಲಿ ಅದೇ ರೀತಿ ನಡೆದುಕೊಳ್ಳುತ್ತಿದ್ದರು ಎನ್ನುವುದರಲ್ಲಿ ಸಂಶಯವಿಲ್ಲ. ಇಷ್ಟಕ್ಕೆಲ್ಲ ಜರ್ಮನರೇ ಕಾರಣರು ಎಂದು ಬ್ರಿಟಿಷರು ಮತ್ತು ಫ್ರೆಂಚರೇ ಎಲ್ಲಕ್ಕೂ ಜವಾಬ್ದಾರರು ಎಂದು ಜರ್ಮನರೂ ಹೇಳುತ್ತಿದ್ದರು. ಯೂರೋಪಿನ ವಿಚ್ಛಿದ್ರಕಾರ

ರಾಜಕೀಯ ವ್ಯವಸ್ಥೆಯೇ ಇದೆಲ್ಲದರ ಮೂಲ ವಿರಬಹುದೆಂದು ಯೋಚಿಸುತ್ತಿದ್ದವರು ಎಲ್ಲೋ ಕೆಲವು ಮಂದಿ ಬುದ್ಧಿ ಜೀವಿಗಳು ಮಾತ್ರ. ವರ್ಸೈನಕೌಲು ಪರಾಜಿತರಿಗೆ ಶಿಕ್ಷೆ ವಿಧಿಸುವುದಷ್ಟೇ ಅಲ್ಲದೆ ಅವರು ತಿರುಗಿ ಎಂದೂ ಇಂಥ ಕೆಲಸ ಮಾಡದಂತೆ ಬುದ್ಧಿ ಕಲಿಸುವಂಥದ್ದೂ ಆಗಿರ ಬೇಕೆಂಬುದು ವಿಜಯಿಗಳ ಉದ್ದೇಶವಾಗಿತ್ತು. ಸೋತು ಹೋಗಿದ್ದ ರಾಷ್ಟ್ರಗಳಿಗೆ ಭಾರೀದಂಡನೆಗಳನ್ನು ವಿಧಿಸಲಾಯಿತು. ಆಗಲೇ ದಿವಾಳಿ ಯೆದ್ದು ಹೋಗಿದ್ದ ಈ ರಾಷ್ಟ್ರಗಳಿಗೆ ಅಗಾಧ ಪ್ರಮಾಣದಲ್ಲಿ ಸಾಲದ ಹೊರೆ ಹೇರಿ ವಿಜೇತ ರಾಷ್ಟ್ರಗಳ ಗಾಯಾಳುಗಳಿಗೆ ಮತ್ತು ನೊಂದವರಿಗೆ ಪರಿಹಾರ ಒದಗಿಸುವ ಏರ್ಪಾಟಾಯಿತು. ಮುಂದೆ ಯುದ್ಧಗಳಾಗದಂತೆ ಮಾಡುವುದಕ್ಕಾಗಿ ಲೀಗ್ ಆಫ್ ನೇಷನ್ಸನ್ನು ಸ್ಥಾಪಿಸಲಾಯಿತು. ಅದರ ಮೂಲಕ ಅಂತರ ರಾಷ್ಟ್ರೀಯ ಸಂಬಂಧ ಗಳನ್ನು ಪುನರ್ವ್ಯವಸ್ಥೆ ಮಾಡಲು ಪ್ರಯತ್ನಗಳು ನಡೆದುವು. ಆದರೆ ಈ ಯಾವ ಕಾರ್ಯಗಳನ್ನೂ ಮನಃ ಪೂರ್ವಕವಾಗಿ ನಡೆಸಲಿಲ್ಲ.

ಈ ಸಂದರ್ಭದಲ್ಲಿ ಯೂರೋಪೊಂದೇ ಇದ್ದಿದ್ದರೆ ಶಾಶ್ವತ ಶಾಂತಿಗಾಗಿ ಅಂತರ ರಾಷ್ಟ್ರೀಯ ಸಂಬಂಧಗಳ ಪುನರ್ವ್ಯವಸ್ಥೆಗಾಗಿ ಯಾವ ಪ್ರಯತ್ನವೂ ನಡೆಯುತ್ತಿರಲಿಲ್ಲ ವೆಂದೆನಿಸುತ್ತದೆ. ಲೀಗ್ ಆಫ್ ನೇಷನ್‌ನ್ನು ಸ್ಥಾಪಿಸಬೇಕೆಂಬ ಸಲಹೆಯನ್ನು ಕ್ರಿಯಾಶೀಲ ರಾಜಕೀಯಕ್ಕೆ ತಂದಿದ್ದು ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ವಿಲ್ಸನ್. ಇದಕ್ಕೆ ಮುಖ್ಯ ಬೇಬಲ ಅಮೆರಿಕದಲ್ಲಿತ್ತು. ಪಶ್ಚಿಮಾರ್ಧಗೋಳವನ್ನು ಯೂರೋಪಿನ ಹಸ್ತಕ್ಷೇಪದಿಂದ ರಕ್ಷಿಸುವ ಮನ್ರೋ ಸಿದ್ಧಾಂತವನ್ನು ಬಿಟ್ಟರೆ ಬೇರೆ ಯಾವ ಅಂತರ ರಾಷ್ಟ್ರೀಯ ಸಂಬಂಧಗಳ ಬಗೆಗೂ ನಿರ್ದಿಷ್ಟ ಭಾವನೆಗಳನ್ನು ಅದುವರೆಗೆ ಈ ಹೊಸ ರಾಷ್ಟ್ರ ಹೊಂದಿರಲಿಲ್ಲ. ಇದ್ದಕ್ಕಿದ್ದಂತೆ ಅಂದಿನ ಬಹು ಮುಖ್ಯ ಸಮಸ್ಯೆಯನ್ನು ಕುರಿತು ಏನಾದರೊಂದು ವಿವೇಚನಾಯುತ ಸಲಹೆಯನ್ನು ಈ ರಾಷ್ಟ್ರ ಮುಂದಿಡಬೇಕಾಯಿತು. ಅಂಥ ಯಾವ ಸಲಹೆಯೂ ಈ ರಾಷ್ಟ್ರಕ್ಕೆ ಹೊಳೆಯಲಿಲ್ಲ. ಅಮೆರಿಕ ಜನತೆಯ ಸ್ವಾಭಾವಿಕ ಬಲವು ಶಾಶ್ವತ ಶಾಂತಿಯ ಕಡೆಗಿತ್ತು. ಇದರೊಂದಿಗೆ ಪೂರ್ವದ ಪ್ರಪಂಚದ ರಾಜಕೀಯ ಕುರಿತು ಮೊದಲಿನಿಂದ ಬಂದ ಅಪನಂಬಿಕೆ ಮತ್ತು ಆ ಪ್ರಪಂಚದ ತೊಡಕುಗಳಿಂದ ದೂರ ಇರುವ ಬಯಕೆಗಳೂ ಸೇರಿದ್ದುವು. ಪ್ರಪಂಚದ ಸಮಸ್ಯೆಗಳನ್ನು ಕುರಿತು ತಾವೇನು ಮಾಡಬಹುದು ಎಂದು ಅಮೆರಿಕನ್ನರು ಯೋಚಿಸ ತೊಡಗುತ್ತಿರುವಾಗಲೇ ಜರ್ಮನ್ನರ ಸಬ್‌ಮೆರೀನ್ ದಾಳಿ ಅವರು ಜರ್ಮನ್ ವಿರೋಧಿ ಒಕ್ಕೂಟದ ಕಡೆ ಸೇರಿ ಯುದ್ಧಕ್ಕೆ ಇಳಿಯುವಂತೆ ಮಾಡಿತು. ಇದು ಅತಿಸ್ವಲ್ಪ ಕಾಲಾವಕಾಶದಲ್ಲಿಯೇ ಅಮೆರಿಕದ ವೈಶಿಷ್ಟ್ಯಗಳನ್ನೊಳಗೊಂಡ ಒಂದು ವ್ಯವಸ್ಥೆಯನ್ನು ನಿಯೋಜಿಸುವ ಪ್ರಯತ್ನ. ಈ ಯೋಜನೆ ಅಷ್ಟೇನೂ ತೃಪ್ತಿಕರವಾದುದಾಗಿರದೆ ಅಪರಿಷ್ಕೃತವಾಗಿದ್ದು ಅಪಾಯಕರವೂ ಆಗಿತ್ತು. ಆದರೆ ಯೂರೋಪಿನಲ್ಲಿ ಇದು ಅಮೆರಿಕದ ಪರಿಪಕ್ವ ದೃಷ್ಟಿಯ ಫಲವೆಂದು ಸ್ವೀಕೃತವಾಯಿತು. 1918-19ರಲ್ಲಿ ಪ್ರಪಂಚದ ಎಲ್ಲ ಕಡೆಯಲ್ಲೂ ಬಹುಭಾಗ ಜನರು ಯುದ್ಧದಿಂದ ಬೇಸತ್ತು

ಹೋಗಿದ್ದು ತಿರುಗಿ ಯುದ್ಧ ಆಗದಂತೆ ಮಾಡಲು ನಿರ್ಬಂಧಗಳನ್ನು ತರುವ ಸಲುವಾಗಿ ಯಾವ ವಿಧವಾದ ತ್ಯಾಗ ನಷ್ಟಗಳಿಗೂ ಸಿದ್ಧವಾಗಿದ್ದರು. ಆದರೆ ಯೂರೋಪಿನ ಹಳೆಯ ರಾಜ್ಯಗಳ ಸರ್ಕಾರಗಳಲ್ಲಿ ಯಾವುದೊಂದೂ ಸಹ ಇದಕ್ಕಾಗಿ ತನ್ನ ಪರಮಾಧಿಕಾರದಲ್ಲಿ ಎಳ್ಳಷ್ಟನ್ನೂ ಬಿಟ್ಟುಕೊಡಲು ಸಿದ್ಧವಾಗಿರಲಿಲ್ಲ. ಅಧ್ಯಕ್ಷ ವಿಲ್ಸನನ ಸಾರ್ವಜನಿಕ ಹೇಳಿಕೆಗಳೆಲ್ಲ ಪ್ರಪಂಚದ ರಾಷ್ಟ್ರಗಳೆಲ್ಲ ಸೇರಿದಂಥ ಲೀಗ್ ಆಫ್ ನೇಷನ್ಸ್ ಸ್ಥಾಪನೆಗೆ ಸಮರ್ಥನೆ ಕೊಡುತ್ತಿದ್ದುವು. ರಾಷ್ಟ್ರಗಳನ್ನು ಆಳುತ್ತಿದ್ದವರಿಗಲ್ಲದಿದ್ದರೂ ಅವುಗಳ ಜನಸಾಮಾನ್ಯರಿಗೆ ಇವು ತುಂಬ ಮೆಚ್ಚಿಗೆ ಯಾದುವು. ಅಮೆರಿಕ ದೇಶದವರು ಚೆನ್ನಾಗಿ ಯೋಚಿಸಿ ಈ ನಿರ್ಧಾರಕ್ಕೆ ಬಂದಿರುವ ರೆಂದು ಜನರಿಗೆನಿಸಿತು. ಆದರೆ ವಿಲ್ಸನ್ ವ್ಯವಹರಿಸಬೇಕಾಗಿದ್ದುದು ಜನತೆಯೊಡನೆ ಅಲ್ಲ, ಸರ್ಕಾರಗಳೊಡನೆ. ಇದು ದುರದೃಷ್ಟದ ಸಂಗತಿ, ಅಪಾರ ಕಲ್ಪನಾಶಕ್ತಿಯಿದ್ದ ಕನಸುಗಾರನಾಗಿದ್ದ ವಿಲ್ಸನ್. ಆದರೆ ಅನುಷ್ಠಾನದ ಒರೆಗಲ್ಲಿನಲ್ಲಿ ಪರೀಕ್ಷೆ ಗೊಳಗಾದಾಗ ಒಂದು ಮಿತಿಯ ಮೇಲೇರಲು ಈತನಿಂದ ಆಗಲಿಲ್ಲ. ಈತ ಅತಿ ಸ್ವಾಭಿಮಾನಿ ಎಂದೂ ತಿಳಿಯಿತು. ಜನರಲ್ಲಿ ಈತನ ಸಲಹೆಗಳು ಎಬ್ಬಿಸಿದ್ದ ಉತ್ಸಾಹದ ಅಲೆಗಳು ವ್ಯರ್ಥವಾಗಿ ಹೋದುವು.

ಡಾ॥ ಡಿಲ್ಲಾನ್ ತಮ್ಮ "ಶಾಂತಿ ಸಮ್ಮೇಳನ" ವೆಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ. "ಸೃಜನಶೀಲ ಕುಂಬಾರನ ಕೈಗೆ ಸಿಕ್ಕಿದ ಮಣ್ಣಿನಂತಿತ್ತು ಯೂರೋಪ್ ಅಧ್ಯಕ್ಷ ವಿಲ್ಸನ್ ಅದರ ಕರಾವಳಿಯನ್ನು ಮೆಟ್ಟಿದಾಗ. ಯುದ್ಧಗಳಿಗೆ ಪ್ರತಿಬಂಧವಿರುವ ಹಾಗೂ ಜನರಿಗೆ ಆಹಾರ ಪದಾರ್ಥಗಳು ಸೇರದಂತೆ ತಡೆಯುವ ಮುತ್ತಿಗೆಗಳಿಲ್ಲದ ಆದರ್ಶ ರಾಜ್ಯಕ್ಕೆ ದಾರಿತೋರುವ ಮೋಸೆಸ್ ಈತ ಎಂಬಂತೆ ರಾಷ್ಟ್ರಗಳೆಲ್ಲ ಈತನನ್ನು ಹಿಂಬಾಲಿಸಲು ಉತ್ಸುಕವಾಗಿದ್ದುವು. ಅವುಗಳ ಜನರಿಗೆ ಆತ ಅಂಥ ದೊಡ್ಡ ಮುಂದಾಳು ಎನಿಸಿದ್ದನು. ಫ್ರಾನ್ಸಿನ ಜನ ಅವನ ಮುಂದೆ ಪ್ರೀತಿಯುತ ಗೌರವದಿಂದ ತಲೆಬಾಗಿದರು. ಪ್ಯಾರಿಸ್ಸಿನ ಶ್ರಮ ಜೀವಿಗಳ ಮುಖಂಡರು ಆತನನ್ನು ಕಂಡು ಹರ್ಷಾಶ್ರುಗಳನ್ನು ಸುರಿಸಿದೆವೆಂದು ನನಗೆ ಹೇಳಿದರು. ಆತನ ಉದಾತ್ತಧ್ಯೇಯಗಳನ್ನು ನನಸಾಗಿಸಲು ಬೆಂಕಿ ನೀರುಗಳನ್ನು ಹೊಕ್ಕು ಬರಲು ಅವನ ಸಂಗಡಿಗರು ಸಿದ್ಧರಾಗಿದ್ದರು. ಇಟಲಿಯ ಕೂಲಿ ವರ್ಗದವರಿಗೆ ಆತನ ಹೆಸರು ಭೂಲೋಕಕ್ಕೆ ಪುನರುಜೀವನ ನೀಡುವ ಸ್ವರ್ಗಲೋಕದ ಕಹಳೆಯಾಗಿತು. ಆತನ ತತ್ತ್ವ ತಮಗೆ ರಕ್ಷಣೆ ನೀಡುವ ಲಂಗರು ಎಂದು ಜರ್ಮನರು ಭಾವಿಸಿದರು, ಭಯವೆಂದರೇನೆಂದು ಅರಿಯದ ಹೆರ್ ಮುದ್ ಲೊನ್ ಹೇಳಿದ್ದು ಹೀಗೆ "ಅಧ್ಯಕ್ಷ ವಿಲ್ಸನ್ ಜರ್ಮನ್ನರನ್ನು ಕುರಿತು ಭಾಷಣ ಮಾಡಿ ಅವರಿಗೆ ತೀವ್ರವಾದ ಶಿಕ್ಷೆಯನ್ನು ಘೋಷಿಸಿದರೂ ತುಟಿಪಿಟಕ್ಕೆನ್ನದೆ ಅದನ್ನು ಒಪ್ಪಿಕೊಂಡು ತಕ್ಷಣ ಅದನ್ನು ಅನುಭವಿಸಲು ಸಿದ್ಧರಾಗುವರು". ಆಸ್ಟ್ರಿಯ ಜರ್ಮನಿಗಳಲ್ಲಿ ಆತನಿಗೆ ಸಂರಕ್ಷಕನೆಂಬ ಯಶಸ್ಸಿತ್ತು. ಕಷ್ಟದಲ್ಲಿದ್ದವರು ಆತನ ಹೆಸರು ಕೇಳಿದರೆ ಸಾಕು ಸಮಾಧಾನ ಹೊಂದುತ್ತಿದ್ದರು"

ಹೀಗೆ ವಿಲ್ಸನ್ನನ ಹೆಸರು ಜನರ ಮನಸ್ಸಿನಲ್ಲಿ ಅನೇಕ ಆಸೆ ಆಕಾಂಕ್ಷೆಗಳನ್ನು ತಂದಿತು. ಆದರೆ ಅವರಿಗೆಲ್ಲ ಬರಿಯ ನಿರಾಶೆಯೇ ಕಾದಿತ್ತು. ಲೀಗ್ ಆಫ್ ನೇಷನ್ಸ್ ಬಹು ದುರ್ಬಲವಾದ ಸಂಸ್ಥೆಯಾಗಿದ್ದು ನಿಷ್ಪ್ರಯೋಜಕವಾಯಿತು. ಇದೆಲ್ಲ ಒಂದು ವ್ಯಥೆತರಿಸುವ ಕಥೆ. ಈತ ಕಂಡ ಕನಸು ಅತಿಹಿರಿದು, ಅದನ್ನು ನನಸಾಗಿ ಮಾಡವು ದರಲ್ಲಿ ಈತ ಅಷ್ಟೇ ಅಸಮರ್ಥನಾಗಿದ್ದನು. ಸಾಮಾನ್ಯ ಮಾನವನ ಜೀವನದುರಂತ ಹೀಗೆ ಈತನಲ್ಲಿ ಉತ್ಪ್ರೇಕ್ಷಿತ ರೂಪದಲ್ಲಿ ಕಾಣಿಸಿಕೊಂಡಿತು. ತನ್ನ ಅಧ್ಯಕ್ಷನ ಈ ಕಾರ್ಯಕ್ಕೆ ಅಮೆರಿಕ ಸಮ್ಮತಿ ತೋರಿಸಲಿಲ್ಲ. ಯೂರೋಪು ಅಂಗೀಕರಿಸಿದ ಈ ಒಕ್ಕೂಟವನ್ನು ಅದು ಸೇರಲಿಲ್ಲ ಇಂಥ ಒಂದು ವ್ಯವಹಾರಕ್ಕೆ ಯಾವ ಸಿದ್ಧತೆಯೂ ಇಲ್ಲದೆ ತಮ್ಮನ್ನು ತಳ್ಳಲಾಗುತ್ತಿವೆಯೆಂದು ಅಮೇರಿಕೆಯ ಜನತೆಗೆ ನಿಧಾನವಾಗಿ ಭಾಸವಾಗತೊಡಗಿತು. ಪ್ರಾಚೀನ ಪ್ರಪಂಚದ ಯೂರೋಪಿಗೂ ತನ್ನ ಈ ಕಷ್ಟದ ಅವಸ್ಥೆಯಲ್ಲಿ ಅಮೆರಿಕದಿಂದ ತಾನು ಪಡೆಯತಕ್ಕಂಥದ್ದು ಏನೂ ಇಲ್ಲವೆಂದು ಎನ್ನಿಸಿತು. ಪೂರ್ಣ ಬೆಳೆಯುವುದಕ್ಕೆ ಮೊದಲೇ ಜನಿಸಿ ಹುಟ್ಟುವಾಗಲೇ ಅಂಗ ವಿಕಲ ಶಿಶುವಿನಂತಿದ್ದ ಲೀಗ್ ಆಫ್ ನೇಷನ್ಸ್ (League of Nations) ಅಂತರ ರಾಷ್ಟ್ರೀಯ ಸಂಬಂಧಗಳನ್ನು ಸರಿಯಾಗಿ ಪುನರ್ವ್ಯವಸ್ಥೆ ಮಾಡುವುದರಲ್ಲಿ ಒಂದು ಅಡಚಣೆಯೆಂದೆನಿಸಿತು. ಏಕೆಂದರೆ ಅದರ ಸಂವಿಧಾನ ಬಹುಕ್ಲಿಷ್ಟವೂ ಅವ್ಯವಹಾರಿಕವೂ ಆಗಿದ್ದು ಅದಕ್ಕೆ ತಕಷ್ಟು ಅಧಿಕಾರವೂ ಇರಲಿಲ್ಲ. ಈ ಸಂಸ್ಥೆ ಇಲ್ಲದಿದ್ದರೇ ಅಂತರ ರಾಷ್ಟ್ರೀಯ ಸಮಸ್ಯೆಗಳ ಸ್ಪಷ್ಟ ಚಿತ್ರ ಸಿಗುತ್ತಿತ್ತು. ಆದರೂ ಪ್ರಪಂಚದ ಎಲ್ಲ ಕಡೆಗಳಲ್ಲೂ ಈ ಯೋಜನೆಗೆ ಉತ್ಸಾಹ ಪೂರಿತ ಸ್ವಾಗತ ಸಿಕ್ಕಿದ್ದು, ಯುದ್ಧವನ್ನು ನಿಯಂತ್ರಿಸುವ ಒಂದು ವ್ಯವಸ್ಥೆಬೇಕೆಂದು ಸರ್ಕಾರಗಳಲ್ಲದಿದ್ದರೂ ಪ್ರಪಂಚದ ಎಲ್ಲ ದೇಶಗಳ ಸಾಮಾನ್ಯ ಜನರು ಆಸೆಯಿಂದ ಸಿದ್ಧರಾಗಿದ್ದು ಈ ಅಂಶಗಳನ್ನು ಚರಿತ್ರೆಯ ಪುಸ್ತಕಗಳಲ್ಲಿ ವಿಶೇಷ ಒತ್ತು ಕೊಟ್ಟು ಬರೆಯಲೇ ಬೇಕು. ದೂರದರ್ಶಿತ್ವವಿಲ್ಲದ ಆಡಳಿತ ವ್ಯವಸ್ಥೆಗಳು ಮಾನವ ವ್ಯವಹಾರಗಳನ್ನು ಕೆಡಿಸಿ ಜನರಲ್ಲಿ ಭೇದ ಭಾವನೆ ಗಳನ್ನು ತಂದಿಡುತ್ತಿದ್ದರೂ ಇವುಗಳ ಹಿನ್ನೆಲೆಯಲ್ಲಿಯೇ ಪ್ರಪಂಚದ ಐಕ್ಯ ಹಾಗೂ ಸುವ್ಯವಸ್ಥೆಗಳನ್ನು ಇಚ್ಛಿಸುವ ಶಕ್ತಿಗಳು ಇವೆ ಹಾಗೂ ಬೆಳೆಯುತ್ತಲೂ ಇವೆ.

ವಿಲ್ಸನ್ನ ಕಾಲು ಶುದ್ಧಾಂಗವಾಗಿ ರಾಜಕೀಯ ಉದ್ದೇಶಗಳ ಕಾಲು. ಲೀಗ್ ಆಫ್ ನೇಷನ್ಸ್ ಸಹ ರಾಜಕೀಯ ಸಂಸ್ಥೆಯೇ ಸರಿ. ಅದುವರೆಗೆ ರಾಷ್ಟ್ರ ಎಂಬುದರ ಬಗ್ಗೆ ಇದ್ದ ಕಲ್ಪನೆಗಳೂ ಮತ್ತು ಅದುವರೆಗೆ ಇದ್ದ ಸರ್ಕಾರಗಳೂ ಅನಿವಾರ್ಯ ವಾದುವು ಎಂದುಕೊಂಡು ಆ ಭಾವನೆಗೆ ಅನುಸಾರವಾಗಿಯೇ ಮಾನವ ವ್ಯವಹಾರ ಗಳನ್ನು ತೇಪೆಹಾಕಿ ತಿದ್ದುವ ಪ್ರಯತ್ನಗಳಾಗಿದ್ದುವು ಇವು. ಇವುಗಳಲ್ಲಿದ್ದ ದೋಷ ಇದೇ ನಿಧಾನವಾಗಿ ಇದು ಜನರಿಗೆ ತಿಳಿಯುತ್ತಾ ಬಂದಿದೆ. ಸರ್ಕಾರಗಳು ಹಾಗೂ ರಾಷ್ಟ್ರಗಳು ಸ್ಥಿರ ವ್ಯವಸ್ಥೆಗಳೇನಲ್ಲ. ಮನಃಕಾಲದವರ ಅವಶ್ಯಕತೆಗಳು ಬದಲಾಗು ತ್ತಿವೆ ಮತ್ತು ಹೆಚ್ಚಾಗುತ್ತಿವೆ. ಇದಕ್ಕೆ ಅನುಗುಣವಾಗಿ ಈ ಸಂಸ್ಥೆಗಳನ್ನೂ

ಬದಲಾಯಿಸಬೇಕು. ರಾಜಕೀಯ ಶಕ್ತಿಗಳಿಗಿಂತ ಮೂಲಭೂತವಾದುವು ಆರ್ಥಿಕ ಶಕ್ತಿಗಳು. ಆರ್ಥಿಕ ಶಕ್ತಿಗಳು ಜನರ ನಡವಳಿಕೆ ಮತ್ತು ಒಡೆತನದ ಭಾವನೆಗಳನ್ನು ಅವಲಂಬಿಸಿವೆ. ಇವುಗಳಿಗೆ ಶಿಕ್ಷಣವೇ ಆಧಾರ. ಜನರ ಮನಸ್ಸುಗಳಲ್ಲಿ ವಿವಿಧಭಾವನಾಸರಣಿಗಳು ಬೇರೂರಿರುತ್ತವೆ. ಮಾನವ ವ್ಯವಹಾರಗಳೆಂದರೆ ಈ ಭಾವನಾಸರಣಿಗಳು ಕಾರ್ಯರೂಪಕ್ಕೆ ಬರುವುದು. ತಪ್ಪು ಭಾವನೆಗಳನ್ನು ಮತ್ತು ಭಾವನೆಗಳನ್ನು ತಪ್ಪಾಗಿ ಅರ್ಥೈಸುವುದನ್ನು ಸರಿಪಡಿಸುವುದೇ ಆರ್ಥಿಕ ಮತ್ತು ಸಾಮಾಜಿಕ ಸಂಕಷ್ಟಗಳಿಗೆ ಚಿಕಿತ್ಸೆ. 1918 ರಿಂದ 1933 ರ ವರೆಗೆ ಅದೆಷ್ಟೋ ಸಮ್ಮೇಳನಗಳು ನಡೆದುವು. ಪ್ರಪಂಚದ ವ್ಯವಹಾರಗಳನ್ನು ಪುನರ್ವ್ಯವಸ್ಥೆ ಮಾಡಲು ನಡೆದ ಅಷ್ಟೇನೂ ನಾಜೂಕಲ್ಲದ ಪ್ರಯತ್ನಗಳಿವು. ಚರಿತ್ರೆಯ ವಿದ್ಯಾರ್ಥಿಗೆ ಇವುಗಳಲ್ಲಿ ಒಂದು ಮುಖ್ಯ ಅಂಶ ಕಂಡುಬರುತ್ತದೆ. ಇಂಥ ಚರ್ಚೆಗಳಲ್ಲಿ ಮೊದಮೊದಲು ಶುದ್ಧಾಂಗವಾಗಿ ರಾಷ್ಟ್ರೀಯ ಮತ್ತು ರಾಜಕೀಯ ದೃಷ್ಟಿಗಳು ಮಾತ್ರ ಇರುತ್ತಿದ್ದವು. ಮನುಕುಲದವರೆಲ್ಲ ಆರ್ಥಿಕವಾಗಿ ಭೌತಿಕವಾಗಿ ನೆಮ್ಮದಿಯಾಗಿರಬೇಕಾದರೆ ಇಂಥ ದೃಷ್ಟಿ ಬದಲಾಗಬೇಕು, ಮಾನವರೆಲ್ಲರ ಒಳಿತಿಗಾಗಿ ಎಲ್ಲರೂ ಒಂದಾಗಿ ಚಿಂತಿಸಬೇಕು. ಇದು ಜನರಿಗೆ ನಿಧಾನವಾಗಿ ಹೊಳೆಯತೊಡಗಿತು. ಆದರೆ ಯಾವುದೇ ವಿಷಯವನ್ನೂ ಸಾಮಾನ್ಯ ಜನರು ರಾಜಕೀಯ ವ್ಯಕ್ತಿಗಳು ಮತ್ತು ವೃತ್ತಪತ್ರಿಕೆಗಳೂ ಸಹ ಮನದಟ್ಟು ಮಾಡಿಕೊಳ್ಳಲು ಬಹು ಸಮಯ ಬೇಕು. ಪ್ರಪಂಚದ ಆರ್ಥಿಕ ಕ್ಷೇತ್ರದಲ್ಲಿ ಅಗಾಧವಾದ ಗೊಂದಲ ಉಂಟಾಗಿದೆ. ಈಗ ಒಂದು ಶತಮಾನದಿಂದ ಎಂದೂ ಇಲ್ಲದಿದ್ದಷ್ಟು ನಿರುದ್ಯೋಗ ಮತ್ತು ಬಡತನ ಎಲ್ಲೆಲ್ಲೂ ಇವೆ. ಮನುಕುಲದ ಚೈತನ್ಯವೇ ಕುಂದುತರುವಂತಿದೆ. ಸಾರ್ವಜನಿಕರಲ್ಲಿ ಕ್ಷೇಮ ಭಾವನೆಯೇ ಇಲ್ಲ. ಅಪರಾಧಗಳು ಹೆಚ್ಚಾಗಿವೆ. ರಾಜಕೀಯ ಜೀವನದಲ್ಲಿ ಸ್ಥಿರತೆಯೇ ಇಲ್ಲ. ಹಿಂದೆಂದೂ ಹೀಗಿರುತ್ತಿರಲಿಲ್ಲ. ಈ ಸಂಕಷ್ಟಗಳನ್ನು ಕುರಿತು ಇಲ್ಲಿ ಹೆಚ್ಚು ವಿಸ್ತಾರವಾಗಿ ಹೇಳಲಾಗುವುದಿಲ್ಲ. ಪ್ರಪಂಚದ ವ್ಯವಸ್ಥೆ ಪೂರ್ಣ ಕುಸಿಯುತ್ತಿದೆ ಎನ್ನುವಂತಿಲ್ಲ. ಆದರೂ ಮನುಕುಲದ ಚರಿತ್ರೆಯಲ್ಲಿ 19ನೆ ಶತಮಾನ ಅದೆಂಥ ಉತ್ಸಾಹಪೂರ್ಣ ಅಧ್ಯಾಯವಾಗಿತ್ತು! ಅಂದಿನ ನೈತಿಕ ಚೈತನ್ಯ, ಮುಂದಾಳುತನ, ಶ್ರದ್ಧೆ ಹೇಗಿದ್ದುವು! ಆ ಶತಮಾನ ಅಷ್ಟು ಮುನ್ನಡೆಯಲು ಇವೆಲ್ಲ ಕಾರಣಗಳಾಗಿದ್ದುವು. ಆ ಪರಿಸ್ಥಿತಿ ತಿರುಗಿ ಬರುವಷ್ಟು ನಮ್ಮ ಕುಲ ಚೈತನ್ಯವನ್ನು ಉಳಿಸಿಕೊಂಡಿದೆಯೋ ಎಂದು ಅಂದಾಜ. ಮಾಡಲು ಈಗಲೇ ಸಾಧ್ಯವಿಲ್ಲ.

ಕೆಟ್ಟ ಕೆಲಸದಲ್ಲಿ ಆದ ಗೆಲುವಿಗಿಂತ ಒಳ್ಳೆಯ ಕೆಲಸದಲ್ಲಿ ಆಗುವ ಸೋಲು, ಮೇಲು

—ಹರ್ಡೇಕರ್ ಮಂಜಪ್ಪ

ತ್ಯಾಗವೊಂದೇ ಅತ್ಯಂತ ಪ್ರಶಂಸನೀಯವಾದ ಗುಣ

—ಸೂಕ್ತಿಸುಧಾ

ಮಾನವರಿಗೆ ಸಮ್ಯಕ್‌ದೃಷ್ಟಿಬೇಕು, ಸಮಾಜಕ್ಕೂ ನಮಗೂ ಯಾವುದು ಒಳ್ಳೆಯದೋ ಅದರಲ್ಲಿ ನಂಬಿಕೆ ಇಡಬೇಕು

—ಭಗವಾನ್ ಬುದ್ಧ

ಬಿಟ್ಟ ಬಾಣ, ಆಡಿದ ಮಾತು, ಗತಜೀವನ, ಕಳೆದುಕೊಂಡ ಅವಕಾಶ—ಇವು ನಾಲ್ಕೂ ಎಂದಿಗೂ ತಿರುಗಿ ಬರಲಾರವು

—ಪಂಚತಂತ್ರ

ಪಿ. ಎನ್. ಹರೀಶ್

ಅಡಿಯರು

ಅಡಿಯರು ಕೇರಳದ ಉತ್ತರ ವೈನಾಡಿನ ವಿವಿಧೆಡೆಗಳಲ್ಲಿ ನೆಲೆಸಿದ್ದಾರೆ. ಹೆಚ್ಚಾಗಿ ಇವರ ವಸತಿ ಪ್ರದೇಶಗಳು ತಿರುನೆಲ್ಲಿ ಎಂಬ ಸ್ಥಳದಲ್ಲಿ ಕಾಣಲು ಸಿಗುತ್ತವೆ. ತಿರುನೆಲ್ಲಿ ಕೊಡಗಿನ ಸರಹದ್ದಿನ ಸಮೀಪದಲ್ಲಿದೆ. ಈ ಪ್ರದೇಶದಲ್ಲಿ ಬತ್ತ ಬೆಳೆಯುವ ದೊಡ್ಡದೊಡ್ಡ ಗದ್ದೆ ಬಯಲುಗಳು ಕಂಡುಬರುತ್ತವೆ. ವೈನಾಡಿನ ಜಮೀನ್ದಾರರು ಬೇಸಾಯದ ಕೆಲಸಕ್ಕಾಗಿ ಸ್ಥಳೀಯ ಆದಿವಾಸಿಗಳನ್ನೆ ಅವಲಂಬಿಸಿಕೊಂಡಿದ್ದಾರೆ ಅವರಲ್ಲಿ ಅಡಿಯರು ಪ್ರಮುಖರು. ಸಾಧು ಸ್ವಭಾವದವರಾದ ಅಡಿಯರು ಸಮಾಜದ ಮೇಲ್ವರ್ಗದವರ ಸೇವೆ ಮಾಡಿಕೊಂಡು, ದಾಸ್ಯಕ್ಕೆ ಗುರಿಯಾಗಿರುವುದರಿಂದ ಇವರನ್ನು ಸ್ಥಳೀಯರು 'ಅಡಿಯ' ಅಥವಾ 'ಅಡಿಯನ್' ಎಂದು ಕರೆಯುವುದಾಗಿ ತಿಳಿದು ಬರುತ್ತದೆ. ಅಡಿಯ ಎಂದರೆ ಕೆಳಸ್ತರದವನು, ದಾಸ ಅಥವಾ ಸೇವಕ ಎಂದು ಅರ್ಥ ಹೇಳಬಹುದು.

ವಾಸ್ತವವಾಗಿ ಅಡಿಯರು ಸ್ವತಃ ತಮ್ಮನ್ನು 'ಇರಾವುಳೇರ್' ಅಥವಾ 'ರಾವುಳೇರ್' ಎಂಬ ಹೆಸರುಗಳಿಂದ ಕರೆದುಕೊಳ್ಳುವರು. ಹೀಗೆ ತಮ್ಮನ್ನು ಹೆಸರಿಸಿಕೊಳ್ಳುವುದರ ಬಗ್ಗೆ ಇವರು ಎರಡು ಕಾರಣಗಳನ್ನು ಹೇಳುವರು–ಇರಾವುಳೇರ್ (ಇರಾ–ಜಗಲಿ, ಉಳೇರ್–ಕೂರುವುದು) ಎಂದರೆ ಮೇಲ್ವರ್ಗದವರ ಮನೆಯ ಜಗಲಿಯವರೆಗೆ ಪ್ರವೇಶಿಸಲು ಅರ್ಹರಾದವರು. ಮತ್ತೊಂದು, ರಾವುಳೇರ್(ರಾವುಳರು) ಎಂದರೆ ತಾವು ರಾವುಳ ಅಥವಾ ರಾವಣನ ಸಂತತಿಯವರು ಎಂದು ಹೇಳಿಕೊಳ್ಳುವರು. ಅಸ್ಪೃಶ್ಯರಲ್ಲದ ಇವರಿಗೆ ಗೋಮಾಂಸ ವರ್ಜ್ಯ.

ವೈನಾಡಿನ ಅಡಿಯರ ಸಮುದಾಯಕ್ಕೆ ಸೇರಿದ ಜನರು ಕೊಡಗಿನ ದಕ್ಷಿಣ ಭಾಗ ದಲ್ಲಿ ಅಂದರೆ ವೈನಾಡು ಮತ್ತು ಕೊಡಗು ಪ್ರದೇಶಗಳ ಗಡಿಯ ಸರಹದ್ದಿನಲ್ಲಿ ಬರುವ ಮಾನಂದವಾಡಿ, ಬಾವಲಿ, ತೋಳ್‌ಪಟ್ಟಿ, ಕುಟ್ಟ, ನಾಗರಹೊಳೆ, ಬಾಳಲೆ, ತಿತಿಮತಿ ಮುಂತಾದ ಪ್ರದೇಶಗಳಲ್ಲಿ ಇವರು ವ್ಯಾಪಕವಾಗಿ ಕಂಡುಬರುವರು. ಕೊಡಗಿನಲ್ಲಿ ಈ ಸಮುದಾಯದ ಜನರನ್ನು 'ಅಡಿಯರು' ಎಂದು ಕರೆಯುವುದಿಲ್ಲ. ಸ್ಥಳೀಯರು ಇವರನ್ನು 'ಪಂಜರಿಎರವರು' ಎಂದು ಕರೆಯುತ್ತಾರೆ. ವೈನಾಡಿನ ಅಡಿಯರಂತೆಯೆ

ಈ ಪಂಜಿರಿಎರವರು ಸ್ವತಃ ತಮ್ಮನ್ನು 'ಇರಾವುಳೀರ್' ಅಥವಾ ರಾವುಳೀರ್ ಎಂದು ಹೇಳಿಕೊಳ್ಳುವರು ಇವರ ಉಗಮದ ಬಗ್ಗೆ ತೀವ್ರವಾಗಿ ಪ್ರಶ್ನಿಸಲು ತೊಡಗಿದರೆ ತಾವು ವೈನಾಡಿನ ಅಡಿಯರ ಕುಲಸಂಬಂಧಿಗಳು ಎಂಬ ಅಂಶವನ್ನು ಹೇಳುವರು. ಆದಾಗ್ಯು ಇವರು ಕೊಡಗಿನಲ್ಲಿ ಪಂಜಿರಿಎರವರು ಎಂದೇ ಹೆಸರಾಗಿದ್ದಾರೆ. ಕೊಡಗಿನಲ್ಲಿರುವ ಅಡಿಯರಿಗೆ ಇಲ್ಲಿನ ಜನ ತಮ್ಮನ್ನು ಪಂಜಿರಿಎರವರು ಎಂದು ಯಾವ ಕಾರಣದಿಂದ ಕರೆದಿರುವರು ಎಂಬ ಅಂಶ ತಿಳಿಯದು. 'ಪಂಜಿರಿ' ಎಂಬ ಪದಕ್ಕೆ ಅರ್ಥವೇನೆಂದು ಹೇಳುವುದು ಕೊಂಚ ಕಷ್ಟದ ಕೆಲಸ. ಎರವ ಎಂಬ ಪದಕ್ಕೆ ಅರ್ಥಕಲ್ಪಿಸಬಹುದು. ಎರವ ಎಂಬ ಪದದ ಮೂಲಧಾತು 'ಇಱವ' ಎಂಬುದಾಗಿದೆ. ಕೊಡಗು ಭಾಷೆಯಲ್ಲಿ 'ಇರ' ಎಂದರೆ 'ಯಾಚನೆಮಾಡುವುದು' ಎಂಬ ಅರ್ಥವಿದೆ. 'ವ' ಪ್ರತ್ಯಯದೊಂದಿಗೆ 'ಇರವ' ಎಂಬ ನಾಮಪದ ಯಾಚನೆ ಮಾಡುವವನು ಎಂದು ಅರ್ಥ ಸೂಚಿಸುತ್ತದೆ. ಇರವ ಎಂಬ ಪದ ಜನಬಳಕೆಯಲ್ಲಿ 'ಎರವ' ಎಂದಾಗಿದೆ. ಕ್ರಿಯಾತ್ಮಕವಾಗಿ ಅಡಿಯ ಎಂಬ ಪದ ಎರವ ಎಂಬ ಪದಕ್ಕೆ ಸಮಾನವಾಗಿದೆ.

ಅಡಿಯರ (ಎರವರ) ಮತ್ತೊಂದು ಗುಂಪು ಕೊಡಗಿನ ಎಲ್ಲೆಯನ್ನು ದಾಟಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ, ಉಡುಪಿ, ಪುತ್ತೂರು, ಬೆಳ್ತಂಗಡಿ ತಾಲೋಕುಗಳಲ್ಲಿ ಕಂಡುಬರುವುದಾಗಿ ತಿಳಿದುಬರುತ್ತದೆ (ಲೂಯಿಜ್ : ಟ್ರೈಬ್ಸ್ ಆಫ್ ಮೈಸೂರ್ 1964). ಒಟ್ಟಿನಲ್ಲಿ ಇವರೆಲ್ಲರ ಮೂಲ ನೆಲೆ ವೈನಾಡು.

ವೈನಾಡಿನ ಅಡಿಯರು, ಸುಮಾರು ಮೂರು ಅಥವಾ ನಾಲ್ಕು ಶತಮಾನಗಳ ಹಿಂದೆ ಆ ನಾಡಿನ ಯಾವುದೋ ಪ್ರಬಲವರ್ಗದ ಜನರ ಕಿರುಕುಳಕ್ಕೆ ಒಳಗಾಗಿ ಅಲ್ಲಿಂದ ತಮ್ಮ ಜನರನ್ನು ತೊರೆದು ಕೊಡಗಿನ ಕಡೆಗೆ ವಲಸೆ ಬಂದುದರ ಬಗ್ಗೆ ಇವರು ತಮ್ಮ ಜೀವನ ವೃತ್ತಾಂತಕ್ಕೆ ಸಂಬಂಧಿಸಿದ ಜನಪದ ಸಾಹಿತ್ಯದಲ್ಲಿ ಹೇಳಿಕೊಳ್ಳುವರು. ಈಗ ಕೊಡಗಿನಲ್ಲಿ ಇರುವ ಎರವರು ವೈನಾಡಿನಲ್ಲಿರುವ ಮಾನಂದವಾಡಿ ನದಿಯನ್ನು ದಾಟಿ ವೈನಾಡಿನ ಕಡೆಗೆ ಹೋಗಲು ಬಯಸುವುದಿಲ್ಲ. ಇವರ ಎಲ್ಲ ದೈವಗಳೂ, ಸಾಂಸ್ಕೃತಿಕ ನೆಲೆಗಳೂ ವೈನಾಡಿನಲ್ಲಿವೆ. ಆದರೂ ಕೊಡಗಿನ ಎರವರು ಅವುಗಳನ್ನು ಸಂದರ್ಶಿಸದಿರುವುದರ ಹಿನ್ನೆಲೆಯಲ್ಲಿ ಯಾವುದೋ ನಿಗೂಢ ಇತಿಹಾಸ ಅಡಗಿರಬೇಕು. ತಿರುನಲ್ಲಿಯಲ್ಲಿರುವ ಪೆರುಮಾಳ (ವಿಷ್ಣು) ದೇವಾಲಯ ತಮ್ಮದೆಂದು ಅಡಿಯರು ಮತ್ತು ಎರವರು ಹೇಳಿಕೊಳ್ಳುವರು. ಬೆಟ್ಟದ ಮೇಲಿರುವ ಈ ದೇವಾಲಯ ಕಲ್ಲುಕಂಭಗಳಿಂದ ನಿರ್ಮಾಣಕೊಂಡಿದೆ. ಇನ್ನೂ ದೇವಾಲಯದ ಕೆಲವು ಭಾಗಗಳು ಅಪೂರ್ಣ ಸ್ಥಿತಿಯಲ್ಲಿವೆ. ದೇವಾಲಯದ ಪಶ್ಚಿಮ ಭಾಗದಲ್ಲಿ 'ಪಾಪನಾಶಿನಿ' ಎಂಬ ನದಿ ಹರಿಯುತ್ತದೆ. ಇದರ ಸಮೀಪದ ಕಲ್ಲುಬಂಡೆಯೊಂದರ ಮೇಲೆ ಪಾದ-ಪದ್ಮ-ಕಮಲ, ಶಂಕ-ಗಧಾ-ಚಕ್ರಗಳನ್ನು ಬಿಡಿಸಲಾಗಿದೆ. 'ಬಿಷು' ಅಥವಾ 'ವಿಷು' ಎಂಬ ಕಾಲದಲ್ಲಿ ಈ ದೇವರ ಉತ್ಸವ ನಡೆಯುತ್ತದೆ. ಇದು ಇಲ್ಲಿನ ಜನರಿಗೆ ಹೊಸ ವರ್ಷದ ಆರಂಭ.

ಅಡಿಯರ ಮೂಲಕ್ಕೆ ಸಂಬಂಧಿಸಿದ ಎರಡು ಪೌರಾಣಿಕ ಐತಿಹ್ಯಗಳು ಹೀಗಿವೆ: ಬ್ರಾಹ್ಮಣ ಕನ್ಯೆಯೊಡನೆ ಪ್ರತಿಲೋಮ ವಿವಾಹವಾಗಲು ಪ್ರಯತ್ನಿಸಿದ ಒಬ್ಬ ಶಿವ ಧ್ವಜ ಬ್ರಾಹ್ಮಣನ ಪೀಳಿಗೆಯವರು. ಮತ್ತೊಂದರ ಪ್ರಕಾರ ಶಿವನಿಗೆ ನೈವೇದ್ಯಕ್ಕೆ ಇಟ್ಟ ಎಡೆಯನ್ನು ಬ್ರಾಹ್ಮಣನೊಬ್ಬ ಸೇವಿಸಿ ಅನಾಚಾರವೆಸಗಿದ. ಈ ರೀತಿ ಅನಾಚಾರ ವೆಸಗಿದ ಬ್ರಾಹ್ಮಣನ ಸಂತಾನವೇ ಅಡಿಯರು. ತಮ್ಮ ಪೂರ್ವಜರು ಭದ್ರಕಾಳಿ ದೇವಾಲಯದಲ್ಲಿ ಪೂಜಾರಿಗಳಾಗಿದ್ದರೆಂದು ಇವರು ಹೇಳುವರು.

ಹಿಂದಿನ ಕಾಲದಲ್ಲಿ ಭದ್ರಕಾಳಿಯ ವಾರ್ಷಿಕ ಉತ್ಸವದಲ್ಲಿ ವೈನಾಡಿನ ಎಲ್ಲ ಗಿರಿ ಜನರು ಪಾಲ್ಗೊಳ್ಳುತ್ತಿದ್ದರು. ಸ್ಥಳೀಯ ಸಂಪ್ರದಾಯದಂತೆ ಜಮೀನ್ದಾರರು ತಮ್ಮ ಬೇಸಾಯದ ಕೆಲಸಕ್ಕೆಂದು ಒಂದು ವರ್ಷದ ಅವಧಿಯವರೆಗೆ (ಮುಂದಿನ ಉತ್ಸವದ ವರೆಗೆ) ಗಿರಿಜನರನ್ನು ಹಣ ಅಥವಾ ವಸ್ತುಗಳಿಗೆ ಒಪ್ಪಂದ ಮಾಡಿಕೊಂಡು ತಮ್ಮ ಮನೆಗೆ ಕರೆದೊಯ್ಯುತ್ತಿದ್ದರು. ತಮ್ಮ ಬೇಸಾಯದ ಕೆಲಸ ಮುಗಿದ ತರುವಾಯ ಅಥವಾ ತಮಗೆ ಬೇಡವೆಂದು ಕಂಡುಬಂದರೆ ಅಥವಾ ತಮ್ಮ ಭೂಮಿಯನ್ನು ಮತ್ತೊಬ್ಬರಿಗೆ ಮಾರಾಟ ಮಾಡಿದರೆ ಆದರೊಡನೆಯೇ ತಮ್ಮ ಜೀತದಾಳುಗಳನ್ನೂ ಮಾರುತ್ತಿದ್ದರು. ಈ ಕ್ರೂರ ಗುಲಾಮಗಿರಿ ಪದ್ಧತಿಯನ್ನು ಬ್ರಿಟಿಷರು ತಪ್ಪಿಸಿದರೆಂದು ತಿಳಿದುಬರುತ್ತದೆ. ಅಡಿಯರು ಮುಖ್ಯವಾಗಿ ಕೃಷಿ ಕಾರ್ಮಿಕರು. ಇವರು ಯಾವಾ ಗಲೂ ಭೂಮಿಯೊಡನೆಯೇ ಸಂಬಂಧವಿಟ್ಟುಕೊಂಡಿರುತ್ತಿದ್ದರು. ತಮ್ಮ ಜೀವನೋ ಪಾಯಕ್ಕೆ ಕೃಷಿಯನ್ನೇ ಅವಲಂಬಿಸಿದ್ದಾರೆ. ಇವರಿರುವ ವಸತಿಪ್ರದೇಶಗಳು ಗದ್ದೆಯ ಬಯಲಿನ ಕಣಿವೆಗಳಲ್ಲಿವೆ. ಇವರಲ್ಲಿ ಕೆಲವರು ಸ್ವಂತ ಭೂಮಿಯನ್ನೂ ಹೊಂದಿ ದವರಿದ್ದಾರೆ. ಕೃಷಿ ನಡೆಯದ ಅವಧಿಯಲ್ಲಿ ತೋಟಗಳಲ್ಲಿ ಕೂಲಿಮಾಡುವರು. ಕೂಲಿದೊರೆಯದ ಕಾಲದಲ್ಲಿ ಅರಣ್ಯದ ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಅವನ್ನು ಮಾರಿ ಹಣ ಸಂಪಾದಿಸುವರು. ಹೊಳೆ, ಕಾಲುವೆಗಳಲ್ಲಿ ಮೀನು ಹಿಡಿದು ಬದುಕು ವುದೂ ಉಂಟು.

ಅಡಿಯರ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣಿಗೆ ಪ್ರಾಮುಖ್ಯತೆ ಕೊಡುವರು. ಕುಟುಂಬದ ಸದಸ್ಯರನ್ನು ಹೆಣ್ಣು ಸಂತಾನದ ಮೂಲಕವೇ ಗುರುತಿಸುವುದರಿಂದ ಇವರ ಸಮಾಜ ಮಾತೃವಂಶ ಮತ್ತು ಮಾತೃಪ್ರಧಾನ ಸಮಾಜವಾಗಿದೆ. ಮದುವೆಯಾದ ಮೇಲೆ ಹೆಣ್ಣು ಜೀವನವಿಡಿ ಗಂಡನ ಮನೆಯಲ್ಲಿ ಜೀವಿಸುವುದಿಲ್ಲ. ಗಂಡನೇ ಹೆಂಡತಿಯ ಮನೆಗೆ ಆಗಾಗ್ಗೆ ಬಂದುಹೋಗುವನು. ಇದರಿಂದ ಇವರಲ್ಲಿ ಮಾತೃಸ್ಥಳೀಯ ನಿವಾಸ ಗಳು ರೂಢಿಯಲ್ಲಿವೆ. ಈಚಿನ ದಿನಗಳಲ್ಲಿ ಪಿತೃಸ್ಥಳೀಯ ನಿವಾಸಕ್ರಮಗಳನ್ನು ಅಳವಡಿಸಿಕೊಳ್ಳುತ್ತಿರುವರು. ಆದರೂ ವಂಶಾನುಕ್ರಮ ಮತ್ತು ಉತ್ತರಾಧಿಕಾರವನ್ನು ಹೆಣ್ಣಿನ ಸಂತಾನದ ಮೂಲಕವೇ ಮಾನ್ಯಮಾಡುವರು. ಸಂಪ್ರದಾಯದ ಪ್ರಕಾರ ಸೋದರಿಯ ಪುತ್ರ ಪೂರ್ವಿಕರ ಆಸ್ತಿಗೆ ಹಕ್ಕುದಾರನಾಗುತ್ತಾನೆ. ಆದರೆ ತಾಯಿಯ ಸ್ವಯಾರ್ಜಿತ ಆಸ್ತಿಗೆ ಆಕೆಯ ಮಕ್ಕಳು ಉತ್ತರಾಧಿಕಾರಿಗಳಾಗುವರು.

ಅಡಿಯರ ಸಮಾಜ ವ್ಯವಸ್ಥೆಯೊಳಗೆ ಪ್ರಮುಖವಾದ ಮೂರು ಗುಂಪುಗಳಿವೆ. ಇವರು ಅವುಗಳನ್ನು 'ಮಂಜು' ಎನ್ನುವರು–'ಶಿರ್ನೆಲಿಮಂಜು', 'ಬಡಾಕ್ಕಂಜು', 'ಪೊದರ್ಮಂಜು'. ಇವು ಇವರ ಪೂರ್ವಿಕರು ನೆಲೆಗೊಂಡಿದ್ದ ಪ್ರದೇಶವನ್ನು ಪ್ರತಿನಿಧಿಸುತ್ತವೆ. ಇವುಗಳಲ್ಲಿ ಪುನಃ 33 ಉಪಗುಂಪುಗಳು ಕಂಡುಬರುತ್ತವೆ. ಇವುಗಳನ್ನು 'ಕುಡುಂಬ' ಅಥವಾ 'ಚೆಮ್ಮ' (ವಂಶ–ಕಳ್ಳುಬಳ್ಳಿ) ಎಂದು ಕರೆಯುತ್ತಾರೆ. ಒಂದೇ ವಂಶದೊಳಗೆ ವಿವಾಹ ಸಂಬಂಧಗಳು ಜರುಗದಂತೆ ಇವು ವಿವಾಹ ನಿಯಮವನ್ನು ನಿಯಂತ್ರಿಸುತ್ತವೆ. ಸ್ಥಳೀಯ ಮಟ್ಟದಲ್ಲಿ ಪ್ರತಿಯೊಂದು ಚೆಮ್ಮದ ಎಲ್ಲ ರಕ್ತಸಂಬಂಧಿಗಳು ಸೇರಿ ಒಂದು ಸಮಿತಿಯನ್ನು ನಿರ್ಮಿಸಿಕೊಂಡಿರುತ್ತಾರೆ. ಆ ಸಮಿತಿಯ ಮುಖಂಡನನ್ನು ಚೆಮ್ಮಕಾರನೆಂದು (ಕುಲಬಂಧು) ಕರೆಯುತ್ತಾರೆ. ಇವನು ತನ್ನ ವಂಶದ ಎಲ್ಲ ಸದಸ್ಯರಮೇಲೆ ನಿಯಂತ್ರಣವನ್ನಿಟ್ಟುಕೊಂಡಿರುತ್ತಾನೆ. ವಿವಾಹದ ಸಂದರ್ಭದಲ್ಲಿ ಚೆಮ್ಮಕಾರನ ಸಮ್ಮತಿ ಇಲ್ಲದೆ ವಧು-ವರರನ್ನು ನಿರ್ಧರಿಸುವಂತಿಲ್ಲ. ವರನ ಪಕ್ಷದವರು ವಧುವಿಗೆ ಕೊಡುವ ಕನ್ಯಾಶುಲ್ಕವನ್ನು ಇವನಿಗೇ ಕೊಡಬೇಕು. ಈ ಶುಲ್ಕದಲ್ಲಿ ಒಂದು ಗೊತ್ತಾದ ಪ್ರಮಾಣವನ್ನು ಚೆಮ್ಮದ ಸಮಿತಿಯ ಕಾರ್ಯನಿರ್ವಹಣೆಗೆ ಉಳಿಸಿಕೊಂಡು ಉಳಿದ ಶುಲ್ಕದ ಭಾಗವನ್ನು ವಧುವಿನ ಕುಟುಂಬ ವರ್ಗದವರಿಗೆ ಹಂಚಿಕೊಡುವನು. ಚೆಮ್ಮದ ಕಾರ್ಯನಿರ್ವಹಣೆಯ ಸಮಿತಿಗೆ ಸಂಗ್ರಹಿಸಿದ ಹಣವನ್ನು ತಮ್ಮ ಗುಂಪಿನ ನಿಸ್ಸಹಾಯಕ ಅಥವಾ ಆರ್ಥಿಕ ದುರ್ಬಲರ ಕಷ್ಟಕಾಲದಲ್ಲಿ ವಿನಿಯೋಗಿಸಲಾಗುವುದು. ಒಂದುವೇಳೆ ಚೆಮ್ಮಕಾರ ಈ ನಿಧಿಯ ಹಣವನ್ನು ದುರುಪಯೋಗಪಡಿಸಿಕೊಂಡರೆ ಇವನನ್ನು ಆ ಸ್ಥಾನದಿಂದ ವಜಾಮಾಡಿ ಬೇರೊಬ್ಬ ಅರ್ಹವ್ಯಕ್ತಿಯನ್ನು ನೇಮಕಮಾಡುವರು. ವಿವಾಹಿತ ಅಡಿಯನು ತನ್ನ ಮಡದಿಯ ಚೆಮ್ಮದ ಸಮಿತಿಗೆ ವಾರ್ಷಿಕವಾಗಿ ಒಂದು ಗೊತ್ತಾದ ಪ್ರಮಾಣದ ದಿನಸಿ (ಬತ್ತ) ಮತ್ತು ಕಾಣಿಕೆ (ಹಣ)ಯನ್ನು ಮಡದಿಯ ಪರವಾಗಿ ನೀಡಬೇಕಾಗುವುದು. ಇದನ್ನು ಅವನು ನಿರಾಕರಿಸಿದರೆ ಅವನ ಹೆಂಡತಿಯನ್ನು ಅವಳ ವಂಶದ ಚೆಮ್ಮಕಾರ ಅವನಿಂದ ಹಿಂದಕ್ಕೆ ಕರೆಸಿಕೊಳ್ಳಬಹುದು ಅಥವಾ ಅವನ ಮೇಲೆ ಒತ್ತಾಯವನ್ನು ತರಬಹುದು. ಅಡಿಯರ ಸಮಾಜ ಮಾತೃವಂಶೀಯವಾದುದರಿಂದ ಗಂಡ ಹೆಂಡತಿಯ ಮೇಲೆ ದಬ್ಬಾಳಿಕೆ ನಡೆಸದಂತೆ ನಿಯಂತ್ರಣವನ್ನು ಹೇರಿದೆ.

ಅಡಿಯರ ಕುಟುಂಬದ ನಿರ್ವಹಣೆಯ ಗುರುತರ ಜವಾಬ್ದಾರಿ ಗಂಡಸಿನದೇ ಆಗಿರುತ್ತದೆ. ಅವನೇ ಕುಟುಂಬದ ಯಜಮಾನ. ಪಾರಂಪರಿಕ ನಿಯಮಗಳನ್ನು ಉಲ್ಲಂಘಿಸಿದ ಕುಟುಂಬದ ಯಾವುದೇ ಸದಸ್ಯರನ್ನಾಗಲಿ ಅತ ಶಿಕ್ಷಿಸಬಹುದು. ಕುಟುಂಬದ ಪಾಲನೆಗಾಗಿ ಗಂಡಸರು ಮತ್ತು ಹೆಂಗಸರು ಒಟ್ಟಾಗಿ ದುಡಿಯುವರು. ಕುಂಬ್ರಿ ಬೇಸಾಯಕ್ಕೆ ಕಾಡಿನ ಮರಗಳನ್ನು ಕಡಿದು, ಸುಟ್ಟು ಭೂಮಿಯನ್ನು ಹಸನ ಮಾಡುವುದು, ಮನೆಕಟ್ಟುವುದು ಮುಂತಾದ ಶ್ರಮದಾಯಕ ಕೆಲಸ ಗಂಡಸರದು. ಹೆಂಗಸರು ಅಡುಗೆಮಾಡುವುದು, ನೀರು, ಸೌದೆ ತರುವುದು, ಬಿತ್ತನೆ, ಒಕ್ಕಣೆ

ಮಾಡುವುದು ಮುಂತಾದ ಗೃಹಕೃತ್ಯಗಳನ್ನು ಮಾಡುವರು. ಮನೆಯ ವಸ್ತುಗಳು ಭೂಮಿಕಾಣಿಗಳ ಬಗ್ಗೆ ಗಂಡಂದಿರದೇ ಜವಾಬ್ದಾರಿಗಳಿದ್ದರೂ ಕೆಲವು ಪ್ರಮುಖ ಪ್ರಸಂಗಗಳಲ್ಲಿ ಹೆಂಡತಿಯರೊಡನೆ ಸಮಾಲೋಚಿಸುವುದುಂಟು.

ಅಡಿಯರಲ್ಲಿ ಮಗುವಾಗಿದ್ದಾಗಲೇ ನಿಶ್ಚಿತಾರ್ಥ ನಡೆಸಿಬಿಡುವ (ತೊಟ್ಟಿಲು ನಿಶ್ಚಿತಾರ್ಥ) ಪದ್ಧತಿ ಆಚರಣೆಯಲ್ಲಿದೆ. ಮೈನೆರೆಯುವುದಕ್ಕಿಂತ ಮೊದಲೇ ಮದುವೆ ಮಾಡುವ ಬಾಲ್ಯವಿವಾಹಪದ್ಧತಿ ರೂಢಿಯಲಿಲ್ಲ. ಮೈನೆರದ ಒಂದೆರಡು ತಿಂಗಳು ಹುಡುಗಿಯನ್ನು ಪ್ರತ್ಯೇಕವಾಗಿಟ್ಟು ಆರೈಕೆ ಮಾಡುವರು. ಮೊದಲ ಮುಟ್ಟು ನಿಲ್ಲುವವರೆಗೆ ಹುಡುಗಿ ಅರಿಸಿನ ಹಚ್ಚಿಕೊಂಡು ದಿನಕ್ಕೆ ಮೂರುಸಲ ಸ್ನಾನಮಾಡು ವಳು. ಅವಳು ಅಡುಗೆ ಮನೆಯನ್ನು ಪ್ರವೇಶಿಸುವಂತಿಲ್ಲ. ಗಂಡಸರನ್ನು ನೋಡ ಬಾರದೆಂಬ ನಿಯಮವಿದೆ. ಅಷ್ಟೇ ಅಲ್ಲದೆ ಸೂರ್ಯನ ಕಿರಣಗಳು ಅವಳ ಮೈಮೇಲೆ ಬೀಳಬಾರದೆಂದು ಮೈತುಂಬ ಮುಸುಕು ಹಾಕಿಕೊಂಡಿರಬೇಕು ಎಂದು ಹೇಳುವರು. ಮೂರು ತಿಂಗಳು ತುಂಬಿದಾಗ ಸೂತಕ ಕಳೆದುಕೊಳ್ಳುವರು. ಆ ದಿನಕ್ಕೆ ಬರುವಂತೆ ತಮ್ಮ ಬಂಧು-ಬಳಗದವರನ್ನು ಆಹ್ವಾನಿಸುವರು. ಮನೆಯ ಮುಂದೆ ಚಪ್ಪರಹಾಕಿ ಋತುವಾದ ಹುಡುಗಿಗೆ ಮಂಗಳ ಸ್ನಾನಮಾಡಿಸಿ ಹೊಸಬಟ್ಟೆ, ಬಳೆತೊಡಿಸಿ ಆರತಿ ಮಾಡುವರು. ಆ ದಿನ ವಿಶೇಷಭೋಜನ ಏರ್ಪಡಿಸಲಾಗಿರುತ್ತದೆ. ಋತುಮತಿಯಿಂದ ಗಂಗೆಪೂಜೆ ಮಾಡಿಸಿ ಮನೆಗೆ ನೀರುತರುವುದು ಆ ದಿನದ ಅಂತಿಮ ಕಾರ್ಯಕ್ರಮ. ಅಂದಿನಿಂದ ನಿಧಾನವಾಗಿ ಎಲ್ಲಾ ಹೆಂಗಸರಂತೆ ಸಾಮಾನ್ಯ ಕೆಲಸಗಳಲ್ಲಿ ಆಕೆ ಭಾಗ ವಹಿಸುವಳು.

ಹುಡುಗರ ಪ್ರೌಢಾವಸ್ಥೆಯ ಬಗ್ಗೆ ವಯಸ್ಸಿನ ಯಾವ ಮಿತಿಯೂ ಇವರಲ್ಲಿ ಇಲ್ಲ. ಒಂದು ಗೊತ್ತಾದ ಪ್ರಮಾಣದ ಬತ್ತದ ಮೂಟೆಯನ್ನು 15 ಮೈಲಿ ದೂರ ಯಾರು ಹೊರಬಲ್ಲನೋ ಅವನು ವಿವಾಹವಾಗಲು ಅರ್ಹ. ಪ್ರೀತಿಸಿ ಮದುವೆ ಯಾಗುವಾಗ ಮತ್ತು ಹುಡುಗ-ಹುಡುಗಿ ಮನಸಾರೆ ಒಪ್ಪಿಕೊಂಡು ತಮ್ಮ ಹಿರಿಯರಿಗೆ ತಿಳಿಸದೆ ಓಡಿಹೋಗುವ ಪ್ರಸಂಗಗಳಲ್ಲಿ ಗಂಡು-ಹೆಣ್ಣಿನ ವಯಸ್ಸು ಗಣನೆಗೆ ಬರುವು ದಿಲ್ಲ. ಹಿಂದೆ ಇವರಲ್ಲಿ ಹುಡುಗ-ಹುಡುಗಿಯರು ಓಡಿಹೋಗುತ್ತಿದ್ದುದೇ ಹೆಚ್ಚೆಂದು ಹೇಳುವರು. ಇಂಥ ಪ್ರಕರಣಗಳು ಮದುವೆ ಎನಿಸಿಕೊಳ್ಳುವುದಿಲ್ಲ. ಈ ಬಗೆಯ ಸಂಬಂಧಗಳು ಸಾಮಾಜಿಕ ಮಾನ್ಯತೆ ಪಡೆಯಬೇಕಾದರೆ ಹುಡುಗ ಅಥವಾ ಅವನ ಪಕ್ಷದವರು ಹುಡುಗಿಯ ಪಕ್ಷದವರಿಗೆ ಅಪರಾಧವೆಸಗಿದ್ದಕ್ಕಾಗಿ ಕನ್ಯಾಶುಲ್ಕ ಅಥವಾ ದಂಡ ರೂಪದ ಪರಿಹಾರವನ್ನು ಕಟ್ಟಿಕೊಡಬೇಕಾಗುವುದು. ಇಲ್ಲದಿದ್ದರೆ ಅವರು ತಮ್ಮ ಸಮಾಜದ ಬಹಿಷ್ಕಾರಕ್ಕೆ ಗುರಿಯಾಗುವರು.

ಹಿರಿಯರೇ ಮುಂದೆ ನಿಂತು ಮದುವೆಯ ಜವಾಬ್ದಾರಿಗಳನ್ನು ವಹಿಸಿಕೊಂಡಾಗ ಮದುವೆಯ ಸಂಬಂಧಕ್ಕೆ ಹೊಂದಾಣಿಕೆಯಾಗುವ ಹುಡುಗಿಯನ್ನು ಹುಡುಕುವರು. ಉಭಯ ಪಕ್ಷದವರೂ ಒಂದು ನಿರ್ದಿಷ್ಟವಾದ ದಿನ ಹುಡುಗಿಯ ಮನೆಯಲ್ಲಿ ಸೇರಿ

ಮದುವೆಯ ಕಾರುಬಾರುಗಳ ಖರ್ಚು ವೆಚ್ಚಗಳನ್ನು ಚರ್ಚಿಸುವರು. ಹುಡುಗಿಯ ಪಕ್ಷದವರಿಗೆ ಕೊಡುವ ಕನ್ಯಾಶುಲ್ಕದ ಪ್ರಮಾಣದ ಬಗ್ಗೆಯೇ ಮುಖ್ಯವಾದ ಚರ್ಚೆಯಾಗಿರುತ್ತದೆ. ಅದನ್ನು ವಧುವಿನ ಪಕ್ಷದವರು ಒಪ್ಪಿಕೊಂಡರೆ ಮುಂದಿನ ಮದುವೆಯ ದಿನವನ್ನು ನಿಶ್ಚಯಿಸುವರು. ನಿಶ್ಚಿತಾರ್ಥದ ಸಂಕೇತವಾಗಿ ಹುಡುಗಿಗೆ ಹುಡುಗನ ಸೋದರಿ ಆ ದಿನವೇ ತಾಳಿಯನ್ನು ಕಟ್ಟುವಳು. ಮದುವೆಯ ನಿಶ್ಚಯದ ದಿನದವರೆಗೆ ಪ್ರತಿವಾರಕ್ಕೊಂದಾವರ್ತಿ ಹುಡುಗ ಹುಡುಗಿಯ ಮನೆಗೆ ಭೇಟಿ ನೀಡುವನು. ಅವನು ತನ್ನ ಭಾವಿ ಪತ್ನಿಯ ಮನೆಗೆ ಹೋಗುವಾಗುಲೆಲ್ಲ ಅಕ್ಕಿ, ಮೆಣಸಿನಕಾಯಿ, ಸಂಬಾರ ಪದಾರ್ಥಗಳು ಹಾಗೂ ಸಿಹಿತಿಂಡಿ ತಿನಿಸುಗಳನ್ನು ಕೊಂಡೊಯ್ಯಬೇಕು. ಕಾಡಿನಲ್ಲಿ ಸೌದೆ ಸಂಗ್ರಹಿಸಿ ಮಾವನಮನೆಗೆ ನೀಡಿ ಸೇವೆಸಲ್ಲಿಸಬೇಕು. ಇಷ್ಟೆಲ್ಲ ಜವಾಬ್ದಾರಿಗಳನ್ನು ತಪ್ಪಿಸಿಕೊಳ್ಳುವ ಸಲುವಾಗಿ ಹುಡುಗ ತನ್ನ ಮೆಚ್ಚಿನ ಸಂಗಾತಿಯನ್ನು ಕದ್ದೊಯ್ಯಲು ಕೆಲವೊಮ್ಮೆ ಹುಡುಗನ ಪಕ್ಷದವರೇ ಪ್ರೋತ್ಸಾಹಿಸುವರು. ಒಮ್ಮೆ ನಿಶ್ಚಯವಾದ ಹುಡುಗಿಯನ್ನು ಬೇರೊಬ್ಬರಿಗೆ ತೋರಿಸುವಂತಿಲ್ಲ. ಹಾಗಾದ ಪಕ್ಷದಲ್ಲಿ ಹುಡುಗಿಯ ಪಕ್ಷದವರು ಭಾರಿಮೊತ್ತದ ದಂಡನೆಗೆ ಗುರಿಯಾಗುವರು. ಹುಡುಗ ಹುಡುಗಿಯ ಮನೆಗೆಹೋಗಿ ಮದುವೆಯಾಗಿ ಬರುವನು.

ಅಡಿಯರಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶವಿರುವುದರಿಂದ ಕುಟುಂಬ ವ್ಯವಸ್ಥೆ ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವಂತಿದೆ. ಮದುವೆಯಾದ ಅನಂತರ ಗಂಡು ಅಥವಾ ಹೆಣ್ಣು ತನಗೆ ಇಷ್ಟ ಬಂದ ಸಂಗಾತಿಯೊಡನೆ ಓಡಿಹೋಗಬಹುದು. ಇದರಿಂದ ಅಪಮಾನಿತರಾದವರು ತಮ್ಮ ಸಮಾಜದ ಮುಖಂಡರಿಗೆ ದೂರು ಕೊಡುವರು. ಓಡಿಹೋದವರನ್ನು ಪತ್ತೆಮಾಡಿ ಕರೆತಂದು ಪಂಚಾಯಿತಿಯ ಮುಂದೆ ನಿಲ್ಲಿಸುವರು. ತಪ್ಪಿತಸ್ಥರಿಗೆ ದಂಡವಿಧಿಸಿ, ಮಾನನಷ್ಟವಾದವರಿಗೆ ಪರಿಹಾರ ಕೊಡಿಸುವರು. ಹಳೆಯ ಸಂಬಂಧವನ್ನು ಮೊಟಕುಗೊಳಿಸಿ, ಹೊಸ ಸಂಬಂಧಕ್ಕೆ ಅನುಮೋದನೆ ನೀಡುವರು. ಅದನ್ನು ಇಡೀ ಸಮುದಾಯ ಸಮ್ಮತಿಸುವುದು.

ಅಡಿಯರ ಮುಖಂಡನಿಗೆ ಹಲವು ಮುಖ್ಯ ಪಾತ್ರಗಳಿವೆ. ಅವನೇ ಪುರೋಹಿತ, ವೈದ್ಯ, ನ್ಯಾಯಾಧಿಪತಿ ಹಾಗೂ ನರ್ತನಗಾರ. ಅವನು ತಲೆಗೆ ಕೆಂಪು ವಸ್ತ್ರವನ್ನೂ, ಬಲಗೈಗೆ ಬೆಳ್ಳಿಯ ಕಡಗವನ್ನು ಧರಿಸಿರುತ್ತಾನೆ. ತನ್ನ ಕೈಯಲ್ಲಿ ಯಾವಾಗಲೂ ಪವಿತ್ರದಂಡವನ್ನು (ದೊಣ್ಣೆ) ಹಿಡಿದು ಕೊಂಡಿರುತ್ತಾನೆ. ಮದುವೆ, ಋತುಶಾಂತಿ, ಹಿರಿಯರಪೂಜೆ ಮತ್ತು ಕುಲದೈವಗಳು ಮುಂತಾದ ಸಮಾರಂಭಗಳಲ್ಲಿ ಈತನೇ ಪೂಜೆಗಳನ್ನು ಮಾಡುವನು. ಕಾಯಿಲೆಯಾದವರಿಗಾಗಿ ಗುಣಪಡಿಸಲು ದೇವರೊಡನೆ ಗುಪ್ತವಾಗಿ ಸಮಾಲೋಚಿಸುವನು, ಸಾಂಪ್ರದಾಯಿಕ ವಿಧಿನಿಷೇಧಗಳನ್ನು ವಿರೋಧಿಸಿ ಹೋಗುವವರನ್ನು ದಂಡಿಸುವನು, ಇಷ್ಟದೈವವನ್ನು ತನ್ನ ಮೈಮೇಲೆ ಭರಿಸಿಕೊಂಡು ಎಲ್ಲ ವರ್ತಮಾನಗಳನ್ನು ತನ್ನ ಸಮುದಾಯದವರಿಗೆ ತಿಳಿಸುವನು. ಯಾರಿಗಾದರೂ ಮಾಟದಿಂದ ತೊಂದರೆಗಳಾಗುವುದನ್ನು ಪ್ರತಿಬಂಧಿಸುವನು. ಮಾಟ

ಮಂತ್ರದಿಂದ ವ್ಯಕ್ತಿ ನರಳುವುದನ್ನು ತಪ್ಪಿಸಲು ತಾಯಿತ (ಯಂತ್ರ)ವನ್ನು ಮಾಡಿ ಕೊಡುವನು. ರೋಗಿಯು ಸಾಯುವನೇ ಅಥವಾ ಗುಣಮುಖನಾಗುವನೇ ಎಂದು ತಿಳಿಸಲು ದೇವರ ಮುಂದೆ ಕೆಲವು 'ಕುರುಹು'ಗಳನ್ನು ತೆಗೆಯುವನು. ಅವನು ಹೇಳಿದ ಕುರುಹುಗಳು 'ಸರಿ' ಎಂದು ಕಂಡುಬಂದರೆ ರೋಗಿಯನ್ನು ಗುಣಪಡಿಸಲು ದೇವರಿಗೆ ಹರಿಕೆ-ಬಲಿಕೊಡಬೇಕಾಗುವುದು.

ಕೆಲವು ಪ್ರಸಂಗಗಳಲ್ಲಿ ಮುಖಂಡನು ಚಿಕಿತ್ಸೆಯ ಬಗ್ಗೆ ತೀರ್ಮಾನಿಸಲು ತೆಂಗಿನಕಾಯಿಯನ್ನು ಒಡೆದಾಗ ಅದರ ಎರಡು ಹೋಳುಗಳು ನೆಲದಮೇಲೆ ತಲೆಕೆಳಗಾಗಿ ಬಿದ್ದರೆ ರೋಗಿ ಬೇಗನೆ ಸಾಯುವನು ಎಂದೂ; ಒಂದು ಮೇಲ್ಮುಖವಾಗಿ ಮತ್ತೊಂದು ಕೆಳಮುಖವಾಗಿಬಿದ್ದರೆ ನಿಧಾನವಾಗಿ ಸಾಯುವನೆಂದೂ; ಎರಡೂ ಮೇಲ್ಮುಖವಾಗಿ ಬಿದ್ದರೆ ರೋಗಿಯನ್ನು ಗುಣಪಡಿಸಬಹುದೆಂದೂ ತೀರ್ಮಾನಿಸುವನು. ಕೆಲವು ಸಂದರ್ಭಗಳಲ್ಲಿ ದೇವರ ಮುಂದೆ ಅಕ್ಕಿಯನ್ನು ಪೂಜೆಗಿಟ್ಟು ಪುರೋಹಿತ ತನ್ನ ಭಕ್ತರಿಗೆ ಕೊಡುವನು. ಹಾಗೆ ಬಂದ ಅಕ್ಕಿಕಾಳುಗಳು ಬೆಸ (1, 3, 5) ಸಂಖ್ಯೆ ಬಂದರೆ ಒಳ್ಳೆಯದೆಂದೂ; ಸರಿಸಂಖ್ಯೆಬಂದರೆ ನಂಬಿದ ಕೆಲಸ ಆಗುವುದಿಲ್ಲವೆಂದು ಇವರು ನಂಬುವರು.

ಅಡಿಯರಲ್ಲಿ ಹೆಂಡತಿ ಅಥವಾ ಗಂಡ ತೀರಿಹೋದಾಗ ಕೆಲವು ಸಂಪ್ರದಾಯ ನಿಯಮಗಳನ್ನು ಪಾಲಿಸಬೇಕು. ತೀರಿಹೋದ ಮರುದಿನ ಆತ ತಲೆಯನ್ನು ಬೋಳಿಸಿ ಕೊಳ್ಳಬೇಕು. ಅಂದಿನಿಂದ ಹತ್ತುದಿನದವರೆಗೆ ಆತ ಬಟ್ಟೆಬದಲಾಯಿಸುವಂತಿಲ್ಲ; ಮುಖಕ್ಷೌರ ಮಾಡಿಸುವಂತಿಲ್ಲ; ಹಾಲು ಮತ್ತು ಖಾದ್ಯ ಪದಾರ್ಥಗಳನ್ನು ಸೇವಿಸುವಂತಿಲ್ಲ. ತಿಥಿಯ ಅಂತಿಮದಲ್ಲಿ ತೀರಿಹೋದ ಮಡದಿಯ ಕುಟುಂಬಕ್ಕೆ ಪರಿಹಾರವನ್ನು ಕಟ್ಟಿಕೊಡಬೇಕು. ಆತ ಒಂದು ವರ್ಷದವರೆಗೆ ಮದುವೆಯಾಗದೆ ಶೋಕವನ್ನು ಆಚರಿಸಬೇಕು. ಆ ಅವಧಿಯಲ್ಲಿ ಅವನು ತಲೆಬಾಚುವುದು, ಮುಖಕ್ಷೌರಮಾಡಿಸುವುದು, ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸುವುದು, ರುಚಿಕಟ್ಟಾದ ಊಟೋಪಚಾರಗಳನ್ನು ಸೇವಿಸುವುದು ನಿಷಿದ್ಧ. ಶೋಕಾಚರಣೆಯ ಕೊನೆಯಲ್ಲಿ ಅವನು ತನ್ನ ಮಡದಿ ಬಳಸುತ್ತಿದ್ದ ಚೆಂಬು, ಗಂಗಳ, ಬಟ್ಟೆಬರೆ, ಎಲೆ ಅಡಿಕೆಚೀಲ, ಬಾಚಣಿಗೆ ಮುಂತಾದುವುಗಳನ್ನು ಅವಳ ಚಿಮ್ಮದ ಮುಖಂಡನಿಗೆ ಒಪ್ಪಿಸಿ ಅವಳ ಸಂಬಂಧದಿಂದ ಮುಕ್ತನಾಗಬೇಕು. ತರುವಾಯ ಅವನು ಬೇರೊಂದು ಸಂಬಂಧವನ್ನು ಬೆಳೆಸಬಹುದು. ಗಂಡಸರು ಸತ್ತರೆ ವಿಧವೆಯೂ ಇದೇ ಪದ್ಧತಿಗಳನ್ನು ಆಚರಿಸುವಳು. ಹೆಂಗಸರು ಮುಂಡನ ಮಾಡಿಸಿಕೊಳ್ಳುವುದಿಲ್ಲ. ಅವಳ ಗಂಡು ಮಕ್ಕಳು ತಲೆಬೋಳಿಸಿಕೊಳ್ಳುವರು. ಯಾರಾದರೂ ಈ ಪದ್ಧತಿಗಳನ್ನು ಮೀರಿ ವರ್ತಿಸಿದರೆ ಮುಖಂಡ ಅವರನ್ನು ದಂಡಿಸುವನು ಹಾಗೂ ಸಮುದಾಯದವರೆಲ್ಲ ಅವರಿಗೆ ಬಹಿಷ್ಕಾರ ಹಾಕುವರು.

ದೋಷರಹಿತವಾದ ಕೆಲಸಗಳು ದುರ್ಲಭ

—ಚಾಣಕ್ಯ

ಆಪತ್ತಿನಲ್ಲಿ ಹೆಚ್ಚಿನ ದೃಢತೆಯನ್ನು ಹೊಂದಿರುವುದು ಧೀರರ ಸ್ವಾಭಾವಿಕ ಗುಣ

—ಕಥಾಸರಿತ್ಸಾಗರ

ಎಂಥ ಪಾಪಿಯೂ ಒಂದು ದಿನ ಒಳ್ಳೆಯವನಾಗುತ್ತಾನೆ
ಎಂಥ ಸಂತನೂ ಹಿಂದೆ ತಪ್ಪುಮಾಡಿಯೇ ಇರುತ್ತಾನೆ

—ಜಯಪ್ರಕಾಶ್ ನಾರಾಯಣ್

ತಪ್ಪುಮಾಡುವುದು ಅರ್ಧ ತಪ್ಪು, ಅದಕ್ಕೆ ನೆಪ ಹೇಳುವುದು ಪೂರ್ತಿ ತಪ್ಪು

—ಗಯಟೆ

ಬಿ. ಎನ್. ಮಂಜುನಾಥಯ್ಯ

ಉನ್ನತ ಶಿಕ್ಷಣದಲ್ಲಿ ಸ್ವಾಯತ್ತತೆ ಮತ್ತು ಉತ್ತರದಾಯಿತ್ವ

ಇತ್ತೀಚಿನ ವರ್ಷಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಸ್ವಾಯತ್ತತೆಯ ಆವಶ್ಯಕತೆಯ ಬಗ್ಗೆ ಹೆಚ್ಚು ಚರ್ಚೆ ನಡೆಯುತ್ತಿದೆ. ಶಿಕ್ಷಣದಲ್ಲಿ ಸ್ವಾಯತ್ತತೆಯ ಪ್ರಶ್ನೆ ಬೋಧನೆಯ ಸ್ವಾತಂತ್ರ್ಯತೆಯ ರೂಪದಲ್ಲಿ ಬಹಳ ಹಿಂದಿನಿಂದಲೂ ಚರ್ಚೆಯ ವಿಷಯವಾಗಿದೆ. ಶಿಕ್ಷಣ ಸಂಸ್ಥೆಗಳಿಗೆ ನೀಡುವ ಸ್ವಾಯತ್ತತೆ ಬೋಧನೆಯ ಸ್ವಾತಂತ್ರ್ಯದ ಪ್ರಶ್ನೆಗಿಂತ ಹೆಚ್ಚಿನ ವ್ಯಾಪಕತೆಯುಳ್ಳದ್ದಾಗಿದೆ. ಇದು ಬೋಧನೋದ್ದೇಶಗಳ ನಿರ್ಧಾರ, ಪಠ್ಯಕ್ರಮ ವಿಕಾಸ, ಹಣಕಾಸಿನ ಮೇಲ್ವಿಚಾರಣೆ, ಶೈಕ್ಷಣಿಕ ಆಡಳಿತ, ಬೋಧನೆ ಮತ್ತು ಮೌಲ್ಯಮಾಪನ ಮುಂತಾದ ಶಿಕ್ಷಣದ ಎಲ್ಲಾ ಪ್ರಮುಖ ಅಂಶಗಳನ್ನು ಒಳಗೊಳ್ಳುತ್ತದೆ. ಸ್ವಾಯತ್ತತೆಗೆ ಪೂರಕವಾದ ಮತ್ತೊಂದು ಅಂಶವೇ ಶೈಕ್ಷಣಿಕ ಸಂಸ್ಥೆಗಳ ಉತ್ತರದಾಯಿತ್ವ ಅಥವಾ ಜವಾಬ್ದಾರಿ. ಸ್ವಾಯತ್ತತೆಯನ್ನು ಅಪೇಕ್ಷಿಸುವ ಶೈಕ್ಷಣಿಕ ಸಂಸ್ಥೆಗಳು ಉತ್ತರದಾಯಿತ್ವದ ಹೊಣೆಯನ್ನೂ ಹೊರಬೇಕಾಗುತ್ತದೆ. ಆದ್ದರಿಂದ ಸ್ವಾಯತ್ತತೆ ಮತ್ತು ಉತ್ತರದಾಯಿತ್ವಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎನ್ನಬಹುದು. ಈ ಎರಡೂ ಪರಿಕಲ್ಪನೆಗಳನ್ನು ಜೊತೆಜೊತೆಯಾಗಿ ಪರಿಗಣಿಸುವುದು ಸೂಕ್ತವೆನಿಸುತ್ತದೆ.

ಭಾರತೀಯ ಶಿಕ್ಷಣದಲ್ಲಿ ಬೋಧನಾ ಸ್ವಾತಂತ್ರ್ಯದ ಬಗೆಗೆ ಸಾಕಷ್ಟು ಚರ್ಚೆಯಾಗಿದ್ದರೂ, ಸ್ವಾಯತ್ತತೆ ಮತ್ತು ಉತ್ತರದಾಯಿತ್ವದ ಬಗೆಗೆ ಇತ್ತೀಚೆಗೆತಾನೆ ಗಮನ ಹರಿಸಲಾಗುತ್ತಿದೆ. ಆದರೆ ಅಮೆರಿಕಾ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಈ ಪರಿಕಲ್ಪನೆಗಳ ಬಗ್ಗೆ ಸಾಕಷ್ಟು ವಿಶ್ಲೇಷಣೆ ನಡೆಸಲಾಗಿದೆ. ನಮ್ಮ ದೇಶದಲ್ಲಿ 1964–65ರ ಶಿಕ್ಷಣ ಆಯೋಗ (ಕೊಠಾರಿ ಆಯೋಗ) ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಮಟ್ಟದ ಬೌದ್ಧಿಕ ವಾತಾವರಣವನ್ನು ಉಂಟು ಮಾಡುವುದರಲ್ಲಿ ಬೋಧನಾ ಸ್ವಾತಂತ್ರ್ಯದ (Academic Freedom) ಪ್ರಾಮುಖ್ಯವನ್ನು ಗುರ್ತಿಸುವುದರ ಜೊತೆಗೆ, ಉನ್ನತ ಶಿಕ್ಷಣದ ಪ್ರಗತಿಗೆ ಸಾಯತ್ತತೆಯ ಆವಶ್ಯಕತೆಯನ್ನೂ ಗುರ್ತಿಸಿತು. ಈ ದಿಶೆಯಲ್ಲಿ ಈ ಆಯೋಗವು ಸ್ವಾಯತ್ತ ಕಾಲೇಜುಗಳ ಸ್ಥಾಪನೆಯನ್ನು ಶಿಫಾರಸು

ಮಾಡಿತ್ತು. ಈ ಶಿಫಾರಸಿಗನುಗುಣವಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗದ ಪ್ರಯತ್ನದ ಫಲವಾಗಿ ಕೆಲವು ರಾಜ್ಯಗಳಲ್ಲಿ ಸ್ವಾಯತ್ತ ಕಾಲೇಜುಗಳು ಪ್ರಾರಂಭ ಗೊಂಡವು. ಇತ್ತೀಚೆಗೆ 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸುವಾಗ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡುವ ಮತ್ತು ಅವುಗಳನ್ನು ಜವಾಬ್ದಾರಿಯುತವನ್ನಾಗಿ ಮಾಡುವ ಬಗ್ಗೆ ಚರ್ಚೆ ಮಾಡಲಾಗಿದೆ. ಸ್ವಾಯತ್ತ ಸಂಸ್ಥೆಗಳನ್ನು ಮೌಲ್ಯಮಾಪನಮಾಡಿ ಅವುಗಳ ಗುಣಮಟ್ಟವನ್ನು ನಿರ್ಣಯಿಸುವ ಉದ್ದೇಶದಿಂದ ರಾಷ್ಟ್ರಮಟ್ಟದಲ್ಲಿ ಯೋಗ್ಯತಾ ಸಮಿತಿ (Accreditation Council) ಯೊಂದನ್ನು ಸ್ಥಾಪಿಸುವ ಪ್ರಯತ್ನವೂ ನಡೆದಿದೆ.

ಸ್ವಾಯತ್ತತೆ ಮತ್ತು ಉತ್ತರದಾಯಿತ್ವದ ಉದ್ದೇಶಗಳು :

ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡಿ, ಅವುಗಳನ್ನು ಜವಾಬ್ದಾರಿ ಯುತ ಸಂಸ್ಥೆಗಳಾಗಿ ಮಾಡುವುದರಿಂದ ಕೆಲವು ಪ್ರಯೋಜನಗಳಿವೆ.

1. ಸ್ವಾಯತ್ತ ಸಂಸ್ಥೆಗಳಿಗೆ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ಸ್ವಾತಂತ್ರ್ಯವಿರುವುದರಿಂದ ಮತ್ತು ಅವು ತಮಗೆ ತಾವೇ ಜವಾಬ್ದಾರಿಯುತವಾಗು ವುದರಿಂದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಅವು ಪ್ರಯತ್ನಿಸುತ್ತವೆ. ಇಂಥ ಸ್ವಾಯತ್ತ ಸಂಸ್ಥೆಗಳು ಹೆಚ್ಚಾದಷ್ಟು ಜನಗಳಿಗೆ ಉತ್ತಮ ಶಿಕ್ಷಣದ ಸೌಲಭ್ಯ ಹೆಚ್ಚು ಹೆಚ್ಚಾಗಿ ದೊರಕುವಂತಾಗುತ್ತದೆ. ಪ್ರಜಾಸತ್ತಾತ್ಮಕ ಸಮಾಜದಲ್ಲಿ ಸಮಾನ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವುದರಲ್ಲಿ ಸ್ವಾಯತ್ತ ಸಂಸ್ಥೆಗಳು ಸಹಾಯಕ ವಾಗುತ್ತವೆ.

2. ಸ್ವಾಯತ್ತತೆಯನ್ನು ನೀಡುವುದರಿಂದ ಶೈಕ್ಷಣಿಕ ಪ್ರಯತ್ನಗಳಲ್ಲಿ ಬೋಧನೆ, ಮೌಲ್ಯಮಾಪನ, ಮೇಲ್ವಿಚಾರಣೆ, ಆಡಳಿತ ಮುಂತಾದವುಗಳಲ್ಲಿ ದಕ್ಷತೆ ಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಶಿಕ್ಷಣ ಸಂಸ್ಥೆಗಳು ಸ್ವಪ್ರಯತ್ನದಿಂದ ಸ್ವಪ್ರೇರಿತ ರೀತಿಯಲ್ಲಿ ತಮ್ಮ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತವೆ ಯೆಂದು ನಿರೀಕ್ಷಿಸಬಹುದಾಗಿದೆ.

3. ಸ್ವಾಯತ್ತ ಸಂಸ್ಥೆಗಳಲ್ಲಿ ಶೈಕ್ಷಣಿಕ (ಬೋಧನ) ಸ್ವಾತಂತ್ರ್ಯದ ವಾತಾವರಣವುಂಟಾಗಿ ಹೊಸ ಹೊಸ ಸಂಶೋಧನೆಗಳನ್ನು ಕೈಗೊಳ್ಳಲು ಮತ್ತು ವಿವಿಧ ದಿಶೆಗಳಲ್ಲಿ ಮುಕ್ತಚಿಂತನೆಮಾಡಲು ಪ್ರೋತ್ಸಾಹ ದೊರಕಿದಂತಾಗುತ್ತದೆ.

4. ಬದಲಾಗುತ್ತಿರುವ ಸಾಮಾಜಿಕ ಬೇಡಿಕೆಗಳಿಗೆ ಸ್ಪಂದಿಸುವಂತೆ ಶೈಕ್ಷಣಿಕ ವ್ಯವಸ್ಥೆ ರೂಪಿತವಾಗಬೇಕು. ಸ್ವಾಯತ್ತ ಸಂಸ್ಥೆಗಳು ಸಾಮಾಜಿಕ ಬದಲಾವಣೆಗೆ ಅನುಗುಣವಾಗಿ ಶೈಕ್ಷಣಿಕ ವ್ಯವಸ್ಥೆಯಲ್ಲಿ ಮಾರ್ಪಾಡುಗಳು ತರಲು ಪ್ರಯತ್ನಿಸು ತ್ತವೆ. ಹೊಸ ಸಾಮಾಜಿಕ ಪರಿವರ್ತನೆಗಳನ್ನು ಪ್ರಾರಂಭಿಸುವುದರಲ್ಲಿಯೂ ಸ್ವಾಯತ್ತ ಶಿಕ್ಷಣ ಸಂಸ್ಥೆಗಳು ತಮ್ಮ ಕೊಡುಗೆಯನ್ನು ನೀಡಬಹುದಾಗಿದೆ.

5. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ವಿಶ್ವವಿದ್ಯಾಲಯ ಅನುದಾನ ಆಯೋಗ, ICSR ಮುಂತಾದ ಸಂಸ್ಥೆಗಳು ಉನ್ನತ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಹೇರಳವಾಗಿ ಧನಸಹಾಯ ಮಾಡುತ್ತಿವೆ. ಅನೇಕ ವೇಳೆ ಈ ಧನರಾಶಿ ಸರಿಯಾದ ರೀತಿಯಲ್ಲಿ ವಿನಿಯೋಗವಾಗುವುದಿಲ್ಲ. ಕೇಂದ್ರೀಯ ನಿಯಂತ್ರಣಕ್ಕೆ ಒಳಪಟ್ಟ ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನ ಸುಲಭವಾಗಿ ದೊರೆಯುವುದಿಲ್ಲ. ಒಂದು ವೇಳೆ ದೊರೆತರೂ, ಅದರ ವಿನಿಯೋಗದಲ್ಲಿ ಅನೇಕ ಅಡೆತಡೆಗಳು ಇರುತ್ತವೆ. ಸ್ವಾಯತ್ತ ಸಂಸ್ಥೆಗಳಲ್ಲಿ ಈ ರೀತಿಯ ತೊಂದರೆಗಳಿರುವುದಿಲ್ಲ. ತಮಗೆ ದೊರೆತ ಅನುದಾನವನ್ನು ಈ ಸಂಸ್ಥೆಗಳು ತಮ್ಮ ಉದ್ದೇಶಸಾಧನೆಗೆ ಸುಲಭವಾಗಿ ಉಪಯೋಗಿಸಲು ಸ್ವತಂತ್ರವಾಗಿರುವುದರಿಂದ ಇವುಗಳಿಗೆ ನೀಡಿದ ಅನುದಾನ ಯೋಗ್ಯರೀತಿಯಲ್ಲಿ ವಿನಿಯೋಗವಾಗುವುದೆಂದು ನಿರೀಕ್ಷಿಸಬಹುದಾಗಿದೆ. ಸ್ವಾಯತ್ತ ಸಂಸ್ಥೆಗಳು ಜವಾಬ್ದಾರಿಯುತವಾಗಿಯೂ ಇರಬೇಕಾದುದರಿಂದ, ತಮಗೆ ದೊರೆತ ಧನರಾಶಿಯನ್ನು ಸಾಮಾಜಿಕವಾಗಿ ಫಲಪ್ರದವಾದ ರೀತಿಯಲ್ಲಿ ವಿನಿಯೋಗಿಸುತ್ತವೆ. ಈ ರೀತಿ ಉನ್ನತ ಶಿಕ್ಷಣಕ್ಕೆ ಮಂಜೂರಾಗುವ ಹಣ ಸಮರ್ಥನೀಯ ಬಂಡವಾಳವೆನಿಸುತ್ತದೆ.

6. ಪ್ರಜಾಸತ್ತಾತ್ಮಕ ಸಮಾಜಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳನ್ನು ಉಂಟುಮಾಡುವಲ್ಲಿ ಹಾಗೂ ತ್ವರಿತಗೊಳಿಸುವುದರಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಅನೇಕ ಹೊಸ ಹಾಗೂ ಕ್ರಾಂತಿಕಾರಕ ವಿಚಾರಗಳು ವಿಶ್ವವಿದ್ಯಾಲಯಗಳಲ್ಲಿ ಜನ್ಮತಾಳಿರುವುದನ್ನು ನೋಡುತ್ತೇವೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಹೊಸ ವಿಚಾರಗಳನ್ನು ಬೆಳೆಸಿ, ಪ್ರಚಾರ ಮಾಡುವುದರಲ್ಲಿ ವಿಶ್ವವಿದ್ಯಾಲಯಗಳ ಪಾತ್ರವನ್ನು ಗುರ್ತಿಸಬಹುದು. ಈ ರೀತಿಯ ಸಾಮಾಜಿಕ ಪರಿವರ್ತನೆಯ ನಿಯೋಗಗಳ ಪಾತ್ರವನ್ನು ಉನ್ನತ ಶಿಕ್ಷಣ ಸಂಸ್ಥೆಗಳು ಸಮರ್ಥ ರೀತಿಯಲ್ಲಿ ವಹಿಸಬೇಕಾದರೆ ಅವುಗಳಿಗೆ ಸ್ವಾಯತ್ತತೆ ಇರಬೇಕಾದುದು ಆವಶ್ಯಕವಾಗುತ್ತದೆ.

ಸ್ವಾಯತ್ತತೆಯ ಅರ್ಥ :

ಸ್ವಾಯತ್ತತೆ ಸಂಕೀರ್ಣವಾದ ಒಂದು ಪರಿಕಲ್ಪನೆ. ಇದನ್ನು ಬೇರೆ ಬೇರೆ ಮಟ್ಟಗಳಲ್ಲಿ, ವಿವಿಧ ದೃಷ್ಟಿಕೋನಗಳಿಂದ ಅರ್ಥೈಸಬೇಕಾಗುತ್ತದೆ. ಗ್ಲೆನಿ ಮತ್ತು ಡಾಲ್‌ಗ್ಲಿಸ್ಟ್ ಪ್ರಕಾರ ಸ್ವಾಯತ್ತತೆ ಎಂದರೆ ಸ್ವನಿಯಂತ್ರಣ, ಸ್ವಾತಂತ್ರ್ಯ ಮತ್ತು ಸ್ವನಿರ್ದೇಶವೆಂದು ಅರ್ಥವಾಗುತ್ತದೆ. ಸ್ವಾಯತ್ತತೆ ವ್ಯಕ್ತಿಯ ಮಟ್ಟದಲ್ಲಿ ಮತ್ತು ಸಂಸ್ಥೆಯ ಮಟ್ಟದಲ್ಲಿ ಅನ್ವಯವಾಗುತ್ತದೆ. ಮೊದಲು ವ್ಯಕ್ತಿಯ ಮಟ್ಟದಲ್ಲಿ ಸ್ವಾಯತ್ತತೆಯ ಅರ್ಥವನ್ನು ನೋಡೋಣ. ಸ್ವಾಯತ್ತ ವ್ಯಕ್ತಿ ಸ್ವಂತವಾಗಿ ಯೋಚಿಸಿ, ಸ್ವಂತವಾಗಿ ತೀರ್ಮಾನಗಳನ್ನು ಕೈಗೊಳ್ಳುತ್ತಾನೆ. ಅವನ ತೀರ್ಮಾನಗಳು ಬೇರೆಯವರಿಂದ ಅಥವಾ ಬೇರೆ ನಿಯೋಗಗಳಿಂದ ನಿಯಂತ್ರಿತವಾಗಿರುವುದಿಲ್ಲ. ಈ

ಅರ್ಥದಲ್ಲಿ ಶಿಕ್ಷಣದ ಒಂದು ಮುಖ್ಯ ಉದ್ದೇಶ ಸ್ವಾಯತ್ತ ವ್ಯಕ್ತಿತ್ವವನ್ನು ಹೊಂದಿರುವ ವ್ಯಕ್ತಿಗಳನ್ನು ರೂಪಿಸುವುದಾಗಿದೆ. ಬೋರ್ಡ್ ಎಂಬುವವನ್ನು ಸ್ವಪ್ರಯತ್ನದಿಂದ, ಸ್ವಪ್ರೇರಣೆಯಿಂದ ಕಲಿಯುವ ಪ್ರಕ್ರಿಯೆಯನ್ನು ಸ್ವಾಯತ್ತಕಲಿಕೆ (Autonomous Learning) ಎಂದು ಹೆಸರಿಸಿ, ಸ್ವಾಯತ್ತ ವ್ಯಕ್ತಿತ್ವವನ್ನು ಬೆಳೆಸಲು ವಿದ್ಯಾರ್ಥಿಗಳಲ್ಲಿ ಸ್ವಾಯತ್ತ ಕಲಿಕೆಯನ್ನು ಬೆಳೆಸಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ.

ಸ್ವಾಯತ್ತ ವ್ಯಕ್ತಿತ್ವ ಉಳ್ಳವರ ಲಕ್ಷಣಗಳು :

1. ಸ್ವಾಯತ್ತ ವ್ಯಕ್ತಿಯು ಪರಿಸ್ಥಿತಿಯಲ್ಲಿನ ಸಾಧ್ಯತೆಗಳಿಗೆ ಒಳಪಟ್ಟು, ಆ ಪರಿಸ್ಥಿತಿಯಲ್ಲಿ ತಾನು ಹೇಗೆ ವರ್ತಿಸಿದರೆ ಸೂಕ್ತವೆಂಬುದನ್ನು ಚೆನ್ನಾಗಿ ಯೋಚನೆ ಮಾಡಿ ಅದಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತಾನೆ.

2 ಸ್ವಾಯತ್ತತೆಯನ್ನು ಸ್ವಚ್ಛಂದ ಸ್ವಾತಂತ್ರ್ಯವೆಂದು ಪರಿಗಣಿಸಬಾರದು. ತಾನು ಏನು ಬೇಕಾದರೂ ಮಾಡಬಹುದು ಎಂಬ ಸ್ವಾತಂತ್ರ್ಯವುಳ್ಳ ವ್ಯಕ್ತಿ ಸ್ವಾಯತ್ತವಾಗಿ ವರ್ತಿಸದೇ ಇರಬಹುದು. ಅಂಥ ವ್ಯಕ್ತಿ ಕೇವಲ ತನ್ನ ಪ್ರವೃತ್ತಿಗಳು ಅಥವಾ ಇತರರು ಪ್ರಚೋದಿಸಿದಂತೆ ನಡೆದುಕೊಳ್ಳುತ್ತಾನೆ. ಈ ರೀತಿಯ ವ್ಯಕ್ತಿ ಬಹಿರಾಯತ್ತ ವ್ಯಕ್ತಿ (Heteronomous Person) ಎನ್ನಿಸಿಕೊಳ್ಳುತ್ತಾನೆ. ಆದರೆ ಆ ರೀತಿ ಸ್ವಾತಂತ್ರ್ಯವಿರುವ ವ್ಯಕ್ತಿ ಜವಾಬ್ದಾರಿಯುತವಾಗಿ ವರ್ತಿಸಿದಾಗ ಸ್ವಾಯತ್ತ ವ್ಯಕ್ತಿಯೆನ್ನಿಸಿಕೊಳ್ಳುತ್ತಾನೆ.

3. ಸ್ವಾಯತ್ತ ವ್ಯಕ್ತಿ ತನ್ನ ನಂಬಿಕೆಗಳಿಗೆ, ಗ್ರಹಿಕೆಗಳಿಗೆ ಮತ್ತು ವರ್ತನೆಗಳಿಗೆ ತಾನು ಹೊಣೆಗಾರನೆಂಬುದನ್ನು ತಿಳಿದಿರುತ್ತಾನೆ.

4. ಸ್ವಾಯತ್ತತೆ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುವ ಒಂದು ಉಪಕ್ರಮ (ವಿಧಾನ)ವಾಗಿದೆ. ಸ್ವಾಯತ್ತ ವ್ಯಕ್ತಿ ಈ ವಿಧಾನಕ್ಕೆ ಅನುಗುಣವಾಗಿ ತೀರ್ಮಾನ ಕೈಗೊಳ್ಳುತ್ತಾನೆ.

5. ಸ್ವಾಯತ್ತ ವ್ಯಕ್ತಿ ತೆಗೆದುಕೊಂಡ ತೀರ್ಮಾನ ಅಥವಾ ವರ್ತಿಸಿದ ರೀತಿ ಯಾವಾಗಲೂ ಬುದ್ಧಿವಂತಿಕೆಯಿಂದ ಕೂಡಿದುದೂ ಅಥವಾ ಸಂಪೂರ್ಣವಾಗಿ ಅರ್ಥಪೂರ್ಣವೂ ಆಗಿರುವುದಿಲ್ಲ. ಕೆಲವು ವೇಳೆ ಇಂಥ ತೀರ್ಮಾನಗಳು ದೋಷಪೂರ್ಣವಾಗಬಹುದು. ಸ್ವಾಯತ್ತ ವ್ಯಕ್ತಿ ತನ್ನ ತೀರ್ಮಾನಗಳನ್ನು ತಾನೇ ಯೋಚಿಸಿ ತೆಗೆದುಕೊಂಡಿರುತ್ತಾನೆ ಮತ್ತು ಅವುಗಳಿಗೆ ತಾನೇ ಜವಾಬ್ದಾರನಾಗಿರುತ್ತಾನೆ.

6. ಕೆಲವು ವೇಳೆ ವ್ಯಕ್ತಿ ಸ್ವಾಯತ್ತವಾಗಿ ಯೋಚಿಸಿದರೂ ಪರಿಸ್ಥಿತಿಯ ಒತ್ತಡದಿಂದಾಗಿ ಅದಕ್ಕನುಗುಣವಾಗಿ ವರ್ತಿಸಲು ಸಾಧ್ಯವಿಲ್ಲದಿರಬಹುದು. ಆದರೂ ಸ್ವಾಯತ್ತ ವ್ಯಕ್ತಿ ತನ್ನ ತೀರ್ಮಾನಕ್ಕೆ ತಾತ್ವಿಕವಾಗಿ ಬದ್ಧನಾಗಿರುತ್ತಾನೆ.

7. ಸ್ವಾಯತ್ತ ವ್ಯಕ್ತಿ ಯಾವುದೇ ವಿಷಯವನ್ನಾಗಲೀ ಅಥವಾ ವ್ಯಾಖ್ಯೆಯನ್ನಾಗಲೀ ಬೌದ್ಧಿಕವಾಗಿ ತರ್ಕಿಸಿ ಅದರ ಯುಕ್ತಾಯುಕ್ತತೆಯನ್ನು ತೀರ್ಮಾನಿಸುತ್ತಾನೆ. ಸ್ವಾಯತ್ತತೆಗೆ ಸ್ವಲ್ಪ ಮಟ್ಟಿನ ಬೌದ್ಧಿಕ ದಕ್ಷತೆಯೂ ಬೇಕಾಗುತ್ತದೆ.

8. ಬಹಿರಾಯತ್ತ ವ್ಯಕ್ತಿಗಳು (ಸ್ವಾಯತ್ತತೆಯಿಲ್ಲದವರು–Heteronomous Individuals) ಯಾವುದೇ ವಿಷಯ, ಸಾಕ್ಷ್ಯ ಅಥವಾ ನಂಬಿಕೆಯನ್ನು ಕಣ್ಣು ಮುಚ್ಚಿಕೊಂಡು, ಯೋಚಿಸದೇ ಒಪ್ಪಿಕೊಂಡು ಬಿಡುತ್ತಾರೆ. ಇವುಗಳನ್ನು ಪ್ರಶ್ನಿಸಲು ಸಾಧ್ಯವಿದೇ ಎಂದು ಅವರಿಗೆ ಅನ್ನಿಸುವುದಿಲ್ಲ. ಸ್ವಾಯತ್ತ ವ್ಯಕ್ತಿಗಳು ಏನನ್ನೇ ಆಗಲಿ ವಿವೇಚಿಸದೆ ಸ್ವೀಕರಿಸುವುದಿಲ್ಲ.

9. ಸ್ವಾಯತ್ತವಾಗಿ ಯೋಚಿಸಲು ಸಂಜ್ಞಾನಾತ್ಮಕ ಗ್ರಹಿಕೆ, ಬೇರೆ ಬೇರೆ ವ್ಯಾಖ್ಯಾನಗಳ ಸಾಧ್ಯತೆಗಳ ಬಗ್ಗೆ ಮುಕ್ತ ಮನಸ್ಸು ಮತ್ತು ಮೌಲ್ಯ ತೀರ್ಮಾನ ಬೇಕಾಗುತ್ತವೆ.

10. ಶಿಕ್ಷಣದಲ್ಲಿ ಸ್ವಾಯತ್ತವಾಗಿ ಯೋಚಿಸುವ ಲಕ್ಷಣವನ್ನು ಸಾಧಿಸಬೇಕಾದ ಒಂದು ಮೌಲ್ಯವಾಗಿ ಪರಿಗಣಿಸಲಾಗಿದೆ. ವಿದ್ಯಾವಂತ ವ್ಯಕ್ತಿಯಿಂದ ಸ್ವಾಯತ್ತ ಯೋಚನೆಯನ್ನು ನಿರೀಕ್ಷಿಸಬಹುದಾಗಿದೆ.

ಸಾಂಸ್ಥಿಕ ಸ್ವಾಯತ್ತತೆ :

ಇದುವರೆಗೆ ವ್ಯಕ್ತಿಯ ಮಟ್ಟದಲ್ಲಿ ಸ್ವಾಯತ್ತತೆಯ ಅರ್ಥ ವ್ಯಾಪ್ತಿಯೇನೆಂಬುದನ್ನು ನೋಡಿದೆವು. ಇನ್ನು ಸಂಸ್ಥೆಗಳಿಗೆ ಅನ್ವಯಿಸಿದಂತೆ ಸ್ವಾಯತ್ತತೆಯ ಅರ್ಥ ವ್ಯಾಪ್ತಿಯೇನು ಎಂಬುದನ್ನು ನೋಡೋಣ.

ಸಂಸ್ಥೆಗಳಿಗೆ ಅನ್ವಯಿಸಿದಂತೆ ಸ್ವಾಯತ್ತತೆಯೆಂದರೆ ಸಂಸ್ಥೆಯಿಂದಲೇ ತನ್ನ ಮೇಲ್ವಿಚಾರಣೆ, ನಿಯತ್ರಣ ಮತ್ತು ನಿರ್ದೇಶನ ಎಂದು ಅರ್ಥವಾಗುತ್ತದೆ. ಸ್ವಾಯತ್ತ ಸಂಸ್ಥೆ ತನ್ನ ಧ್ಯೇಯಧೋರಣೆಗಳನ್ನು, ಉದ್ದೇಶಗಳನ್ನು ತಾನೇ ನಿರೂಪಿಸಿಕೊಳ್ಳುತ್ತದೆ. ಶೈಕ್ಷಣಿಕ ಸಂಸ್ಥೆಯಾಗಿದ್ದಲ್ಲಿ ಪಠ್ಯಕ್ರಮವನ್ನು ತಾನೇ ರೂಪಿಸಿಕೊಳ್ಳುತ್ತದೆ, ಬೋಧನ ವಿಧಾನಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಬೋಧನ ಸಾಮಗ್ರಿಯನ್ನು ಹೊಂದಿಸಿಕೊಳ್ಳುತ್ತದೆ. ತನ್ನದೇ ಆದ ಮೌಲ್ಯಮಾಪನ ವಿಧಾನಗಳನ್ನು ಆಯ್ಕೆಮಾಡಿಕೊಳ್ಳುತ್ತದೆ ಮತ್ತು ಸಂಸ್ಥೆಯ ಕಾರ್ಯಕಲಾಪಗಳ ಬಗ್ಗೆ ಎಲ್ಲಾ ವಿಧವಾಗಿ ಮುಖ್ಯ ತೀರ್ಮಾನಗಳನ್ನು ತಾನೇ ತೆಗೆದುಕೊಳ್ಳುತ್ತದೆ. ಇಂಥ ಸ್ವಾಯತ್ತ ಸಂಸ್ಥೆಯು ಎಲ್ಲಾ ಜವಾಬ್ದಾರಿಗಳನ್ನು ಒಪ್ಪಿಕೊಳ್ಳುವುದಲ್ಲದೆ, ತನ್ನ ಚಟುವಟಿಕೆಗಳಿಗೆ (ಕಾರ್ಯವಿಧಾನಕ್ಕೆ) ತನ್ನ ಹೊಣೆಗಾರಿಕೆಯನ್ನು ಅರಿತಿರುತ್ತದೆ. ಆದ್ದರಿಂದ ಸ್ವಾಯತ್ತ ಸಂಸ್ಥೆ ಸ್ವಮೌಲ್ಯಮಾಪನಕ್ಕಾಗಿ ಮತ್ತು ತನ್ನ ಸ್ವಾಯತ್ತತೆಯ ಸೂಕ್ತ ಉಪಯೋಗಕ್ಕಾಗಿ, ತನ್ನ ಜವಾಬ್ದಾರಿಗಳ ನಿರ್ವಹಣೆಯ ಮೌಲ್ಯಮಾಪನದ ಕಾರ್ಯಕ್ರಮವೊಂದನ್ನು ರೂಪಿಸಿಕೊಂಡು, ಅದರ ಆಧಾರದ ಮೇಲೆ ಸ್ವಮೌಲ್ಯಮಾಪನ ಮಾಡಿಕೊಳ್ಳಬೇಕು ಮತ್ತು ಇದರ ಫಲಿತಾಂಶದ ಆಧಾರದ ಮೇಲೆ ತನ್ನ ದೋಷಗಳನ್ನು ತಿದ್ದಿಕೊಳ್ಳಬೇಕು. ಸ್ವಾಯತ್ತ ಸಂಸ್ಥೆಗಳು ತಮ್ಮ ಸ್ವಾಯತ್ತತೆಯನ್ನು ಸರಿಯಾದ ರೀತಿಯಲ್ಲಿ ಪ್ರಭಾವಯುತವಾಗಿ ಉಪಯೋಗಿಸಿಕೊಳ್ಳಲು ಪ್ರಯತ್ನಿಸಬೇಕು. ಇದಕ್ಕಾಗಿ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ ಸಾಕಷ್ಟು ಸ್ವಾತಂತ್ರ್ಯವನ್ನು

ನೀಡಿ, ಅವರಲ್ಲಿ ಸ್ವಾಯತ್ತ ಯೋಚನೆ, ವರ್ತನೆಯನ್ನು ಪ್ರೋತ್ಸಾಹಿಸಬೇಕು. ವ್ಯಕ್ತಿಗತ ಸ್ವಾಯತ್ತತೆಗೂ, ಸಾಂಸ್ಥಿಕ ಸ್ವಾಯತ್ತತೆಗೂ ನಿಕಟವಾದ ಸಂಬಂಧವಿದೆ. ಏಕೆಂದರೆ ಸ್ವಾಯತ್ತ ಸಂಸ್ಥೆಯ ಯಶಸ್ಸು ಜವಾಬ್ದಾರಿಯನ್ನು ಸ್ವೀಕರಿಸಿ, ತಮ್ಮ ಕರ್ತವ್ಯಗಳನ್ನು ಪ್ರಭಾವಯುತವಾಗಿ ನೆರವೇರಿಸುವ ಸ್ವಾಯತ್ತ ವ್ಯಕ್ತಿಗಳನ್ನು ಅವಲಂಬಿಸಿರುತ್ತದೆ.

ಸ್ವಾಯತ್ತತೆಯ ವಿಧಗಳು :

ಸ್ವಾಯತ್ತತೆಯ ಪರಿಕಲ್ಪನೆಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಅರ್ಥೈಸಲಾಗುತ್ತದೆ. ಕೆಲವು ಲೇಖಕರು ಬೇರೆ ಬೇರೆ ರೀತಿಯ ಸ್ವಾಯತ್ತತೆಯನ್ನು ವರ್ಗೀಕರಿಸಲು ಪ್ರಯತ್ನಿಸಿದ್ದಾರೆ. ಈ ಕೆಳಗಿನ ತಾಲಿಕೆ ಸ್ವಾಯತ್ತತೆಯ ವಿಧಗಳನ್ನು ತೋರಿಸುತ್ತದೆ.

ಸ್ವಾಯತ್ತತೆ

ಸಾಂಸ್ಥಿಕ ಸ್ವಾಯತ್ತತೆ | ವ್ಯಕ್ತಿಗತ ಸ್ವಾಯತ್ತತೆ

ಬಾಹ್ಯ ಸ್ವಾಯತ್ತತೆ [ಬೋಧಕ, ವಿದ್ಯಾರ್ಥಿಗಳ] ಸ್ವಾಯತ್ತತೆ] | ಆಂತರಿಕ ಸ್ವಾಯತ್ತತೆ | ವೃತ್ತಿ ಸಂಬಂಧಿ ಸ್ವಾಯತ್ತತೆ | ವ್ಯಕ್ತಿಗತ ಸ್ವಾಯತ್ತತೆ

ಸಂಪೂರ್ಣ (ವಾಸ್ತವಿಕ) ಸ್ವಾಯತ್ತತೆ | ಕಾರ್ಯವೈಧಾನಿಕ ಸ್ವಾಯತ್ತತೆ

ಪ್ರಾಥಮಿಕ ಸ್ವಾಯತ್ತತೆ | ಆನುಷಂಗಕ ಸ್ವಾಯತ್ತತೆ

ನ್ಯಾಯಿಕ ಸ್ವಾಯತ್ತತೆ

ಪ್ರಕಟಿತ ಸ್ವಾಯತ್ತತೆ | ಅಪ್ರಕಟಿತಸ್ವಾಯತ್ತತೆ

ನಿಯಮಾಧೀನವಲ್ಲದ ಸ್ವಾಯತ್ತತೆ | ನಿಯಮಾಧೀನ ಸ್ವಾಯತ್ತತೆ

ಇವುಗಳ ಸಂಕ್ಷಿಪ್ತ ವಿವರಣೆಯನ್ನು ಈ ಮುಂದೆ ಕೊಡಲಾಗಿದೆ.

1. ವ್ಯಕ್ತಿಗತ ಸ್ವಾಯತ್ತತೆಯನ್ನು ಹೊಂದಿರುವ ವ್ಯಕ್ತಿ ಬೇರೆಬೇರೆ ಸಂದರ್ಭಗಳಲ್ಲಿ ಸ್ವಾಯತ್ತ ರೀತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಂಡು, ಆಯ್ಕೆಗಳನ್ನು ಮಾಡುತ್ತಾನೆ.

2. ಇಂಜಿನಿಯರುಗಳು, ವೈದ್ಯರು, ಅಧ್ಯಾಪಕರು, ಲೆಕ್ಕ ಪರೀಕ್ಷಕರು ಮುಂತಾದವರ ವೃತ್ತಿ ಸಮೂಹಗಳು ತಮ್ಮದೇ ಆದ ರೀತಿಯಲ್ಲಿ ಸ್ವಾಯತ್ತತೆಯನ್ನು ಉಳಿಸಿಕೊಂಡಿರುತ್ತವೆ. ಇದಕ್ಕೆ ವೃತ್ತಿ ಸ್ವಾಯತ್ತತೆ ಎಂದು ಹೆಸರು. ಪ್ರತಿಯೊಂದು ವೃತ್ತಿಯೂ ತನ್ನದೇ ಆದ ಸಂಘಟನೆಯನ್ನು ಹೊಂದಿದ್ದು ಈ ಸಂಘಟನೆಯು ವೃತ್ತಿಗೆ ಸಂಬಂಧಿಸಿದ ಮುಖ್ಯ ವಿಷಯಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ಕೈಗೊಳ್ಳುತ್ತದೆ. ವೃತ್ತಿಗತ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಲು ಪ್ರತಿಯೊಂದು ವೃತ್ತಿ ಸಂಘಟನೆ ಆಂತರಿಕ ನಿಯಂತ್ರಣ ವಿಧಾನಗಳನ್ನು ರೂಪಿಸಿಕೊಂಡಿರುತ್ತದೆ. ವೃತ್ತಿಗೆ ಸೇರುವ ಪ್ರತಿಯೊಬ್ಬ ಸದಸ್ಯನೂ ನಿಯಂತ್ರಣ ವಿಧಾನಕ್ಕೆ ಬದ್ಧನಾಗಿರಬೇಕಾಗುತ್ತದೆ.

3. ಶೈಕ್ಷಣಿಕ ಸಂಸ್ಥೆಯಲ್ಲಿ ಕೆಲವು ಆಂತರಿಕ ವಿಷಯಗಳಲ್ಲಿ ಇರುವ ಸ್ವಾಯತ್ತತೆಗೆ ಆಂತರಿಕ ಸ್ವಾಯತ್ತತೆ ಎಂದು ಹೆಸರು, ಇದರಲ್ಲಿ ಎರಡು ಬಗೆ–ಬೋಧಕರ ಸ್ವಾಯತ್ತತೆ ಮತ್ತು ವಿದ್ಯಾರ್ಥಿಗಳಿಗಿರುವ ಸ್ವಾಯತ್ತತೆ. ಬೋಧಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪರಿಸ್ಥಿತಿಗೆ ಯೋಗ್ಯವಾದ ನಿರ್ಣಯ ತೆಗೆದುಕೊಳ್ಳುವ, ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಇರುವ ಅವಕಾಶ ಆಂತರಿಕ ಸ್ವಾಯತ್ತತೆಯನ್ನು ಸೂಚಿಸುತ್ತದೆ. ಬೋಧಕರ ಸ್ವಾಯತ್ತತೆಯು ಒಂದು ಮುಖ್ಯ ಅಂಶವೇ ಶೈಕ್ಷಣಿಕ ಸ್ವಾತಂತ್ರ್ಯ (Academic Freedom). ಬೋಧಕರಿಗೆ ತಮಗೆ ಸರಿಕಾಣಿಸಿದ, ತಾವು ಕಂಡುಕೊಂಡ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸುವ, ಭಾಷಣ, ಲೇಖನಗಳ ಮೂಲಕ ವ್ಯಕ್ತಪಡಿಸುವ ಸ್ವಾತಂತ್ರ್ಯವೇ ಶೈಕ್ಷಣಿಕ ಸ್ವಾತಂತ್ರ್ಯವೆನ್ನಿಸುತ್ತದೆ. ಈ ವಿಷಯ ವಿವಾದಾಸ್ಪದವಾಗಿದ್ದು ಸಾಕಷ್ಟು ಚರ್ಚೆಗೆ ಒಳಗಾಗಿದೆ. ಆದರೆ ಶೈಕ್ಷಣಿಕ ಸಂಸ್ಥೆಯ ಪ್ರಗತಿಗೆ ಸಂಸ್ಥೆಯ ಸ್ಥೂಲ ಧ್ಯೇಯ ಧೋರಣೆಗಳ ಪರಿಧಿಯಲ್ಲಿ ಅಧ್ಯಾಪಕರಿಗೆ ಸಾಕಷ್ಟು ವಿಚಾರ ಸ್ವಾತಂತ್ರ್ಯವಿರಬೇಕಾಗುತ್ತದೆ. ಸಂಸ್ಥೆಯ ಕಾರ್ಯಕ್ರಮ ರೂಪಿಸುವುದರಲ್ಲಿ ಬೋಧಕರು ವಿಚಾರಗಳ ಅಭಿವ್ಯಕ್ತಿಗೆ ಅವಕಾಶವಿರಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ವಿಕಾಸಕ್ಕೆ ಪೂರಕವಾಗುವ ರೀತಿಯಲ್ಲಿ ವಿಚಾರ ಸ್ವಾತಂತ್ರ್ಯವಿರಬೇಕಾಗುತ್ತದೆ. ಸಂಸ್ಥೆಯ ಧ್ಯೇಯ ನಿರೂಪಣೆಯಲ್ಲಿ, ಕಾರ್ಯಕ್ರಮ ರೂಪಿಸುವಲ್ಲಿ, ಕಾರ್ಯಕ್ರಮಗಳನ್ನು ಯೋಚಿಸುವುದರಲ್ಲಿ, ಬೋಧನ ಸಾಮಗ್ರಿಯ ತಯಾರಿಕೆಯಲ್ಲಿ ಮತ್ತು ಮೌಲ್ಯಮಾಪನ ವಿಧಾನದ ಆಯ್ಕೆಯಲ್ಲಿ ಬೋಧಕರ ಮತ್ತು ವಿದ್ಯಾರ್ಥಿಗಳ ಅಭಿಪ್ರಾಯಗಳಿಗೆ ಅವಕಾಶ ಮತ್ತು ಮನ್ನಣೆ ದೊರೆಯುವಂತಾಗಬೇಕು.

4. ಸಂಪೂರ್ಣ(ವಾಸ್ತವಿಕ) ಸ್ವಾಯತ್ತತೆ ಇರುವ ಸಂಸ್ಥೆಗೆ ಮುಖ್ಯ ವಿಷಯಗಳಲ್ಲಿ ತನ್ನದೇ ಆದ ತೀರ್ಮಾನವನ್ನು ಕೈಗೊಳ್ಳುವ ಸಂಪೂರ್ಣ ಸ್ವಾತಂತ್ರ್ಯವಿರು

ತ್ತದೆ. ಅಧ್ಯಾಪಕರ ನೇಮಕಾತಿ, ವಿದ್ಯಾರ್ಥಿಗಳ ಆಯ್ಕೆ, ಸಂಶೋಧನೆ, ಸಂಸ್ಥೆಯ ಧ್ಯೇಯ ಧೋರಣೆಗಳನ್ನು ನಿರೂಪಿಸುವಿಕೆ, ಪಠ್ಯಕ್ರಮ ವಿಕಾಸ, ಮೌಲ್ಯಮಾಪನ, ಶುಲ್ಕ ನಿರ್ಧಾರ ಮತ್ತು ಹಣಕಾಸಿನ ವೆಚ್ಚ ಇವುಗಳ ಬಗ್ಗೆ ತೀರ್ಮಾನ ತೆಗೆದು ಕೊಳ್ಳುವ ಸ್ವಾತಂತ್ರ್ಯವಿರುತ್ತದೆ. ಈ ರೀತಿಯ ಸ್ವಾಯತ್ತತೆಯನ್ನು ಪಡೆದ ಸಂಸ್ಥೆಗಳು ನಿಜವಾದ ಅರ್ಥದಲ್ಲಿ ಸ್ವಾಯತ್ತ ಸಂಸ್ಥೆಗಳೆನ್ನಿಸಿಕೊಳ್ಳುತ್ತವೆ.

5 ನಮ್ಮ ದೇಶದಲ್ಲಿ ಹೆಚ್ಚು ಶೈಕ್ಷಣಿಕ ಸಂಸ್ಥೆಗಳಿಗೆ ಈ ರೀತಿಯ ಸ್ವಾಯತ್ತತೆ ಇಲ್ಲ. ಮುಖ್ಯ ವಿಷಯಗಳಲ್ಲಿ ಪ್ರಧಾನ ವೈಧಾನಿಕ ಸಂಸ್ಥೆ (ವಿಶ್ವವಿದ್ಯಾಲಯ ಅನುದಾನ ಆಯೋಗ, ವಿಶ್ವವಿದ್ಯಾನಿಲಯಗಳು, ಶಿಕ್ಷಣ ಇಲಾಖೆ, ಸರ್ಕಾರ ಇತ್ಯಾದಿ) ತೀರ್ಮಾನ ತೆಗೆದುಕೊಂಡು, ಇವುಗಳಿಗೆ ಸಂಬಂಧಿಸಿದಂತೆ ಕೆಲವು ನಿಯಮಗಳನ್ನು ರೂಪಿಸುತ್ತದೆ. ಇವುಗಳ ಅಧೀನದಲ್ಲಿ ಬರುವ ಸಂಸ್ಥೆಗಳು ಈ ನಿಯಮಗಳಿಗೆ ಒಳಪಟ್ಟು ಕೆಲಸಮಾಡಬೇಕಾಗುತ್ತದೆ. ಆದರೆ ಈ ನಿಯಮಗಳಿಗೆ ಧಕ್ಕೆಯುಂಟಾಗದ ರೀತಿಯಲ್ಲಿ ತಮ್ಮದೇ ಆದ ಕಾರ್ಯ ವಿಧಾನವನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವಿರುತ್ತದೆ. ಈ ರೀತಿಯ ಸ್ವಾಯತ್ತತೆಗೆ ಕಾರ್ಯವೈಧಾನಿಕ ಸ್ವಾಯತ್ತತೆ ಎಂದು ಕರೆಯಲಾಗಿದೆ. ವಿದ್ಯಾರ್ಥಿಗಳ ಆಯ್ಕೆ, ವೇಳಾಪಟ್ಟಿ, ಬೋಧನ ಸಾಮಗ್ರಿಗಳ ಆಯ್ಕೆ ಮತ್ತು ತಯಾರಿಕೆ, ಅನುದಾನ ಪಡೆದ ಹಣವನ್ನು ಖರ್ಚುಮಾಡುವರೀತಿ ಮುಂತಾದವುಗಳಲ್ಲಿ ಸಂಸ್ಥೆ ಸ್ವತಂತ್ರವಾಗಿರುತ್ತದೆ. ಈ ರೀತಿಯ ಸ್ವಾಯತ್ತತೆಯಿರುವ ಸಂಸ್ಥೆ ಕೆಲವು ನಿರ್ಬಂಧಗಳಿಗೆ ಒಳಪಟ್ಟು ಕೆಲಸಮಾಡಬೇಕಾಗುತ್ತದೆ. ವಾಸ್ತವಿಕ ಸ್ವಾಯತ್ತತೆಯನ್ನು ಪ್ರಾಥಮಿಕ ಸ್ವಾಯತ್ತತೆಯೆಂದೂ, ಕಾರ್ಯ ವೈಧಾನಿಕ ಸ್ವಾಯತ್ತತೆಯನ್ನು ಆನುಷಂಗಿಕ ಸ್ವಾಯತ್ತತೆಯೆಂದೂ ಕೆಲವರು ಹೆಸರಿಸುತ್ತಾರೆ. ಉದಾಹರಣೆಗೆ ಪಠ್ಯಕ್ರಮದಲ್ಲಿ ಹೊಸ ಬೋಧನ ವಿಷಯವನ್ನು ಸೇರಿಸುವುದು, ಯಾವುದಾದರೂ ಒಂದು ಬಾಬಿಗೆ ಅನುದಾನ ಮಂಜೂರು ಮಾಡುವುದು ಪ್ರಾಥಮಿಕ ಸ್ವಾಯತ್ತತೆಯ ವ್ಯಾಪ್ತಿಯಲ್ಲಿ ಬಂದರೆ, ಹೊಸ ಬೋಧನೆ ವಿಷಯದ ವಿಷಯ ವಸ್ತುವಿನ ಆಯ್ಕೆ, ಬೋಧನ ವಿಧಾನ, ಅನುದಾನ ಪಡೆದ ಹಣವನ್ನು ವೆಚ್ಚಮಾಡುವ ರೀತಿ ಆನುಷಂಗಿಕ ಸ್ವಾಯತ್ತತೆಯ ವ್ಯಾಪ್ತಿಯಲ್ಲಿ ಬರುತ್ತವೆ.

ಸಂಸ್ಥೆಗಳಿಗೆ ಕಾಯ್ದೆಯ ಮೂಲಕ ಸ್ವಾಯತ್ತತೆಯನ್ನು ನೀಡಿ ಅದರ ಕಾರ್ಯ ವ್ಯಾಪ್ತಿಯನ್ನು ಸ್ಪಷ್ಟವಾಗಿ ನಿರೂಪಿಸಿದ್ದಲ್ಲಿ ಆ ಸಂಸ್ಥೆ ಪ್ರಕಟಿತ ಸ್ವಾಯತ್ತತೆಯನ್ನು ಹೊಂದಿದೆ ಎನ್ನಬಹುದು. ಈ ರೀತಿಯ ಸ್ವಾಯತ್ತತೆಯನ್ನು ಸಂವಿಧಾನದ ತಿದ್ದುಪಡಿ, ಕಾಯ್ದೆ, ಸನ್ನದು (ಚಾರ್ಟರ್) ಅಥವಾ ಇತರ ಶಾಸನಬದ್ಧ ರೀತಿಯಲ್ಲಿ ಸಂಸ್ಥೆಗಳಿಗೆ ನೀಡಲಾಗುತ್ತದೆ. ನಮ್ಮ ದೇಶದ ವಿಶ್ವವಿದ್ಯಾನಿಲಯಗಳು, ಕೇಂದ್ರೀಯ ಸಂಸ್ಥೆಗಳು ಪ್ರಕಟಿತ ಸ್ವಾಯತ್ತತೆಯನ್ನು ಹೊಂದಿವೆ. ಕೆಲವು ಸಂದರ್ಭಗಳಲ್ಲಿ ಸಂಸ್ಥೆ ಹೊರಗಣ ನಿಯಂತ್ರಣಕ್ಕೆ ಒಳಪಟ್ಟಿದ್ದರೂ (ಅಂದರೆ ಬಹಿರಾಯತ್ತವಾಗಿದ್ದರೂ), ವ್ಯಾವಹಾರಿಕವಾಗಿ ಅನೇಕ ತೀರ್ಮಾನಗಳನ್ನು ತಾನೇ ತೆಗೆದುಕೊಳ್ಳುವುದರಲ್ಲಿ

ಸ್ವತಂತ್ರವಾಗಿರುತ್ತದೆ. ಸಂಸ್ಥೆಯ ಆಂತರಿಕ ವಿಚಾರಗಳಲ್ಲಿ ನಿಯಂತ್ರಕ ಸಂಸ್ಥೆ ಸಾಮಾನ್ಯವಾಗಿ ಹಸ್ತಕ್ಷೇಪ ಮಾಡುವುದಿಲ್ಲ. ಇಂಥ ಸ್ವಾಯತ್ತತೆಯನ್ನು ಅಪ್ರಕಟಿತ ಸ್ವಾಯತ್ತತೆಯೆಂದು ಹೇಳಬಹುದು. ಇದು ಒಂದು ರೀತಿಯಲ್ಲಿ ಸಂಪೂರ್ಣ ಸ್ವಾಯತ್ತತೆ ಮತ್ತು ಕಾರ್ಯ ವೈಧಾನಿಕ ಸ್ವಾಯತ್ತತೆಯ ನಡುವಣ ಸ್ಥಿತಿಯಾಗುತ್ತದೆ.

ಸಂಸ್ಥೆಯೊಂದಕ್ಕೆ ಯಾವುದೇ ರೀತಿಯ ನಿಬಂಧನೆ ಅಥವಾ ಷರತ್ತುಗಳಿಲ್ಲದೆ ಸ್ವಾಯತ್ತತೆ ನೀಡಿದರೆ ಅದು ನಿಯಮಾಧೀನವಲ್ಲದ ಸ್ವಾಯತ್ತತೆಯೆನಿಸುತ್ತದೆ. ಆದರೆ ಈ ರೀತಿಯ ಸ್ವಾಯತ್ತತೆ ಎಲ್ಲಾ ಸಂದರ್ಭಗಳಲ್ಲಿ ಸಾಮಾನ್ಯವಾಗಿ ದೊರೆಯುವುದಿಲ್ಲ. ಪ್ರಧಾನ ಸಂಸ್ಥೆ ಅಧೀನ ಸಂಸ್ಥೆಗೆ ಸೀಮಿತ ಅವಧಿಯವರೆಗೆ ಕೆಲವು ನಿಯಮ (ಷರತ್ತು)ಗಳಿಗೆ ಒಳಪಟ್ಟು ಸ್ವಾಯತ್ತತೆ ನೀಡುತ್ತದೆ. ಇದಕ್ಕೆ ನಿಯಮಾಧೀನ ಸ್ವಾಯತ್ತತೆಯೆಂದು ಕರೆಯಲಾಗುತ್ತದೆ. ಈ ಅವಧಿಯನಂತರ ಸಂಸ್ಥೆ ಯಾವ ರೀತಿಯಲ್ಲಿ ಸ್ವಾಯತ್ತತೆಯನ್ನು ತನ್ನ ಪ್ರಗತಿಗೆ ಉಪಯೋಗಿಸಿಕೊಂಡಿದೆಯೆನ್ನುವುದನ್ನು ಮೌಲ್ಯಮಾಪನಮಾಡಿ, ಸಂಸ್ಥೆ ಸ್ವಾಯತ್ತತೆಯನ್ನು ತೃಪ್ತಿಕರವಾಗಿ ಉಪಯೋಗಿಸಿಕೊಂಡಿದ್ದಲ್ಲಿ, ಅದರ ಸ್ವಾಯತ್ತತೆಯನ್ನು ಮುಂದುವರಿಸಬಹುದು. ಸ್ವಾಯತ್ತತೆ ದುರುಪಯೋಗವಾಗಿದ್ದಲ್ಲಿ ಅದನ್ನು ರದ್ದುಮಾಡಲಾಗುತ್ತದೆ. ಒಮ್ಮೆಗೇ ಸ್ವಾಯತ್ತತೆ ನೀಡುವುದಕ್ಕಿಂತ ನಿಯಮಾಧೀನ ಸ್ವಾಯತ್ತತೆ ನೀಡುವುದು ಉತ್ತಮ ವಿಧಾನವಾಗಿದೆ.

ಭಾರತದಲ್ಲಿ ಸ್ವಾಯತ್ತ ಕಾಲೇಜುಗಳು :

ವಿಶ್ವವಿದ್ಯಾಲಯದ ಅನುದಾನ ಆಯೋಗದ ಅಧೀನದಲ್ಲಿ ಬರುವ ಕಾಲೇಜುಗಳಿಗೆ ಸ್ವಾಯತ್ತತೆಯನ್ನು ನೀಡಬೇಕೆನ್ನುವ ವಿಚಾರ ಭಾರತದಲ್ಲಿ ಇತ್ತೀಚಿನ ಬೆಳವಣಿಗೆ. ಕೊಠಾರಿ ಶಿಕ್ಷಣ ಆಯೋಗ (1964–65) ಪ್ರಥಮ ಬಾರಿಗೆ ಈ ವಿಷಯವನ್ನು ಪರಿಗಣಿಸಿ ಕೆಲವು ಶಿಫಾರಸುಗಳನ್ನು ಮಾಡಿತು. ಶಿಕ್ಷಣದಲ್ಲಿ ಉತ್ಕೃಷ್ಟತೆ ಮತ್ತು ಪಾಂಡಿತ್ಯದ ಬೆಳವಣಿಗೆಗೆ ಸೂಕ್ತವಾದ ಬೌದ್ಧಿಕ ಪರಿಸರವನ್ನು ಸೃಷ್ಟಿಸುವುದರಲ್ಲಿ ಅಧ್ಯಾಪಕರಿಗೆ ಶೈಕ್ಷಣಿಕ ಸ್ವಾತಂತ್ರ್ಯದ ಮಹತ್ವವನ್ನು ಆಯೋಗ ಗುರ್ತಿಸಿತು. ಇದಕ್ಕೆ ಪೂರಕವಾಗುವಂತೆ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವುದರ ಬಗ್ಗೆಯೂ ಆಯೋಗ ಚರ್ಚಿಸಿ, ಕೆಲವು ನಿಬಂಧನೆಗಳಿಗೆ ಒಳಪಟ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಸಾಮರ್ಥ್ಯವನ್ನು ಹೊಂದಿರುವ ಆಯ್ದ ಕಾಲೇಜುಗಳಿಗೆ ಸ್ವಾಯತ್ತತೆ ನೀಡಬೇಕೆಂದು ಶಿಫಾರಸು ಮಾಡಿತು. ವಿಶ್ವವಿದ್ಯಾಲಯ ಅನುದಾನ ಆಯೋಗ ಈ ದಿಶೆಯಲ್ಲಿ ಕಾರ್ಯ ಪ್ರವೃತ್ತವಾಗಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕೆಲವು ಕಾಲೇಜುಗಳಿಗೆ ಸ್ವಾಯತ್ತತೆ ನೀಡಿತು. ಆದರೆ ಅನೇಕ ರಾಜ್ಯಗಳು ಸ್ವಾಯತ್ತ ಕಾಲೇಜುಗಳು ಅಸ್ತಿತ್ವಕ್ಕೆ ಬರುವುದಕ್ಕೆ ಬೇಕಾದ ತಮ್ಮ ವಿಶ್ವವಿದ್ಯಾಲಯಗಳ

ಕಾಯ್ದೆಯಲ್ಲಿ ಬದಲಾವಣೆಗಳನ್ನು ಮಾಡದಿದ್ದುದರಿಂದ ಹೆಚ್ಚು ಕಾಲೇಜುಗಳು ಸ್ವಾಯತ್ತತೆ ಪಡೆಯಲಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿ (1986) ಪ್ರಕಟಗೊಳ್ಳುವ ವೇಳೆಗೆ ಮೊದಲು ಕೇವಲ ತಮಿಳುನಾಡಿನಲ್ಲಿ ಇದ್ದ 19 ಸ್ವಾಯತ್ತ ಕಾಲೇಜುಗಳ ಸಂಖ್ಯೆ 96ಕ್ಕೆ ಏರಿತು. ಈಗ ಇಡೀ ದೇಶದಲ್ಲಿ ಕೇವಲ 5 ರಾಜ್ಯಗಳಲ್ಲಿ ಸ್ವಾಯತ್ತ ಕಾಲೇಜುಗಳು ಅಸ್ತಿತ್ವಕ್ಕೆ ಬಂದಿವೆ. ಅವುಗಳ ವಿವರ ಈ ರೀತಿ ಇದೆ—ಆಂಧ್ರ ಪ್ರದೇಶ 21, ಗುಜರಾತ್ 1, ಮಧ್ಯಪ್ರದೇಶ 26, ತಮಿಳುನಾಡು 43 ಮತ್ತು ರಾಜಸ್ಥಾನ 5, ಉಳಿದ ರಾಜ್ಯಗಳಲ್ಲಿ ಸ್ವಾಯತ್ತ ಕಾಲೇಜುಗಳ ಸ್ಥಾಪನೆಯು ಪ್ರಸ್ತುತ ಬೇರೆ ಬೇರೆ ಹಂತಗಳಲ್ಲಿದೆ. ಕೆಲವು ರಾಜ್ಯಗಳು ಈ ದಿಶೆಯಲ್ಲಿ ತಮ್ಮ ವಿಶ್ವವಿದ್ಯಾನಿಲಯಗಳ ಕಾಯ್ದೆಯಲ್ಲಿ ಸ್ವಾಯತ್ತ ಕಾಲೇಜುಗಳ ಸ್ಥಾಪನೆಗೆ ಅವಕಾಶ ಕಲ್ಪಿಸಿದ್ದರೆ, ಇನ್ನು ಕೆಲವು ರಾಜ್ಯಗಳು ಈ ಪ್ರಸ್ತಾವನೆಯನ್ನು ಒಪ್ಪಿಕೊಂಡಿಲ್ಲ. ಕರ್ನಾಟಕ ರಾಜ್ಯ ಸ್ವಾಯತ್ತ ಕಾಲೇಜುಗಳ ಸ್ಥಾಪನೆಯಲ್ಲಿ ತಾತ್ವಿಕವಾಗಿ ಒಪ್ಪಿಕೊಂಡಿದ್ದರೂ, ಅದಕ್ಕೆ ಬೇಕಾದ ನಿಯಮಾವಳಿಗಳು ಇನ್ನೂ ಪೂರ್ಣವಾಗಿ ರೂಪುಗೊಂಡಿಲ್ಲ.

ರಾಷ್ಟ್ರೀಯ ಶಿಕ್ಷಣ ನೀತಿ (1986) ಪುನಃ ಸ್ವಾಯತ್ತ ಕಾಲೇಜುಗಳ ಸ್ಥಾಪನೆಗೆ ಒತ್ತುಕೊಟ್ಟಿದೆ. ಹಂತ ಹಂತವಾಗಿ ವಿಶ್ವವಿದ್ಯಾನಿಲಯಗಳು ಹೆಚ್ಚು ಹೆಚ್ಚು ಕಾಲೇಜುಗಳಿಗೆ ಸ್ವಾಯತ್ತತೆ ನೀಡಬೇಕೆಂದು ಅದು ಸಲಹೆಮಾಡಿದೆ. ಸ್ವಾಯತ್ತ ಕಾಲೇಜುಗಳ ಗುಣಮಟ್ಟವನ್ನು ಮೌಲ್ಯ ಮಾಪನ ಮಾಡಲು ಅನುಕೂಲವಾಗುವಂತೆ, ಗೌರಿಕರ್ ಸಮಿತಿಯ ಶಿಫಾರಸ್ಸಿನಂತೆ ಸ್ವತಂತ್ರವಾದ ರಾಷ್ಟ್ರೀಯ ಮಟ್ಟದ 'ರಾಷ್ಟ್ರೀಯ ಯೋಗ್ಯತಾ ಸಮಿತಿ' ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ಸಂಬಂಧಿಸಿದಂತೆ 1988ರ ಅಂತ್ಯದಲ್ಲಿ ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ವಿಚಾರಗೋಷ್ಠಿ ನಡೆದು ಈ ಸಂಬಂಧವಾಗಿ ಸಲಹೆಗಳನ್ನು ನೀಡಲಾಯಿತು.* ವಿಶ್ವವಿದ್ಯಾಲಯ ಅನುದಾನ ಆಯೋಗ 1986ರಲ್ಲಿ ಸ್ವಾಯತ್ತ ಕಾಲೇಜುಗಳ ಸ್ಥಾಪನೆಗೆ ಬೇಕಾದ ತನ್ನ ನಿಯಮಾವಳಿಗಳ ವಿವರಗಳನ್ನೊಳಗೊಂಡ ಪ್ರಕಟಣೆಯೊಂದನ್ನು ಹೊರತಂದಿದೆ. ಈ ಪರಿಷ್ಕೃತ ನಿಯಮಾವಳಿ ಸ್ವಾಯತ್ತ ಕಾಲೇಜುಗಳ ಸ್ಥಾಪನೆಗೆ ಬೇಕಾದ ಎಲ್ಲಾ ವಿವರಗಳನ್ನು ನೀಡುತ್ತದೆ.

ಸ್ವಾಯತ್ತತೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ ಶಿಕ್ಷಣದ ಗುಣಮಟ್ಟ ಸುಧಾರಿಸುವುದು ಸಾಧ್ಯವಿದೆ. ಇದಕ್ಕೆ ಸಾಕಷ್ಟು ಸಂಪನ್ಮೂಲಗಳು ಬೇಕಾಗುವುದರ ಜೊತೆಗೆ, ಸಂಸ್ಥೆಯ ಸದಸ್ಯರು ಸ್ವಾಯತ್ತತೆಯ ಅರ್ಥವನ್ನು ಸರಿಯಾಗಿ ತಿಳಿದುಕೊಂಡು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾಗುತ್ತದೆ. ಇಲ್ಲವಿದ್ದಲ್ಲಿ ಸ್ವಾಯತ್ತತೆ ದುರುಪಯೋಗವಾಗುವ ಸಾಧ್ಯತೆ ಇದೆ. ಸ್ವಾಯತ್ತ

*ನೋಡಿ : ಡಾ. ಕೆ. ಯಶೋಧರ—ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣಕ್ಕಾಗಿ ಯೋಗ್ಯತಾ ದೃಢೀಕರಣ ಹಾಗೂ ಮಾಪನ ಮಂಡಳಿ ; ಮಾನವಿಕ ಕರ್ನಾಟಕ, ಸಂಪುಟ ೧೮, ಸಂಚಿಕೆಗಳು : ೨, ೩ (ಸಂಯುಕ್ತ), ೧೯೮೮.

ಕಾಲೇಜುಗಳ ಕಾರ್ಯವನ್ನು ಮೌಲ್ಯ ಮಾಪನಮಾಡಿ ಅವುಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ರಾಷ್ಟ್ರೀಯ ಮಟ್ಟದ ಸಂಸ್ಥೆಯೊಂದರ ಆವಶ್ಯಕತೆ ಇದೆ. ತಮಿಳು ನಾಡಿನಲ್ಲಿ ಅಸ್ತಿತ್ವಕ್ಕೆ ಬಂದಿರುವ ಕೆಲವು ಸ್ವಾಯತ್ತ ಕಾಲೇಜುಗಳು ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬಂದಿದೆ.

ಉತ್ತರದಾಯಿತ್ವದ ಅರ್ಥ: ಉತ್ತರದಾಯಿತ್ವ ಅಥವಾ ಜವಾಬ್ದಾರಿ ಸ್ವಾಯತ್ತತೆಗೆ ಪೂರಕವಾದ ತತ್ವ. ಸ್ವಾಯತ್ತತೆಯ ಜೊತೆಗೆ ಜವಾಬ್ದಾರಿಯೂ ಬರುತ್ತದೆ. ವ್ಯಕ್ತಿ ತನ್ನ ಜವಾಬ್ದಾರಿಯನ್ನು ಅರಿತು ಅದನ್ನು ನಿಭಾಯಿಸದಿದ್ದಲ್ಲಿ ಸ್ವಾಯತ್ತತೆ ಸ್ವಚ್ಛಂದತೆಯಾಗಿ ಪರಿಣಮಿಸಿ ಅರ್ಥಹೀನವಾಗುತ್ತದೆ. ಜವಾಬ್ದಾರಿಯಿಲ್ಲದ ಸ್ವಾಯತ್ತತೆ ಅಪಾಯಕಾರಿಯಾಗಿ ಪರಿಣಮಿಸಬಹುದು. ಸ್ವಾಯತ್ತತೆ ಮತ್ತು ಉತ್ತರದಾಯಿತ್ವ ಎರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

ಸಂಬಂಧಪಟ್ಟ ಹೊರಗಣ ಪ್ರಾಧಿಕಾರಕ್ಕೆ (authority) ಪ್ರಭಾವಶೀಲತೆ ಮತ್ತು ದಕ್ಷತೆಯ ರೂಪದಲ್ಲಿ ಕರ್ತವ್ಯ ನಿರ್ವಹಣೆಯನ್ನು ರುಜುವಾತುಪಡಿಸಬೇಕಾದ ಅಥವಾ ಉತ್ತರಿಸಬೇಕಾದ ಹೊಣೆಗಾರಿಕೆಗೆ ಉತ್ತರದಾಯಿತ್ವ ಎನ್ನಬಹುದು. ಆರ್ಥಿಕ ದೃಷ್ಟಿಯಿಂದ, ಸರಿಯಾದ ಕರ್ತವ್ಯ ನಿರ್ವಹಣೆಯಿಂದ ಸಾರ್ವಜನಿಕ ಹಣದ ವಿನಿಯೋಗದ ಸಾರ್ಥಕತೆಯನ್ನು ಸಿದ್ಧಪಡಿಸಬೇಕಾದ ಹೊಣೆಗಾರಿಕೆಯೇ ಉತ್ತರ ದಾಯಿತ್ವ.

ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಸಾಮಾನ್ಯವಾಗಿ ತನ್ನ ಮೇಲ್ಪಟ್ಟವರ, ಅಂತಿಮವಾಗಿ ಸಮಾಜಕ್ಕೆ ಮತ್ತು ತನ್ನ ಅಂತಃಸಾಕ್ಷಿಗೆ ಬೇರೆಬೇರೆ ಮಟ್ಟಗಳಲ್ಲಿ ತನ್ನ ವರ್ತನೆಯ ಯುಕ್ತಾಯುಕ್ತತೆಯ ಬಗ್ಗೆ ಉತ್ತರದಾಯಿಯಾಗಿರ ಬೇಕಾಗುತ್ತದೆ. ದಾರ್ಶನಿಕ ದೃಷ್ಟಿಯಲ್ಲಿ ಎಲ್ಲರೂ ಯಾವುದೇ ಒಂದು ಸಾರ್ವಭೌಮಿಕ ಸತ್ಯಕ್ಕೆ ಉತ್ತರಿಸಲು ಬದ್ಧರಾಗಿರುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿಯೂ ಉತ್ತರದಾಯಿತ್ವದ ಪ್ರಶ್ನೆ ಹೆಚ್ಚು ಹೆಚ್ಚು ಮಹತ್ವ ಪಡೆಯುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿ, ಮೇಲ್ವಿಚಾರಣಾ ಕ್ಷೇತ್ರದಲ್ಲಿ ಆರ್ಥಿಕ ದೃಷ್ಟಿಯಿಂದ ಮತ್ತು ದಕ್ಷತೆಯ ದೃಷ್ಟಿಯಿಂದ ಉತ್ತರ ದಾಯಿತ್ವಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಉತ್ತರದಾಯಿತ್ವದ ಪ್ರಶ್ನೆಯನ್ನು ಕೈಗಾರಿಕೋದ್ಯಮಗಳಲ್ಲಿರುವಂತೆ ವಾಸ್ತವಿಕ ಉತ್ಪನ್ನದ ದೃಷ್ಟಿಯಿಂದ ಪರಿಗಣಿಸಲು ಸಾಧ್ಯವಿಲ್ಲ. ಇದಕ್ಕಾಗಿ ಬೇರೆ ರೀತಿಯ ಮಾನದಂಡದಿಂದ ಉತ್ತರ ದಾಯಿತ್ವದ ಮೌಲ್ಯ ಮಾಪನ ಮಾಡಬೇಕಾಗುತ್ತದೆ.

ಶೈಕ್ಷಣಿಕ ಸಂದರ್ಭಗಳಲ್ಲಿ ಉತ್ತರದಾಯಿತ್ವದ ಪರಿಭಾಷೆಯನ್ನು ಈ ರೀತಿ ಮಾಡಲಾಗಿದೆ. ಪೌರರಿಂದ ಸಾರ್ವಜನಿಕ ಶೈಕ್ಷಣಿಕ ಸೇವೆಯನ್ನು ಮಾಡಲು ನೇಮಕವಾಗಿರುವವರು ಅಥವಾ ಆ ಸೇವೆಯಲ್ಲಿ ತೊಡಗಿರುವವರು ಶೈಕ್ಷಣಿಕ ಸೇವೆಯ ಫಲಿತಾಂಶಗಳ ಅಥವಾ ಪರಿಣಾಮಗಳ ಜವಾಬ್ದಾರಿಯನ್ನು ಒಪ್ಪಿಕೊಳ್ಳುವುದಕ್ಕೆ

ಉತ್ತರದಾಯಿತ್ವ ಎನ್ನಬಹುದು. ಈ ಪರಿಭಾಷೆಯಲ್ಲಿ ಈ ಕೆಳಗಿನ ನಿಹಿತಾರ್ಥಗಳನ್ನು ಕಾಣಬಹುದು.

1. ಬೋಧನೆಯ ಪ್ರಭಾವಶೀಲತೆಯ ಬಗ್ಗೆ ತಿಳಿದುಕೊಳ್ಳುವ ಹಕ್ಕು ಸಾರ್ವಜನಿಕರಿಗಿದೆ.

2. ಜವಾಬ್ದಾರಿಯನ್ನು ಒಪ್ಪಿಕೊಂಡವರು ಅದನ್ನು ಸರಿಯಾಗಿ ನಿರ್ವಹಿಸದಿದ್ದಲ್ಲಿ ಅವರಿಂದ ವಿವರಣೆ ಕೇಳುವ ಹಕ್ಕು ಸಾರ್ವಜನಿಕರಿಗಿದೆ.

3. ಶೈಕ್ಷಣಿಕ ಕಾರ್ಯಕ್ರಮವನ್ನು ಪುನರ್ವ್ಯವಸ್ಥೆ ಮಾಡುವಂತೆ ಕೇಳುವ ಹಕ್ಕು ಸಾರ್ವಜನಿಕರಿಗಿದೆ.

ಶಿಕ್ಷಣದಲ್ಲಿ ಉತ್ತರದಾಯಿತ್ವದ ಅವಶ್ಯಕತೆ:

ಉತ್ಪನ್ನಾಧರಿತ ಕೈಗಾರಿಕೋದ್ಯಮಗಳಲ್ಲಿರುವಂತೆಯೇ ಶಿಕ್ಷಣದಲ್ಲಿಯೂ ಉತ್ತರದಾಯಿತ್ವದ ಅವಶ್ಯಕತೆಯಿದೆ ಎನ್ನುವುದು ಇತ್ತೀಚೆಗೆ ಮಹತ್ವ ಪಡೆಯುತ್ತಿದೆ. ಇದಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡಬಹುದು.

1. ಶಿಕ್ಷಣಕ್ಕೆ ವಿನಿಯೋಗಿಸುವ ಸಾರ್ವಜನಿಕ ಹಣಕಾಸು ಪ್ರಭಾವಯುತವಾಗಿ ಖರ್ಚಾಗುತ್ತಿದೆಯೆ ಎನ್ನುವ ಬಗ್ಗೆ ಇರುವ ಕಾಳಜಿ

2. ಬಂಡವಾಳ ಹೂಡಿಕೆ ಮತ್ತು ಅದರ ಫಲಿತಾಂಶ (input, output)ಗಳ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಮಟ್ಟವನ್ನು ಹೆಚ್ಚಿಸುವುದು ಅಥವಾ ನಿಯಂತ್ರಿಸುವುದು.

3. ಶಿಕ್ಷಣದ ಸಾಮಾಜಿಕ ಪ್ರತಿಫಲಗಳನ್ನು ನಿಯಂತ್ರಿಸುವುದು.

4. ಸಮಾಜದ ಬೇರೆ ಬೇರೆ ಸಾಮಾಜಿಕ ಆರ್ಥಿಕ ವರ್ಗಗಳಿಗೆ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವುದು.

5. ಅಧ್ಯಯನ ವಿಷಯಗಳ, ಬೋಧನಾ ಕಾರ್ಯಕ್ರಮಗಳ ಪ್ರಭಾವಶೀಲತೆಯ ಬಗ್ಗೆ, ಸಾಂದರ್ಭಿಕತೆಯ ಬಗ್ಗೆ ವಿದ್ಯಾರ್ಥಿಗಳು ಆಗಾಗ್ಗೆ ವ್ಯಕ್ತಪಡಿಸುವ ಅತೃಪ್ತಿ, ಕಾಳಜಿ.

6. ಪಠ್ಯಕ್ರಮ ನವೀಕರಣಕ್ಕೆ, ಹೊಸ ಹೊಸ ವಿಷಯಗಳ ಸೇರ್ಪಡೆಗೆ ಪೋಷಕರ ಒತ್ತಾಯ.

7. ಉನ್ನತ ಶಿಕ್ಷಣ ತಮ್ಮ ವಿಶಿಷ್ಟ ಅವಶ್ಯಕತೆಗಳನ್ನು ಸರಿಯಾಗಿ ತೃಪ್ತಿಪಡಿಸುತ್ತಿಲ್ಲ ಎಂದು ಸಮಾಜದ ಉಪೇಕ್ಷಿತ ಸಮೂಹಗಳು ಮಾಡುವ ಆರೋಪ.

8. ದಿನೇ ದಿನೇ ಹೆಚ್ಚುತ್ತಿರುವ ವಿದ್ಯಾಭ್ಯಾಸದ ಖರ್ಚು (ಬೋಧನ ಶುಲ್ಕ, ಪಠ್ಯಪುಸ್ತಕಗಳು ಮತ್ತು ಇತರ ಖರ್ಚುಗಳು.)

9. ಕೆಲವು ಸಾಮಾನ್ಯ ಹಾಗೂ ನಿರ್ದಿಷ್ಟ ಶೈಕ್ಷಣಿಕ ಪರಿಪಾಟಿಗಳ ಸಂಸ್ಕಾರಯುಕ್ತತೆಯ ಬಗ್ಗೆ ಸಮಾಜ ವ್ಯಕ್ತಪಡಿಸುವ ಸಂಶಯ.

10. ಅಧ್ಯಾಪಕರಿಂದ ಉತ್ತಮ ಸೇವಾ ಸೌಲಭ್ಯಗಳು, ಕಾರ್ಯಭಾರ (work load) ಮತ್ತು ವೃತ್ತಿ ಸ್ವಾತಂತ್ರ್ಯದ ಬೇಡಿಕೆ.

11. ಶಿಕ್ಷಣದಲ್ಲಿ ಹೊಸಹೊಸ ಪದ್ಧತಿಗಳನ್ನು ಪ್ರಾರಂಭಿಸಲು ಅಧ್ಯಾಪಕರು ತೋರಿಸುವ ವಿರೋಧ.

12. ಅಧ್ಯಾಪಕರ ಮೇಲೆ ಆಡಳಿತಾಧಿಕಾರಿಗಳ ನಿಯಂತ್ರಣ ಇಳಿಮುಖ ವಾಗುತ್ತಿರುವುದು ಮತ್ತು ಇದರಿಂದಾಗಿ ಹೊರಗಣ ನಿಯಂತ್ರಣದ ಅವಶ್ಯಕತೆ.

ಶಿಕ್ಷಣದಲ್ಲಿ ಉತ್ತರದಾಯಿತ್ವದ ಹೊಣೆ ಯಾರ ಮೇಲಿರಬೇಕು ಎನ್ನುವುದು ಸ್ವಲ್ಪ ವಿವಾದಾತ್ಮಕ ಪ್ರಶ್ನೆಯಾಗಿದೆ. ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ಮತ್ತು ಶೈಕ್ಷಣಿಕ ಪ್ರಕ್ರಿಯೆಯನ್ನು ಅಮಲುಗೊಳಿಸುವುದರಲ್ಲಿ ಸಂಬಂಧಪಟ್ಟವ ರೆಲ್ಲರೂ ಉತ್ತರದಾಯಿತ್ವದ ಹೊಣೆ ಹೊರಬೇಕಾಗುತ್ತದೆ. ಶಿಕ್ಷಣದ ಧ್ಯೇಯ ಧೋರಣೆಗಳನ್ನು, ಪಠ್ಯಕ್ರಮವನ್ನು ರೂಪಿಸುವವರು, ಶೈಕ್ಷಣಿಕ ಆಡಳಿತಗಾರರು, ಮೇಲ್ವಿಚಾರಕರು, ತರಗತಿಯ ಅಧ್ಯಾಪಕರು, ಶಾಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿ ಗಳು ಎಲ್ಲರೂ ಬೇರೆ ಬೇರೆ ರೀತಿಗಳಲ್ಲಿ, ಉತ್ತರದಾಯಿತ್ವದ ಹೊಣೆ ಹೊರಬೇಕಾಗು ತ್ತದೆ. ಇವರೆಲ್ಲರ ಉತ್ತರದಾಯಿತ್ವದ ವ್ಯಾಪ್ತಿಯಲ್ಲಿ ಸರಿಯಾಗಿ ಅರ್ಥೈಸಬೇಕಾಗು ತ್ತದೆ. ಯಾರೊಬ್ಬರ ಮೇಲೆ ಶಿಕ್ಷಣದ ವಿಫಲತೆಯ ಜವಾಬ್ದಾರಿಯನ್ನು ಹೊರಿಸಿ, ಬೇರೆಯವರು ತಪ್ಪಿಸಿಕೊಳ್ಳಬಾರದು. ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಸಂಬಂಧಪಟ್ಟ ವರೆಲ್ಲರೂ ತಮ್ಮ ಜವಾಬ್ದಾರಿಯನ್ನು ಒಪ್ಪಿಕೊಂಡು ನಿಭಾಯಿಸಿದಾಗ ಮಾತ್ರ ಶಿಕ್ಷಣವ್ಯವಸ್ಥೆ ಸರಿಯಾಗಿ ಕೆಲಸಮಾಡಲು ಸಾಧ್ಯವಾಗುತ್ತದೆ.

ಉತ್ತರದಾಯಿತ್ವದ ಮೌಲ್ಯಮಾಪನ:

ಶಿಕ್ಷಣದಲ್ಲಿ ಉತ್ತರದಾಯಿತ್ವದ ಮೌಲ್ಯಮಾಪನ ಮಾಡುವುದು ಕ್ಲಿಷ್ಟಕರವಾದ ಕೆಲಸ. ಶೈಕ್ಷಣಿಕ ಪ್ರಕ್ರಿಯೆ ಸಂಕೀರ್ಣವಾದುದರಿಂದಲೂ, ಅದರಲ್ಲಿ ಬೇರೆಬೇರೆ ಹಂತಗಳಲ್ಲಿ ಬೇರೆಬೇರೆ ವ್ಯಕ್ತಿಗಳು ಪಾತ್ರವಹಿಸುವುದರಿಂದಲೂ, ಶಿಕ್ಷಣ ಪ್ರಕ್ರಿಯೆ ಯಲ್ಲಿ ಅಳತೆಗೆ ನಿಲುಕದ ಅನೇಕ ಅಂಶಗಳ ಪ್ರಭಾವವಿರುವುದರಿಂದಲೂ ಉತ್ತರ ದಾಯಿತ್ವದ ಮೌಲ್ಯಮಾಪನ ಕಷ್ಟಕರವಾದುದಾಗಿದೆ. ಶಿಕ್ಷಣತಜ್ಞರು ಈ ವಿಷಯ ವಾಗಿ ಚಿಂತಿಸಿ ಉತ್ತರದಾಯಿತ್ವದ ಮೌಲ್ಯಮಾಪನಕ್ಕೆ ಅನೇಕ ಸೂಚಕ ಅಂಶಗಳನ್ನು (indicators) ಸೂಚಿಸಿದ್ದಾರೆ.

ಈ ಸೂಚಕಗಳನ್ನು ಆಂತರಿಕ ಮತ್ತು ಬಾಹ್ಯ ಸೂಚಕಗಳೆಂದು ವಿಭಾಗಿಸಿದ್ದಾರೆ. ಆಂತರಿಕ ಸೂಚಕಗಳು ಸಂಸ್ಥೆಯ ಕಾರ್ಯದಕ್ಷತೆಗೆ ಸಂಬಂಧಿಸಿದ್ದರೆ ವ್ಯಕ್ತಿಗತ ಮಟ್ಟದಲ್ಲಿ ಇವು ವ್ಯಕ್ತಿಯ ಅಂತಃಸಾಕ್ಷಿಗೆ, ಮೌಲ್ಯ ವ್ಯವಸ್ಥೆಗೆ ಸಂಬಂಧಿಸಿವೆ. ಬಾಹ್ಯ ಸೂಚಕಗಳು ಸಂಸ್ಥೆಗಳಿಂದ ಸಮುದಾಯಕ್ಕೆ (ಸಮಾಜಕ್ಕೆ) ಉಂಟಾಗ ಬೇಕಾದ ಸಾಮಾಜಿಕ ಪ್ರತಿಫಲಗಳಿಗೆ ಸಂಬಂಧಿಸಿವೆ. ಆಂತರಿಕ ಉತ್ತರದಾಯಿತ್ವವನ್ನು

ಇಡೀ ಸಂಸ್ಥೆಯ ಪ್ರಗತಿ, ಅಧ್ಯಾಪಕರು, ಇತರ ಸಿಬ್ಬಂದಿಯ ದಕ್ಷತೆ, ವಿದ್ಯಾರ್ಥಿಗಳ ಚಟುವಟಿಕೆಗಳು, ಹಣಕಾಸಿನ ಆದಾಯ–ವೆಚ್ಚ ಮುಂತಾದುವುಗಳನ್ನು ಅಳತೆ ಮಾಡುವುದರ ಮೂಲಕ ಮೌಲ್ಯಮಾಪನ ಮಾಡಬೇಕಾಗುತ್ತದೆ. ಬಾಹ್ಯ ಉತ್ತರ ದಾಯಿತ್ವವನ್ನು ಅಳತೆ ಮಾಡುವಾಗ ಸಂಸ್ಥೆಯಿಂದ ಸಮುದಾಯಕ್ಕೆ (ಸಮಾಜಕ್ಕೆ) ಉಂಟಾಗುವ ಪ್ರತಿಫಲಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ.

ಬಾಹ್ಯ ಸೂಚಕಗಳು :

1. ಸಾಮಾಜಿಕ ಬೇಡಿಕೆಗಳ ದೃಷ್ಟಿಯಿಂದ ಮತ್ತು ಜ್ಞಾನದ ಮಟ್ಟದ ದೃಷ್ಟಿಯಿಂದ ಪಠ್ಯಕ್ರಮವನ್ನು ಮತ್ತು ಬೋಧನ ವಿಷಯಗಳನ್ನು ವಿಶ್ಲೇಷಿಸುವುದು.

2. ಸಂಸ್ಥೆಯಲ್ಲಿ ವ್ಯಾಸಂಗಕ್ಕೆ ದೊರೆಯುವ ಪಠ್ಯವಿಷಯಗಳು, ಅವುಗಳ ಆಯ್ಕೆಯಲ್ಲಿ ಇರಬಹುದಾದ ಸಾಧ್ಯತೆಗಳು ಮತ್ತು ನಮ್ಯತೆ (flexibility).

3. ಸಂಸ್ಥೆಯ ಧ್ಯೇಯ-ಧೋರಣೆಗಳಿಗೂ ಸಾಮಾಜಿಕ ಬೇಡಿಕೆಗಳಿಗೂ ಇರುವ ಸಾಮಂಜಸ್ಯ.

4. ಶಾಲೆಯಲ್ಲಿ ನಡೆಸುವ ಸಹ–ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ವೈವಿಧ್ಯತೆ ಮತ್ತು ಸಂಖ್ಯೆ. ಇವುಗಳಿಗೂ ವಿದ್ಯಾರ್ಥಿಗಳ ಮೌಲ್ಯ ವಿಕಾಸ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಇರುವ ಸಂಬಂಧ.

5. ವಿದ್ಯಾರ್ಥಿಗಳ ಸಾಧನೆ—ತೇರ್ಗಡೆಯ ಶೇಕಡಾವಾರು, ಪ್ರಥಮ ದರ್ಜೆ, ಬಹುಮಾನಗಳ ಅರ್ಜನೆ ಇತ್ಯಾದಿಗಳು.

6. ಸಂಸ್ಥೆಯಿಂದ ಹೊರಬಂದ ವಿದ್ಯಾರ್ಥಿಗಳಿಗೆ ಇರುವ ಉದ್ಯೋಗಾವಕಾಶಗಳು, ದೊರೆತಿರುವ ಉದ್ಯೋಗಗಳು, ಮತ್ತು ವಿದ್ಯಾರ್ಥಿಗಳು ಉದ್ಯೋಗಕ್ಕೆ ಸೇರಿದ ಮೇಲೆ ತಾವು ಪಡೆದ ಶಿಕ್ಷಣ ಅಥವಾ ತರಬೇತಿಯ ಬಗ್ಗೆ ಅವರ ಅನಿಸಿಕೆಗಳು.

7. ಅಧ್ಯಾಪಕರಿಂದ ಜ್ಞಾನವಿಸ್ತಾರಕ್ಕೆ ಕೊಡುಗೆ-ಸಂಶೋಧನೆಗಳು, ಜ್ಞಾನ ಪ್ರಸಾರ ಕಾರ್ಯಕ್ರಮಗಳ ರೂಪದಲ್ಲಿ.

8. ವೃತ್ತಿಗೆ ಬೇಕಾದ ಜ್ಞಾನ ಮತ್ತು ಕೌಶಲ್ಯಗಳು ಹಾಗೂ ತರಬೇತಿಗೂ ಇರುವ ಸಂಬಂಧ.

ಆಂತರಿಕ ಸೂಚಕಗಳು-ಸಂಸ್ಥೆಗೆ ಸಂಬಂಧಿಸಿದಂತೆ :

1. ತೀರ್ಮಾನಗಳನ್ನು ತೆಗೆದುಕೊಳ್ಳಲು ಇರುವ ಕಾಲದ ಅಂತರ, ಅವುಗಳನ್ನು ತೆಗೆದುಕೊಳ್ಳುವ ರೀತಿ, ಅವುಗಳನ್ನು ಪ್ರಾರಂಭಿಸಲು ನಿರ್ಧಾರಿತ ದಿನಾಂಕವನ್ನು ಯೋಜಿಸುವುದು. (ವಿದ್ಯಾರ್ಥಿ ಪ್ರವೇಶ, ಶೈಕ್ಷಣಿಕ ಕಾರ್ಯಕ್ರಮ, ವೇಳಾ ಪಟ್ಟಿ, ಪಠ್ಯೇತರ ಚಟುವಟಿಕೆಗಳು ಮತ್ತು ಪರೀಕ್ಷೆಗಳಿಗೆ ಸಂಬಂಧಿಸಿದಂತೆ.)

2. ಚಟುವಟಿಕೆಗಳನ್ನು ಆರಂಭಿಸಲು ಯೋಜಿಸುವ ದಿನಾಂಕಕ್ಕೂ ಮತ್ತು ವಾಸ್ತವವಾಗಿ ಆರಂಭವಾಗುವ ದಿನಾಂಕಕ್ಕೂ ಇರುವ ಕಾಲದ ಅಂತರ.

3. ಚಟುವಟಿಕೆಯನ್ನು ಪೂರ್ಣಗೊಳಿಸಲು ಯೋಜಿಸುವ ಅವಧಿ ಮತ್ತು ವಾಸ್ತವವಾಗಿ ಬೇಕಾಗುವ ಅವಧಿಗೂ ಇರುವ ಅಂತರ.

4. ವಿವಿಧ ಕಾರ್ಯಕ್ರಮಗಳ ಬಗ್ಗೆ ಶೈಕ್ಷಣಿಕ ಮತ್ತು ಆರ್ಥಿಕ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕೆ ಬೇಕಾದ ಕಾಲ.

5 ಸಂಪನ್ಮೂಲಗಳನ್ನು ಹೊಂದಿಸುವಿಕೆ, ಒದಗಿಸುವಿಕೆ ಮತ್ತು ಅವುಗಳನ್ನು ಉಪಯೋಗಿಸುವಿಕೆ. ಇವುಗಳಿಗೆ ಬೇಕಾದ ಕಾಲ ಮತ್ತು ಕಾರ್ಯಕ್ರಮಗಳನ್ನು ಚಟುವಟಿಕೆಗಳನ್ನು ಯೋಜಿಸಿ ಕಾರ್ಯಾನ್ವಯಗೊಳಿಸುವುದರಲ್ಲಿ ಸಂಪನ್ಮೂಲಗಳ ಪ್ರಭಾವ.

6. ಶೈಕ್ಷಣಿಕ ವರ್ಷದಲ್ಲಿ ಒಟ್ಟು ಕೆಲಸದ ದಿನಗಳು, ವಾಸ್ತವಿಕ ಕೆಲಸದ ದಿನಗಳು (ಬೋಧನೆಯ ದಿನಗಳು), ನಿರ್ಧಾರಿತ ಕೆಲಸದ ದಿನಗಳ ಸಂಖ್ಯೆ ಇವುಗಳ ರೂಪದಲ್ಲಿ ದಕ್ಷತೆಯ ಸೂಚ್ಯಂಕ.

7. ಅಧ್ಯಾಪಕರ ಸರಾಸರಿ ಕಾರ್ಯಭಾರ—ವಿದ್ಯಾರ್ಥಿಗಳನ್ನು ನೇರ ಸಂಪರ್ಕಿಸುವ ಅವಧಿಗಳು. (ಉಪನ್ಯಾಸ, ಟುಟೋರಿಯಲ್, ಪ್ರಾಕ್ಟಿಕಲ್ಸ್, ಸೆಮಿನಾರುಗಳು, ಸಮೂಹ ಚರ್ಚೆ ಮತ್ತು ಪ್ರಾಯೋಜನ ಕಾರ್ಯದ ರೂಪದಲ್ಲಿ)

8. ಅಧ್ಯಾಪಕರ ಒಟ್ಟು ಸರಾಸರಿ ಕಾರ್ಯಭಾರ–ಬೋಧನೆ, ಸಂಶೋಧನೆ ಮೌಲ್ಯಮಾಪನ ಸೇರಿದಂತೆ.

9. ವಾರವೊಂದಕ್ಕೆ ಅಧ್ಯಾಪಕ ಸಂಸ್ಥೆಯಲ್ಲಿ ಇರಬೇಕಾದ ಸರಾಸರಿ ಅವಧಿ.

10. ತರಗತಿಗಳಲ್ಲಿ ಉಪಯೋಗಿಸುವ ಬೋಧನೋಪಕರಣಗಳ ಸಂಖ್ಯೆ ಮತ್ತು ವೈವಿಧ್ಯತೆ.

11. ತ್ರೈಮಾಸಿಕ, ವಾರ್ಷಿಕ ಮತ್ತು ಪಂಚವಾರ್ಷಿಕ ಅವಧಿಗಳಲ್ಲಿ ಯೋಜಿಸಿ, ಕಾರ್ಯಾನ್ವಿತಗೊಳಿಸಿದ ಕಾರ್ಯಕ್ರಮಗಳು/ಚಟುವಟಿಕೆಗಳು. ಇವುಗಳಲ್ಲಿ ಕೆಲವು ಕಾರ್ಯಾನ್ವಿತಗೊಳ್ಳದಿದ್ದಲ್ಲಿ ಅದಕ್ಕೆ ಕಾರಣಗಳು.

12. ಅಧ್ಯಾಪಕರ ವೃತ್ತಿವಿಕಾಸಕ್ಕೆ ಬೇಕಾದ ತರಬೇತಿ, ಸೆಮಿನಾರ್‌ಗಳು, ಸಮ್ಮೇಳನಗಳು ಮತ್ತು ಓರಿಯೆಂಟೇಷನ್ ಕೋರ್ಸ್‌ಗಳ ಯೋಜನೆ.

13. ಕಟ್ಟಡ, ಆಸನಗಳು ಮುಂತಾದ ಸಾಧನಸಾಮಗ್ರಿಗಳ ಪರ್ಯಾಪ್ತತೆ ಮತ್ತು ಅವುಗಳ ಯೋಗ್ಯ ಉಪಯೋಗ.

14. ಗ್ರಂಥಾಲಯ—ಕಟ್ಟಡ, ಪುಸ್ತಕಗಳು, ನಿಯತ–ಕಾಲಿಕೆಗಳ ಸಂಖ್ಯೆ, ವೈವಿಧ್ಯತೆ, ಇವುಗಳ ಪ್ರಭಾವಯುತ ಉಪಯೋಗಕ್ಕೆ ಅನುಕೂಲಕರವಾದ ವ್ಯವಸ್ಥೆ.

15. ಪ್ರತಿ ಆರ್ಥಿಕ ವರ್ಷದಲ್ಲಿ ಹೊಸದಾಗಿ ಸೇರಿಸಲಾಗುವ ಪುಸ್ತಕಗಳು, ನಿಯತಕಾಲಿಕೆಗಳ ಸಂಖ್ಯೆ.

16. ವಿದ್ಯಾರ್ಥಿಗಳಿಂದ, ಅಧ್ಯಾಪಕರಿಂದ ಪುಸ್ತಕಗಳ, ನಿಯತಕಾಲಿಕೆಗಳ ಉಪಯೋಗ.

17. ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಲಭ್ಯವಿರುವ ಇತರ ಬಗೆಯ ಸೇವಾ ಸೌಲಭ್ಯಗಳು [ವೈದ್ಯಕೀಯ, ನಿರ್ದೇಶನ, ಶೌಚಾಲಯ, ಕ್ರೀಡೆಗಳು, ಮನರಂಜನೆ, ವಿಶ್ರಾಂತಿಗೃಹ, ಉಪಹಾರಗೃಹ, ಸಂಚಾರವ್ಯವಸ್ಥೆ, ನಕಲು ತೆಗೆಯುವುದು (ಜೆರಾಕ್ಸ್) ಮುಂತಾದ ಸೌಲಭ್ಯಗಳು].

18. ಪ್ರತಿ ಕಾರ್ಯಕ್ರಮ ಮತ್ತು ಪ್ರತಿ ವಿದ್ಯಾರ್ಥಿಗೆ ತಗಲುವ ವೆಚ್ಚ ಮತ್ತು ಈ ವೆಚ್ಚಕ್ಕೂ ಅದರ ಫಲಿತಾಂಶಕ್ಕೂ ಇರುವ ಸಂಬಂಧದ ಲೆಕ್ಕಾಚಾರ.

ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ:

1. ವಿದ್ಯಾರ್ಥಿಗಳ ಸರಾಸರಿ ಹಾಜರಾತಿ.

2. ಪ್ರತಿ ವಿದ್ಯಾರ್ಥಿಗೂ ನಿಯೋಜಿಸಿದ ಮತ್ತು ವಿದ್ಯಾರ್ಥಿ ಪೂರ್ಣಗೊಳಿಸಿದ ಶೈಕ್ಷಣಿಕ ಕಾರ್ಯಗಳ ಸರಾಸರಿ ಸಂಖ್ಯೆ.

3. ಸಹ-ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಪ್ರತಿ ವಿದ್ಯಾರ್ಥಿ ಭಾಗವಹಿಸುವ ಪ್ರಮಾಣ.

ಅಧ್ಯಾಪಕರಿಗೆ ಸಂಬಂಧಿಸಿದಂತೆ:

1. ಬೋಧನೆಗೆ ಮತ್ತು ಇತರ ಶೈಕ್ಷಣಿಕ ಚಟುವಟಿಕೆಗಳಿಗೆ ವಿನಿಯೋಗಿಸುವ ಕಾಲ.

2. ಪ್ರತಿ ವರ್ಷ ಮಾಡುವ ಸಂಶೋಧನೆಗಳು, ಪ್ರಕಟಿಸುವ ಸಂಶೋಧನ ಪ್ರಬಂಧಗಳು, ಲೇಖನಗಳು ಇತ್ಯಾದಿ.

3. ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ.

4. ಸಾಹಿತ್ಯ, ಕಲೆ ಮುಂತಾದ ಕ್ಷೇತ್ರಗಳಿಗೆ ಸೃಜನಾತ್ಮಕ ಕೊಡುಗೆ.

5. ಜ್ಞಾನ ಪ್ರಸಾರಕ್ಕೆ ವಿನಿಯೋಗಿಸುವ ಕಾಲ-ಸಾರ್ವಜನಿಕ ಉಪನ್ಯಾಸಗಳು, ಜನಸಂಪರ್ಕ ಕಾರ್ಯಕ್ರಮಗಳು, ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು ಇತ್ಯಾದಿ.

6. ಸಂಸ್ಥೆಯ ತೀರ್ಮಾನಗಳಲ್ಲಿ, ಆಡಳಿತದಲ್ಲಿ ಪಾಲ್ಗೊಳ್ಳುವಿಕೆ.

7. ವಿದ್ಯಾರ್ಥಿಗಳನ್ನು ಸಂಪರ್ಕಿಸುವ ಅವಧಿ (ಉಪನ್ಯಾಸ, ಪ್ರಾಕ್ಟಿಕಲ್ಸ್ ಮುಂತಾದುವುಗಳಿಗೆ).

8. ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ವಿನಿಯೋಗಿಸುವ ಕಾಲ.

ಉತ್ತರದಾಯಿತ್ವದ ಮೌಲ್ಯಮಾಪನದಲ್ಲಿ ಇರುವ ತೊಂದರೆಗಳು:

ಉತ್ತರದಾಯಿತ್ವ ಶೈಕ್ಷಣಿಕ ವ್ಯವಸ್ಥೆ (ಸಂಸ್ಥೆ, ಅಧ್ಯಾಪಕರು ಸೇರಿದಂತೆ) ಮತ್ತು ಅದರ ಫಲಾನುಭವಿಗಳ (ಸಮುದಾಯ/ಸಮಾಜ) ನಡುವೆ ಇರುವ ಒಪ್ಪಂದವನ್ನು ಅವಲಂಬಿಸಿರುತ್ತದೆ. ಈ ಒಪ್ಪಂದದ ಪ್ರಕಾರ ಒಂದು ಪಕ್ಷ ಕೆಲವು ನಿರ್ದಿಷ್ಟ

ಸೇವೆಗಳನ್ನು ಒದಗಿಸಬೇಕೆಂದೂ, ಕೆಲವು ನಿರ್ದಿಷ್ಟ ಉದ್ದೇಶಗಳನ್ನು ಸಾಧಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಈ ಒಪ್ಪಂದವನ್ನು ಸರಿಯಾಗಿ ಪೂರೈಸಬೇಕಾದರೆ ಏನನ್ನು ಸಾಧಿಸಬೇಕು ಮತ್ತು ಅದನ್ನು ಯಾವ ಮಟ್ಟದಲ್ಲಿ ಸಾಧಿಸಬೇಕೆನ್ನುವುದರ ಬಗ್ಗೆ ಒಪ್ಪಂದದ ಉಭಯ ಪಕ್ಷಗಳಿಗೂ ತಿಳಿದಿರಬೇಕಾಗುತ್ತದೆ. ಇಂಥ ಅರಿವು ಇದೆ ಎಂದಿಟ್ಟುಕೊಂಡರೂ ಕೆಲವು ವೇಳೆ ಈ ಒಪ್ಪಂದವನ್ನು ಉಭಯಪಕ್ಷಗಳಿಗೂ ತೃಪ್ತಿಕರವಾಗುವಂತೆ ನೆರವೇರಿಸುವುದು ಸಾಧ್ಯವಾಗುವುದಿಲ್ಲ. ಶೈಕ್ಷಣಿಕ ಕ್ಷೇತ್ರದಲ್ಲಿ ಈ ಒಪ್ಪಂದ ತೃಪ್ತಿಕರವಾಗಿ ನೆರವೇರದಿರುವುದಕ್ಕೆ ಈ ಕೆಳಗಿನ ಅಡ್ಡಿ ಆತಂಕಗಳು ಕಾರಣವಾಗುತ್ತವೆ.

1. ಶೈಕ್ಷಣಿಕ ಉದ್ದೇಶಗಳನ್ನು ನಿಖರವಾದ, ಸ್ಪಷ್ಟವಾದ ರೀತಿಯಲ್ಲಿ ನಿರೂಪಿಸಲು ಸಾಧ್ಯವಾಗುವುದಿಲ್ಲ. ಅನೇಕ ಉದ್ದೇಶಗಳು ಅಸ್ಪಷ್ಟವಾಗಿದ್ದು ಅವುಗಳನ್ನು ಮೌಲ್ಯ ಮಾಪನಮಾಡುವುದು ಕಷ್ಟವಾಗುತ್ತದೆ.

2. ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು (Performance) ಯನ್ನು ಮೌಲ್ಯಮಾಪನ ಮಾಡಲು ಬೇಕಾದ ಮಾನಕ (Standard)ಗಳನ್ನು ನಿರ್ಣಯಿಸುವುದು ಸುಲಭವಾದ ಕೆಲಸವಲ್ಲ.

3. ಕಾಲ ಮತ್ತು ಹಣಕ್ಕೆ ಸಂಬಂಧಿಸಿದಂತೆ ಪ್ರಭಾವಬೀರುವ ಬಾಹ್ಯ ಸಂಕೀರ್ಣ ನಿಯಂತ್ರಣಾಂಶಗಳನ್ನು ಹತೋಟಿಯಲ್ಲಿಡುವುದು ಕಷ್ಟ.

4. ಪಠ್ಯಕ್ರಮ ರೂಪಣೆಯಲ್ಲಿ, ಕಾರ್ಯಕ್ರಮದ ಮೇಲ್ವಿಚಾರಣೆಯಲ್ಲಿ ಮತ್ತು ಆರ್ಥಿಕ ವಿಷಯಗಳಲ್ಲಿ ಸಾಮಾಜಿಕ ಹಾಗೂ ರಾಜಕೀಯ ಪ್ರಭಾವಗಳು ಮತ್ತು ನಿಯಂತ್ರಣಗಳು.

5. ಶಿಕ್ಷಣದ ಫಲಿತಾಂಶ ಉತ್ತರದಾಯಿತ್ವವನ್ನು ಒಪ್ಪಿಕೊಳ್ಳಲು ಅಧ್ಯಾಪಕರು ವಿರೋಧಿಸಬಹುದು. ಅಧ್ಯಾಪಕರನ್ನು ಮಾತ್ರ ಜವಾಬ್ದಾರರನ್ನಾಗಿಸುವ ನಿಲುವಿಗೆ ವಿರೋಧ ಬರುತ್ತದೆ.

6. ಶೈಕ್ಷಣಿಕ ಪ್ರಯತ್ನಗಳಲ್ಲಿ (ಹೊಸ ಕಾಲೇಜುಗಳ ಪ್ರಾರಂಭ, ಅನುದಾನ ನೀಡುವಿಕೆ, ಮಾನ್ಯತೆ ನೀಡುವಿಕೆ, ಕಾಲೇಜುಗಳ ಸಂಪನ್ಮೂಲಗಳ ವಿಚಾರ, ಅಧ್ಯಾಪಕರ ಆಯ್ಕೆ, ವೇತನ ಇತ್ಯಾದಿ) ಅನಾವಶ್ಯಕವಾದ ರಾಜಕೀಯ, ಧಾರ್ಮಿಕ, ಹಾಗೂ ಇತರ ಪ್ರಭಾವಗಳು, ಅಡ್ಡಿ ಆತಂಕಗಳು.

7. ಸಾಕಷ್ಟು ಚರ್ಚೆಗೆ ಒಳಪಡಿಸದೆ, ಸಾಕಷ್ಟು ಪೂರ್ವಭಾವಿಸಿದ್ಧತೆಯಿಲ್ಲದೆ ಶೈಕ್ಷಣಿಕ ಧೋರಣೆಗಳನ್ನು ನಿರೂಪಿಸುವುದು ಮತ್ತು ಹೊಸ ಪದ್ಧತಿಗಳನ್ನು ಪ್ರಾರಂಭಿಸುವುದು.

8. ಶೈಕ್ಷಣಿಕ ಮೇಲ್ವಿಚಾರಣೆಯಲ್ಲಿ ಸಂಘಟನಾತ್ಮಕ ನಿಲುವಿನ ಬದಲು, ವ್ಯಕ್ತಿಗತ ನಿಲುವು ತಳೆಯುವುದರಿಂದ ಪಾರಸ್ಪರಿಕ ತಪ್ಪು ತಿಳುವಳಿಕೆ, ಅನಾವಶ್ಯಕ ಅವರೋಧ ಮತ್ತು ಅತೃಪ್ತಿಗೆ ಎಡೆ ಉಂಟಾಗುತ್ತದೆ.

9. ಅಧ್ಯಾಪಕರು ನಿರ್ದಿಷ್ಟವಾಗಿ ಯಾರಿಗೆ ಉತ್ತರದಾಯಿಗಳಾಗಿರಬೇಕೆಂಬುದು ಸ್ಪಷ್ಟವಾಗುವುದಿಲ್ಲ.

10. ಶೈಕ್ಷಣಿಕ ಕಾರ್ಯಕ್ರಮಗಳ ಪ್ರಭಾವಶೀಲತೆಯನ್ನು ಮೌಲ್ಯಮಾಪನ ಮಾಡುವುದರಲ್ಲಿರುವ ಮಿತಿಗಳು.

ಉತ್ತರದಾಯಿತ್ವವನ್ನು ಉತ್ತಮಪಡಿಸಲು ಬೇಕಾದ ಅವಶ್ಯಕ ಅಂಶಗಳು :

1. ಸಂಸ್ಥೆಯ ಧ್ಯೇಯ ಧೋರಣೆಗಳನ್ನು ರೂಪಿಸುವುದರಲ್ಲಿ ಸಾಧ್ಯವಾದಷ್ಟು ಸಂಸ್ಥೆಗೆ ಸಂಬಂಧಪಟ್ಟಿರುವವರೆಲ್ಲರ ಸಹಕಾರ ಪಡೆದುಕೊಳ್ಳಬೇಕು.

2. ಇಡೀ ಸಂಸ್ಥೆಯ ಪ್ರಯತ್ನಗಳನ್ನು ಪ್ರಬಲಗೊಳಿಸಲು, ಮತ್ತು ಸಂಸ್ಥೆಯ ಕಾರ್ಯಕ್ರಮಗಳ ಯೋಜನೆ, ಕಾರ್ಯಾನ್ವಿತಿ, ಪ್ರಕ್ರಿಯೆ ಮತ್ತು ಮೌಲ್ಯಮಾಪನಗಳಲ್ಲಿ ನೆರವಾಗಲು ಪರಿಣತರ ಸಹಯೋಗ ಪಡೆದುಕೊಳ್ಳಬೇಕು.

3. ಸಂಸ್ಥೆ ಉದ್ದೇಶಗಳನ್ನು ಸ್ಪಷ್ಟವಾಗಿ ನಿರೂಪಿಸಿಕೊಳ್ಳಬೇಕು. ಸಂಸ್ಥೆಯ ಮಾನಕ ಮಟ್ಟ ಹಾಗೂ ಮೌಲ್ಯಮಾಪನ ಪ್ರಕ್ರಿಯೆಗೂ ಉದ್ದೇಶಗಳಿಗೂ ಹೊಂದಾಣಿಕೆ ಇರಬೇಕು.

4. ಸಂಸ್ಥೆಯಿಂದ ಫಲಾನುಭವ ಪಡೆಯುವವರನ್ನು ಸರಿಯಾಗಿ ಗುರ್ತಿಸಬೇಕು.

5. ಸಂಸ್ಥೆಯ ಅವಶ್ಯಕತೆಗಳನ್ನೂ ಮತ್ತು ಕಾರ್ಯಕ್ರಮದಲ್ಲಿ ಯೋಜನೆಗೆ ಬೇಕಾದ ಮುಖ್ಯ ಅಂಶಗಳನ್ನೂ ಸರಿಯಾಗಿ ಗುರ್ತಿಸುವುದು.

6. ಸಂಸ್ಥೆಯ ಉತ್ತರದಾಯಿತ್ವದ ಮೌಲ್ಯಮಾಪನಕ್ಕೆ ವ್ಯವಸ್ಥಿತವಾದ ಮಾದರಿಯೊಂದನ್ನು ನಿರ್ಧರಿಸುವುದು. ಉತ್ತರದಾಯಿತ್ವದ ಮೌಲ್ಯಮಾಪನಕ್ಕೆ ಅನೇಕ ಮಾದರಿಗಳನ್ನು ರೂಪಿಸಿದ್ದಾರೆ. ಇವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಲಾಗಿದೆ.

(ಅ) ಕಾರ್ಯಕ್ರಮ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರಗಳು. (Programme Evaluation and Review Techniques PERT)

(ಆ) ಯೋಜನೆ, ಕಾರ್ಯಕ್ರಮ, ಬಜೆಟ್ ವ್ಯವಸ್ಥೆಗಳು (Planning, Programming, Budgetting Systems PPBS).

(ಇ) ಡ್ರಕರ್ ಮತ್ತು ಮಾಗ್ರೆಗೋರ್‌ರವರ ಉದ್ದೇಶಗಳಿಂದ ಅಳತೆ ಮಾಡುವಿಕೆ (Drucker and Mogregor's Measurement by Objective Model MBO).

(ಈ) ಉತ್ಪಾದನಾ ಮಾದರಿ (Productivity Model).

(ಉ) ಷುಲ್ಟ್ಜ ಮತ್ತು ಬೀಕರ್‌ರವರ ಬಂಡವಾಳ ಹೂಡಿಕೆಯ ಮಾದರಿ (Sultz and Beeker's Investment Model).

(ಊ) ಅಭಿಪ್ರೇರಣಾ ಸಂಶೋಧನ ಮಾದರಿ (Motivation Research Model).

7. ವ್ಯಕ್ತಿಗತ ಹಿತಾಸಕ್ತಿಗಳಿಗೆ ಹೆಚ್ಚು ಮಹತ್ವ ನೀಡದೆ ಇಡೀ ಸಂಸ್ಥೆಯ ಕಾರ್ಯದಕ್ಷತೆಯನ್ನು ಹೆಚ್ಚಿಸುವುದರ ಕಡೆಗೆ ಗಮನ ನೀಡುವುದು.

8. ಹೊಸ ಹೊಸ ಕಾರ್ಯ ತಂತ್ರಗಳನ್ನು ಪರೀಕ್ಷಿಸಲು ಅವಕಾಶ ಕಲ್ಪಿಸುವುದು.

9. ಉತ್ತರದಾಯಿತ್ವದ ದೃಷ್ಟಿಯಿಂದ ಮುಖ್ಯ ಉದ್ದೇಶ ಸಾಧನೆಗೆ ಸಂಪನ್ಮೂಲಗಳನ್ನು ಸರಿಯಾಗಿ ಹಂಚಿಕೊಂಡು ಅವುಗಳನ್ನು ಅಪವ್ಯಯವಾಗದಂತೆ ಉಪಯೋಗಿಸುವುದು.

10. ಸಂಸ್ಥೆಯ ಸದಸ್ಯರಲ್ಲಿ ಆತ್ಮ ವಿಶ್ವಾಸವನ್ನು ಹೆಚ್ಚಿಸುವಂಥ ಸಂಘಟನಾತ್ಮಕ ಸಂರಚನೆ ಮತ್ತು ಕಾರ್ಯವಿಧಾನಗಳನ್ನು ಉಂಟುಮಾಡುವುದು.

11. ಕಾರ್ಯಪ್ರಕ್ರಿಯೆಗಳನ್ನು ಮತ್ತು ವ್ಯವಸ್ಥಾಪನೆಯನ್ನು ಗುಣಾತ್ಮಕ ಮತ್ತು ಪರಿಮಾಣಾತ್ಮಕವಾಗಿ ಸತತ ಮೌಲ್ಯಮಾಪನ ಮಾಡುವುದು.

12. ಸಂಸ್ಥೆಯ ಸಾಧನೆಯನ್ನು ಅವುಗಳಿಗೆ ವಿನಿಯೋಗಿಸಿದ ಹಣಕ್ಕೆ ಸಂಬಂಧಿಸಿದಂತೆ ಹೊರಗಣ ಲೇಖಾಯುಕ್ತ (auditor) ರಿಂದ ಲೆಕ್ಕಾಚಾರ ತನಿಖೆ ಮಾಡಿಸುವುದು.

13. ಕಾರ್ಯಕ್ರಮವನ್ನು ಸಫಲವಾದ ರೀತಿಯಲ್ಲಿ ಅಮಲುಗೊಳಿಸಲು ಅನುಕೂಲಿಸುವಂತೆ ಸಂಸ್ಥೆಯ ಅಧ್ಯಾಪಕರ ವೃತ್ತಿ ವಿಕಾಸಕ್ಕೆ ಅವಕಾಶ ಕಲ್ಪಿಸುವುದು ಮತ್ತು ವೃತ್ತಿ ವಿಕಾಸವನ್ನು ಸತತವಾಗಿ ಮೌಲ್ಯಮಾಪನ ಮಾಡುವುದು.

14. ಸಂಸ್ಥೆಯ ಸದಸ್ಯರ (ಅಧ್ಯಾಪಕರು, ವಿದ್ಯಾರ್ಥಿಗಳು) ವ್ಯಕ್ತಿ ವಿಕಾಸಕ್ಕೆ ಅನುಕೂಲವಾಗುವಂತೆ ಸಂಸ್ಥೆಯ ಪ್ರಗತಿಯ ಬಗ್ಗೆ ಆಗಾಗ್ಗೆ ಪ್ರತಿಪುಷ್ಟಿ (feed back) ನೀಡುವುದು.

15. ಸ್ವಮೌಲ್ಯಮಾಪನ ಮತ್ತು ಉತ್ತರದಾಯಿತ್ವಕ್ಕೆ ಅವಕಾಶ ನೀಡಲು ಸಂಸ್ಥೆಗೆ ಸ್ವಾಯತ್ತತೆ ನೀಡುವುದು.

ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡಲ್ಲಿ ಸ್ವಾಯತ್ತತೆ ಮತ್ತು ಉತ್ತರದಾಯಿತ್ವ ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ನೀಡುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಈ ದಿಶೆಯಲ್ಲಿ ಭಾರತದಲ್ಲಿ ಆಗಿರುವ ಅಲ್ಪ ಪ್ರಗತಿಯನ್ನು ಗಮನಿಸಿದರೆ ಇವುಗಳ ಬಗ್ಗೆ ಇನ್ನೂ ಜನಾಭಿಪ್ರಾಯ ರೂಪಿತವಾಗಬೇಕೆನಿಸುತ್ತದೆ. ಖಾಸಗಿ ಸಂಸ್ಥೆಗಳು ಹೆಚ್ಚಾಗಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡಿದರೆ ಅದನ್ನು ಯುಕ್ತ ರೀತಿಯಲ್ಲಿ ಉಪಯೋಗಿಸಿ ಕೊಳ್ಳುತ್ತವೆಯೆಂದೂ ಮತ್ತು ತಮ್ಮ ಉತ್ತರದಾಯಿತ್ವವನ್ನು ನಿಭಾಯಿಸುತ್ತವೆ

ಯೆಂದೂ ಕೆಲವರು ವಾದಿಸುತ್ತಾರೆ. ಮತ್ತೆ ಕೆಲವರು ನಮ್ಮ ದೇಶದ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡಿದರೆ ಅದು ದುರುಪಯೋಗವಾಗುತ್ತದೆಯೆಂದು ವಾದಿಸುತ್ತಾರೆ. ಸರಿಯಾದ ಬಾಹ್ಯನಿಯಂತ್ರಣವನ್ನು ಸ್ಥಾಪಿಸಿ, ಸಂಸ್ಥೆಗಳು ಉತ್ತರದಾಯಿಗಳಾಗುವಂತೆ ನಿಯಮಗಳನ್ನು ರೂಪಿಸಿದರೆ ಸ್ವಾಯತ್ತತೆ ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ನೀಡುತ್ತದೆ.

References

1. Anderson and Others—Encyclopedia of Educational Evaluation, Jossey—Boss Publishers, 1973.
2. Berrow and Milburn G.—A Critical Dictionary of Educational Concepts, Wheats—Reaf Books, 1986.
3. Paul D. Dresel—Hand Book of Academic Evaluation, Josscy—Boss Publishers, 1973.
4. Autonomy and Accountability—A Report of Study Visits to Autonomous Colleges, National Institute of Educational Planning and Administration (NEPA), New Delhi.
5. Revised Guidelines on the Scheme of Autonomous Colleges—University Grants Commission, New Delhi, 1986.
6. Dr. Sudha Rao—Analysis of Autonomous Status of College in the Country—Paper presented in the U.G.C. sponsored Workshop on Accreditation and Assessment organised by Mysore University, December 1988.

ಡಾ. ಸಿ. ಎಸ್. ರಾಮಚಂದ್ರ

ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ

ಈ ಹೊತ್ತು 'ಬೋಧನೆ' ಶಿಕ್ಷಣದಲ್ಲಿ ಬಹಳ ಗಮನಾರ್ಹವಾದ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಬೋಧನೆಯ ವಿಧಿವಿಧಾನಗಳಲ್ಲಿ ಹಿಂದಿಗಿಂತ ಗಣನೀಯ ಮಾರ್ಪಾಡುಗಳು ಆಗುತ್ತಿವೆ. ಭಾಷಾ ಕಲಿಕೆಯು ಹಿಂದೆ ಪ್ರತಿಷ್ಠೆಯ ದ್ಯೋತಕವಾಗಿದ್ದು; ಇತ್ತೀಚೆಗಷ್ಟೇ ಭಾಷೆಗಳನ್ನು ಬದುಕಿನ ಎಲ್ಲಾ ರಂಗಗಳಲ್ಲೂ ವಿಭಿನ್ನ ಉದ್ದೇಶಗಳಿಗಾಗಿ ಕಲಿಯುತ್ತಿದ್ದಾರೆ. ಅಧಿಕ ಭಾಷೆಗಳ ಕಲಿಕೆಯು ಸಾಮಾಜಿಕ ಐಕ್ಯತೆಗೆ ಸಾಕ್ಷಿ. ಒಂದು ಕಾಲದಲ್ಲಿ ಭಾಷಾಕಲಿಕೆಯು ಕೇವಲ ಸಾಹಿತ್ಯಾಭ್ಯಾಸಕ್ಕಾಗಿ ಎಂಬ ತಿಳುವಳಿಕೆಯಿತ್ತು. ಆದರೆ ಇಂದು ಒಂದು ನಾಡಿನ ಸಾಂಸ್ಕೃತಿಕ ಜೀವನವನ್ನು ಅರಿಯಲು ಮತ್ತು ಮಾನವೀಯ ಆಸಕ್ತಿಗಳನ್ನು ಅರ್ಥೈಸಲು ಬಹುಭಾಷಾ ಕಲಿಕೆಯಿಂದ ಸಾಧ್ಯವೆಂಬುದು ಕಂಡುಬರುತ್ತಿದೆ.

'ಬೋಧನೆ' ಒಂದು ಕಲೆ. ಕಲಿಕೆಯ ಫಲವು ಬೋಧನೆಯ ಆಧಾರದಿಂದ ನಿರ್ಧಾರವಾಗುವುದು ನಿಜ. ಅಗತ್ಯಪರಿಸರ ಮತ್ತು ಕ್ರಮವರಿತು ಕಲಿಸುವುದೇ ಬೋಧನೆಯ ಮುಖ್ಯಗುರಿ. ಕ್ರಮರಹಿತ, ತತ್ತ್ವಾಧಾರವಿಲ್ಲದ ಶುಷ್ಕ ಬೋಧನೆ ಶಿಕ್ಷಣದ ನಿಷ್ಫಲಕ್ಕೆ ಕುರುಹು. ಒಂದು ಸಮಾಜದ ಸುಶಿಕ್ಷಿತ ಎನಿಸಿಕೊಳ್ಳಬೇಕಾದರೆ ಆತನು ಕಲಿತ ಇಲ್ಲವೇ ಕಲಿಸುವ ವಿದ್ಯೆಯಿಂದಲೇ ಸಾಧ್ಯ. ನಲ್ ಸಂಸ್ಕೃತಿ, ಸದಾಚಾರ, ಜ್ಞಾನಾಸಕ್ತಿ, ಕರ್ತವ್ಯಪ್ರಜ್ಞೆ, ಮತ್ತಿತರ ಸತ್ ಸಂಪ್ರದಾಯಗಳು ಶಿಕ್ಷಣದಿಂದಲೇ ಸಂಪ್ರಾಪ್ತವಾಗುವುದು. ಇಂತಹ ಶಿಕ್ಷಣದ ಸಾರ್ಥಕತೆ ನಿಂತಿರುವುದು ಮೌಲ್ಯಾಧರಿತ ಬೋಧನೆಯಿಂದ ಮಾತ್ರ. ಈ ಕಾರಣದಿಂದಲೇ 'ಬೋಧನೆ' ಶಿಕ್ಷಣದ ಕೇಂದ್ರ ಹಾಗೂ ಒಂದು ಅವಿಭಾಜ್ಯ ಅಂಗ.

ಬೋಧನೆ ಎಂದರೇನು?

ತಾನು ಪಡೆದಿರುವ ಬದುಕಿನ ಅನುಭವವನ್ನು, ಜ್ಞಾನವನ್ನು ಮತ್ತೊರ್ವರಿಗೆ ತಿಳಿಸುವುದೇ ಬೋಧನೆ. ಅಂದರೆ ವ್ಯಕ್ತಿ ತನ್ನ ಜ್ಞಾನಾರ್ಜನೆಯ ಸತ್ವವನ್ನು, ಅನುಭವವನ್ನು ತನ್ನವರಿಗೆ ಕ್ರಮವರಿತು, ನಿರ್ದಿಷ್ಟ ರೀತಿಯಲ್ಲಿ ವೇದ್ಯಪಡಿಸುವುದು

ಅಥವಾ ತನ್ನ ಸಮಕಾಲೀನರೊಡನೆ, ಕಿರಿಯರೊಡನೆ ತನ್ನ ಅನುಭವಗಳ ಹಂಚುವಿಕೆಯೇ ಬೋಧನೆ. ಬೋಧನೆಯ ವಸ್ತು ವಿಷಯದ ಜ್ಞಾನವಾಗಿರಬಹುದು ಇಲ್ಲವೆ ಬದುಕಿನ ಸಾರ್ವತ್ರಿಕ ಅನುಭವವಾಗಿರಬಹುದು. ಉಪಾಧ್ಯಾಯರು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಕಲಿಸಲು ಅನುಸರಿಸುವ ಮಾರ್ಗವೂ ಬೋಧನೆಯೇ. ವಿದ್ಯೆಯ ಬೋಧನೆಯು ಶಾಲಾ-ಕಾಲೇಜುಗಳಲ್ಲಿ ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ನಡೆಯುವುದು. ಇಲ್ಲಿ ಭಾಷೆಯ ಪಾತ್ರ ಬಹಳ ಮುಖ್ಯ. ಮಕ್ಕಳು ಸಮಾಜದಲ್ಲಿ ಯೋಗ್ಯ ವ್ಯಕ್ತಿಗಳಾಗಿ ಬಾಳಲು ಸಹಾಯಕವೆಂದು ವಿದ್ಯೆಯನ್ನು ಹಲವು ಭಾಷೆಗಳ ಇಲ್ಲವೇ ಮಾತೃಭಾಷೆಯ ಮೂಲಕ ಕಲಿಸುವುದೇ 'ಬೋಧನೆ' ಎನಿಸಿಕೊಳ್ಳುತ್ತದೆ. "Teaching is an act or business of instructing knowledge of experience is known as teaching. In other words, act of imparting the knowledge through the lessons is said to be teaching". ಈ ಆಂಗ್ಲವ್ಯಾಖ್ಯೆಯು ಬೋಧನೆಯ ಅರ್ಥವನ್ನು ಸ್ಪಷ್ಟಪಡಿಸುತ್ತದೆ.

ಭಾಷಾ ಬೋಧನೆ ಎಂದರೇನು?

ಭಾಷಾಬೋಧನೆಯನ್ನು ಇಂದು ವೈಜ್ಞಾನಿಕ ದೃಷ್ಟಿಯಿಂದ ಗಮನಿಸಬೇಕಾಗಿದೆ. ಹಾಗೆಂದ ಮಾತ್ರಕ್ಕೆ ಭಾಷಾಬೋಧನೆಯು ಪರಿಪೂರ್ಣವಲ್ಲ. ಯುಕ್ತ ಸಿದ್ಧಾಂತ ಮತ್ತು ತತ್ತ್ವಗಳ ಆಧಾರದ ಮೇಲೆ ಬೋಧನೆಯು ನಿಂತಿದೆ. ಯಾವುದೇ ಭಾಷೆಯನ್ನು ಮಾತೃೋರ್ವರಿಗೆ ಸಹಜವಾಗಿ ಬಳಸುವ ರೀತಿಯಲ್ಲಿ ಕಲಿಸುವ ಕ್ರಿಯೆಯೇ "ಭಾಷಾಬೋಧನೆ". ಭಾಷಾಬೋಧನೆಯು ಒಂದು ಸಂಕೀರ್ಣ ಚಟುವಟಿಕೆ. ಒಂದು ಭಾಷೆಯ ಸರಳ ಕೌಶಲಗಳ ಸಾಮರ್ಥ್ಯ ಮತ್ತು ಅರಿವೇ ಭಾಷಾಬೋಧನೆ. ರಾಬರ್ಟ್ ಲ್ಯಾಡೋವಿನ ರೀತ್ಯಾ ಭಾಷಾಬೋಧನೆಯನ್ನು ಹೀಗೆ ವ್ಯಾಖ್ಯಿಸಬಹುದು. "Scientific language teaching is nothing but teaching the language of the foreign speakers as used by them". ಒಟ್ಟಿನಲ್ಲಿ ಯಾವುದೇ ಭಾಷೆಯ ಪೂರ್ಣರಚನೆಯನ್ನು ಸೂಕ್ಷ್ಮತತ್ತ್ವ ಸಿದ್ಧಾಂತಗಳ ಮೂಲಕ ಕಲಿಸುವುದೇ 'ಭಾಷಾಬೋಧನೆ'. ಕಲಿಕೆ ಭಾಷೆಯ ಸಾಮರ್ಥ್ಯ ಮತ್ತು ಬಳಕೆ, ಮೂಲ ಭಾಷೆಯಂತಿರಬೇಕು. ಇದೇ ಭಾಷಾಬೋಧನೆ.

ಭಾಷಾ ಬೋಧನೆಯ ಅಗತ್ಯ :

ನಾಗರೀಕ ಸಮಾಜಗಳಲ್ಲಿ ಬಹುಭಾಷೆಗಳ ಕಲಿಕೆ ಮತ್ತು ಬೋಧನೆ ತೀರಾ ಅನಿವಾರ್ಯ. ಇಂದಿನ ನಾಗರೀಕರ ಬದುಕಿನ ಅತಿಶಯಗಳಲ್ಲಿ ಭಾಷಾಬೋಧನೆಯು ಬಹು ಅಗತ್ಯವಾದುದು. ಕೇವಲ ಮಾತೃಭಾಷೆ, ವ್ಯಕ್ತಿಭಾಷೆ, ಪ್ರಾದೇಶಿಕ ಭಾಷೆ, ರಾಷ್ಟ್ರಭಾಷೆ ಇವಿಷ್ಟರಿಂದಲೇ ತನ್ನ ಸಮಾಜದ ಸಂಪೂರ್ಣ ವ್ಯವಹಾರಗಳನ್ನು ನಡೆಸು

ವುದು ಕಷ್ಟಸಾಧ್ಯ. ಅಂತಹ ಸಂದರ್ಭಗಳಲ್ಲಿ ಆತನಿಗೆ ನೆರೆಹೊರೆ ಭಾಷೆಗಳ ಬಳಕೆ ಮತ್ತು ಸಂಬಂಧ ಬೇಕೆಬೇಕು. ಇಲ್ಲವಾದಲ್ಲಿ ಅನ್ಯಸಮಾಜದ ಸಾಂಸ್ಕೃತಿಕ ಅಂಶಗಳಾಗಲೀ, ಸಾಹಿತ್ಯಾಂಶಗಳಾಗಲೀ, ಮಹತ್ವ ವಿಚಾರಗಳಾಗಲೀ ತಿಳಿಯದು. ಆದುದರಿಂದಲೇ ಇಂದಿನ ನಾಗರೀಕ ತನ್ನ ಭಾಷೆಯ ಜೊತೆಗೆ ಇತರ ಅಗತ್ಯ ಭಾಷೆಗಳನ್ನು ಕಲಿಯುತ್ತಿದ್ದಾನೆ. ಇದರಿಂದ ಬಹು ಸುಲಭವಾಗಿ ಭಿನ್ನ ಸಂಸ್ಕೃತಿಯ ಸಂಪರ್ಕ, ನಾಡು ನುಡಿಯ ಚರಿತ್ರೆ, ಬಹು ಜನರ ಪರಿಚಯ ಮತ್ತು ಹಲವು ಭಾಷೆಗಳ ಸಾಹಿತ್ಯದ ಅರಿವಾಗುತ್ತದೆ. ವ್ಯಕ್ತಿಯ ಜ್ಞಾನಾರ್ಜನೆ ಬಾಳಿನ ರೀತಿ ನೀತಿಗಳು ಸುಲಭವಾಗಿ ವಿಕಾಸವನ್ನು ಹೊಂದುವುದು ಇದರಿಂದ ಸಾಧ್ಯ. ವ್ಯಕ್ತಿ ನಾಗರೀಕನಾಗುತ್ತಾನೆ; ಸುಶಿಕ್ಷಿತನಾಗುತ್ತಾನೆ. ಬಹು ಭಾಷೆಗಳ ಅರಿವಿಲ್ಲದಿದ್ದರೆ ಆತನ ಬದುಕು ಪೂರ್ಣವಾಗದು. ಒಂದು ಜನಾಂಗದ ಸಾಂಸ್ಕೃತಿಕ ಮೌಲ್ಯತೆಯು ಆಯಾನಾಡಿನ ಬೋಧನೆಯ ತತ್ತ್ವ ಮತ್ತು ಸತ್ವದಿ ಆಧಾರವಾಗಿರುತ್ತದೆ. ಭಾಷಾ ಬೋಧನೆ ಮತ್ತು ಕಲಿಕೆ ಪ್ರತಿಯೋರ್ವನ ಜೀವಿತದಲ್ಲಿ ಬಹು ಮುಖ್ಯವಾದ ಸಾಮಾಜಿಕ ಚಟುವಟಿಕೆ. ಜ್ಞಾನಾರ್ಜನೆಯಲ್ಲಿ ಇದಕ್ಕಿರುವ ಮಹತ್ವ ಬಹಳ ಹಿರಿದು. ಸೌಹಾರ್ದತೆ, ಭಾವೈಕ್ಯತೆ, ರಾಷ್ಟ್ರೀಯತೆ, ಸಾಮಾಜಿಕ ನ್ಯಾಯ, ಪರಸ್ಪರ ಅರಿವು ಮತ್ತು ನಾಡಿನ ಪ್ರಗತಿಯೇ ಭಾಷಾಬೋಧನೆಯ ಮತ್ತು ಕಲಿಕೆಯ ಮುಖ್ಯ ಉದ್ದೇಶ.

ಮಾತೃ ಭಾಷಾ ಮಾಧ್ಯಮದ ಅಗತ್ಯ :

ಶಿಕ್ಷಣ ಮಾಧ್ಯಮದಲ್ಲಿ ಮಾತೃಭಾಷೆಯ ಸ್ಥಾನ ಬಹು ಮಹತ್ವವಾದದು. ವಿದ್ಯಾಭ್ಯಾಸದಲ್ಲಿ ಯಾವ ಭಾಷೆಗೆ ಮೊದಲ ಸ್ಥಾನವನ್ನು ನೀಡಬೇಕೆಂಬುದರ ಬಗ್ಗೆ ವಾದ-ವಿವಾದಗಳು ನಡೆದ ಹೊತ್ತಿನಲ್ಲಿ, ಮಾತೃಭಾಷೆಗೆ ಪ್ರಥಮ ಸ್ಥಾನವನ್ನು ಮೀಸಲಾಗಿರಿಸಬೇಕೆಂಬ ತೀರ್ಮಾನ ಉಚಿತವಾದುದೇ ಸರಿ. ಮೊದಲಿನಿಂದಲೂ ಶಿಕ್ಷಣದಲ್ಲಿ ಭಾಷೆಗೆ ನ್ಯಾಯವಾದ ಸ್ಥಾನ ದೊರಕಿದೆ. ಆದರೆ ಮಾತೃಭಾಷೆಗೆ ಈ ಅವಕಾಶ ದೊರೆತಿರಲಿಲ್ಲ. ಶಾಲೆಗಳಲ್ಲಿ ಮಗುವಿನ ಮೊದಲ ಶಿಕ್ಷಣವು ತನ್ನ ಮಾತೃಭಾಷೆಯಿಂದಲೇ ಆಗಬೇಕೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಉನ್ನತ ವ್ಯಾಸಂಗವೂ ತಾಯ್ನುಡಿಯಲ್ಲಿಯೇ ಜರುಗಬೇಕು. ಇದಕ್ಕೆ ಅನೇಕ ಕಾರಣಗಳನ್ನು ನೀಡಬಹುದು. ಬಹು ಮುಖ್ಯವಾದ ಐದು ಕಾರಣಗಳನ್ನು ಇಲ್ಲಿ ಪಟ್ಟಿಮಾಡಬಹುದು. ಅವು ಹೀಗಿವೆ :

೧. ಮನೋವೈಜ್ಞಾನಿಕ ದೃಷ್ಟಿ (Psychological aspects)
೨. ಶೈಕ್ಷಣಿಕ ದೃಷ್ಟಿ (Educational aspects)
೩. ಸಾಮಾಜಿಕ ದೃಷ್ಟಿ (Social aspects)
೪. ಚಾರಿತ್ರಿಕ ದೃಷ್ಟಿ (Historical aspects)
೫. ರಾಜಕೀಯ ದೃಷ್ಟಿ (Political aspects)

೧. ಮನೋವೈಜ್ಞಾನಿಕ ದೃಷ್ಟಿ : ಮನೋವೈಜ್ಞಾನಿಕ ಚರ್ಚಾಂಶಗಳು ಎಷ್ಟೋ ಸಲ ಮಾತೃಭಾಷಾ ಮಾಧ್ಯಮಕ್ಕೆ ಪುಷ್ಟಿ ನೀಡುತ್ತದೆ. ಮಗುವಿಗೆ ಮೊದಲು ತಿಳಿಯುವ ಭಾಷೆಯೇ ತಾಯಿ ಮಾತು. ಅದು ಎಲ್ಲಾ ಭಾಷೆಗಳಿಗಿಂತ ಜನಪ್ರಿಯ ಮತ್ತು ಸಾಮ್ಯಸಂವಹನ ಹೊಂದಿದ ಭಾಷೆ. ಇದಕ್ಕೆ ಮುಖ್ಯ ಕಾರಣ ಮಾತೃಭಾಷೆಯು ಬಹು ಅರ್ಥಪೂರ್ಣ ಸಂವಹನ ಮಾಧ್ಯಮ. ಯಾವುದೇ ಭಾಷಾ ಮಾಧ್ಯಮಕ್ಕಿಂತ ಶೀಘ್ರವಾಗಿ, ಪೂರ್ಣ ಪ್ರಮಾಣದಲ್ಲಿ ಅರ್ಥಪಡಿಸಬಲ್ಲ ಸಂಜ್ಞಾ ಮಾಧ್ಯಮವಿದು. ತನ್ನ ಸ್ವಭಾಷೆಯನ್ನು ಬಿಟ್ಟು ಮಗು ಇನ್ನಾವುದೇ ಭಾಷೆಯನ್ನು ಮುಖ್ಯ ಮಾಧ್ಯಮವನ್ನಾಗಿ ಬಳಸಿಕೊಂಡಲ್ಲಿ, ಮಗು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮಗುವಿನ ಬೌದ್ಧಿಕ ಬೆಳವಣಿಗೆಗೆ ಮಾತೃಭಾಷೆ ಅಗತ್ಯ. ಮಾತೃಭಾಷೆಯಿಂದ ಭಾವಾತ್ಮಕತೆ ಸ್ಥಿರಗೊಳ್ಳುತ್ತದೆ. ವ್ಯಕ್ತಿತ್ವವು ಭೌತವಾಗಿ ಮತ್ತು ಸಾಮಾಜಿಕವಾಗಿ ಸೂಕ್ತಗೊಳ್ಳುತ್ತದೆ ಸ್ಥಿರ ಆಲೋಚನೆ, ಸ್ಪಷ್ಟ ಭಾಷಾ ಬಳಕೆ ಮತ್ತು ಓದು ಬರಹ ಸಹಜವಾಗಿ ಲಭ್ಯವಾಗುತ್ತದೆ.

೨. ಶೈಕ್ಷಣಿಕ ದೃಷ್ಟಿ : ತಿಳಿಯದ ಮಾಧ್ಯಮಕ್ಕಿಂತ ಮಾತೃಭಾಷೆಯಲ್ಲಿ ಮಕ್ಕಳು ಬಹುಬೇಗನೆ ಕಲಿಯುತ್ತಾರೆ ಪರಭಾಷೆಯನ್ನು ಕಲಿತು, ಅದನ್ನೇ ಶಿಕ್ಷಣ ಮಾಧ್ಯಮವಾಗಿ ಬಳಸುವುದು ಸಮಯಾಲಾಪ ಮಾಡಿದಂತೆ. ಪೂರ್ಣ ಅರಿವು ಅನ್ಯ ಭಾಷಾಮಾಧ್ಯಮದಲ್ಲಿ ದೊರಕದು. ತಿಳುವಳಿಕೆಯ ಅರ್ಜನೆಯು ಮೊದಮೊದಲು ಬಹು ಕಷ್ಟವೇ ಮಗುವಿನ ವಿದ್ಯಾಭ್ಯಾಸದ ಎಲ್ಲ ಹಂತದ ಪ್ರಗತಿಯನ್ನು ಇಷ್ಟೇ ಸರಿ ಎಂದು ಹೇಳಲಾಗದು. ಶಾಲೆಗಳನ್ನು ಬಿಡುವ ಮಕ್ಕಳ ಸಂಖ್ಯೆ ಹೆಚ್ಚಾಗುವುದು. ಅದನ್ನು ತಡೆಗಟ್ಟಬೇಕಾದರೆ ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯನ್ನು ಕಡ್ಡಾಯಗೊಳಿಸಬೇಕು. ಕಲಿಕೆಯ ಕೌಶಲ್ಯವನ್ನು ಮಾತೃಭಾಷೆಯಿಂದ ಬಿಗಿಗೊಳಿಸಬಹುದು. ಶಿಕ್ಷಣದ ಸಾರ್ಥಕತೆಯು ಮಾತೃಭಾಷಾ ಮಾಧ್ಯಮ ಬೋಧನೆಯಿಂದ ಪಡೆಯಬಹುದು

೩. ಸಾಮಾಜಿಕ ದೃಷ್ಟಿ : ಸಮಾಜೀಕರಣ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಪ್ರಗತಿ, ಸಾಂಸ್ಕೃತಿಕ ವರ್ಗದಲ್ಲಿ ಹೊಂದಾಣಿಕೆ ಮತ್ತು ರಾಷ್ಟ್ರದ ಐಕ್ಯತೆಯು ಪ್ರಥಮ (ಮಾತೃ) ಭಾಷೆಯಿಂದ ಸಿದ್ಧಿಸುವುದು. ವ್ಯಕ್ತಿ ಸಮಾಜದ ಒಬ್ಬ ಪ್ರಜೆ. ಆ ಸಮಾಜದ ಭಾಷೆಯ ಸದಸ್ಯ. ಭಾಷೆಯ ಮೂಲಕ ಆ ಸಮಾಜದಲ್ಲಿ ತನ್ನನ್ನು ಪ್ರತಿನಿಧಿಸಿಕೊಳ್ಳುತ್ತಾನೆ. ಉತ್ತಮ ಸಂವಹನಕ್ಕೆ, ಉತ್ತಮ ಸಂಬಂಧಕ್ಕೆ ಮತ್ತು ಏಕತೆಗೆ ಮಾತೃಭಾಷೆ ಅಗತ್ಯ. ಮಗುವಿನ ಸಾಮಾಜಿಕ ಬೆಳವಣಿಗೆಗೆ ಮಾತೃಭಾಷೆಯನ್ನೇ ಮಾಧ್ಯಮವಾಗಿ ಬಳಸಬೇಕು. ದೃಢ ಆರ್ಥಿಕ ಪ್ರಗತಿಯು ಒಂದು ನಾಡಿನ ಜನ ಬಳಸುವ ಪ್ರಥಮ ಭಾಷೆಯಿಂದಲೇ ಲಭ್ಯ. ಸಮಾಜದ ನೀತಿ ನಿಯಮಗಳ ಮಂಡನೆ, ಪಾಲನೆ ಮತ್ತು ಯೋಜನೆಯು ಮಾತೃಭಾಷೆಯಿಂದಲೇ ನಿರೂಪಿತವಾಗಬೇಕು. ಅದು ಅನ್ಯಭಾಷೆಯಿಂದ ನಿರೂಪಿತವಾದರೆ ಅದರಿಂದ ಪ್ರಯೋಜನವಿಲ್ಲ. ಸರ್ಕಾರ ಮತ್ತು ಪ್ರಜೆಗಳ ನಡುವೆ, ಮಾತೃಭಾಷೆ ಸೌಹಾರ್ದತೆಯನ್ನು ತರುವುದು.

೪. ಚಾರಿತ್ರಿಕ ದೃಷ್ಟಿ : ಚಾರಿತ್ರಿಕ ದಾಖಲೆಗಳ ಆಧಾರದ ಮೇಲೆ ಮಾತೃ ಭಾಷೆಯು ನಿರಂತರವಾಗಿ ಪ್ರಧಾನತೆಯೊಂದಿಗೆ ಯುಕ್ತವಾಗಿದೆ, ಅಲ್ಲದೆ ಇತರ ಅಲ್ಪ ಸಂಖ್ಯಾತ ಭಾಷೆಯೊಂದಿಗೂ ಯುಕ್ತವಾಗಿದೆ. ಐತಿಹಾಸಿಕತೆ, ಜನಪ್ರಿಯತೆ ಮತ್ತು ಮಹತ್ವವು, ಮಾತೃಭಾಷೆಯ ಅಗತ್ಯತೆಗೆ ಕಾರಣವಾಗುವುದು. ಸಮಾಜದ ಸ್ಥಿರತೆಯು ಚಾರಿತ್ರಿಕತೆಯೊಂದಿಗೆ ಬೆಸೆದುಕೊಂಡಿರುತ್ತದೆ. ಪ್ರಾಚೀನ ಮೌಲ್ಯವು ಮಾತೃಭಾಷೆಯ ಮೌಲಿಕತೆಯನ್ನು ಹೆಚ್ಚಿಸುತ್ತದೆ. ಈ ದೃಷ್ಟಿಯಿಂದ ಮಾತೃ ಭಾಷಾಮಾಧ್ಯಮವು ಶಿಕ್ಷಣದಲ್ಲಿ ತೀರಾ ಅಗತ್ಯ.

೫. ರಾಜಕೀಯ ದೃಷ್ಟಿ : ಸರ್ಕಾರವು ಶಿಕ್ಷಣಕ್ಷೇತ್ರದಲ್ಲಿ, ಆಡಳಿತಕ್ಷೇತ್ರದಲ್ಲಿ, ಸಮೂಹಮಾಧ್ಯಮಗಳಲ್ಲಿ ಮಾತೃಭಾಷೆಯನ್ನು ಬಳಸುವುದರಿಂದಲೇ ಸ್ವಾಯತ್ತತೆ, ಐಕ್ಯತೆ ಮತ್ತು ಸೌಹಾರ್ದತೆಯನ್ನು ಹೊಂದಿರುವುದು. ದೇಶದ ಅವಿದ್ಯಾತನವನ್ನು ಮಾತೃಭಾಷೆಯ ಮೂಲಕ ತೊಡೆದು ಹಾಕಬಹುದು. ಸರ್ಕಾರದ ಸಾಮ್ಯತೆಯನ್ನು, ಪ್ರಗತಿಯನ್ನೂ ಮೂಲಭೂತವಾಗಿ ಮಾತೃಭಾಷೆಯ ಆಧಾರದಿಂದ ಪರಿಗಣಿಸ ಬಹುದು. ಪ್ರತಿಯೊಂದು ನಾಡು ಸ್ವಸಂರಕ್ಷಣೆ (Self preservation) ಸ್ವಸುಸ್ಥಿತಿ (Self maintenance) ಮತ್ತು ಸಮರೂಪ (homogeneity)ವನ್ನು ಸಾಧಿಸಿರು ವುದು ಮಾತೃಭಾಷೆಯಿಂದಲೆ. ಹೀಗಾಗಿ ಇಂದು ಶಿಕ್ಷಣ ರಂಗದಲ್ಲಿ ಮಾತೃಭಾಷಾ ಬೋಧನೆ (ಮಾಧ್ಯಮ) ಅನಿವಾರ್ಯ.

ಈ ಸಂದರ್ಭದಲ್ಲಿ ಒಂದು ನಾಡಿನ ಮಾತೃಭಾಷೆ ಯಾವುದು ? ಅದನ್ನು ಪರಿಗಣಿಸುವ ಬಗೆ ಹೇಗೆ ? ಮಾತೃಭಾಷೆಯ ಮುಖ್ಯ ಲಕ್ಷಣಗಳೇನು ? ಎಂಬುದರ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಲೇಬೇಕು. ಒಂದು ನಾಡಿನ ಬಹು ಸಂಖ್ಯಾ ಭಾಷೆ ಇಲ್ಲವೇ ಒಂದು ಸಮಾಜದ ಸಾರ್ವತ್ರಿಕರ ಸಂವಹನ ಭಾಷೆ ಇಲ್ಲವೇ ಒಂದು ದೇಶದ ಸ್ವಾಭಿಮಾನದ ಸಾಂಸ್ಕೃತಿಕ ಭಾಷೆಯೇ ' ಮಾತೃಭಾಷೆ '. ಅಂದರೆ ನಾಡಿನ ಜನಸಾಮಾನ್ಯರ ಆಡುನುಡಿಯೇ ' ಮಾತೃಭಾಷೆ '. ಜನ ಭಾಷೆಯು ಆ ನಾಡಿನ ದೇಶಭಾಷೆಯಾಗಿರಬಹುದು ಅಥವಾ ಪ್ರಥಮ ಭಾಷೆಯಾಗಿರಬಹುದು. ಕೆಲವೊಮ್ಮೆ ಉಪಭಾಷೆ ಮತ್ತು ವ್ಯಕ್ತಿಭಾಷೆಗಳೂ ಮಾತೃಭಾಷೆ ಎನಿಸಿಕೊಳ್ಳ ಬಹುದು, ಆದರೆ ಇವಕ್ಕೆ ಸಾರ್ವತ್ರಿಕತೆ ಇರುವುದಿಲ್ಲ ಆ ಕಾರಣದಿಂದಲೇ ಬಹು ಸಂಖ್ಯಾತರು ಆಡುವ ನುಡಿಯೇ ಮಾತೃಭಾಷೆ. ಅದೇ ಪ್ರಥಮ ಭಾಷೆ, ಜನಭಾಷೆ, ದೇಶಭಾಷೆ, ರಾಜ್ಯಭಾಷೆ. ಈ ಭಾಷೆಯನ್ನೇ ನಾಡಿನ ' ಸಂಸ್ಕೃತಿಯ ಭಾಷೆ ' ಎಂದು ಕರೆಯುವುದು. ಈ ದೃಷ್ಟಿಯಿಂದಲೇ " ಕನ್ನಡ ", ಮುಕ್ಕೋಟಿ ಕನ್ನಡಿಗರ ಮಾತೃ ಭಾಷೆ, ಕರ್ನಾಟಕ ರಾಜ್ಯದ ' ರಾಜ್ಯಭಾಷೆ ', ಕನ್ನಡ ನಾಡಿನ ' ಜನ ಭಾಷೆ '. ಕನ್ನಡನಾಡಿನ ಅಭ್ಯುದಯಕ್ಕೆ, ಶಿಕ್ಷಣದ ಔನತ್ಯಕ್ಕೆ ' ಕನ್ನಡ ' ಬೋಧನೆಯ ಮಾಧ್ಯಮವಾಗಬೇಕು.

ಭಾಷಾ ಬೋಧನಾ ಪದ್ಧತಿಗಳು :

ಬಹು ಪ್ರಾಚೀನ ಕಾಲದಿಂದಲೂ ಭಾಷಾ ಬೋಧನೆಯು ತನ್ನದೇ ಆದ ಐತಿಹಾಸಕತೆ, ವಶೌಲ್ಯತೆ, ವಿಶಿಷ್ಟತೆ, ಮತ್ತು ನೈಜತೆಯನ್ನು ಪಡೆದುಕೊಂಡಿದೆ. ಯಾವುದೇ ಭಾಷೆಯನ್ನು ಕಲಿಸುವಾಗ ಹಲವಾರು ಕ್ಲುಪ್ತ ನಿಯಮಗಳನ್ನು ಪಾಲಿಸುವುದು ಸಹಜ. ಅಂತಹ ನಿಯಮಗಳೇ ಸಾರ್ವತ್ರಿಕ ಬೋಧನಾ ತತ್ತ್ವಗಳಾಗಿ ಪರಿಗಣಿಸಲ್ಪಟ್ಟು ಒಂದು ಪದ್ಧತಿಗಳಂತೆ ಬಳಕೆಯಾಗಿವೆ. ಹೊಸ ತಂತ್ರ ಮತ್ತು ಯುಕ್ತ ಪದ್ಧತಿಗಳ ಅಗತ್ಯ ಇಂದಿದೆ. ಬೋಧಿಸುವ ರೀತಿ ಅವುಗಳಿಗೆ ಸಂಬಂಧಪಟ್ಟ ತತ್ತ್ವಗಳು, ಅವುಗಳ ಕ್ರಮ, ಜನಪ್ರಿಯತೆ, ಚಾರಿತ್ರಿಕತೆ ಮತ್ತು ವಶೌಲ್ಯತೆಯನ್ನು ಆಧರಿಸಿ ಬೋಧನಾ ಪದ್ಧತಿಗಳನ್ನು ಮುಖ್ಯವಾಗಿ ಎರಡು ಪ್ರಧಾನ ಗುಂಪುಗಳಾಗಿ ವಿಂಗಡಿಸಬಹುದು. ಅವು :

೧. ಸಾಂಪ್ರದಾಯಿಕ/ಪ್ರಾಚೀನ ಪದ್ಧತಿಗಳು (Traditional methods)
೨. ನೂತನ/ವೈಜ್ಞಾನಿಕ ಪದ್ಧತಿಗಳು (Modern/Scientific methods)

೧. **ಸಾಂಪ್ರದಾಯಿಕ ಪದ್ಧತಿಗಳು :** ಭಾಷಾ ಬೋಧನೆಯಲ್ಲಿ ಕಂಡುಬರುವ ಕ್ರಮ ಮತ್ತು ದೃಷ್ಟಿಕೋನಗಳನ್ನು ಗಮನಿಸಿ ಈ ಬೋಧನಾ ಪದ್ಧತಿಗಳನ್ನು ಪ್ರಾಚೀನ/ಸಾಂಪ್ರದಾಯಿಕ ಪದ್ಧತಿಗಳು ಎಂದು ಪರಿಗಣಿಸಿದೆ. ಇಲ್ಲಿ ಮುಖ್ಯವಾಗಿ ಕಾಲ, ಐತಿಹಾಸಿಕತೆ ಮತ್ತು ಪರಿಸರವನ್ನು ಗಮನಿಸಲಾಗುತ್ತದೆ. ಸಂದರ್ಭಾನುಸಾರ ಮತ್ತು ಬೋಧನಾ ವಿಧಾನಕ್ಕೆ ಅನ್ವಯಿಸಿದಂತೆ ಸಾಂಪ್ರದಾಯಿಕ ಪದ್ಧತಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಅವು—

೧. ವ್ಯಾಕರಣ-ಭಾಷಾಂತರ ವಿಧಾನ(Grammar-Translation method)
೨. ಪ್ರತ್ಯಕ್ಷ ವಿಧಾನ (Direct method)
೩. ನೈಸರ್ಗಿಕ ವಿಧಾನ (Natural method)

೧. **ವ್ಯಾಕರಣ-ಭಾಷಾಂತರ ವಿಧಾನ :** ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ ವ್ಯಾಕರಣ ಸೂತ್ರಗಳನ್ನು ಕಂಠಪಾಠಮಾಡುವುದು ಮತ್ತು ನಿಘಂಟನ್ನು ಭಾಷಾ ಬೋಧನೆಗೆ ಬಳಸಿಕೊಳ್ಳುವುದು ರೂಢಿಯಾಗಿತ್ತು. ಭಾಷೆಯನ್ನು ಕಲಿಯುವವರು ಧಾತು ಮತ್ತು ವಿಭಕ್ತಿಪ್ರತ್ಯಯಗಳಿಗೆ ಸಂಬಂಧಿಸಿದ ತತ್ತ್ವಗಳನ್ನು ಬಾಯಿಪಾಠ ಮಾಡಬೇಕಾಗಿತ್ತು, ಭಾಷೆಯನ್ನು ಕಲಿಸಲು ಅವುಗಳ ವ್ಯಾಕರಣಗಳನ್ನು ಅನುವಾದಿಸುವುದು ಅನಿವಾರ್ಯವಾಗಿತ್ತು. ದ್ವಿಭಾಷಾ ನಿಘಂಟುಗಳನ್ನೂ, ದ್ವಿಭಾಷಾ ಪಠ್ಯ ಪುಸ್ತಕಗಳನ್ನೂ ಭಾಷಾಬೋಧನೆಯಲ್ಲಿ ಯಥೇಚ್ಛವಾಗಿ ಬಳಸಲಾಗುತ್ತಿತ್ತು. ತಿಳಿಯದ ಭಾಷೆಯ ವ್ಯಾಕರಣಾಂಶಗಳನ್ನು ಮಾತೃಭಾಷೆಗೂ, ಮಾತೃಭಾಷೆಯಿಂದ ಅನ್ಯಭಾಷೆಗೂ ಕೆಲವು ಪ್ರಮುಖಾಂಶಗಳನ್ನು ಭಾಷಾಂತರಿಸಿ ಬೋಧಿಸಬೇಕಾಗಿತ್ತು. ಭಾಷೆಯನ್ನು ಕಲಿಯುವಲ್ಲಿ ಬಹು ಉಪಯೋಗಕ್ಕೆ ಬರುವ ಮಾದರಿಯಿದು.

೨. ಪ್ರತ್ಯಕ್ಷ ವಿಧಾನ: ಭಾಷಾಬೋಧನೆಯಲ್ಲಿ ಬಹು ಪ್ರಚಲಿತ ಮತ್ತು ಜನಪ್ರಿಯವಾಗಿ ಕಂಡುಬರುವ ಬೋಧನಾ ವಿಧಾನವಿದು. ವ್ಯಾಕರಣ–ಭಾಷಾಂತರ ಪದ್ಧತಿಗೆ ಪ್ರತಿಯಾಗಿ ಯುರೋಪ್ ದೇಶದಲ್ಲಿ ಒಂದು ಭಾಷಾ ಚಳವಳಿ ಪ್ರಾರಂಭ ವಾಯಿತು. ನೈಸರ್ಗಿಕ ಸನ್ನಿವೇಶಗಳಲ್ಲಿ ಕಲಿಯುವ ಭಾಷೆಯ ನೇರ ಸಂಪರ್ಕಕ್ಕೆ ಒಳಗಾಗುವುದರಿಂದ ಮಾತ್ರ ಆ ಭಾಷೆಯನ್ನು ಸಮರ್ಪಕವಾಗಿ ಕಲಿಯಲು ಸಾಧ್ಯ ಎಂದು ಬೋಧನಾ ಚಳುವಳಿ ಸಾರಿತು. ಇಲ್ಲಿ ಅನೇಕ ಬೋಧನಾ ಮಾರ್ಪಾಟಿಗೆ ಅವಕಾಶ ಸಿಕ್ಕಿದಂತಾಯಿತು. ಅವುಗಳನ್ನು ಸೂಚಿಸಲು ನೂತನ ಪದ್ಧತಿ, ಸುಧಾರಣಾ ಪದ್ಧತಿ, ಸಹಜ ಪದ್ಧತಿ ಹಾಗೂ ಮೌಖಿಕ ಪದ್ಧತಿ ಎಂದು ಅನೇಕ ಹೆಸರುಗಳು ಬಳಕೆಗೆ ಬಂದವು. ಎಲ್ಲ ವಿಧಿವಿಧಾನಗಳನ್ನು ಯುಕ್ತಗೊಳಿಸಿ "ಪ್ರತ್ಯಕ್ಷ" ಅಥವಾ "ಭಾಷಾಸಂಸರ್ಗ" ವಿಧಾನ ಎಂದು ಕರೆಯಬಹುದು. ಕಲಿಕೆಯ ಭಾಷೆಯೊಡನೆ ನೇರ ಸಂಪರ್ಕವನ್ನು ಒತ್ತಿ ಹೇಳುವುದರ ಜೊತೆಗೆ ಭಾಷಾಂತರ ಹಾಗೂ ಧಾತು ಮತ್ತು ವಿಭಕ್ತಿ ರೂಪಗಳ ಬಾಯಿಪಾಠವನ್ನು ತಪ್ಪಿಸಲಾಯಿತು. ಹೊಸ ಬೋಧನಾ ತಂತ್ರಗಳನ್ನು ಸೇರ್ಪಡಿಸಲಾಯಿತು. ವ್ಯಾಕರಣಗಳ ಪಠಣವನ್ನು ನಿಲ್ಲಿಸಿ ಭಾಷಾ ಸಂಪರ್ಕವನ್ನು ಮತ್ತು ಅನುವಾದಕ್ಕೆ ಬದಲು ಭಾಷಾ ಬಳಕೆಯನ್ನು ಜನಪ್ರಿಯ ಗೊಳಿಸಲಾಯಿತು. ಭಾಷಾ ಬೋಧನೆಯನ್ನು ಅರ್ಥದೊಡನೆ ಸಂಯೋಜಿಸಿ ಕಲಿಸುವುದು ಈ ವಿಧಾನದ ಮೂಲ ಉದ್ದೇಶ. ಕಲಿಯಬೇಕಾದ ಹಾಗೂ ಕಲಿಸ ಬಹುದಾದ ಅಂಶಗಳನ್ನು ಪ್ರತ್ಯಕ್ಷಪ್ರಮಾಣದೊಂದಿಗೆ ಕಲಿಯಲು ಈ ವಿಧಾನದಲ್ಲಿ ಸಾಧ್ಯವಿದೆ.

೩. ನೈಸರ್ಗಿಕ ವಿಧಾನ: ಯಾವುದೇ ನಿರ್ದಿಷ್ಟ ನೀತಿ ನಿಯಮ ಇಲ್ಲದೆ ಸಹಜ ವಾಗಿರುವ ಬೋಧನಾ ವಿಧಾನವಿದು. ಸನ್ನಿವೇಶ ಮತ್ತು ಪರಿಸರಕ್ಕೆ ತಕ್ಕಂತೆ ನಿರೂಪಿತ ವಾಗುವ ಶಿಕ್ಷಣ ವಿಧಾನವಿದು. ಕಲಿಕೆಯ ಭಾಷೆಯ ಚೌಕಟ್ಟಿಗೆ ಹೊಂದಿಕೊಂಡ ಹಾಗೆ ಸಿದ್ಧಾಂತಗಳನ್ನು ರೂಪಿಸಿಕೊಂಡಿರುತ್ತೆ. ಸಹಜ ಭಾಷಾ ಬೋಧನಾ ವಿಧಾನವಿದು.

೪. ವೈಜ್ಞಾನಿಕ ಪದ್ಧತಿಗಳು: ಇಂದು ಭಾಷಾ ಬೋಧನೆಯಲ್ಲಿ ನೂತನ ತಂತ್ರಗಳು ಮತ್ತು ಮೌಲಿಕ ಕ್ರಮಗಳನ್ನು ಅನ್ವಯಿಸಿ ಬೋಧಿಸುವುದು ಸಾಮಾನ್ಯ. ಅನೇಕ ವೈಜ್ಞಾನಿಕ ಉಪಕರಣಗಳನ್ನು ಬಳಸಿಕೊಂಡು ಶೀಘ್ರವಾಗಿ ಭಾಷೆಯನ್ನು ಕಲಿಸುವ ಮಾಧ್ಯಮವಿದು. ಭಾಷೆಯ ರಚನೆ, ಶಬ್ದ, ಆಕೃತಿಮಾ, ವಾಕ್ಯ ಮತ್ತು ವ್ಯಾಕರಣ ನಿಯಮಗಳಿಗೆ ಹೊಂದಿಕೊಂಡಂತೆ ಭಾಷಾ ಬೋಧನೆಯನ್ನು ಮಾಡ ಲಾಗುವುದು. ಬೋಧನಾತತ್ತ್ವ, ಕ್ರಮ ಮತ್ತು ಹೊಸ ತಂತ್ರಗಳ ಅನ್ವಯ ವೈಜ್ಞಾನಿಕ ಬೋಧನಾ ಪದ್ಧತಿಯನ್ನು ಹಲವು ಉಪ ವಿಧಾನಗಳಾಗಿ ವರ್ಗೀಕರಿಸ ಬಹುದು. ಪ್ರತಿಯೊಂದು ಉಪವಿಧಾನವು ತನ್ನದೇ ಆದ ವಿಶಿಷ್ಟ ಮಹತ್ವವನ್ನು ಪಡೆದಿರುತ್ತದೆ. ನೂತನ ಭಾಷಾ ಬೋಧನಾ ಪದ್ಧತಿಯ ಉಪವಿಧಾನಗಳು ಇಂತಿವೆ.

೧. ಮನೋವೈಜ್ಞಾನಿಕ ವಿಧಾನ (Psychological method)
೨. ಧ್ವನಿ ವಿಧಾನ (Phonetic method)
೩. ಪಠನ ವಿಧಾನ (Reading method)
೪. ವ್ಯಾಕರಣ ವಿಧಾನ (Grammar method)
೫. ಭಾಷಾಂತರ ವಿಧಾನ (Translation method)
೬. ವಿದ್ಯುತ್ ವಿಧಾನ (Electric method)
೭. ಘಟಕ ವಿಧಾನ (Unit method)
೮. ಭಾಷಾನಿಯಂತ್ರಣ ವಿಧಾನ (Language control method)
೯. ಅಣಕ-ಸ್ಮರಣ ವಿಧಾನ (Mimicry-memorization method)
೧೦. ದ್ವಿಭಾಷಾ ವಿಧಾನ (Dual language method)
೧೧. ಪರಿಪಾಠತತ್ತ್ವ ವಿಧಾನ (Practice theory method)
೧೨. ಜ್ಞಾತಿ ವಿಧಾನ (Cognate method)
೧೩. ರಚನಾ ವಿಧಾನ (Structural method)
೧೪. ಸೈನ್ಯ ವಿಧಾನ (Army method)
೧೫. ಭಾಷಾಸೂಚಕ ವಿಧಾನ (Informant method)
೧೬. ಪ್ರಯೋಗಶಾಲಾ ವಿಧಾನ (Laboratory method)
೧೭. ಗ್ರಾಹ್ಯ ವಿಧಾನ (Comprehensive method)
೧೮. ಭಾಷಾವೈಜ್ಞಾನಿಕ ವಿಧಾನ (Linguistic method) ಇತ್ಯಾದಿ.

ಇಲ್ಲಿ ಮೇಲೆ ನಮೂದಿಸಿರುವ ಎಲ್ಲಾ ವೈಜ್ಞಾನಿಕ ಬೋಧನಾ ಪದ್ಧತಿಗಳನ್ನು ವಿವರವಾಗಿ ವಿವರಿಸಲಾಗಿಲ್ಲ. ಪ್ರಮುಖವಾದ ಭಾಷಾವೈಜ್ಞಾನಿಕ ವಿಧಾನವನ್ನು ಮಾತ್ರ ಸ್ಥೂಲವಾಗಿ ವಿವರಿಸಿದೆ. ಉಳಿದೆಲ್ಲಾ ವಿಧಾನಗಳೂ ಭಾಷಾಬೋಧನೆಗೆ ಒಂದಲ್ಲ ಒಂದು ಕಾರಣದಿಂದ ಬಹು ಮುಖ್ಯವಾದುವು.

ಭಾಷಾವೈಜ್ಞಾನಿಕ ವಿಧಾನ: ನೂತನ ಪದ್ಧತಿಗಳಲ್ಲಿ ಭಾಷಾವೈಜ್ಞಾನಿಕ ವಿಧಾನವು ಬಹು ಪ್ರಮುಖವಾದುದು, ಜನಪ್ರಿಯವಾದುದು. ಹೊಸ ಹೊಸ ತಂತ್ರಗಳ, ಅನೇಕ ಆಧುನಿಕ ಯಂತ್ರಗಳ ಮೂಲಕ ಭಾಷೆಯನ್ನು ಕಲಿಸಲಾಗುತ್ತದೆ. ಎರಡನೇ ವಿಶ್ವಸಮರದ ಕಾಲದಲ್ಲಿ ಬಹು ಪ್ರಚಾರಗೊಂಡ ವಿಧಾನವಿದು. ದಕ್ಷ ಭಾಷಾ ವಿಜ್ಞಾನಿಗಳ ಸಹಯೋಗದಿಂದ ಶೀಘ್ರವಾಗಿ ಭಾಷೆಯನ್ನು ಬೋಧಿಸುವ ಒಂದು ಹೊಸ ನಮೂನೆಯನ್ನು ಸಿದ್ಧಪಡಿಸಲಾಯಿತು. ಅದೇ 'ಭಾಷಾವೈಜ್ಞಾನಿಕ' ವಿಧಾನ. ಸಾಮಾನ್ಯ ಜನತೆ ಆಡುವ ರೀತಿಯಲ್ಲಿ ಭಾಷೆಯನ್ನು ಕಲಿಸಬೇಕೆಂಬುದು ಈ ವಿಧಾನದ ಉದ್ದೇಶ. ಮೂಲ ಸಂಭಾಷಣಾ ವಾಕ್ಯಗಳನ್ನು ಪುನರುಚ್ಚರಿಸುವುದು, ಅವುಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳುವುದು ಮತ್ತು ಭಾಷಿಕರನ್ನು ಅನುಕರಿಸುವುದು ಅಗತ್ಯ. ಭಾಷೆಯ ವಿವರಣಾತ್ಮಕ ಅಂಶಗಳಾದ ರಾಗ, ಉಚ್ಚಾರಣೆ, ಆಕೃತಿಮಾ

ಬಂಧ ಮತ್ತು ವಾಕ್ಯಗಳನ್ನು ಕುರಿತ ವಿವರಣೆಯನ್ನು ಕೊಡಲಾಯಿತು. ಅನುವಾದಕ್ಕಿಂತ ಬೇಗನೆ ಸಮರ್ಥವಾಗಿ ಭಾಷೆಯನ್ನು ಕಲಿಸಬಹುದು. ಸಾಮೂಹಿಕ ಮಾದರಿ ಪರಿಪಾಠ (Pattern practice) ಎಂಬ ತತ್ತ್ವವನ್ನು ಬೋಧನೆಗಾಗಿ ಸಿದ್ಧಪಡಿಸಲಾಯಿತು. ಧ್ವನಿ ಮುದ್ರಿಕೆಗಳು, ಇತರ ಶ್ರವ್ಯ ಸಾಮಗ್ರಿಗಳು, ದೃಶ್ಯ ಸಾಧನಗಳನ್ನೂ ಬೋಧನೆಗಾಗಿ ಬಳಸಿಕೊಂಡರು ಫಲಪ್ರದವಾದ ಬೋಧನಾ ವಿಧಾನ ಎಂದು ಹೆಸರುವಾಸಿಯಾಯಿತು. ಇತರ ಎಲ್ಲಾ ವಿಧಾನಕ್ಕಿಂತ ವೈಜ್ಞಾನಿಕ ವಿಧಾನದಲ್ಲಿ ಸಮರ್ಥ ರೀತಿಯಲ್ಲಿ ಭಾಷೆಯನ್ನು ಕಲಿಸಬಹುದು.

ಶಾಲೆಗಳಲ್ಲಿ ಭಾಷಾಬೋಧನಾ ಪದ್ಧತಿಗಳು :

ಶಾಲೆಗಳಲ್ಲಿ ಭಾಷೆಯ ಬೋಧನೆ ಇಂದಿನದಲ್ಲ, ಬಹು ಹಿಂದಿನಿಂದಲೂ ನಡೆಯುತ್ತಲೇ ಬಂದಿದೆ. ಪೂರ್ವದಲ್ಲಿದ್ದ ಬೋಧನಾಪದ್ಧತಿಗಳಿಗಿಂತ ತೀರ ಭಿನ್ನವಾದ ಹೊಸ ಹೊಸ ವಿಧಾನಗಳು ಕಾಣಿಸಿಕೊಂಡಿವೆ ಅಷ್ಟೇ. ಆದರೆ ಇತ್ತೀಚಿನ ದಿನಗಳಲ್ಲಿ ಶಾಲೆಗಳಲ್ಲಿ ಬೋಧಿಸುವ ಅಥವಾ ಬೋಧಿಸುತ್ತಿರುವ ಕ್ರಮವು ಹೆಚ್ಚಾಗಿ ವೈಜ್ಞಾನಿಕ (ಸುಧಾರಿತ) ಪದ್ಧತಿಯನ್ನು ಅವಲಂಬಿಸಿದೆ. ತರಗತಿಯ ವಾತಾವರಣಕ್ಕೆ, ವಿದ್ಯಾರ್ಥಿಗಳ ವಯೋಮಾನಕ್ಕೆ ತಕ್ಕಂತೆ, ಪ್ರಾದೇಶಿಕತೆಗೆ ಹೊಂದಿಕೊಂಡಂತೆ, ಸಾಂಸ್ಕೃತಿಕ ವೈಶಿಷ್ಟ್ಯಕ್ಕೆ ಮತ್ತು ವಿದ್ಯಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ಅನುಗುಣವಾಗಿ ಬೋಧನಾ ವಿಧಾನಗಳನ್ನು ಯೋಜಿಸಿಕೊಳ್ಳಲಾಗುತ್ತದೆ ಬೋಧನೆಯ ಪ್ರಮುಖ ಕೌಶಲಗಳನ್ನು ಗಮನದಲ್ಲಿಟ್ಟುಕೊಂಡು ಭಾಷೆಯನ್ನು ಕಲಿಸಲಾಗುತ್ತದೆ. ತರಗತಿಯ ವಾತಾವರಣದಲ್ಲಿ ಈ ಪ್ರಮುಖ ಬೇರೆಬೇರೆ ಕೌಶಲಗಳನ್ನು ಪ್ರಾಥಮಿಕ ಬೋಧನೆಯ ಹಂತದಲ್ಲಿ ಗೊತ್ತುಪಡಿಸಿದ ರೀತಿಯಲ್ಲಿ ಕಲಿಸಲಾಗುವುದು. ಭಾಷಾಕಲಿಕೆಯ/ಬೋಧನೆಯ ಚಟುವಟಿಕೆಯಲ್ಲಿ ಕೇಳುವುದು/ಆಲಿಸುವುದು (Listening), ಮಾತಾಡುವುದು (Speaking), ಓದುವುದು (Reading) ಮತ್ತು ಬರೆಯುವುದು (Writing) ಬಹು ಮುಖ್ಯವಾದ ಕೌಶಲ (Skills)ಗಳು. ಯಾವುದೇ ಪರಿಸರದಲ್ಲಿ ಭಾಷಾಧ್ವನಿಗಳು ಕಿವಿಗೆ ಬೀಳುವುದು ಕಲಿಕೆಗೆ ಬಹುಸುಲಭ. ಕೇಳಿಕೆ ಹೆಚ್ಚಿದಷ್ಟು ಮಾತನಾಡುವುದು ಸುಲಭ. ಮಾತನಾಡಲು ಅದರಿಂದ ಸಹಾಯವೂ ಆಗುವುದು. ಓದುವುದು ಮತ್ತು ಬರೆಯುವುದು ಶ್ರಮದಿಂದ ಬರುವ ಕೌಶಲಗಳು. ಕೇಳುವುದು ಮತ್ತು ಮಾತಾಡುವುದು ಸಹಜ ಕೌಶಲಗಳು.

ಪಠ್ಯಪುಸ್ತಕಗಳು, ಭೂಪಟ, ಸೂಚನಾಫಲಕ, ಮಾದರಿಗಳು, ಚಿತ್ರಗಳು, ಕಪ್ಪುಹಲಗೆ, ನಕ್ಷೆ ಮತ್ತು ವಸ್ತುಗಳನ್ನು ವಿಶೇಷ ಬೋಧನಾ ಸಾಮಗ್ರಿಯಾಗಿ ಬಳಸಿಕೊಂಡಿದೆ. ಅಧ್ಯಾಪಕನು ಕಲಿಸುವ ರೀತಿಯು ಸರಳ ಸ್ಪಷ್ಟವಾಗಿದ್ದರೆ, ಕಲಿಕೆಯು ಫಲಪ್ರದವಾಗುವುದು. ಎಷ್ಟೋ ಬಾರಿ ನಿಯಮಕ್ಕೆ ಅನ್ವಯಿಸಿ ಬೋಧಿಸಿದರೂ ಅದು ಸರಿಯಲ್ಲ. ಕಾರಣ ವಾತಾವರಣ, ಸಂದರ್ಭ, ಗಮನಾರ್ಹ ಅಂಶಗಳು.

ವಿಷಯ ನಿರೂಪಣೆ ಒಂದೇ ಕಲಿಕೆಗೆ ಮುಖ್ಯವಲ್ಲ; ಯೋಜನೆ, ಪರಿಸರವೂ ಮುಖ್ಯ. ತರಗತಿಯಲ್ಲಿ ಮಕ್ಕಳ ಕಲಿಯುವಿಕೆಗೆ ಅನುವಾಗುವ ಹಲವು ಬೋಧನಾ ಪದ್ಧತಿಗಳನ್ನು ಯೋಜಿಸಲಾಗಿದೆ. ಅವು ಸ್ಪಷ್ಟ ನೀತಿ ನಿಯಮಗಳ ಹಿನ್ನೆಲೆಯಲ್ಲಿ ನಿರೂಪಗೊಂಡ ವಿಧಾನಗಳಿವು. ಇಲ್ಲಿ ಬೋಧನೆಯ ದೃಷ್ಟಿಯಿಂದ ಪ್ರಮುಖವೆನಿಸುವ ಬೋಧನಾ ವಿಧಾನಗಳನ್ನು ಪಟ್ಟಿಮಾಡಿದೆ. ಅವು :

೧. ನಿಯಮ ನಿರೂಪಣಾ ಪದ್ಧತಿ (Inductive Method)
೨. ನಿಯಮ ಪರಿಪಾಲನಾ ಪದ್ಧತಿ (Deductive Method)
೩. ಪಂಚಸೋಪಾನ ಪದ್ಧತಿ (Five step Method/Herbert Method)
೪. ಪಠ್ಯಪುಸ್ತಕ ಪದ್ಧತಿ (Text book Method)
೫. ಉಪನ್ಯಾಸ ಪದ್ಧತಿ (Lecture Method)
೬. ಪ್ರಶ್ನೋತ್ತರ ಪದ್ಧತಿ (Question–Answer Method)
೭. ವಾಸ್ತವಿಕ ಪದ್ಧತಿ (National Method)
೮. ನಿದರ್ಶನ ಪದ್ಧತಿ (Illustration Method)
೯. ಅಭ್ಯಾಸ ಪದ್ಧತಿ (Practice Method)
೧೦. ಸಂಶೋಧನಾಪದ್ಧತಿ (Research Method)
೧೧. ಕ್ರೀಡಾಪದ್ಧತಿ (Play way Method)
೧೨. ನಾಟಕಾಭಿನಯ ಪದ್ಧತಿ (Dramatisation Method)
೧೩. ಯೋಜನಾಪದ್ಧತಿ (Project Method)
೧೪. ಗಿಣಿಪಾಠ ಯೋಜನೆ (Recitation Method)
೧೫. ನಿಯಂತ್ರಿತ ಪದ್ಧತಿ (Control Method) ಇತ್ಯಾದಿ.

ಇವುಗಳ ಜೊತೆಗೆ ತರಗತಿಗಳಲ್ಲಿ ಭಾಷಾಬೋಧನೆಗೆ ಕೆಲವು ವೈಜ್ಞಾನಿಕ ಸಲಕರಣೆಗಳನ್ನು ಬಳಸಿಕೊಳ್ಳುವುದು ರೂಢಿ, ತತ್ತ್ವಾಧಾರಿತ ವಿಧಾನಗಳು ತರಗತಿಯ ಬೋಧನೆಗೆ ಸುಲಭವೂ ಹೌದು, ಲಾಭದಾಯಕವೂ ಹೌದು. ವೈಜ್ಞಾನಿಕ ಸಲಕರಣೆಗಳು ಬೋಧನಯೋಗ್ಯವಾದುವೇನೊ ಸರಿ. ಆದರೆ ಅವುಗಳ ವೆಚ್ಚ ಹೆಚ್ಚು. ಪರಿಸರ ಮತ್ತು ಅವಕಾಶ ಒದಗದ ಕಾರಣ ಯಾವುದೇ ಯಂತ್ರೋಪಕರಣಗಳನ್ನು ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಒಟ್ಟಿನಲ್ಲಿ ತರಗತಿಯ ಭಾಷಾಬೋಧನೆಗೆ ಸಹಜ ಸರಳ ವಿಧಾನಗಳು ಯೋಗ್ಯವಾದುವು.

ಕನ್ನಡ ಬೋಧನೆ :

ಇಂದು ಕನ್ನಡ ನಾಡಿನ ಶಾಲೆಗಳಲ್ಲಿ ಕಡ್ಡಾಯವಾಗಿ ಕನ್ನಡವನ್ನು ಪ್ರಥಮ (First) ಇಲ್ಲವೇ ತೃತೀಯ (Third) ಭಾಷೆಯಾಗಿ ಕಲಿಸಲಾಗುತ್ತಿದೆ. ಮಾತೃ ಭಾಷೆ ಅಥವಾ ಪ್ರಥಮ ಭಾಷೆಯಾಗಿ ಕನ್ನಡವನ್ನು ಕಲಿಯುವವನು,

ತೃತೀಯ ಭಾಷೆಯಾಗಿ ಆಧುನಿಕ ಭಾರತೀಯ ಭಾಷೆಗಳಲ್ಲಿ (ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾಥಿ, ಹಿಂದಿ ಮತ್ತು ಉರ್ದು) ಯಾವುದಾದರೂ ಒಂದು ಇಲ್ಲವೇ ಪ್ರಾಚೀನ ಭಾಷೆಗಳಲ್ಲಿ (ಸಂಸ್ಕೃತ, ಅರೇಬಿಕ್, ಪರ್ಷಿಯನ್, ಲ್ಯಾಟಿನ್, ಗ್ರೀಕ್) ಯಾವುದಾದರೂ ಒಂದನ್ನು ಕಡ್ಡಾಯವಾಗಿ ಆಯ್ದುಕೊಳ್ಳಬೇಕು. ಹಿಂದಿ ಅಥವಾ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡವನು, ಕಡ್ಡಾಯವಾಗಿ ಕನ್ನಡವನ್ನು ತೃತೀಯ ಭಾಷೆಯಾಗಿ ಓದಲೇಬೇಕು. ಪ್ರಥಮ ಇಲ್ಲವೇ ತೃತೀಯ ಭಾಷೆಯಾಗಿ ಕಲಿಯುವ ಕನ್ನಡ, ಕಡ್ಡಾಯ ಪರೀಕ್ಷಾಭಾಷೆ. ನಿಗದಿತ ಅಂಕ ಮತ್ತು ಪಠ್ಯವನ್ನು ಬಿಟ್ಟರೆ, ಭಾಷಾಬೋಧನೆಯಲ್ಲಿ ಯಾವ ಹೆಚ್ಚಿನ ಗುರುತರ ವ್ಯತ್ಯಾಸವೂ ಇಲ್ಲ. ಪ್ರಥಮ ಭಾಷೆಯಾಗಿ ಕನ್ನಡವನ್ನು ಹೇಗೆ ಕಲಿಸಲು ಪ್ರಾರಂಭಿಸುವರೋ, ಅದೇ ಕಲಿಕೆಯ ಸೂತ್ರಾನುಸಾರ ತೃತೀಯ ಭಾಷೆ ಕನ್ನಡವನ್ನು ಕಲಿಸಲಾಗುತ್ತಿದೆ. ಪ್ರಥಮ ಭಾಷೆಯನ್ನು ೧೫೦ ಅಂಕಗಳಿಗೂ, ತೃತೀಯ ಭಾಷೆಯನ್ನು ೫೦ ಅಂಕಗಳಿಗೂ ಕಲಿಯಬೇಕು. ಇಲ್ಲಿ ನಿಯೋಜಿಸಿರುವ ಪಠ್ಯ ಮತ್ತು ಪಾಠಗಳಲ್ಲಿ ವಿಶೇಷತೆಯನ್ನು ಕಾಣಬಹುದು.. ಪ್ರಾಥಮಿಕ ಶಿಕ್ಷಣದಲ್ಲಿ ಈ ತೆರನಾದ ಬೋಧನಾ ತಾರತಮ್ಯವಿಲ್ಲ. ಒಂದರಿಂದ ನಾಲ್ಕನೆಯ ಇಯತ್ತೆಯವರೆಗೆ ಕನ್ನಡ ಏಕೈಕ ಕಡ್ಡಾಯದ ಭಾಷೆಯಾಗಿದೆ. ಆದರೆ ಕೇಂದ್ರ ನಿಯೋಜಿತ ಪಠ್ಯಕ್ರಮ ಶಾಲೆಗಳಲ್ಲಿ (Central Syllabus schools) ಹಿಂದಿ ಕಡ್ಡಾಯ ಕಲಿಕೆಯ ಭಾಷೆ. ಅಲ್ಲದೆ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಬೋಧನೆ ತೀರಾ ಭಿನ್ನವಾಗಿದೆ. ಪರಭಾಷಾ ವ್ಯಾಮೋಹ ಸಾಮಾಜಿಕ ಜನಪ್ರಿಯತೆ, ಸುಲಭವೆಂಬ ಭಾವನೆ ಮತ್ತು ಭಾಷಾತಾತ್ಸಾರ (ಕನ್ನಡ)ವು, ಕನ್ನಡ ಬೋಧನೆಯಲ್ಲಿ ಏರುಪೇರನ್ನು ಕಾಣಬಹುದು.

ಕರ್ನಾಟಕದ ಹೆಚ್ಚಿನ ಶಾಲೆಗಳಲ್ಲಿ ಕನ್ನಡವೇ ಪ್ರಧಾನ ಭಾಷೆ. ತರಬೇತಿ ಹೊಂದಿದ ಶಿಕ್ಷಕರಿಂದ, ತರಗತಿಗಳಲ್ಲಿ ಕನ್ನಡ ಬೋಧನೆ ಜರಗುತ್ತಿದೆ. ಬೋಧಕರು ನಿಯಮಾನುಸಾರ, ಸನ್ನಿವೇಶಕ್ಕೆ, ಪ್ರದೇಶಕ್ಕೆ ಮತ್ತು ವಿದ್ಯಾರ್ಥಿಗಳ ಸಾಂಸ್ಕೃತಿಕ ಮಟ್ಟಕ್ಕೆ ಅನುಗುಣವಾಗಿ ಕನ್ನಡವನ್ನು ಕಲಿಸಲಾಗುತ್ತಿದೆ. ಬೋಧನೆಗೆ ಪೂರಕವಾಗಿ ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯ (ಬೆಂಗಳೂರು) ಮತ್ತು ಭಾರತ ಸರ್ಕಾರದ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ (ಮೈಸೂರು)ಗಳ ಸಹಯೋಗದಿಂದ ಸಿದ್ಧಪಡಿಸಿದ ಕನ್ನಡ ಪಠ್ಯಪುಸ್ತಕಗಳನ್ನು ಬಳಸಲಾಗುತ್ತಿದೆ. ಈ ಪಠ್ಯಪುಸ್ತಕಗಳು ಕನ್ನಡಿಗರ ಸಾಂಸ್ಕೃತಿಕತೆ, ಪ್ರಾದೇಶಿಕತೆ ಮತ್ತು ಭಾಷಾವೈವಿಧ್ಯತೆಯನ್ನು ಉಳಿಸಿಕೊಂಡಿದೆ. ಇಂತಹ ಪಠ್ಯಪುಸ್ತಕಗಳನ್ನು ಕನ್ನಡ ಕಲಿಕೆಯ ಮೂಲ ಸಾಮಗ್ರಿಯಾಗಿ ಪರಿಗಣಿಸಿದೆ. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನೂ, ಸಾಮಾಜಿಕ, ಐತಿಹಾಸಿಕ ಮತ್ತು ಭಾಷಿಕ ವಸೌಲ್ಯತೆಯನ್ನೂ ಅರಿಯಬಹುದು. ಕರ್ನಾಟಕದ ಮತ್ತು ಕನ್ನಡದ ಸರ್ವಾಂಗೀಣ ಪ್ರಗತಿಯ ಪೂರ್ಣ ಪರಿಚಯ ಇದರಿಂದ ಸಾಧ್ಯ.

ಕನ್ನಡ ಪಠ್ಯಗಳು :

ಭಾಷೆ ಮಗುವಿನ ಜೀವನದ ಅವಿಭಾಜ್ಯ ಅಂಗ. ಈ ಮಹತ್ವದ ಅಂಶವನ್ನು ಮನಗಂಡು ಮಗುವಿನ ಸರ್ವತೋಮುಖ ಬೆಳವಣಿಗೆಗೆ ಅನುವಾಗುವಂತೆ ವಿಜ್ಞಾನ, ಗಣಿತ, ಸಮಾಜ ವಿಜ್ಞಾನ, ಆರೋಗ್ಯ ಮತ್ತು ದೈಹಿಕ ಶಿಕ್ಷಣ, ಕಲೆ ಮತ್ತು ಸೃಜನಶೀಲತೆ, ಮೌಲ್ಯ ಶಿಕ್ಷಣ ಮುಂತಾದುವನ್ನು ಕನ್ನಡ ಭಾಷೆಯ ಕಲಿಕೆಯೊಟ್ಟಿಗೆ ಪರೋಕ್ಷವಾಗಿ ಪರಿಚಯ ಮಾಡಿಕೊಡುವ ಉದ್ದೇಶದಿಂದ, ಈ ಪಠ್ಯಪುಸ್ತಕದ ಪಾಠಗಳಲ್ಲಿ ಪ್ರಯತ್ನಿಸಿದೆ. ಪಠ್ಯಪುಸ್ತಕ ರಚನಾಸಮಿತಿ ಸಿದ್ಧಪಡಿಸಿದ ಪ್ರಾಥಮಿಕ ಶಾಲಾ ಕನ್ನಡ ಪಠ್ಯಗಳಲ್ಲಿ ಸಾಮಾನ್ಯವಾಗಿ 30 ರಿಂದ 33 ಪಾಠಗಳಿವೆ. ಅವುಗಳಲ್ಲಿ ಗದ್ಯ, ಪದ್ಯ ಮತ್ತು ಒಂದೆರಡು ನಾಟಕ ರೂಪಗಳು ಸೇರಿವೆ. ಗದ್ಯ ಪದ್ಯಗಳನ್ನು ಸಮಿಶ್ರವಾಗಿ ಪಠ್ಯದಲ್ಲಿ ಕೊಟ್ಟಿದೆ. ವ್ಯಾಕರಣಾಂಶಗಳನ್ನು ಬೇರೆಯಾಗಿಯೇ ನಮೂದಿಸದೆ ಪಾಠದ ಜೊತೆ ಜೊತೆಯಲ್ಲೇ ಅವಶ್ಯವಿದ್ದಕಡೆ ಸ್ವಾಭಾವಿಕ ವ್ಯಾಕರಣಾಂಶ (Functional grammatical forms) ಗಳನ್ನು ಸೇರಿಸಿದೆ. ಭಾಷೆಯ ಬೋಧನೆಯ ಮೊದಲ ಘಟ್ಟದಲ್ಲಿ ಬಳಸುವ ಇಲ್ಲಿನ ಪಾಠಗಳು ಮಕ್ಕಳಿಗೆ ಕಲಿಕೆಯ ಆಸಕ್ತಿಯನ್ನು ಹುಟ್ಟಿಸುವಂತಿವೆ. ಭಾಷಾವೈಜ್ಞಾನಿಕ ಕಲಿಕೆಯು ಸುಗಮವಾಗುವಂತೆ ಪಠ್ಯವನ್ನು ರಚಿಸಿದೆ. ಇಲ್ಲಿ ಭಾಷಾಕಲಿಕೆಯು ಸಾಂಪ್ರದಾಯಿಕ ಭಾಷಾಬೋಧನಾಕ್ರಮದಿಂದ ಭಿನ್ನವಾಗಿದ್ದು ವೈಜ್ಞಾನಿಕ ಮತ್ತು ಸಂಶೋಧನಾತ್ಮಕ ಹಿನ್ನೆಲೆಯನ್ನು ಪಡೆದಿದೆ ಭಾಷಾಬೋಧನೆಗೆ ಪ್ರಾಥಮಿಕ ಹಂತದಲ್ಲಿ ಬಲು ಒಪ್ಪಿತವಾಗುವ ಉತ್ತಮ ಭಾಷಾಬೋಧನ ಕ್ರಮವಿದು.

೧೯೮೬ ರಿಂದ ಹೊಸ ಶಿಕ್ಷಣ ನೀತಿಯು ರಾಷ್ಟ್ರದಾದ್ಯಂತ ಜಾರಿಗೆ ಬಂದಿದೆ. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಸಹ ಶಿಕ್ಷಣ ಪಠ್ಯಕ್ರಮವನ್ನು ಪರಿಷ್ಕರಿಸಲು ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ಸಿದ್ಧಪಡಿಸಿರುವ ಪರಿಷ್ಕೃತ ಪಠ್ಯಕ್ರಮಕ್ಕೆ ಹೊಂದುವಂತೆ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಮಾರ್ಗದರ್ಶನಗಳನ್ನು ಅಳವಡಿಸಿ ಪ್ರಾಥಮಿಕ ಶಾಲೆಯ ಒಂದು ಮತ್ತು ಎರಡನೆಯ ತರಗತಿಯ ಪಠ್ಯಪುಸ್ತಕವನ್ನು ರಚಿಸಿದೆ ಈ ಪುಸ್ತಕವನ್ನು ಮಾತೃಭಾಷೆಯಾಗಿ, ಕನ್ನಡ ಕಲಿಯುವ ಮಕ್ಕಳ ಭಾಷಾ ಅವಶ್ಯಕತೆಗಳು, ಪ್ರಚಲಿತ ಶಿಕ್ಷಣದ ಸಿದ್ಧಾಂತಗಳು, ಮಕ್ಕಳ ಮನೋವಿಕಾಸ, ಭಾಷಾಬೋಧನೆ ಮತ್ತು ಕಲಿಕೆಯ ತತ್ತ್ವಗಳ ಆಧಾರದನ್ವಯ ಸಿದ್ಧಪಡಿಸಿದೆ. ಪ್ರಾಥಮಿಕ ಹಂತದ ಒಂದರಿಂದ ನಾಲ್ಕನೆಯ ತರಗತಿಯವರೆಗೆ ಪ್ರತಿ ತರಗತಿಗೂ ಕನ್ನಡ ಭಾಷಾಶಿಕ್ಷಣಕ್ಕೆ ಒಟ್ಟು ೪೫೦ ಬೋಧನಾ ಅವಧಿಗಳು ಲಭ್ಯವಿದ್ದು ಬೇರೆ ಬೇರೆ ಕೌಶಲಗಳಿಗೆ ಗೊತ್ತುಪಡಿಸಿರುವ ಅವಧಿಗಳು ಹೀಗಿವೆ :

ಆಲಿಸುವುದು (Listening)—೧೧೦
ಮಾತನಾಡುವುದು (Speaking)—೧೧೦
ಓದುವುದು (Reading)—೧೨೫

ಬರೆಯುವುದು (Writing)—೧೦೫

ಈ ಹಿನ್ನೆಲೆಯಲ್ಲಿ ರಚಿತಗೊಂಡ ಕನ್ನಡ ಪಠ್ಯಗಳ ಒಟ್ಟು ನೋಟ ಇಂತಿದೆ :

ಕನ್ನಡ ಭಾರತಿ-೧ : ೧೧೨ ಪುಟಗಳ ಈ ಪಠ್ಯದಲ್ಲಿ ಆರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ೧೪ ಚಿತ್ರ ಪುಟಗಳಿದ್ದು ; ಅವುಗಳಲ್ಲಿ ಎರಡು ಚಿತ್ರಕಥೆಗಳೂ ಸೇರಿವೆ ಇಲ್ಲಿನ ಎಲ್ಲ ವರ್ಣ ಚಿತ್ರಗಳು ಆಕರ್ಷಕವಾಗಿವೆ. ಇವುಗಳು ಮಕ್ಕಳಲ್ಲಿ ಮಾತನಾಡುವ ಕೌಶಲ ಹಾಗೂ ಸಂಭಾಷಣಾ ಕಲೆಯನ್ನು ಬೆಳೆಸಲು ಅನುವಾಗಿವೆ. ಅಲ್ಲದೆ ಪರಿಸರ ಪರಿಚಯವನ್ನೂ, ಸಮವಯಸ್ಕರೊಡನೆ ಮಾತನಾಡುವ ಯುಕ್ತತೆಯನ್ನೂ ಆಲಿಸುವ ಆಸಕ್ತಿಯನ್ನು ಹೆಚ್ಚಿಸುತ್ತದೆ. ಇದರಿಂದ ಮಕ್ಕಳು ತರಗತಿಯ ಸನ್ನಿವೇಶಕ್ಕೆ ಬೇಗನೆ ಹೊಂದಿಕೊಳ್ಳುವರು. ಈ ವರ್ಣಚಿತ್ರಗಳನ್ನು ಬೋಧನೆಯಲ್ಲಿ ಮಕ್ಕಳ ಮನಸ್ಸನ್ನು ಕಲಿಕೆಯತ್ತ ಕೇಂದ್ರೀಕರಿಸಲು ಬಳಸಬಹುದು.

ಎರಡನೆಯ ಭಾಗದಲ್ಲಿ ಕನ್ನಡ ಅಕ್ಷರಗಳನ್ನು ಪದಚಿತ್ರಗಳ ಮೂಲಕ ಪರಿಚಯಿಸಿದೆ. ಇವನ್ನು ಕನ್ನಡ ಅಕ್ಷರಗಳ ಉಚ್ಚಾರಣಾಭ್ಯಾಸಕ್ಕೆ ಬಳಸಿಕೊಳ್ಳಬಹುದು. ಈ ಹಂತದಲ್ಲಿ ಇವನ್ನು ಓದು ಬರಹಗಳ ಬೋಧನೆಗೆ ಬಳಸಿಕೊಳ್ಳುವುದು ಅಷ್ಟೇನೂ ಯುಕ್ತವಲ್ಲ. ಮಾತನಾಡುವುದನ್ನು, ಉತ್ತರಿಸುವುದನ್ನು ಸಮರ್ಥಗೊಳಿಸಬಹುದು.

ಮೂರನೆಯ ಭಾಗದಲ್ಲಿ ಒಟ್ಟು ೩೦ ಪಾಠಗಳಿವೆ. ಮೊದಲ ಪಾಠಗಳು ಅಕ್ಷರ ಪರಿಚಯ ಪಾಠಗಳು. ಈ ಪಾಠಗಳಲ್ಲಿ ಬಳಸಿರುವ ಪದಗಳನ್ನು ವಾಕ್ಯಾಂಶಗಳಲ್ಲಿ ಅರ್ಥಪೂರ್ಣವಾಗಿ ಬಳಸಿದೆ. ವಾಕ್ಯಾಂಶಗಳ ಕಲಿಕೆ ಇದರಿಂದ ಸುಲಭ ಮೊದಲ ಒಂದೆರಡು ಪಾಠಗಳನ್ನು ಬಿಟ್ಟರೆ ಉಳಿದ ಪಾಠಗಳೆಲ್ಲವೂ ವಿಷಯ, ವಸ್ತು, ಪ್ರಸಂಗ, ಇತ್ಯಾದಿಯನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದುವು. ಅಕ್ಷರ, ಮೂಲಾಕ್ಷರಗಳ ಪರಿಚಯ, ಗುಣಿತಾಕ್ಷರಗಳು, ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳ ಪರಿಚಯ ಇಲ್ಲಿದೆ.

ನಾಲ್ಕನೆಯ ಭಾಗದಲ್ಲಿ ಐದು ಪದ್ಯಗಳಿವೆ. ಪದ್ಯಗಳು ಗದ್ಯ ಪಾಠದ ಕೊನೆಯಲ್ಲಿದ್ದರೂ, ಭಾಷಾಕಲಿಕೆಯ ಪ್ರಾರಂಭದಲ್ಲೇ ರಾಗವಾಗಿ ಹಾಡಬಹುದು. ಇವು ಗೇಯಗೀತೆಗಳಾಗಿರುವುದರಿಂದ ಮಕ್ಕಳು ಒಂಟಿಯಾಗಿಯೂ ಸಾಮೂಹಿಕವಾಗಿಯೂ ಹಾಡಬಹುದು. ಕಂಠಪಾಠ ಮಾಡಿದರೆ ಇನ್ನೂ ಒಳ್ಳೆಯದು.

ಐದನೆಯ ಭಾಗದಲ್ಲಿ ಪಠ್ಯದಲ್ಲಿ ಬಳಕೆಗೊಂಡಿರುವ ಪದಗಳ 'ಅ'ಕಾರಾದಿ ಪಟ್ಟಿಯಿದೆ. ಇದರಿಂದ ಮಕ್ಕಳ ಕಲಿಕೆಯನ್ನು, ಓದುವ ಸಾಮರ್ಥ್ಯವನ್ನು ಹೆಚ್ಚಿಸಬಹುದು. ಕಲಿತ ಪದಗಳನ್ನು ಪತ್ತೆಹಚ್ಚಲು ಈ ಪಟ್ಟಿ ಸಹಾಯಕವಾಗಿದೆ.

ಕೊನೆಯ ಭಾಗದಲ್ಲಿ ಕನ್ನಡ ವರ್ಣಮಾಲೆ ಮತ್ತು ಗುಣಿತಾಕ್ಷರಗಳ ಪಟ್ಟಿಗಳಿವೆ. ಪಠ್ಯದ ಅಕ್ಷರ ಪಾಠಗಳು ವರ್ಣಮಾಲೆಯ ಕ್ರಮದಲ್ಲಿ ಇಲ್ಲದಿರುವುದರಿಂದ ಕನ್ನಡ ವರ್ಣಮಾಲೆಯನ್ನು, ಮೂಲಾಕ್ಷರಗಳನ್ನು ಕಲಿತನಂತರ ಪರಿಚಯಿಸಿದೆ.

ಅಕ್ಷರಗಳ ಪರಿಚಯಕ್ಕಾಗಿ ಬಳಸಿರುವ ಇಲ್ಲಿನ ಪದ್ಧತಿ, ಎಲ್ಲ ಅಕ್ಷರ ಪರಿಚಯ ಪದ್ಧತಿಗಳ ಸಮನ್ವಯವಿದು. ಹಲವು ಅಕ್ಷರ ಪರಿಚಯ ಪದ್ಧತಿಯ ವಿಶಿಷ್ಟಾಂಶಗಳನ್ನು ಮಾತ್ರ ಅಳವಡಿಸಿಕೊಂಡಿದೆ. ಪಾಠಕ್ಕೆ ಅನ್ವಯಿಸಿ ಕೊಟ್ಟಿರುವ 'ಅಭ್ಯಾಸ' ಯುಕ್ತವಾಗಿದೆ. ಬೋಧನೆಗೆ ಯುಕ್ತವಾಗಿದೆ ಈ ಪಠ್ಯಪುಸ್ತಕ.

ಕನ್ನಡ ಭಾರತಿ-೨: ೧೩೬ ಪುಟಗಳ ಈ ಪಠ್ಯದಲ್ಲಿ ನಾಲ್ಕು ಭಾಗಗಳಿವೆ. ಮೊದಲ ಭಾಗದಲ್ಲಿ ಎಂಟು ವರ್ಣಚಿತ್ರ ಪುಟಗಳಿದ್ದು ಅವುಗಳಲ್ಲಿ ಎರಡು ಚಿತ್ರಕಥೆಗಳೂ ಸೇರಿವೆ. ಮಕ್ಕಳಲ್ಲಿ ಮಾತನಾಡುವ ಕೌಶಲ, ಸಂಭಾಷಣಾ ಕೌಶಲ ಇತ್ಯಾದಿಯನ್ನು ಬೆಳೆಸಲು ಮತ್ತು ಕುಶಲಕರ್ಮಿಗಳು, ವೃತ್ತಿನಿರತರು, ಐತಿಹಾಸಿಕ ಸ್ಥಳಗಳು, ಪರಿಸರ, ಬೆಳೆಗಳು, ಗಿಡಮರಗಳು ಮುಂತಾದುವುಗಳ ಬಗ್ಗೆ ಮಾತನಾಡಲು ಬೇಕಾಗುವ ಪದಸಂಗ್ರಹವನ್ನು ಮಕ್ಕಳಿಗೆ ಒದಗಿಸಿ, ಅವರಲ್ಲಿ ಮಾತುಗಾರಿಕೆಯ ಕೌಶಲ್ಯವನ್ನು ಜಾಗ್ರತೆ ಬೆಳಸಬಹುದು. ಮಕ್ಕಳ ಅರಿವಿನ ಪರಿಸರವನ್ನು ವಿಸ್ತಾರಗೊಳಿಸಿ ನೋಡುವ ವಿಷಯ ಹಾಗೂ ವಸ್ತುಗಳ ಬಗ್ಗೆ ಹೆಚ್ಚಿನ ವಿಚಾರವನ್ನು ತಿಳಿಸುವ ಸಾಧ್ಯತೆಯುಂಟು. ಇದರಿಂದ ಮಕ್ಕಳು ಜೊತೆಯವರೊಡನೆ ಹೊರಗಿನ ಪರಿಸರದ ವಿಷಯವನ್ನು ಧೈರ್ಯವಾಗಿ ಮಾತನಾಡುವುದನ್ನು ಕಲಿಯಬಹುದು.

ಎರಡನೆಯ ಭಾಗದಲ್ಲಿ ಒಟ್ಟು ೩೦ ಪಾಠಗಳಿವೆ. ಅವುಗಳಲ್ಲಿ ೨೦ ಗದ್ಯ ಪಾಠಗಳೂ, ೧೦ ಪದ್ಯ ಪಾಠಗಳೂ ಇವೆ. ೨೦ ಗದ್ಯ ಪಾಠಗಳಲ್ಲಿ ಹತ್ತು ವಿಷಯ ಪ್ರಧಾನವಾದವೂ ಉಳಿದ ಹತ್ತು ಕಥಾಪ್ರಧಾನವಾದುವು. ಪ್ರತಿ ಗದ್ಯ ಪಾಠವೂ ಸಾಮಾನ್ಯವಾಗಿ ಯಾವುದಾದರೊಂದು ಮಹತ್ವದ ವಿಚಾರ, ಮೌಲ್ಯ ಇಲ್ಲವೇ ನೀತಿಯನ್ನು ಮಕ್ಕಳಿಗೆ ಪರಿಚಯಿಸುತ್ತದೆ. ಈ ಪಠ್ಯದಲ್ಲಿನ ಪಾಠಗಳ ಪದಗಳು ಹೆಚ್ಚಾಗಿ ವಿದ್ಯಾರ್ಥಿಗಳ ಪರಿಸರದಲ್ಲಿ ಬಳಕೆಗೊಂಡಿರುವಂತಹವು. ಪುಟ್ಟ ವಾಕ್ಯಗಳು. ಪಾಠದಿಂದ ಪಾಠಕ್ಕೆ ಭಾಷಾಭ್ಯಾಸ ಮುಂದುವರೆದಂತೆ ವಾಕ್ಯಗಳು ಮತ್ತು ಪಾಠಗಳು ಹಿರಿದಾಗಿವೆ ವಿಷಯದಂತೆ ಭಾಷಿಕ ಬಳಕೆಯೂ ವಿಸ್ತೃತಗೊಂಡಿದೆ. ಎರಡು ಗದ್ಯ ಪಾಠದ ನಂತರ ಒಂದರಂತೆ ಪದ್ಯ ಪಾಠಗಳನ್ನು ಸೇರಿಸಿದೆ ಈ ಪದ್ಯಗಳು ಹಾಡಬಹುದಾದ ಗೇಯಗೀತೆಗಳಾಗಿವೆ.

ಮೂರನೆಯ ಭಾಗದಲ್ಲಿ ಭಾಷಾ ಆಟಗಳಿವೆ. ಇವುಗಳು ಮಕ್ಕಳ ಆಲೋಚನಾ ಶಕ್ತಿಯನ್ನು ಬೆಳೆಸಲು ಸಹಾಯಕವಾಗಿವೆ. ಇಲ್ಲಿ ಅವರ ವಿಚಾರಶೀಲತೆಯನ್ನೂ ಬೆಳೆಸಲು ಯತ್ನಿಸಬಹುದು. ಮಕ್ಕಳಲ್ಲಿ ಭಾಷಾಹಿಡಿತ ಇದರಿಂದ ಸಾಧ್ಯ.

ಕೊನೆಯ ಭಾಗದಲ್ಲಿ ಪಠ್ಯದಲ್ಲಿ ಬಳಕೆಯಾಗಿರುವ ಪದಗಳ ಅಕಾರಾದಿ ಪಟ್ಟಿಯಿದೆ. ಅಲ್ಲದೆ ಒತ್ತಕ್ಷರಗಳ ಪಟ್ಟಿಯನ್ನೂ ಇದರಲ್ಲಿ ಸೇರಿಸಿದೆ. ಇದರಿಂದ ಮಕ್ಕಳಲ್ಲಿ ಕಲಿಕೆಯನ್ನು, ಕಲಿತ ಪದಗಳ ಗುರುತಿಸುವ ಶಕ್ತಿಯನ್ನು ಸಮರ್ಥಗೊಳಿಸಬಹುದು.

ಸಮರ್ಥ ಭಾಷಾಬೋಧನೆಗೆ ಸರಿಹೊಂದುವ ಅಭ್ಯಾಸ ಸೂಚಿ ಇಲ್ಲಿನದು. ಪ್ರತಿ ಪಾಠದ ಭಾಷಾಭ್ಯಾಸವು ಮೂರು ಭಾಗಗಳಿಂದ ಕೂಡಿದೆ. ಅವು ಪಠ್ಯ, ಅಭ್ಯಾಸ

ಮತ್ತು ಸೂಚನೆ. ಪಠ್ಯಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳು ಮೊದಲಿದ್ದು, ನಂತರ ಮಾದರಿ ಅಭ್ಯಾಸವೂ ಸೂಕ್ತ ಕಲಿಕಾಸೂಚನೆಗಳೂ ಇವೆ. ಮಕ್ಕಳಲ್ಲಿ ಓದು ಮತ್ತು ಬರಹ ಸಾಮರ್ಥ್ಯವನ್ನು ಸೂಕ್ತ ಪ್ರಮಾಣದಲ್ಲಿ ರೂಢಿಸುವ ಪಾಠಗಳು ಇಲ್ಲಿನವು.

ಕನ್ನಡ ಭಾರತಿ-೩ : (ಹಳೆಯ ಪಠ್ಯ) : ೧೦೦ ಪುಟಗಳ ಈ ಪಠ್ಯದಲ್ಲಿ ಎರಡು ಭಾಗಗಳಿವೆ. ಒಟ್ಟು ೩೩ ಗದ್ಯ-ಪದ್ಯ ಪಾಠಗಳು ಇದರಲ್ಲಿದೆ. ಅವುಗಳಲ್ಲಿ ೨೪ ಗದ್ಯ ಪಾಠಗಳೂ, ೯ ಪದ್ಯ ಪಾಠಗಳೂ ಕೂಡಿವೆ. ೨೪ ಗದ್ಯ ಪಾಠಗಳಲ್ಲಿ ಆರು ಕಥಾಪಾಠಗಳೂ ಉಳಿದ ಹದಿನೆಂಟು ವಿಷಯ, ವ್ಯಕ್ತಿ, ಪ್ರಸಂಗ ಮತ್ತು ಪರಿಸರವನ್ನು ಪ್ರಧಾನಾಂಶವಾದ ಪಾಠಗಳು. ಸರಳ ವಾಕ್ಯದಿಂದ ಸಂಯುಕ್ತ ಸಮಾಸ ವಾಕ್ಯಗಳ ಜೋಡಣೆ ಇಲ್ಲಿನದು. ಸಂಭಾಷಣಾಯುಕ್ತ ಸನ್ನಿವೇಶದಿಂದ ಪ್ರಸಂಗ ವಿವರದವರೆಗೆ ಪಾಠ ನಿರೂಪಣೆಯಿದೆ. ಓದು ಮತ್ತು ಬರಹಕ್ಕೆ ಹೆಚ್ಚು ಆದ್ಯತೆ ನೀಡಬಹುದಾದ ಈ ಪಠ್ಯ ಮಕ್ಕಳ ಪರಿಸರಯುಕ್ತ ಪದಗಳನ್ನು ಹೆಚ್ಚಾಗಿ ಒಳಗೊಂಡಿದೆ. ಪ್ರತಿ ಪಾಠದ ಕೊನೆಯಲ್ಲಿಯ ಭಾಷಾಭ್ಯಾಸ (ಅಭ್ಯಾಸ) ಗಮನಾರ್ಹವಾದುದು. ಎರಡು ಹಂತ ಗಳಲ್ಲಿರುವ ಈ ಪಾಠಾಭ್ಯಾಸವು ಪಠ್ಯಪ್ರಶ್ನೋತ್ತರ ಮತ್ತು ಚಟುವಟಿಕೆ ಎಂಬು ದಾಗಿದೆ. ಪಠ್ಯಪ್ರಶ್ನೋತ್ತರದಲ್ಲಿ ಪಾಠಕ್ಕೆ ಸಂಬಂಧಿಸಿದ ಪ್ರಶ್ನೆಗಳು, ಸಂದರ್ಭ ಸೂಚಿಗಳು, ಮಾದರಿ ಪ್ರಶ್ನೋತ್ತರಗಳು, ಕ್ಲಿಷ್ಟ ಶಬ್ದಗಳ ಅರ್ಥ ಕೂಡಿದೆ. ಚಟುವಟಿಕೆಯಲ್ಲಿ ಮಕ್ಕಳ ಆಲೋಚನೆಯನ್ನು ಕಲ್ಪನೆಯನ್ನು ಇಮ್ಮಡಿಗೊಳಿಸುತ್ತದೆ.

ಎರಡನೆಯ ಭಾಗವೇ ಪದ್ಯ ಪಾಠಗಳ ಅವಲೋಕನ, ನಾಲ್ಕು ಗದ್ಯಪಾಠಗಳ ನಂತರ ಒಂದು ಪದ್ಯ ಪಾಠವನ್ನು ಇಲ್ಲಿ ಕೊಟ್ಟಿದೆ. ಪದ್ಯಗಳು ಗೇಯಗೀತೆಯಂತಿರು ವುದರಿಂದ ಸಾಮೂಹಿಕವಾಗಿ ಹಾಡಬಹುದು. ಪದ್ಯಗಳು ಸ್ವಾರಸ್ಯವಾಗಿವೆ.

ವ್ಯಾಕರಣವನ್ನಾಗಲೀ, ವ್ಯಾಕರಣಾಂಶವನ್ನಾಗಲೀ ಈ ಪಠ್ಯದಲ್ಲಿ ಸೇರಿಸಿಲ್ಲ, ಮಕ್ಕಳಲ್ಲಿರುವ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸುವ ತೆರನಾಗಿದೆ. ಹೊಸ ಪಠ್ಯದಷ್ಟು ವೈಜ್ಞಾನಿಕವಲ್ಲದಿದ್ದರೂ ಬೋಧನೆಯ ಹಂತ ಗಮನಿಸಿದರೆ ದೋಷವಲ್ಲದ ಪಠ್ಯ ವಷ್ಟೇ.

ಕನ್ನಡ ಭಾರತಿ-೪ : (ಹಳೆಯ ಪಠ್ಯ) ೧೬೫ ಪುಟಗಳ ಈ ಪಠ್ಯದಲ್ಲಿ ಒಟ್ಟು ೩೩ ಗದ್ಯ-ಪದ್ಯ ಪಾಠಗಳಿವೆ. ಅವುಗಳಲ್ಲಿ ೨೪ ಗದ್ಯ ಪಾಠಗಳೂ, ೯ ಪದ್ಯಪಾಠ ಗಳೂ ಇವೆ. ೨೪ ಗದ್ಯಪಾಠಗಳಲ್ಲಿ ನಾಲ್ಕು ಕಥಾಪಾಠಗಳೂ, ಆರು ವ್ಯಕ್ತಿಚಿತ್ರ ಗಳೂ, ಏಳು ಪರಿಸರ ಪಾಠಗಳೂ ಮತ್ತು ಏಳು ವಸ್ತು, ಪ್ರಾಣಿ, ವಿಷಯವನ್ನೊಳ ಗೊಂಡ ಪಾಠಗಳಾಗಿವೆ. ಎಲ್ಲವೂ ದೀರ್ಘ ಪಾಠಗಳೇ. ವಾಕ್ಯಗಳು ಹಿರಿದಾಗಿದ್ದು ಅರ್ಥ ಪೂರ್ಣವಾಗಿವೆ. ಕಥೆ, ಪ್ರಸಂಗ, ಘಟನೆಯ ನಿರೂಪಣೆ ಕುತೂಹಲವಾಗಿದೆ. ವಾಕ್ಯ ಜೋಡಣೆಯು ವಿಸ್ತಾರವಾಗಿದ್ದು ಲೇಖನ ಚಿಹ್ನೆಗಳ ಪರಿಚಯ ಯುಕ್ತವಾಗಿದೆ. ಸಂಭಾಷಣಾ ತಂತ್ರವನ್ನು ಒಂದೆರಡು ಗದ್ಯ ಪಾಠಗಳಲ್ಲಿ ಅಳವಡಿಸಿದೆ. ಓದು, ಬರಹ, ವಿಷಯಗ್ರಹಣೆ, ಪ್ರಬಂಧ, ಕಥೆ ಅರ್ಥಮಾಡಿಕೊಂಡು ಹೇಳಲು, ಮನಸ್ಸಿನ ಭಾವ

ವನ್ನು ಸ್ವಂತ ಮಾತುಗಳಲ್ಲಿ ಸ್ಪಷ್ಟವಾಗಿ ವಿವರಿಸಲು, ನೋಡಿ ಕೇಳಿದ ಘಟನೆಗಳನ್ನು ವಿಷಯುವನ್ನು ವಾಕ್ಯವೃಂದದ ರೀತಿಯಲ್ಲಿ ಬರೆಯಲು ಮಕ್ಕಳು ಸಮರ್ಥರಾಗುತ್ತಾರೆ. ಮಕ್ಕಳಲ್ಲಿ ಸೃಜನ ಶೀಲತೆಯನ್ನು ಬೆಳೆಸಬಹುದು.

ಪದ್ಯಪಾಠಗಳನ್ನು ಪ್ರತಿ ನಾಲ್ಕು ಪಾಠದ ನಂತರ ಒಂದರಂತೆ ಕೊಟ್ಟಿದೆ. ರಾಗಬದ್ಧವಾಗಿ ಹಾಡಬಹುದಾದ ಪದ್ಯಗಳಿವು. ಸ್ವಾರಸ್ಯವಾದ ಪದ್ಯ ಪಾಠಗಳಿವು.

ಪ್ರತಿ ಪಾಠದ ಅಭ್ಯಾಸ ಸೂಚಿಯಲ್ಲಿ ವ್ಯಾಕರಣಾಂಶಗಳನ್ನು ಪರಿಚಯಿಸಿದೆ. ಅಪ್ಪಟ ವ್ಯಾಕರಣಾಂಶ (Pure Grammatical elements)ಗಳ ನಿರೂಪಣೆಯಲ್ಲ ಇಲ್ಲಿನದು. ಸ್ವಾಭಾವಿಕ ವ್ಯಾಕರಣಾಂಶಗಳ (Functional Grammatical forms) ನಿರೂಪಣೆಯೇ ಇಲ್ಲಿನ ಮುಖ್ಯ ಉದ್ದೇಶ. ಆಕರ್ಷಕ ಚಿತ್ರಗಳು ಪ್ರಾಸಂಗಿಕವಾಗಿದೆ ಅಷ್ಟೇ ಮಕ್ಕಳ ಕಲಿಕೆಯ ಪ್ರದರ್ಶನಕ್ಕೂ ಅವಕಾಶವಿದೆ. ಆಯಾ ಪಾಠಗಳ ಕೊನೆಯಲ್ಲೇ ಕಷ್ಟಪದಗಳ ಶಬ್ದಾರ್ಥವನ್ನೂ ಕೊಟ್ಟಿದೆ. ಇದರಿಂದ ಪ್ರಾಥಮಿಕ ಕೊನೆಯ ಹಂತದಲ್ಲಿ ಕನ್ನಡ ಭಾಷೆಯ ಮೇಲೆ ಮಕ್ಕಳು ಸಮರ್ಥ ಹಿಡಿತವನ್ನು ಪಡೆದುಕೊಳ್ಳಬಹುದು.

ಶಿಕ್ಷಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ತನ್ನದೇ ಆದ ವಿಶಿಷ್ಟತೆಯಿದೆ. ಈ ಹಂತದಲ್ಲಿ ಕನ್ನಡ ಬೋಧನೆಯು ಪಠ್ಯಾಧಾರಿತವಾದುದು. ಕರ್ನಾಟಕವು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಕ್ರಿಯವಾಗಿ ಜಾರಿಗೊಳಿಸಲು, ಭಾಷಾಕಲಿಕೆಯಲ್ಲಿ (ಕನ್ನಡ) ಮಹತ್ವವನ್ನು ಉಳಿಸಿಕೊಳ್ಳಲು, ಪ್ರಾದೇಶಿಕ, ಸಾಂಸ್ಕೃತಿಕ ಮೌಲ್ಯವನ್ನು ಕಾಯ್ದಿಟ್ಟು, ಶಿಕ್ಷಣ ಮಟ್ಟವನ್ನು ಹೆಚ್ಚಿಸಲು ಅನುವಾಗುವ ರೀತಿಯಲ್ಲಿ ತಯಾರಿಸಿರುವ ಪಠ್ಯಗಳಿವು. ಐಕ್ಯತೆ, ಸಾಮಾಜಿಕ ವಿಶಿಷ್ಟತೆಯನ್ನು ಏಕತಾನವಾಗಿ ಉಳಿಸಿಕೊಂಡಿವೆ.

ಭಾಷಾಬೋಧನೆ ಮತ್ತು ಕಲಿಕೆಯು ಒಂದು ಉನ್ನತ ಚಟುವಟಿಕೆ. ಇಂದಿನ ವಿಶ್ವದ ಪ್ರಗತಿಯ ಸಂದರ್ಭದಲ್ಲಿ ಬೋಧನೆಯು ವೈಜ್ಞಾನಿಕವೆನಿಸಿಕೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆಯು ವೈಜ್ಞಾನಿಕವಾಗಿ ಫಲಪ್ರದಗೊಳ್ಳಬೇಕು. ಆ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯ (ಬೆಂಗಳೂರು) ಮತ್ತು ಭಾರತ ಸರ್ಕಾರದ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ (ಮೈಸೂರು)ಗಳು ಸಿದ್ಧಪಡಿಸಿರುವ "ಕನ್ನಡ ಭಾರತಿ"ಯು ಸಹಾಯಕವಾಗಿದೆ. ಅದರ ಪೂರ್ಣ ಪ್ರಯೋಜನ ಕನ್ನಡದ ಮಕ್ಕಳಿಗೆ ದೊರಕಬೇಕು. ಅಧ್ಯಾಪಕರು ಕನ್ನಡ ಬೋಧನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಮಕ್ಕಳಲ್ಲಿ ಉತ್ತಮ ಭಾಷಾಕಲಿಕೆಗೆ ನೆರವಾಗಬೇಕು. ಈ ತೆರನಾದ ಭಾಷಾ ಬೋಧನೆಯು ಶಿಕ್ಷಣದ ಸಾರ್ಥಕತೆಗೆ, ನಾಡಿನ ಅಭ್ಯುದಯಕ್ಕೆ ಸಾಕ್ಷಿ.

ಡಾ|| ಆರ್. ಇಂದಿರಾ ಮತ್ತು ಎಂ. ಬಿ. ಸೋಮಣ್ಣ

ವಿದ್ಯಾವಂತ ನಿರುದ್ಯೋಗ

ದೇಶದ ಎಲ್ಲ ಜನರಿಗೂ ಅವರ ಜೀವನ ನಿರ್ವಹಣೆಗೆ ಸಾಕಷ್ಟು ಸಾಧನಗಳನ್ನು ಒದಗಿಸಿಕೊಡುವುದು ದೇಶದ ಆರ್ಥಿಕ ಯೋಜನೆಗಳ ಗುರಿ. ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ ರಾಜ್ಯ ನಿರ್ದೇಶಕ ತತ್ವದ ಪ್ರಕಾರ ಎಲ್ಲ ಪ್ರಜೆಗಳೂ ಜೀವನ ನಿರ್ವಹಣೆಗೆ ತಕ್ಕಷ್ಟು ಸಾಧನಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದು. ಭಾರತದಂತಹ ದೇಶವೊಂದರಲ್ಲಿ ಎಲ್ಲ ದೃಢಕಾಯರಾದ ವ್ಯಕ್ತಿಗಳಿಗೂ ಪೂರ್ಣ ಉದ್ಯೋಗವನ್ನು ಒದಗಿಸುವುದು ಒಂದು ಬೃಹತ್ ಸಮಸ್ಯೆಯಾಗಿದೆ ಎಂಬುದು ವಿಷಾದಪೂರ್ವಕವಾದರೂ ಒಪ್ಪಲೇಬೇಕಾದ ವಿಷಯ ಪ್ರಜಾಸತ್ತಾತ್ಮಕವಾದ ಮತ್ತಾವುದೇ ದೇಶದಲ್ಲಾಗಲೀ ಭಾರತದಂತೆ ಅತಿ ತ್ವರಿತವಾಗಿ ಜನಸಂಖ್ಯೆಯು ವೃದ್ಧಿಸುತ್ತಿಲ್ಲ ಹಾಗೂ ಇದೊಂದು ಬೃಹತ್ ಸಮಸ್ಯೆಯಾಗಿ ಉಳಿದಿಲ್ಲ.

ದೇಶದಾದ್ಯಂತ ವಿದ್ಯಾಪ್ರಸಾರ ಭರದಿಂದ ಆಗುತ್ತಿದೆ. ಇದರೊಂದಿಗೆ ನಿರುದ್ಯೋಗ ಹೆಮ್ಮರವಾಗಿ ಬೆಳೆದು ಕಳವಳಕಾರಿಯಾಗುತ್ತಿದೆ. ಪ್ರತಿವರ್ಷ ಲಕ್ಷಾಂತರ ಮಂದಿ ವಿದ್ಯಾವಂತರು ನಿರುದ್ಯೋಗಿಗಳ ಸಾಲನ್ನು ಸೇರುತ್ತಿದ್ದು, ದೇಶ ಒಂದು ಕ್ಲಿಷ್ಟಕರವಾದ ಸ್ಥಿತಿಗೆ ಬಂದು ನಿಂತಿದೆ. ಸಹಸ್ರಾರು ಮಂದಿ ಪ್ರೌಢಶಾಲೆಗಳನ್ನು ಮುಗಿಸಿದವರು, ಪದವಿಪೂರ್ವ ವ್ಯಾಸಂಗ ಮಾಡಿದವರು, ಪದವೀಧರರು, ಹಾಗೂ ಸ್ನಾತಕೋತ್ತರ ಪದವೀಧರರು ತಮ್ಮ ಶಾಲಾ ಕಾಲೇಜುಗಳಿಂದ ಹೊರಬಂದು ಯೋಗ್ಯವಾದ ಉದ್ಯೋಗಗಳ ಅಭಾವವನ್ನು ಕಂಡು ನಿರಾಶರಾಗುತ್ತಿದ್ದಾರೆ. ಈ ಸಂಗತಿ ಪ್ರತಿವರ್ಷ ತಪ್ಪದ ಘಟನೆಯಾಗಿದೆ. ಈ ಶತಮಾನದ ಎರಡನೆಯ ದಶಕದಲ್ಲೇ ಕೆಲವು ನಗರಗಳಲ್ಲಿ ಈ ಸಮಸ್ಯೆಯು ಕಾಣಿಸಿಕೊಂಡಿತ್ತು. ಮೂರನೆಯ ದಶಕದ ಕೊನೆಯ ವೇಳೆಗೆ ಬೃಹದಾಕಾರ ತಾಳಿತು. ಅಂದಿನಿಂದ ಇಂದಿನವರಿಗೂ ಇದು ಒಂದು ಪ್ರಮುಖ ಸಮಸ್ಯೆಯಾಗಿಯೇ ಉಳಿದಿದೆ

ವಿದ್ಯಾವಂತರಲ್ಲಾಗಲೀ, ಅವಿದ್ಯಾವಂತರಲ್ಲಾಗಲೀ ನಿರುದ್ಯೋಗವು ಒಂದು ದುರಂತ. ವಿದ್ಯಾವಂತರ ನಿರುದ್ಯೋಗ ನಿಜಕ್ಕೂ ಖೇದಕರ ಸಂಗತಿ. ಏಕೆಂದರೆ ಅವರಲ್ಲಿ ಆಶೋತ್ತರಗಳು ಜಾಗೃತಗೊಂಡಿರುತ್ತದೆ. ಅಲ್ಲದೆ ಅವರ ಪೋಷಕರು ಮತ್ತು

ಸರ್ಕಾರದವರು ಅವರ ವಿದ್ಯಾಭ್ಯಾಸಕ್ಕಾಗಿ ಸಾಕಷ್ಟು ಸಮಯವನ್ನೂ, ಹಣವನ್ನೂ ವೆಚ್ಚಮಾಡಿರುತ್ತಾರೆ. ವಿದ್ಯಾರ್ಥಿಗಳು ಅಮೂಲ್ಯವಾದ ದೀರ್ಘಕಾಲವನ್ನು ಶಿಕ್ಷಣಕ್ಕೆ ಬಳಸಿರುತ್ತಾರೆ. ಈ ಕಾರಣದಿಂದ ವಿದ್ಯಾವಂತರು ನಿರುದ್ಯೋಗಿಗಳಾಗಿ ಉಳಿಯುವುದು ಭಾರಿ ದುರಂತವಾಗುತ್ತದೆ.

ವಿವಿಧ ವೃತ್ತಿಶಿಕ್ಷಣ ವಿಧಾನಗಳಲ್ಲಿ ತರಬೇತಿಯನ್ನು ಹೊಂದಿದ ಜನರ ಉತ್ಪಾದನೆಯ ಸಂಖ್ಯೆ ಹೆಚ್ಚಾಗಿದೆ. ಆದರೆ ಸಮಾಜದಲ್ಲಿ ಅವರಿಗಿರುವ ಬೇಡಿಕೆ ಕಡಮೆಯಾಗಿದೆ. ಅಂತಹವರ ಉತ್ಪಾದನಾ ಸಂಖ್ಯೆ ಮತ್ತು ಬೇಡಿಕೆಯಲ್ಲಿ ಪರಸ್ಪರ ಹೊಂದಾಣಿಕೆಯಾಗಲಿ, ಸಮತೂಕವಾಗಲಿ ಇಲ್ಲದೆ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಲು ಕಾರಣವಾಗಿದೆ. ಅನೇಕ ಪ್ರಜಾಸತ್ತಾತ್ಮಕ ದೇಶಗಳಲ್ಲಿ ಈ ಸಮಸ್ಯೆ ಅಲ್ಪಸ್ವಲ್ಪವಾಗಿದ್ದರೂ ನಮ್ಮಲ್ಲಿಯಷ್ಟು ತೀವ್ರವಾಗಿಲ್ಲ.

ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತಂದಾಗಿನಿಂದಲೂ ನಿರುದ್ಯೋಗ ಸಮಸ್ಯೆಯು ಎರಡು ಮುಖ್ಯವಾದ ಅಂಶಗಳನ್ನು ಒಳಗೊಂಡಿದೆ ಎಂಬುದನ್ನು ಗುರುತಿಸಲಾಗಿದೆ. ದೇಶದಲ್ಲಿ ಜನಸಂಖ್ಯೆಯು ತ್ವರಿತಗತಿಯಲ್ಲಿ ವೃದ್ಧಿಸುತ್ತಿದ್ದು ಪ್ರತಿವರ್ಷವೂ ಅಧಿಕ ಸಂಖ್ಯೆಯಲ್ಲಿ ದೃಢಕಾಯರಾದ ಜನರು ಉದ್ಯೋಗಾಕಾಂಕ್ಷಿಗಳಾಗಿ ನಿಲ್ಲುತ್ತಾರೆ ಎಂಬುದು ಮೊದಲನೆಯ ಅಂಶ. ಇನ್ನೊಂದು, ಜನಸಂಖ್ಯೆಯು ಹೆಚ್ಚಳದಿಂದ ಕಂಡುಬರುವ ಅಧಿಕ ಸಂಖ್ಯೆಯ ಜನರಿಗೆ ಉದ್ಯೋಗ ಒದಗಿಸುವ ಬಗ್ಗೆ ಆರ್ಥಿಕ ವ್ಯವಸ್ಥೆಗಿರುವ ಸಾಮರ್ಥ್ಯದ ವಿಸ್ತಾರ.

ಮೊದಲ ಯೋಜನೆಯನ್ನು ರೂಪಿಸಿದಾಗ ಸರ್ಕಾರವು ನಿರುದ್ಯೋಗ ಮತ್ತು ಅಪೂರ್ಣ ಉದ್ಯೋಗಕ್ಕೆ ಮುಂದಿನ ಕಾರಣಗಳನ್ನು ಕಂಡುಕೊಂಡಿತು. (1) ತ್ವರಿತ ಗತಿಯಲ್ಲಿ ಜನಸಂಖ್ಯೆ ಬೆಳೆಯುತ್ತಿರುವುದು, (2) ಗ್ರಾಮಾಂತರ ಪ್ರದೇಶಗಳಲ್ಲಿ ಅಸಂಖ್ಯಾತ ಜನರಿಗೆ ಸ್ವಲ್ಪಮಟ್ಟಿಗೆ ಉದ್ಯೋಗಾವಕಾಶ ನೀಡುತ್ತಿದ್ದ ಹಳೆಯ ಗ್ರಾಮಾಂತರ ಕೈಗಾರಿಕೆಗಳು ಕಣ್ಮರೆಯಾಗಿರುವುದು, (3) ಉದ್ಯೋಗ ದೃಷ್ಟಿಯಿಂದ ಬೇಸಾಯೇತರ ಕ್ಷೇತ್ರವನ್ನು ಸಾಕಷ್ಟು ಅಭಿವೃದ್ಧಿಪಡಿಸದೇ ಇರುವುದು ಮತ್ತು (4) ದೇಶದ ವಿಭಜನೆಯ ಪರಿಣಾಮವಾಗಿ ಭಾರಿ ಪ್ರಮಾಣದಲ್ಲಿ ಜನರು ಸ್ಥಾನಪಲ್ಲಟಗೊಂಡಿರುವುದು.

ಪಂಚವಾರ್ಷಿಕ ಯೋಜನಾವಧಿಗಳಲ್ಲಿ ಅನೇಕ ಕ್ಷೇತ್ರಗಳಲ್ಲಿ ಪ್ರಗತಿಪರ ಕಾರ್ಯಗಳು ನಡೆದು ಲಕ್ಷಾಂತರ ಮಂದಿಗೆ ಉದ್ಯೋಗಾವಕಾಶಗಳು ಸಿಕ್ಕಿದರೂ ನಿರುದ್ಯೋಗ ಸಮಸ್ಯೆ ಕಡಮೆಯಾಗಲಿಲ್ಲ. ಪ್ರಥಮ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ 50 ಲಕ್ಷ ಮಂದಿ ನಿರುದ್ಯೋಗಿಗಳು, ಎರಡನೆಯ ಯೋಜನೆಯ ಅಂತ್ಯದ ವೇಳೆಗೆ 90 ಲಕ್ಷ ಮಂದಿ ನಿರುದ್ಯೋಗಿಗಳು ಮತ್ತು 3ನೇ ಯೋಜನೆಯ ಅಂತ್ಯದ ವೇಳೆಗೆ 130 ಲಕ್ಷ ನಿರುದ್ಯೋಗಿಗಳೂ ಇದ್ದರು. 4ನೇ ಯೋಜನಾಂತ್ಯದಲ್ಲಿ ಇವರ ಸಂಖ್ಯೆ 280 ಲಕ್ಷಕ್ಕೆ ಏರಿತ್ತು. ಆದರೆ ಇಂದು ಈ ಸಂಖ್ಯೆ ದ್ವಿಗುಣವಾಗಿದೆ. 1974ರ ವೇಳೆಗೆ

ದೇಶದಲ್ಲಿ ನಿರುದ್ಯೋಗ ಶೇಕಡ 25 ರಷ್ಟಿತ್ತು. ಈ ನಿರುದ್ಯೋಗಿಗಳಲ್ಲಿ ವಿದ್ಯಾವಂತರ ನಿರುದ್ಯೋಗವೂ ಗಣನೀಯವಾಗಿ ಹೆಚ್ಚುತ್ತಿದೆ. ವರ್ಷಕ್ಕೆ ಲಕ್ಷಾಂತರ ಮಂದಿ ವಿದ್ಯಾವಂತರು ನಿರುದ್ಯೋಗಿಗಳಾಗುತ್ತಿದ್ದಾರೆ. ಯೋಜನಾ ಆಯೋಗದ ಒಂದು ಅಂದಾಜಿನಂತೆ 1980ರ ಆರಂಭದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ 37 ಲಕ್ಷವಿತ್ತು. ಇದರಲ್ಲಿ ಮೂರರಲ್ಲೆರಡು ಭಾಗ ಪ್ರೌಢಶಿಕ್ಷಣ ಮುಗಿಸಿದವರೇ. 1978ರ ಅಂತ್ಯದಲ್ಲಿ ದೇಶದಲ್ಲಿರುವ 450ಕ್ಕೂ ಹೆಚ್ಚು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 73 ಲಕ್ಷ ವಿದ್ಯಾವಂತ ನಿರುದ್ಯೋಗಿಗಳು ತಮ್ಮ ಹೆಸರನ್ನು ನೊಂದಾಯಿಸಿದ್ದರು. ಇವರಲ್ಲಿ ಪ್ರೌಢ ಹಂತ ಮುಗಿಸಿದವರು 40 ಲಕ್ಷ, ಪದವಿ ಪೂರ್ವಹಂತ ಮುಗಿಸಿದವರು 10 ಲಕ್ಷ, ಪದವೀಧರರು 13 ಲಕ್ಷ, ಉನ್ನತ ಪದವಿ ಪಡೆದವರು 10 ಸಹಸ್ರಮಂದಿ. ವಿದ್ಯಾವಂತ ಉದ್ಯೋಗಾಕಾಂಕ್ಷಿ ಸ್ತ್ರೀಯರ ಸಂಖ್ಯೆಯು ಅಂತಹ ಒಟ್ಟು ಜನಸಂಖ್ಯೆಯ ಶೇಕಡ 16ರಷ್ಟಿದೆ.*

ದೇಶದಲ್ಲಿ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಎಷ್ಟಿದೆ ಎಂಬುದರ ಅಂದಾಜು ಈ ಕೆಳಕಂಡ ಕೋಷ್ಟಕದಲ್ಲಿ ಕೊಟ್ಟಿರುವ ಅಂಕಿಅಂಶಗಳನ್ನು ಪರಿಶೀಲಿಸಿದಾಗ ನಮಗೆ ತಿಳಿದು ಬರುತ್ತದೆ. ದೇಶದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿರುವ ಉದ್ಯೋಗಾಕಾಂಕ್ಷಿಗಳನ್ನು ವಿವಿಧ ಉದ್ಯೋಗ ಕ್ಷೇತ್ರಗಳಿಗನುಗುಣವಾಗಿ ವಿಂಗಡಿಸಿ ಪ್ರತಿಯೊಂದು ಉದ್ಯೋಗ ಕ್ಷೇತ್ರದಲ್ಲಿ 1985ನೇ ಇಸವಿಯ ಡಿಸೆಂಬರ್ 31ನೇ ತಾರೀಖಿನವರೆಗೂ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿದ್ದ ಅಭ್ಯರ್ಥಿಗಳ ಸಂಖ್ಯೆಯನ್ನು ಈ ಕೋಷ್ಟಕದಲ್ಲಿ ಕೊಡಲಾಗಿದೆ. ಉದ್ಯೋಗವಿನಿಮಯ ಕೇಂದ್ರಗಳ ದಾಖಲೆಗಳಲ್ಲಿ ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿದ್ದ ಅಭ್ಯರ್ಥಿಗಳ ಸಂಖ್ಯೆ

* ಎಂ. ಎನ್. ರಾಮಚಂದ್ರ ಜೋಯಿಸ್, ಎ. ನರಹರಿ: ಆಧುನಿಕ ಭಾರತೀಯ ಶಿಕ್ಷಣ : ತಿರುವುಗಳು ಮತ್ತು ಸಮಸ್ಯೆಗಳು, ಗೀತಾ ಬುಕ್ ಹೌಸ್, ಮೈಸೂರು 1983 ಪುಟ ಸಂಖ್ಯೆ 180–181.

ಉದ್ಯೋಗ ಗುಂಪುಗಳು	31ನೇ ಡಿಸೆಂಬರ್ 1985ನೇ ಇಸವಿಯಲ್ಲಿ ಇದ್ದ ಸಂಖ್ಯೆ (ಸಾವಿರಗಳಲ್ಲಿ)	ಒಟ್ಟು ಮೊತ್ತದ ಶೇಕಡವಾರು
1. ವೃತ್ತಿಪರ, ತಾಂತ್ರಿಕ ಹಾಗೂ ಸಂಬಂಧೀ ಕ್ಷೇತ್ರಗಳಲ್ಲಿ ಉದ್ಯೋಗಿಗಳು	1215.2	4.6
2. ಆಡಳಿತಗಾರರು, ಕಾರ್ಯನಿರ್ವಾಹಕರು, ವ್ಯವಸ್ಥಾಪಕರು	8.8	—
3. ಗುಮಾಸ್ತರು, ಮತ್ತು ಸಂಬಂಧೀ ಉದ್ಯೋಗಿಗಳು	1198.2	4.6
4. ಮಾರಾಟಗಾರರು	5.6	—
5. ರೈತರು, ಮೀನುಗಾರರು, ಬೇಟೆಗಾರರು, ಲೆಕ್ಕಪತ್ರಗಳನ್ನು ಇಡುವ ಉದ್ಯೋಗಿಗಳು	76.8	0.3
6. ಸಾರ್ವಜನಿಕ ಸೇವೆಗಳಲ್ಲಿ ತೊಡಗುವವರು	532.9	2.0
7. ಉತ್ಪಾದನೆ ಮತ್ತು ಸಿಬ್ಬಂದಿ ಉದ್ಯೋಗಗಳಲ್ಲಿ ತೊಡಗುವವರು, ಸಾರಿಗೆ ಮತ್ತು ಸಾಮಾನು ಸರಂಜಾಮುಗಳ ಕೆಲಸ ಮಾಡುವವರು ಮತ್ತು ಕಾರ್ಮಿಕರು	2065.9	7.9
8. ಉದ್ಯೋಗಗಳಿಗನುಗುಣವಾಗಿ ವಿಭಾಗಿಸಲ್ಪಡುವ ಉದ್ಯೋಗಾಕಾಂಕ್ಷಿಗಳು		
(ಅ) ಎಸ್.ಎಸ್.ಎಲ್.ಸಿ.ಗಿಂತ ಕೆಳಗಿನ ಮಟ್ಟ ಶಿಕ್ಷಣವನ್ನು ಪಡೆದಿರುವವರು (ಅನಕ್ಷರಸ್ಥರೂ ಸೇರಿದಂತೆ)	9360.8	35.6
(ಆ) ಎಸ್.ಎಸ್.ಎಲ್.ಸಿ.ಗಿಂತ ಮೇಲ್ಮಟ್ಟದ ಆದರೆ ಪದವೀಧರರಲ್ಲದವರು	9940.8	37.8
(ಇ) ಪದವೀಧರರು ಮತ್ತು ಅದಕ್ಕಿಂತ ಉನ್ನತ ಶಿಕ್ಷಣ ಪಡೆದಿರುವವರು	1865.4	7.2
ಒಟ್ಟು	26,269.9	100.0

ಮೂಲ : ಭಾರತ ಸರ್ಕಾರದ ಪ್ರಚಾರ ಮತ್ತು ವಾರ್ತಾ ಇಲಾಖೆಯ ಪ್ರಕಟನಾ ವಿಭಾಗದ ಬಿಡುಗಡೆ, ಡಿಸೆಂಬರ್ 1988.

ಈ ಮೇಲೆ ಕೊಟ್ಟಿರುವ ಅಂಕಿ-ಅಂಶಗಳು ವಿದ್ಯಾವಂತ ನಿರುದ್ಯೋಗ ಸಮಸ್ಯೆಯ ಬಗ್ಗೆ ಒಂದು ಸಮಗ್ರವೂ ಸಂಪೂರ್ಣವೂ ಆದ ನೋಟವನ್ನು ನೀಡುವುದಿಲ್ಲವೇನೋ

ನಿಜ. ಇದಕ್ಕೆ ಕಾರಣಗಳುಂಟು. ಈ ದೇಶದಲ್ಲಿರುವ ಉದ್ಯೋಗಾಕಾಂಕ್ಷಿಗಳೆಲ್ಲರೂ ಉದ್ಯೋಗವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿರುವ ವರೆಂದು, ಉದ್ಯೋಗವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿ ಕೊಂಡಿರುವವರೆಲ್ಲಾ, ಸಂಪೂರ್ಣ ನಿರುದ್ಯೋಗಿಗಳೆಂದಾಗಲೀ ನಾವು ಭಾವಿಸಬಾರದು. ಈಗಾಗಲೇ ಯಾವುದೋ ಉದ್ಯೋಗದಲ್ಲಿ ಇದ್ದು ಇನ್ನೂ ಉನ್ನತ ಉದ್ಯೋಗವನ್ನು ಅಪೇಕ್ಷಿಸುತ್ತಿರುವವರೂ ತಮ್ಮ ಹೆಸರುಗಳನ್ನು ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿಕೊಂಡಿರಬಹುದು. ಆದರೆ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಒಂದು ವರ್ಷದಿಂದ ಮತ್ತೊಂದು ವರ್ಷಕ್ಕೆ ಏರುತ್ತಾ ಹೋಗುತ್ತಿರುವುದಂತೂ ನಿಜ. ಮೇಲಿನ ಕೋಷ್ಟಕದಲ್ಲಿ ಕೊಟ್ಟಿರುವ ಅಂಕಿ–ಅಂಶಗಳು ಈ ದೇಶದಲ್ಲಿನ ನಿರುದ್ಯೋಗ ಪರಿಸ್ಥಿತಿ ಮುಂಬರುವ ವರುಷಗಳಲ್ಲಿ ಎಷ್ಟು ಗಂಭೀರವಾಗಬಹುದೆಂಬುದನ್ನು ಅಂದಾಜು ಮಾಡಲು ನಮಗೆ ನೆರವಾಗುತ್ತದೆ.

ವಿದ್ಯಾವಂತರಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚುತ್ತಾ ಹೋಗುತ್ತಿರುವುದಕ್ಕೆ ಪ್ರಸಕ್ತ ಶಿಕ್ಷಣ ವ್ಯವಸ್ಥೆಯೇ ಒಂದು ರೀತಿಯಲ್ಲಿ ಕಾರಣವಾಗಿದೆ ಎನಿಸದೆ ಹೋಗುವುದಿಲ್ಲ. ಪ್ರಸಕ್ತ ಶಿಕ್ಷಣವು ವ್ಯಕ್ತಿಗಳನ್ನು ಉದ್ಯೋಗಕ್ಕೆ ಅರ್ಹರನ್ನಾಗಿ ಮಾಡುವುದಿಲ್ಲವಷ್ಟೇ ಅಲ್ಲದೆ ಅವರಾಗಿಯೇ ಆಯ್ಕೆಮಾಡಿದ ವಿವಿಧ ಕಸಬುಗಳ ಬಗ್ಗೆ ಬಲವಾದ ತಿರಸ್ಕಾರ ಬೆಳೆಸಿ ಅನರ್ಹರನ್ನಾಗಿಯೂ ಮಾಡುವಂತೆ ತೋರುತ್ತದೆ. ಯಾವುದೇ ನಿರುದ್ಯೋಗವಾದರೂ ಸಾಮಾಜಿಕ ನಷ್ಟವೇ ತಾನೇ. ನೀಡಿದ ಶಿಕ್ಷಣಕ್ಕೆ ಸಾಮಾಜಿಕ ಪ್ರತಿಫಲವೂ ಉನ್ನತ ಮಟ್ಟಗಳಿಗಿಂತ ಕೆಳಗಿನ ಹಂತದ ಶಿಕ್ಷಣದಿಂದ ಅತಿ ಹೆಚ್ಚು ಎಂಬುದಾಗಿ ಅನೇಕ ಪರಿಣಿತರ ಅಂದಾಜು. ಪ್ರಾಥಮಿಕ ಶಿಕ್ಷಣದ ಪ್ರತಿಫಲವು ಅತಿ ಹೆಚ್ಚು. ಪ್ರೌಢ ಶಿಕ್ಷಣದ ಪ್ರತಿಫಲವು ಸಾಕಷ್ಟು ಉತ್ತಮ ಹಾಗೂ ಉನ್ನತ ಶಿಕ್ಷಣದ ಪ್ರತಿಫಲವು ಕಡಮೆ ಎಂದು ಸಾಮಾನ್ಯವಾಗಿ ವಾದಿಸಲಾಗುತ್ತದೆ. ಹೀಗಾಗಿ ಉನ್ನತ ಶಿಕ್ಷಣಕ್ಕೆ ಪ್ರವೇಶವನ್ನು ನಿಯಂತ್ರಿಸಿ ಕೌಶಲಗಳ ಅಭಿವೃದ್ಧಿ ಹಾಗೂ ಆರ್ಥಿಕ ರಂಗದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ವೃತ್ತಿ ಶಿಕ್ಷಣವನ್ನು ನೀಡುವ ವ್ಯವಸ್ಥೆ ಮಾಡಬೇಕಾಗಿದೆ.

ನಿರುದ್ಯೋಗ ಈಗಾಗಲೇ ವಿದ್ಯಾವಂತರಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಅಭದ್ರತೆಯನ್ನು ಉಂಟುಮಾಡಿದೆ. ಸಮಾಜದ ಬುದ್ಧಿಜೀವಿವರ್ಗಕ್ಕೆ ಬಂದೊದಗಿರುವ ಈ ದುಃಸ್ಥಿತಿ ಅಂತಿಮವಾಗಿ ಸಮಾಜಕ್ಕೆ ಮುಳುವಾಗುತ್ತದೆ. ಯಾವ ಒಂದು ವಿಶಿಷ್ಟ ಕಾರ್ಯಕ್ಕಾಗಿ ಒಬ್ಬ ವ್ಯಕ್ತಿಗೆ ಶಿಕ್ಷಣ ತರಬೇತಿಗಳನ್ನು ಹಣ, ಶ್ರಮ ಮತ್ತು ಕಾಲವ್ಯಯ ಮಾಡಿ ನೀಡಲಾಗುತ್ತದೋ, ಯಾವ ವ್ಯಕ್ತಿಯು ಆ ಕಾರ್ಯಕ್ಕಾಗಿ ವಿಶೇಷ ಜ್ಞಾನ ಕೌಶಲಗಳನ್ನು ಬೆಳೆಸಿಕೊಂಡಿರುತ್ತಾನೋ ಮತ್ತು ಯಾರಿಗೆ ಆ ಕಾರ್ಯವು ಜೀವನ ವೃತ್ತಿಗೆ ಎಡೆಮಾಡಿಕೊಡುತ್ತದೋ ಅಂತಹ ವ್ಯಕ್ತಿಗೆ ಸೂಕ್ತ ಉದ್ಯೋಗದ ಅವಕಾಶವಿಲ್ಲದಿದ್ದರೆ ಆತನಿಗೆ ಜ್ಞಾನಕುಶಲತೆಗಳ ಅಭ್ಯಾಸಕ್ಕೆ ಆಸ್ಪದ

ವಿಲ್ಲವಾಗುತ್ತದೆ. ಕೀರ ಪ್ರತಿಭಾವಂತ ವಿದ್ಯಾವಂತರು ಉದ್ಯೋಗಾವಕಾಶಗಳನ್ನು ಅರಸಿಕೊಂಡು ವಿದೇಶಗಳಿಗೆ ಹೋಗುತ್ತಾರೆ. ಇದರಿಂದ ದೇಶಕ್ಕೆ ಅಪಾರ ನಷ್ಟ. ಇವರ ವಿದ್ಯಾಭ್ಯಾಸ ಮತ್ತು ತರಬೇತಿಗಾಗಿ ರಾಷ್ಟ್ರ ಅಪಾರವಾದ ಹಣವನ್ನು ವೆಚ್ಚ ಮಾಡಿರುತ್ತದೆ. ಆದರೆ ಅದರ ಫಲ ಸಿಗುವುದು ವಿದೇಶಗಳಿಗೆ. ನಮ್ಮಲ್ಲಿಯೇ ಅಂತಹವರನ್ನು ಉಳಿಸಿಕೊಳ್ಳುವಷ್ಟು ಸಂಖ್ಯೆಯಲ್ಲಿ ಆಕರ್ಷಕ ಉದ್ಯೋಗಗಳಿಲ್ಲ. ದೇಶಪ್ರೇಮದಿಂದ ಹೆಚ್ಚು ಆಕರ್ಷಕವಲ್ಲದ ಸಂಬಳದಲ್ಲಿ ತೊಡಗಿರುವ ಪ್ರತಿಭಾವಂತರೂ ಇದ್ದಾರೆ. ಪ್ರತಿಭಾಪಲಾಯನಕ್ಕೆ ಒಳಗಾಗುವವರು ಕೇವಲ ಹಿಡಿಯಷ್ಟು ಮಂದಿ. ಆದರೆ ಬಹುತೇಕ ಮಂದಿಯ ಉದ್ಯೋಗ ಸಮಸ್ಯೆ ಹಾಗೆಯೇ ಉಳಿಯುತ್ತದೆ.

ಇಂತಹವರ ಅತೃಪ್ತಿ ಹೆಚ್ಚುತ್ತದೆ. ಅವರು ಹತಾಶರಾಗುತ್ತಾರೆ. ಅವರು ಸಮಾಜದ ಸುಭದ್ರತೆಗೆ ಗಂಡಾಂತರ ತರುವ ಸಮಾಜವಿರೋಧೀ ಕೃತ್ಯಗಳಿಗೆ ಇಳಿದರೆ ಅದರಲ್ಲಿ ಸೋಜಿಗವೇನೂ ಇಲ್ಲ. ಕೆಲವರ್ಷಗಳ ಹಿಂದೆ ನಡೆದ ನಕ್ಸಲೀಯರ ಬಂಡಾಯಕ್ಕೆ ವಿದ್ಯಾವಂತ ನಿರುದ್ಯೋಗವೂ ಒಂದು ಕಾರಣ. ಇಂತಹ ಇನ್ನಿತರ ವ್ಯಾಪಕವಾದ ಘಟನೆಗಳು ಜರುಗುವ ಮೊದಲೇ, ಪರಿಸ್ಥಿತಿ ಕೈತಪ್ಪಿಹೋಗುವ ಮೊದಲೇ ಈ ಸಮಸ್ಯೆಗೆ ಪರಿಹಾರವನ್ನು ತ್ವರಿತವಾಗಿ ಕಂಡುಹಿಡಿಯಬೇಕಾಗಿದೆ. ಪರಿಹಾರ ಸೂಚಿಸುವ ಮೊದಲು ಈ ಸಮಸ್ಯೆಗೆ ಕಾರಣವನ್ನು ಕಂಡುಹಿಡಿಯ ಬೇಕಾದ ಅಗತ್ಯವಿದೆ.

ವಿದ್ಯಾವಂತ ನಿರುದ್ಯೋಗಕ್ಕೆ ಕಾರಣಗಳು :

ಜ್ಞಾನದ ವಿವಿಧ ಶಾಖೆಗಳಲ್ಲಿ ಬಹುವೇಗವಾಗಿ ವಿಶೇಷ ಬೆಳವಣಿಗೆಗಳಾಗುತ್ತಿವೆ. ವಿದ್ಯಾರ್ಥಿಯನ್ನು, ತಾನು ಅಭ್ಯಸಿಸಬೇಕಾದ ವಿಷಯಗಳನ್ನು ಬಹುಮುಂದಾಗಿಯೇ ಆಯ್ಕೆ ಮಾಡಿಕೊಳ್ಳಲು ಆದೇಶಿಸಲಾಗುತ್ತದೆ. ಯುವಕ ಯುವತಿಯರು ತಮ್ಮ ನಿಜಶಕ್ತಿ ಮತ್ತು ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳುವ ಸಾಮರ್ಥ್ಯ ಪಡೆಯುವ ಮೊದಲೇ ಈ ಆಯ್ಕೆಗಳನ್ನು ಅಕಾಲಿಕವಾಗಿ ಹಾಗೂ ಬಹು ಮುಂಚಿತವಾಗಿಯೇ ಮಾಡಬೇಕಾದ ಪರಿಸ್ಥಿತಿ ಇಂದು ಬಂದೊದಗಿದೆ.

ಅನೇಕ ಸಂದರ್ಭಗಳಲ್ಲಿ ಮಕ್ಕಳ ಶೈಕ್ಷಣಿಕ ಹಾಗೂ ವೃತ್ತಿಯ ಆಯ್ಕೆಯನ್ನು ಪೋಷಕರೇ ನಿರ್ಧರಿಸುತ್ತಾರೆ. ತಮ್ಮ ಮಕ್ಕಳ ಪರವಾಗಿ ಅವರೇ ತೀರ್ಮಾನವನ್ನು ಕೈಗೊಳ್ಳುತ್ತಾರೆ. ದುರದೃಷ್ಟಕರವಾದ ವಿಚಾರವೆಂದರೆ ತಮ್ಮ ಮಕ್ಕಳ ಇಷ್ಟಾ ನಿಷ್ಟಗಳು, ನಿಜ ಸಾಮರ್ಥ್ಯ ಮುಂತಾದ ಅಗತ್ಯ ವಿಚಾರಗಳನ್ನು ಅವರು ಗಮನಕ್ಕೆ ತಂದುಕೊಳ್ಳುವುದಿಲ್ಲ. ಇದು ವಿದ್ಯಾವಂತ ಹಾಗೂ ವಿದ್ಯಾವಂತರಲ್ಲದ ಪೋಷಕ ವರ್ಗಕ್ಕೆ ಅನ್ವಯಿಸುವ ಮಾತು. ಮಗು ಮುಂದೆ ಕೈಗೊಳ್ಳಬೇಕಾದ ಜೀವನ ವೃತ್ತಿಗೆ ಈ ಆಯ್ಕೆಯೇ ತಳಪಾಯವಾಗುತ್ತದೆ. ಅಪ್ರಬುದ್ಧ ಆಯ್ಕೆ ಮುಂದೆ ಆತನ ನಿರುದ್ಯೋಗ ಸಮಸ್ಯೆಗೆ ಕಾರಣವಾಗುತ್ತದೆ. ಪೋಷಕರನೇಕರಿಗೆ ತಮ್ಮ

ಮಕ್ಕಳು ಪದವೀಧರರಾಗಬೇಕೆಂಬ ಮಿಥ್ಯಾವ್ಯಾಮೋಹವಿದೆ. ಇದೊಂದು ಸಾಮಾಜಿಕ ಸ್ಥಾನಮಾನದ ಚಿಹ್ನೆ ಎಂಬ ಹಮ್ಮು. ಅದರ ಫಲಿತಾಂಶ ಹಿತಕರವಲ್ಲದ ಉದ್ಯೋಗ.

ಇಂದಿನ ಶಿಕ್ಷಣ ಪದ್ಧತಿ ಮಕ್ಕಳಲ್ಲಿ ಗೌರವವನ್ನು ಬೆಳೆಸಲು ಸಹಾಯಕವಾಗಿಲ್ಲ. ಕಡಿಮೆ ದೈಹಿಕ ಶ್ರಮದ ಕೆಲಸಗಳ ಕಡೆಗೇ ವಿದ್ಯಾವಂತರು ಹೆಚ್ಚು ಆಸೆಪಡುವಂತೆ ಮಾಡಿದೆ. ಇತ್ತೀಚೆಗೆ ಅವರಲ್ಲಿ ಈ ಮನೋಭಾವ ಕಡಿಮೆಯಾಗುತ್ತಿದೆ. ಆದರೂ ವಿದ್ಯಾವಂತರ ನಿರುದ್ಯೋಗಕ್ಕೆ ಇದೊಂದು ಕಾರಣವಾಗಿದೆ ತಮ್ಮ ಶಿಕ್ಷಣಾನುಭವಕ್ಕಿಂತ ಕಡಮೆ ದರ್ಜೆಯ ಉದ್ಯೋಗಗಳನ್ನು ಅನೇಕರು ಇಷ್ಟಪಡುವುದಿಲ್ಲ. 'ನಾನು ಇದುವರೆಗೆ ಕಲಿತಿದ್ದರ ಪ್ರಯೋಜನವಾಗಬೇಡವೇ ?' ಎಂಬ ಪ್ರಶ್ನೆ ಅವರನ್ನು ಕಾಡುತ್ತದೆ. ಸಾಮಾಜಿಕ ಸ್ಥಾನಮಾನ ಅವರಿಗೊಂದು ಮೌಲಿಕ ಪ್ರಶ್ನೆಯಾಗಿದೆ.

ಪ್ರಸಕ್ತ ಶಿಕ್ಷಣ ಪದ್ಧತಿ ವಿದ್ಯಾರ್ಥಿಗಳಲ್ಲಿ ಸ್ವಯಂ ಉದ್ಯೋಗವನ್ನು ಕೈಗೊಳ್ಳುವ ಆತ್ಮವಿಶ್ವಾಸವನ್ನು ಮೂಡಿಸಲು ವಿಫಲವಾಗಿದೆ. ಸ್ವಾವಲಂಬನೆಯ ಯತ್ನಕ್ಕೆ ಪೂರಕವಾಗಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಸೂಕ್ತ ತರಬೇತಿ ಹಾಗೂ ಸಾಹಸಮನೋಭಾವನೆಯನ್ನು ಅದು ಉಂಟುಮಾಡುತ್ತಿಲ್ಲ. ಇಂತಹ ಸಾಹಸ ಕೈಗೊಳ್ಳಲು ಸಮಾಜದಲ್ಲಿರುವ ಅವಕಾಶಗಳ ಬಗ್ಗೆ ತಿಳಿವಳಿಕೆಯನ್ನೂ ಅದು ಒದಗಿಸುತ್ತಿಲ್ಲ.

ಶಿಕ್ಷಣ ಮಟ್ಟದಲ್ಲಿ ಕಳವಳಕಾರಿಯಾಗಿ ಇಳಿಯುತ್ತಿರುವ ಗುಣದರ್ಜೆಯೂ ನಿರುದ್ಯೋಗಕ್ಕೆ ಅಪ್ರತ್ಯಕ್ಷವಾಗಿ ಕಾರಣವಾಗಿದೆ. ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದವರಿಗೆ ಶಿಕ್ಷಣ ಸಂಸ್ಥೆಗಳಿಗೆ ಮತ್ತು ನೌಕರಿಗಳಿಗೆ ಪ್ರವೇಶ ಹೆಚ್ಚು ಕಷ್ಟವಾಗುವುದಿಲ್ಲ. ಆದರೆ ಇಂತಹವರ ಸಂಖ್ಯೆ ಕಡಮೆಯಿರುತ್ತದೆ. ಶಿಕ್ಷಣ ಮಟ್ಟ ಇಳಿಯುತ್ತಿದ್ದು ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಅಭಿವ್ಯಕ್ತಿಯು ತೀರಾ ಸಾಮಾನ್ಯದರ್ಜೆಯದಾಗುತ್ತಿದೆ.

ವಿದ್ಯಾವಂತರ ನಿರುದ್ಯೋಗಕ್ಕೆ ಒಂದು ಮಾನಸಿಕ ಕಾರಣವೂ ಇದೆ. ತಮ್ಮ ವಾಸಸ್ಥಳಗಳಿಂದ ಬಹುದೂರದ ಪ್ರದೇಶಗಳಲ್ಲಿ ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳಿದ್ದರೂ ಬಹುಮಂದಿ ಹೋಗಲೊಪ್ಪುವುದಿಲ್ಲ. ಅದೇ ನಗರ ಪ್ರದೇಶಗಳಿಗೆ ಅನುಕೂಲಗಳಿರುವ ಕಡೆಗೆ ಉದ್ಯೋಗವನ್ನರಸಿ ಹಿಂಡುಹಿಂಡಾಗಿ ನುಗ್ಗುವುದೂ ಇದೆ. ಇವುಗಳಿಂದ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಕೆಲಪ್ರದೇಶಗಳಲ್ಲಿ ಕೇಂದ್ರೀಕೃತವಾಗುವಂತಾಗಿದೆ.

ಕೆಲವು ಸಂದರ್ಭಗಳಲ್ಲಿ ವ್ಯಕ್ತಿಯ ಶಿಕ್ಷಣಾರ್ಹತೆಗಿಂತ ಶಿಕ್ಷಣೇತರ ಕಾರಣಗಳು ಉದ್ಯೋಗಕ್ಕೆ ಆಯ್ಕೆ ನಡೆಯುವಾಗ ಪ್ರಭಾವ ಬೀರುತ್ತವೆ ಇದರಿಂದ ಅರ್ಹ ಅಭ್ಯರ್ಥಿಗಳಿಗೆ ಉದ್ಯೋಗ ವಂಚನೆಯಾಗಿ ಹತಾಶಮನೋಭಾವ ಬೆಳೆಯುತ್ತದೆ.

ಪಂಚವಾರ್ಷಿಕ ಯೋಜನಾವಧಿಗಳಲ್ಲಿ ಅಭಿವೃದ್ಧಿಕಾರ್ಯಗಳು ನಡೆದದ್ದೇನೋ ನಿಜ. ಆದರೆ ವಿವಿಧ ಕ್ಷೇತ್ರಗಳ ಯೋಜನೆಯು ವಿದ್ಯಾವಂತ ನಿರುದ್ಯೋಗಿಗಳ

ವಿಚಾರಕ್ಕೆ ಗಮನಕೊಟ್ಟದ್ದು ಸಾಲದು. ದೇಶದ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಿಗೂ ಹೊಂದಾಣಿಕೆಯಿಲ್ಲದೆ ಏರುಪೇರಾಗಿದೆ.

ಶೈಕ್ಷಣಿಕ ಹಾಗೂ ವೃತ್ತಿ ಸಂಬಂಧವಾದ ಅನೇಕ ಉಪಯುಕ್ತ ವಿಚಾರಗಳನ್ನು ತಿಳಿಸುವ ಮಾಹಿತಿಗಳ ಅಭಾವವಿದೆ. ಮಾಹಿತಿ ಬೇಕಾದ ವ್ಯಕ್ತಿಗೆ ತನಗೇನು ಬೇಕೆಂಬುದು ಸ್ಪಷ್ಟವಿಲ್ಲ. ಹಾಗೆಯೇ ಒದಗಿಸಬೇಕಾದವರ ಬಳಿ ಸೂಕ್ತವೂ, ಪರಿಪೂರ್ಣವೂ ಆದ ಮಾಹಿತಿಯೂ ಇಲ್ಲ ಫಲಿತಾಂಶವೆಂದರೆ ವಿದ್ಯಾರ್ಥಿಯು ತನ್ನ ಶೈಕ್ಷಣಿಕ ಹಾಗೂ ಉದ್ಯೋಗ ಸಂಬಂಧವಾದ ಆಯ್ಕೆಯನ್ನು ತೃಪ್ತಿಕರವಲ್ಲದ ತಳಹದಿಯ ಮೇಲೆ ಮಾಡಬೇಕಾಗಿದೆ.

ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಗೆ ಪರಿಹಾರಗಳು

ಯಾವ ಸಮಸ್ಯೆಯು ಪರಿಹಾರಕ್ಕಾದರೂ ಮೂಲದಲ್ಲೇ ಸುಧಾರಣೆ ಮಾಡುವ ಆವಶ್ಯಕತೆ ಇದೆ. ವಿದ್ಯಾವಂತ ನಿರುದ್ಯೋಗ ಸಮಸ್ಯೆ ಮೂಲವಾದ ಪ್ರಸಕ್ತ ಶಿಕ್ಷಣದ ಗುರಿಗಳನ್ನೇ ಪುನಃ ಉಲ್ಲೇಖಿಸುವ ಅಗತ್ಯವಿದೆ. ಎಲ್ಲ ಶಿಕ್ಷಣಗಳ ಅಂತಿಮ ಗುರಿಗಳ ಪೈಕಿ ವ್ಯಕ್ತಿಯನ್ನು ವೃತ್ತಿಪರನನ್ನಾಗಿ ಮಾಡುವುದು ಒಂದು. ಶಿಕ್ಷಣದ ಗುರಿಗಳು ವ್ಯಕ್ತಿಯ ಸಾಮಾಜಿಕ ಅಗತ್ಯಗಳನ್ನು ಹಾಗೂ, ಸಮಾಜದ ಬೇಡಿಕೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಜೀವನ ಶಿಕ್ಷಣ ದೊರಕುವಂತೆ ಶಿಕ್ಷಣ ಧ್ಯೇಯಗಳಿಗೆ ಹೊಸ ರೂಪ ನೀಡಬೇಕು.

ಮಾಧ್ಯಮಿಕ ಹಂತದ ಕೊನೆಯಲ್ಲಿ ಮತ್ತು ಶಿಕ್ಷಣವನ್ನು ಮುಂದುವರಿಸದೆ ನೇರವಾಗಿ ಜೀವನವನ್ನು ಪ್ರವೇಶಿಸುವವರಿಗಾಗಿ ವೃತ್ತಿಪರ ಶಾಲೆಗಳನ್ನು ಕೊಠಾರಿ ಆಯೋಗದ ಶಿಫಾರಸಿನಂತೆ ಸ್ಥಾಪಿಸಬೇಕು.

ಉದ್ಯೋಗಾವಕಾಶವನ್ನು ಹೆಚ್ಚಿಸಲು ಸಾಮಾನ್ಯ ಶಿಕ್ಷಣ ಹಂತದ ಅನಂತರ ಅನೇಕ ವ್ಯಕ್ತಿಗಳಿಗೆ ಪೂರ್ವಾಭ್ಯಾಸವನ್ನು ನೀಡುವ ವೈವಿಧ್ಯಮಯವಾದ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕು.

ವ್ಯಕ್ತಿಯ ಸಾಮರ್ಥ್ಯ, ಅಭಿರುಚಿ ಹಾಗೂ ಆಸಕ್ತಿಗಳಿಗೆ ಹೊಂದಿಕೊಳ್ಳುವಂತೆ ವೃತ್ತಿಯನ್ನು ಆಯ್ಕೆಮಾಡಿಕೊಳ್ಳಬೇಕು. ಇದಕ್ಕೆ ಪೂರ್ವ ತಯಾರಿಯ ಅವಶ್ಯಕತೆ ಬಹಳ ಉಂಟು.

ಶಾಲಾ ಹಂತದಿಂದಲೇ ವಿದ್ಯಾರ್ಥಿಯ ಉದ್ಯೋಗಾಭಿರುಚಿಯನ್ನು ಆತನ ಸಾಮರ್ಥ್ಯ, ಅಭಿರುಚಿಗಳ ಆಧಾರದ ಮೇಲೆ ಶಿಕ್ಷಕರು ಅಭ್ಯಾಸ ಮಾಡಬೇಕು. ಅಂತಹ ವೃತ್ತಿಗಳಿಗೆ ಇರುವ ವೃತ್ತಿ ಶಿಕ್ಷಣದ ಬಗೆಗೆ ಮತ್ತು ಅನಂತರದ ಉದ್ಯೋಗಾವಕಾಶಗಳ ಬಗೆಗೆ ವಿವರವಾದ ಮಾಹಿತಿಯನ್ನು ನೀಡಬೇಕು. ಇದರ ಫಲಿತಾಂಶವಾಗಿ ವಿದ್ಯಾರ್ಥಿಯ ಭಾವೀ ಉದ್ಯೋಗದ ಉದ್ದೇಶವು ನಿಖರವಾಗಿ ನಿರ್ಧರಿಸಲ್ಪಡುತ್ತದೆ. ಆತ ಆಯ್ದ ವೃತ್ತಿಗೆ ಪೂರಕವಾಗುವ ಜ್ಞಾನ ಹಾಗೂ ಕುಶಲತೆಗಳನ್ನು

ಮೊದಲಿನಿಂದಲೇ ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ. ಆತ ಹೆಚ್ಚು ಶ್ರಮವಿಲ್ಲದೆ ಲೌಕಿಕ ಪ್ರಪಂಚಕ್ಕೆ ಅಡಿಯಿಡಬಹುದು. ಇಂತಹ ಪರಿಸ್ಥಿತಿ ಉಂಟಾಗಬೇಕಾದರೆ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಮತ್ತು ವೃತ್ತಿ ಮಾರ್ಗದರ್ಶನಗಳನ್ನು ಪರಿಣಾಮ ಕಾರಿಯಾಗಿ ಒದಗಿಸುವ ಏರ್ಪಾಟು ಆಗಬೇಕು. ಈ ವಿಶೇಷ ಸೇವೆಯನ್ನು ಮನ ಗಂಡು ಪ್ರೌಢಶಿಕ್ಷಣ ಆಯೋಗ ಮತ್ತು ಕೊಠಾರಿ ಶಿಕ್ಷಣ ಆಯೋಗಗಳು ಎಲ್ಲಾ ಶಾಲೆಗಳಲ್ಲೂ ಇದನ್ನು ಒಂದು ಅವಿಭಾಜ್ಯ ಅಂಗವಾಗಿ ಮಾಡಬೇಕೆಂದು ಶಿಫಾರಸು ಮಾಡಿವೆ.

ದೇಶದ ಅಭಿವೃದ್ಧಿ ಯೋಜನೆಗಳಿಗೂ ಮತ್ತು ಶೈಕ್ಷಣಿಕ ಗುರಿಗಳಿಗೂ ಹೊಂದಾಣಿಕೆಯಿರಬೇಕಾದ ಅಗತ್ಯವಿದೆ. ಅಭಿವೃದ್ಧಿ ಯೋಜನೆಗಳು ಉಂಟು ಮಾಡುವ ಉದ್ಯೋಗಾವಕಾಶಗಳೆಷ್ಟು, ಯಾವ ಯಾವ ಉದ್ಯೋಗಗಳಿಗೆ ಎಷ್ಟೆಷ್ಟು ವಿದ್ಯಾರ್ಹತೆಗಳಿರಬೇಕು ಇತ್ಯಾದಿ ಅಂಶಗಳನ್ನು ಮೊದಲು ಗೊತ್ತುಪಡಿಸಿಕೊಳ್ಳ ಬೇಕು. ಆನಂತರ ಶಿಕ್ಷಣ ಕಾರ್ಯಕ್ರಮಗಳನ್ನು ಈ ಬೇಡಿಕೆಗಳು ಪೂರೈಸುವಂತೆ ಸಮನ್ವಯವನ್ನು ತರಬೇಕು. ಇಲ್ಲದಿದ್ದರೆ ನಾವಿಂದು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಕಾಣುವ ಹಾಗೇ ಒಂದೇ ವಿಧದ ತರಬೇತಿ ಪಡೆದವರ ಸಂಖ್ಯೆಯೇ ವಿಪರೀತವಾಗಿ ಅವರ ನಿರುದ್ಯೋಗಕ್ಕೆ ಕಾರಣವಾಗುತ್ತದೆ. ತದ್ವಿರುದ್ಧವಾಗಿ ಕೆಲವು ಕ್ಷೇತ್ರಗಳಲ್ಲಿ ಕುಶಲಕರ್ಮಿಗಳ ಕೊರತೆಯೂ ಇದೆ. ಈ ಎರಡೂ ವೈಪರೀತ್ಯಗಳಾಗದಂತೆ ನೋಡಿ ಕೊಳ್ಳಬೇಕು.

ವಿದ್ಯಾರ್ಥಿಗಳು ತಮ್ಮ ಉದ್ಯೋಗದ ಬಗೆಗೆ ಒಂದು ಸ್ವಂತ ನಿರ್ಧಾರಕ್ಕೆ ಬರುವಂತೆ ಪೋಷಕರು ಹಾಗೂ ಶಿಕ್ಷಕರು ಯತ್ನಿಸಬೇಕು. ತಮ್ಮ ನಿರ್ಧಾರಗಳನ್ನು ಅವರ ಮೇಲೆ ಹೇರಬಾರದು. ಅಂತಿಮ ನಿರ್ಧಾರವನ್ನು ಅವರಿಗೇ ಬಿಡಬೇಕು. ಸೂಕ್ತವಾದ ಮಾಹಿತಿಯನ್ನೊದಗಿಸಿ, ಶೈಕ್ಷಣಿಕ ವಾತಾವರಣವನ್ನುಂಟುಮಾಡಿ, ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಕುದುರಿಸಬೇಕು. ಪೋಷಕ–ಶಿಕ್ಷಕ ಸಂಘ ಈ ದಿಸೆ ಯಲ್ಲಿ ಬಲು ಪ್ರಯೋಜನಕಾರಿ. ಮಕ್ಕಳ ಏಳಿಗೆಗಾಗಿ ಶಿಕ್ಷಕರು ಮತ್ತು ಪೋಷಕರು ನಡೆಸುವ ಸಂಯುಕ್ತ ಯತ್ನ ಒಂದಕ್ಕೊಂದು ಪೂರಕವಾಗಲು ಇದು ನೆರವಾಗುತ್ತದೆ.

ವಿದ್ಯಾವಂತ ನಿರುದ್ಯೋಗಿಗಳು ಉದ್ಯೋಗಕ್ಕಾಗಿ ಕೇವಲ ಸರ್ಕಾರಿ ಅಥವಾ ಸಾಹುಕಾರಿ ಸಂಸ್ಥೆಗಳ ಬಾಗಿಲು ಕಾಯದೆ ತಾವೇ ಸ್ವಂತ ಉದ್ಯೋಗವನ್ನು ಆರಂಭಿಸು ವಂತೆ ಅವರ ಮನ ಒಲಿಸುವ ಅಗತ್ಯವಿದೆ. ಇದರಿಂದಾಗಿ ಅವರು ಸ್ವಾವಲಂಬಿ ಗಳಾಗುವರಲ್ಲದೆ ಹಲವರಿಗೂ ಉದ್ಯೋಗವನ್ನು ನೀಡಲು ಸಾಧ್ಯವಾಗುತ್ತದೆ. ಏಕಾಂಗಿಯಾಗಿ ಇಲ್ಲವೆ ಸಾಂಘಿಕವಾಗಿ ಇಂತಹ ಸ್ವಯಂ ಉದ್ಯೋಗಗಳನ್ನು ಕೈಗೊಳ್ಳುವಂತೆ ಅವರಲ್ಲಿ ಆತ್ಮವಿಶ್ವಾಸ ತುಂಬುವ ಅಗತ್ಯವಿದೆ. ಈ ದಿಸೆಯಲ್ಲಿ ಅವರಿಗೆ ಸೂಕ್ತ ಸಲಹೆಯನ್ನು ಮತ್ತು ಹಣದ ಅಗತ್ಯವನ್ನು ಸರ್ಕಾರ ಅಥವಾ

ಸ್ವಯಂಮಾಸಕ್ತ ಸಂಸ್ಥೆಗಳು ಒದಗಿಸಬೇಕು. ಇಂತಹ ಸೌಕರ್ಯಗಳ ಬಗೆಗೆ ಮಾಹಿತಿಯನ್ನು ಅವರಿಗೆ ನೀಡಬೇಕು.

ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳು ಆಕರ್ಷಕವಾಗಬೇಕು. ವಿಶೇಷ ವೇತನ, ವಸತಿ ಸೌಲಭ್ಯ ಮುಂತಾದ ಸೌಲಭ್ಯಗಳಿಂದ ನಿರುದ್ಯೋಗಿಗಳನ್ನು ಆಕರ್ಷಿಸಬೇಕು. ಹಲವಾರು ಕೈಗಾರಿಕಾ ಘಟಕಗಳನ್ನು ಒಂದೇ ಕಡೆ ಸ್ಥಾಪಿಸುವ ಬದಲು ಬೇರೆ ಬೇರೆ ಕಡೆ ಸ್ಥಾಪಿಸಿದರೆ ವಿದ್ಯಾವಂತರ ನಿರುದ್ಯೋಗ ಒಂದೇ ಕಡೆ ಕೇಂದ್ರಿಕೃತವಾಗುವುದು ತಪ್ಪುತ್ತದೆ. ಉದ್ಯೋಗಾವಕಾಶಗಳು ಅವೆಷ್ಟೇ ದೂರದಲ್ಲಿರಲಿ, ಅರಿಸಿಕೊಂಡು ಹೋಗುವಂತೆ ವಿದ್ಯಾವಂತ ನಿರುದ್ಯೋಗಿಗಳನ್ನು ಪ್ರಸಲಾಯಿಸಬೇಕು.

ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಹೆಚ್ಚಬೇಕು. ಇದಕ್ಕಾಗಿ ಸರ್ಕಾರ ಮತ್ತು ಆಸಕ್ತ ಜನತೆ, ಧನಸಹಾಯ, ತಾಂತ್ರಿಕ ಸಹಾಯ ಇತ್ಯಾದಿಗಳನ್ನೊದಗಿಸಬೇಕು. ಕೃಷಿ ಸಂಬಂಧಿತ ಅನೇಕ ಗೃಹಕೈಗಾರಿಕೆಗಳನ್ನು ತೆರೆಯುವುದು ಸಾಧ್ಯವುಂಟು.

ಶಿಕ್ಷಣದ ಗುಣಮಟ್ಟ ಮತ್ತು ಪರೀಕ್ಷಾ ಪದ್ಧತಿ ಎರಡೂ ಸುಧಾರಿಸಬೇಕಾಗಿದೆ. ಇವೆರಡೂ ಉದ್ಯೋಗ ಪ್ರಪಂಚದ ಮೇಲೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರಭಾವ ಬೀರುತ್ತವೆ.

ಇದಲ್ಲದೆ ಪ್ರೌಢಶಿಕ್ಷಣ ಆಯೋಗ ಮತ್ತು ಕೊಠಾರಿ ಆಯೋಗಗಳೆರಡೂ ಶಿಕ್ಷಣಕ್ಕೂ ಉದ್ಯೋಗಕ್ಕೂ ಇರುವ ಸಂಬಂಧವನ್ನು ಗ್ರಹಿಸಿ ಹಲವಾರು ಶಿಫಾರಸುಗಳನ್ನು ಮಾಡಿವೆ. ಶಾಲಾಕಾಲೇಜುಗಳಲ್ಲಿ ಶಿಕ್ಷಣ ಹಾಗೂ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮಗಳ ಜಾರಿಯನ್ನು ಎರಡೂ ಆಯೋಗಗಳು ಒತ್ತಾಯಿಸಿವೆ. ಪ್ರೌಢಶಿಕ್ಷಣವನ್ನು ವೃತ್ತಿಪರಗೊಳಿಸುವ ದೃಷ್ಟಿಯಿಂದ ವಿವಿಧೋದ್ದೇಶ ಶಾಲೆಗಳನ್ನು ತೆರೆಯಬೇಕೆಂದು ಅದು ಶಿಫಾರಸುಮಾಡಿದೆ. ಅದನ್ನು ಅನುಸರಿಸಿ ಅನೇಕ ವಿವಿಧೋದ್ದೇಶ ಶಾಲೆಗಳನ್ನು ದೇಶಾದ್ಯಂತ ತೆರೆಯಲಾಗಿದೆ.

ಕೊಠಾರಿ ಆಯೋಗವು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಗಳನ್ನು ಮುಗಿಸಿ ಮುಂದೆ ಶಿಕ್ಷಣವನ್ನು ಮುಂದುವರಿಸಿದವರಿಗಾಗಿ 1 ರಿಂದ 3 ವರ್ಷಗಳ ಎರಡು ರೀತಿಯ ವೃತ್ತಿಪರ ಶಾಲೆಗಳನ್ನು ತೆರೆಯಬೇಕೆಂದು ಶಿಫಾರಸುಮಾಡಿದೆ. ಮಕ್ಕಳಲ್ಲಿ ಕಾರ್ಯದ ಬಗೆಗೆ ಗೌರವ ಭಾವನೆ ಮೂಡಿಸಲು ಕಾರ್ಯಾನುಭವವನ್ನು ಶಾಲೆಗಳಲ್ಲಿ ಕಾರ್ಯಗತಗೊಳಿಸಲು ಈ ಶಿಫಾರಸನ್ನು ಮಾಡಲಾಗಿತ್ತು. ಆದರೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಣ ಆಡಳಿತತಜ್ಞರಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಯಾವ ಉತ್ಸಾಹವೂ ಇದುವರೆಗೂ ಕಂಡುಬಂದಿಲ್ಲ. ಮಾನವ ಶಕ್ತಿಯ ಪೂರ್ಣ ಪ್ರಯೋಜನ ಪಡೆದುಕೊಳ್ಳಲು ಕೊಠಾರಿ ಆಯೋಗವು ಶಿಕ್ಷಣಾವಕಾಶ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಶಿಫಾರಸುಮಾಡಿದೆ. ಶಿಕ್ಷಣದ ಅನಂತರ ವಿದ್ಯಾರ್ಥಿಗೆ ಒಂದರಿಂದ ಮೂರು ವರ್ಷಗಳ ಉದ್ಯೋಗದ ಭರವಸೆ

ಯನ್ನು ನೀಡಬೇಕೆಂಬುದು ಆಯೋಗದ ಅಭಿಮತ. ಶಿಕ್ಷಣಾವಕಾಶವನ್ನು ಕೊಟ್ಟಾಗಲೇ ಈ ಸೌಲಭ್ಯವನ್ನು ನೀಡಿದರೆ ಆತಂಕ, ಕಳವಳಗಳು ಕಡಮೆಯಾಗಿ ಹುಮ್ಮಸ್ಸಿನಿಂದ ವ್ಯಕ್ತಿ ವೃತ್ತಿಗಿಳಿಯಲು ನೆರವಾಗುತ್ತದೆ. ವೈದ್ಯಕೀಯ ಶಿಕ್ಷಣದ ಹಂತದಲ್ಲಿ ಒಂದು ವರ್ಷವಾದರೂ ಉದ್ಯೋಗದ ಭರವಸೆಯುಂಟು. ಇದನ್ನೇ ಇತರ ಕ್ಷೇತ್ರಗಳಿಗೂ ಅನ್ವಯಿಸಬಹುದೆಂದು ಅವರ ಅಭಿಮತ. ಈ ಶಿಫಾರಸಿನ ಇತಿಮಿತಿಗಳ ಅರಿವು ಆಯೋಗಕ್ಕಿಲ್ಲದಿಲ್ಲ. ಇಂತಹ ಉದ್ಯೋಗ ಭರವಸೆಯಿಂದ ಹಲವಾರು ಕ್ಷೇತ್ರಗಳಲ್ಲಿ ಸಮಸ್ಯೆಗಳು ಕಡಮೆಯಾಗುವ ಬದಲು ಹೆಚ್ಚಾಗಬಹುದು. ಆದರೂ ಇದು ಆಯೋಗದ ಒಂದು ಪ್ರಾಯೋಗಿಕ ಸಲಹೆ.

ವಿದ್ಯಾವಂತ ನಿರುದ್ಯೋಗ ಸಮಸ್ಯೆಯು ಕೇವಲ ಶಿಕ್ಷಣ ಕ್ಷೇತ್ರವನ್ನಷ್ಟೇ ಅಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳನ್ನೂ ಆವರಿಸಿದ್ದು ಅವುಗಳ ಪರಿಹಾರಕ್ಕೆ ಒಂದು ಸಂಯುಕ್ತ ಯತ್ನ ನಡೆಯಬೇಕಾಗಿದೆ.

ಗ್ರಂಥಋಣ

1. Amrik Singh and Philip G. Altbach : *The Higher Learning in India*, Vikas Publishing House (Pvt.) Ltd., Delhi. 1974
2. J. N. Kaul, *Higher Education, Social Change and National Development* Published by the Registrar, Indian Institute of Advanced Study, Rashtrapathy Nivas, Summer Hill, Simla, Allahabad; 1975.
3. India 1987 : A Reference Annual, Published by the Director, Publication Division, Ministry of Information and Broadcasting, Government of India, Patiala House, New Delhi, 1988.
4. ಎಂ. ಎನ್. ರಾಮಚಂದ್ರ ಜೋಯಿಸ್ ಮತ್ತು ವಿ. ನರಹರಿ, ಆಧುನಿಕ ಭಾರತೀಯ ಶಿಕ್ಷಣ : ತಿರುವುಗಳು ಮತ್ತು ಸಮಸ್ಯೆಗಳು, ಗೀತಾ ಬುಕ್ ಹೌಸ್, ಮೈಸೂರು, 1983.

ಆರೋಗ್ಯ, ವಿದ್ವತ್ತು, ಸಜ್ಜನರ ಸ್ನೇಹ—ಇವು ಮನುಷ್ಯ ಹಣವಿಲ್ಲದಿದ್ದರೂ ಗಳಿಸಬಹುದಾದ ಸಿರಿಸಂಪತ್ತು.

ವಿಚಾರವಾದಿ ಉತ್ತರ ನೀಡಬೇಕು, ಶತ್ರುವಿನ ಗುಣಗಳನ್ನು ಗ್ರಹಿಸಬೇಕು, ಗುರುವಿನಲ್ಲೇ ಇದ್ದರೂ ದೋಷಗಳನ್ನು ಬಿಡಬೇಕು.

ಕಿವುಡನಿಗೆ ವೀಣೆಯು ಹೇಗೋ ಹಾಗೆ, ಕಣ್ಣಿಲ್ಲದವನಿಗೆ ಚಂಚಲನೇತ್ರೆಯರು ಹೇಗೋ ಹಾಗೆ, ಪ್ರಾಣ ಬಿಟ್ಟವನಿಗೆ ಪುಷ್ಪಮಾಲೆಯು ಹೇಗೋ ಹಾಗೆ ಗರ್ವಿತನಾದವನ ವಿದ್ಯೆ ವ್ಯರ್ಥ.

ಸುಳ್ಳಾಡುವುದಕ್ಕಿಂತ ಮೌನದಿಂದಿರುವುದು ಲೇಸು.

ಪರಧನದಿಂದ ಬರುವ ಸುಖಕ್ಕಿಂತ ಭಿಕ್ಷೆ ಬೇಡುವುದು ಲೇಸು.

ಹೆಚ್. ಪಿ. ದೇವಕಿ

ವೈದಿಕಯುಗದಲ್ಲಿ—'ಹೆಣ್ಣು'

"ಹೆಣ್ಣಾಗಿ ಹುಟ್ಟೋಕ್ಕಿಂತ ಮಣ್ಣಾಗಿ
ಮಣ್ಣಿನಾ ಮೇಲೊಂದು ಮರವಾಗಿ
ಪುಣ್ಯವಂತರಿಗೆ ನೆರಳಾಗು"

ಬಾಳಿನ ಏಳು-ಬೀಳುಗಳಿಂದ ಬೇಸತ್ತ, ಸಮಾಜದ ಅನಾದರದಿಂದ ನಿರಾಶೆಗೊಂಡ, ಸಾಮಾನ್ಯವರ್ಗದ ಹೆಣ್ಣುಮಗಳೊಬ್ಬಳು ಸಂಕಟದಿಂದ ನುಡಿಯುವ ಮೇಲಿನ ಮಾತುಗಳು ಜಾನಪದ ಸಾಹಿತ್ಯದ ಅಭಿರುಚಿಯುಳ್ಳವರೆಲ್ಲರಿಗೂ ಪರಿಚಿತವಷ್ಟೆ. ಇಂದಿನ ದಿನಗಳಲ್ಲೂ ಸಹ ಹೆಣ್ಣುಮಕ್ಕಳ ಬಗ್ಗೆ ಅನಾದರವನ್ನೇ ನಮ್ಮ ಸಮಾಜದಲ್ಲಿ ಕಾಣುತ್ತಿದ್ದೇವೆ. ಸ್ವತಃ ಸ್ತ್ರೀಯರೇ ತಮ್ಮ 'ಹೆಣ್ಣುತನ'ದ ಬಗ್ಗೆ ಹೇಸಿಕೊಳ್ಳುವುದೂ ಸಹ ಅಪರೂಪವೇನಲ್ಲ. ಭಾರತದ ಇದೇ ಮಣ್ಣಿನಲ್ಲಿ ಸಾವಿರಾರು ವರ್ಷಗಳ ಹಿಂದೆ ಅರಳಿದ್ದು ಈಗಲೂ ಸಹ ವೇದಮಂತ್ರಗಳ ಮೂಲಕ ತಕ್ಕಮಟ್ಟಿಗೆ ಊಹಿಸಬಹುದಾದ, ವೈದಿಕಯುಗದ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನಗಳು ಯಾವ ರೀತಿಯಲ್ಲಿದ್ದವು ? ಪುರುಷಬಾಂಧವರು ಆಕೆಯ ಬಗ್ಗೆ ಎಂತಹ ನಿಲುವನ್ನು ತಳೆದಿದ್ದರು? ಎಂಬ ವಿಷಯದ ಸಂಕ್ಷಿಪ್ತ ವಿವೇಚನೆಯೇ ಈ ಲೇಖನದ ಉದ್ದೇಶ.

ವೈದಿಕಯುಗದ ಸಮಾಜದಲ್ಲಿನ ಸ್ತ್ರೀಯರ ಬಗ್ಗೆ ಮಾಹಿತಿಯನ್ನು ಒದಗಿಸುವಂಥವು ಋಗ್ವೇದ ಮತ್ತು ಅಥರ್ವವೇದಗಳು. ಒಟ್ಟು ನಾಲ್ಕು ವೇದಗಳಲ್ಲಿ ಉಳಿದೆರಡು ಯಜುರ್ವೇದ ಮತ್ತು ಸಾಮವೇದಗಳು. ಇವೆರಡೂ ವಿಶೇಷವಾಗಿ ಯಜ್ಞಯಾಗಾದಿಗಳ ಕ್ರಮವಿಧಾನಗಳಿಗೆ ಹಾಗೂ ಮಂತ್ರಗಳನ್ನು ಸುಶ್ರಾವ್ಯವಾಗಿ ಹಾಡುವುದಕ್ಕಾಗಿಯೇ ಮೀಸಲಾಗಿವೆ. ಇವುಗಳಲ್ಲಿ ಲೌಕಿಕ ಜೀವನಕ್ಕೆ ಅದರಲ್ಲೂ ಮಹಿಳೆಯರ ಜೀವನಕ್ಕೆ ಸಂಬಂಧಿಸಿದಂತಹ ವಿಷಯಗಳು ಕಂಡುಬರುವುದಿಲ್ಲ. ನಾಲ್ಕು ವೇದಗಳಲ್ಲಿ ಋಗ್ವೇದವೇ ಮೊಟ್ಟಮೊದಲು ರಚಿತವಾಗಿದ್ದು, ಗಾತ್ರ ಮತ್ತು ಪಾತ್ರಗಳಲ್ಲಿಯೂ ಇದೇ ಹಿರಿಯದೆನಿಸಿಕೊಂಡಿದೆ. ನಂತರ ರಚಿತವಾದ ಅಥರ್ವವೇದಕ್ಕೂ ಋಗ್ವೇದಕ್ಕೂ ನಡುವೆ ಸಾವಿರಾರು ವರ್ಷಗಳ ಅಂತರವಿದ್ದೇ ಇದೆ. ಮಾನವ ಸಹಜವಾದ ಪ್ರೇಮ-ಕಾಮಗಳ, ನೋವು-ನಲಿವುಗಳ, ಹರ್ಷ-ದ್ವೇಷಗಳ,

ರಾಗ-ವಿರಾಗಗಳ ಚಿತ್ರಣ ಋಗ್ವೇದಕ್ಕಿಂತಲೂ ಅಥರ್ವವೇದದಲ್ಲಿ ಹೆಚ್ಚು ಸ್ಪಷ್ಟವಾಗಿ ಕಂಡುಬರುತ್ತದೆ. ವೈದಿಕ ಸಾಹಿತ್ಯವೆಂದರೆ ಸಾಮಾನ್ಯವಾಗಿ ನಾಲ್ಕು ವೇದಗಳು, ಅವುಗಳ ಬ್ರಾಹ್ಮಣಗಳು, ಆರಣ್ಯಕಗಳು, ಉಪನಿಷತ್ತುಗಳು ಇವೆಲ್ಲವೂ ಸೇರಿಹೋಗುತ್ತವೆ. ಪ್ರಸ್ತುತ ಋಗ್ವೇದ ಮತ್ತು ಅಥರ್ವವೇದಗಳನ್ನು ಮಾತ್ರ ಪರಿಗಣಿಸಿ, ಉಳಿದೆಲ್ಲವನ್ನು ಅತಿವಿಸ್ತಾರದ ಭಯದಿಂದ ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿಲ್ಲ.

ವೈದಿಕಯುಗದ ಸಮಾಜ ಪುರುಷಪ್ರಧಾನ ಸಮಾಜ. ಶಾರೀರಿಕವಾಗಿ ಸ್ತ್ರೀಗಿಂತಲೂ ಪುರುಷ ಬಲಿಷ್ಠ. ಇದು ಅವನಿಗೆ ಪ್ರಕೃತಿ ನೀಡಿರುವ ವರ. ಪುರುಷ, ಸಾಮಾನ್ಯವಾಗಿ ಅಂದು ಇಂದೂ ಸಹ ಕುಟುಂಬದ ರಕ್ಷಕ. ವೈದಿಕ ಸಮಾಜದಲ್ಲಿ ತಂದೆಯೇ ಕುಟುಂಬದ ಯಜಮಾನ. ಆದರೆ ಮಹಿಳೆಯರು ಪುರುಷರಿಗಿಂತ ಕೀಳೆಂಬ ಭಾವನೆ ವೇದಗಳಲ್ಲಿ, ಅದರಲ್ಲೂ ಅಥರ್ವವೇದಕ್ಕಿಂತ ಸಾವಿರಾರು ವರ್ಷಗಳ ಮೊದಲೇ ರಚಿತವಾಗಿರುವ ಋಗ್ವೇದದಲ್ಲಿ ಕಂಡುಬರುವುದಿಲ್ಲ. ಭಾರತೀಯ ಇತಿಹಾಸದ ಪರಂಪರೆಯಲ್ಲೇ ವಿಶೇಷವಾದ ಗೌರವ ಆದರಗಳನ್ನು ಅನುಭವಿಸಿದವಳು ಋಗ್ವೇದ ಕಾಲದ ಸಮಾಜದಲ್ಲಿ ಬದುಕಿದ್ದ ಮಹಿಳೆ, ಅಥರ್ವವೇದದ ಕಾಲಕ್ಕೆ, ಸ್ತ್ರೀಯರ ಬಗ್ಗೆ ಇದ್ದಂತಹ ಕೋಮಲ ಭಾವನೆಗಳು, ಗೌರವ ಆದರಗಳು ಸ್ವಲ್ಪಮಟ್ಟಿಗೆ ಕಡಮೆಯಾಗಿದ್ದರೂ, ಅನಂತರದ ಇತಿಹಾಸ ಪುರಾಣಗಳಿಗೆ ಹೋಲಿಸಿದಲ್ಲಿ ಸಾಮಾಜಿಕವಾಗಿ ಸ್ತ್ರೀಯರ ಸ್ಥಾನ ಉತ್ತಮವಾಗಿಯೇ ಇದ್ದಿತು. ಮುದ್ದಿನ ಮಗುವಾಗಿ, ಹರಯದರಸಿ ತರುಣಿಯಾಗಿ, ಮೋಹದ ಮಡದಿ ಎನಿಸಿ, ಜವಾಬ್ದಾರಿಯುತ ಮಾತೆಯಾಗಿ, ಹೀಗೆ ಜೀವನದ ಈ ನಾಲ್ಕು ಅತಿಮುಖ್ಯ ಮಜಲುಗಳಲ್ಲಿ ವೈದಿಕಯುಗದ ಹೆಣ್ಣಿನ ಜೀವನವನ್ನು, ಅಂದಿನ ಸಮಾಜದಲ್ಲಿ ಅವಳ ಸ್ಥಾನವೇನಿತ್ತೆಂಬುದನ್ನು ಪರಿಶೀಲಿಸಬಹುದು.

ಮಗು ಅಥವಾ ಮಗಳಾಗಿ ಹೆಣ್ಣು :

ಮೊಟ್ಟಮೊದಲನೆಯದಾಗಿ ಹೆಣ್ಣುಮಗುವಿನ ಜನನಕ್ಕೆ ಎಂತಹ ಪ್ರತಿಕ್ರಿಯೆ ದೊರೆಯುತ್ತಿತ್ತೆಂಬುದನ್ನು ಗಮನಿಸಬಹುದು ಋಗ್ವೇದದಲ್ಲಿ ಗಂಡುಮಗುವಿನ ಜನನಕ್ಕಾಗಿಯೇ ಜಪಿಸಲ್ಪಡುತ್ತಿದ್ದ ಮಂತ್ರಗಳಿವೆ. ಆದರೆ ಹೆಣ್ಣುಮಗುವಿನ ಬಗ್ಗೆ ಅತಿ ತಾತ್ಸಾರವಾಗಲೀ ಅದು ಹುಟ್ಟಲೇಬಾರದೆಂಬ ಧೋರಣೆಯಾಗಲೀ ಇದ್ದಂತೆ ಕಂಡುಬರುವುದಿಲ್ಲ ಹೆಣ್ಣು ಶಿಶುವಿನ ಬಗ್ಗೆ ಅಥರ್ವವೇದ ಕಾಲಕ್ಕೆ ಸಾಕಷ್ಟು ಬದಲಾವಣೆ ಕಂಡುಬರುತ್ತದೆ. ಅಥರ್ವವೇದದ ಗೃಹಸ್ಥನಿಗೆ[1] ತನ್ನ ಮನೆಯಲ್ಲಿ ಗಂಡೇ ಹುಟ್ಟಲೆಂಬ ಅಭಿಲಾಷೆ. ಇದರೊಡನೆಯೇ 'ಹೆಣ್ಣು ಶಿಶು ಬೇರೆಯವರ ಮನೆ

---

1. ಪ್ರಜಾಪತಿರನುಮತಿಃ ಸಿನೀವಾಲ್ಯಚೀಕ್ಲುಪತ್
ಸ್ತ್ರೈಷೂಯಮನ್ಯತ್ರ ದಧತ್ಪುಮಾಂಸಮುದಧಧಿಹ॥
ಅಥರ್ವವೇದ ಕಾಂಡ 6, ಸೂಕ್ತ 11, ಮಂತ್ರಸಂಖ್ಯೆ 3

'ಪ್ರಜೆಗಳಿಗೆ ಪತಿ'ಯವನು 'ಅನುಮತಿಯು' ಸಿನಿವಾಲಿ ;
ಅವನು ಈ ಎಲ್ಲವನು ಸೃಷ್ಟಿಸಿಹನು ;
ಪೆಣ್ಣು ಜನ್ಮವನವನು ಕಳುಹೆ ಬೇರೊಂದೆಡೆಗೆ
ಗಂಡುಜನ್ಮವನವನು ಇಲ್ಲಿ ಕೊಡಲಿ ![2]

ಯಲ್ಲಿ ಜನಿಸಲಿ' ಎಂಬ ಕೆಟ್ಟ ಹಂಬಲ. ಇದಕ್ಕಾಗಿ ಪ್ರಜಾಪ್ರತಿಯೆಂಬ ದೇವತೆಗೆ ಪ್ರಾರ್ಥನೆ ಸಲ್ಲಿಸುವನು. ಈ ಪ್ರಾರ್ಥನೆಯ ಕನ್ನಡ ಭಾವಾನುವಾದ ಇಂತಿದೆ ; ಹೆಣ್ಣುಮಕ್ಕಳ ವಿದ್ಯಾಭ್ಯಾಸ ಸಮಾಧಾನಕರವಾಗಿತ್ತೆಂಬುದಕ್ಕೆ ಋಷಿಕೆಯರಿಂದಲೇ ಅಥವಾ ಮಹಿಳಾಋಷಿಗಳಿಂದಲೇ ರೂಪುಗೊಂಡಿರುವ ಸೂಕ್ತಿಗಳು ಆಧಾರವಾಗಿವೆ. ಕ್ರೈಸ್ತರ ಪವಿತ್ರಗ್ರಂಥವಾದ ಬೈಬಲ್ಲಿನಲ್ಲಾಗಲೀ, ಮುಹಮ್ಮದೀಯರ ಪವಿತ್ರ ಗ್ರಂಥ ವೆನಿಸಿರುವ ಕೊರಾನಿನಲ್ಲಾಗಲೀ ಸ್ತ್ರೀಋಷಿಗಳ ಅಥವಾ ತಪಸ್ವಿನಿಯರಿಂದ ಸೂಕ್ತಿಗಳು ರಚಿತವಾದಂತಿಲ್ಲ. ಪುರುಷರ ವಿದ್ಯಾಭ್ಯಾಸವೇ ಅತಿಕಷ್ಟದಿಂದ ನಡೆಯುತ್ತಿದ್ದ ವೈದಿಕಯುಗದಲ್ಲಿ ವಿದ್ಯೆಗಾಗಿ ಗುರುಕುಲಗಳನ್ನರಸಿಕೊಂಡು ಬಹಳ ದೂರ ಹೋಗ ಬೇಕಾದ ಸಂದರ್ಭ ಒಮ್ಮೊಮ್ಮೆ ಎದುರಾಗುತ್ತಿದ್ದುದೂ ಉಂಟು. ಎಂಟು ವರ್ಷದ ಅಥವಾ ಹತ್ತು ಹನ್ನೆರಡು ವರ್ಷದ ಪುಟ್ಟಕುವರನನ್ನು ಗುರುಕುಲಕ್ಕೆ ಕಳುಹಿಸುವ ತಂದೆ-ತಾಯಿಗಳು ಪುನಃ ಅವನನ್ನು ನೋಡುತ್ತಿದ್ದುದು ಹದಿನೆಂಟು-ಇಪ್ಪತ್ತು ವರ್ಷದ ತರುಣನಾಗಿ ಅವನು ಹಿಂದಿರುಗಿದಾಗಲೇ. ವಿದ್ಯಾಭ್ಯಾಸವೆಂದರೆ ವೇದಗಳ ಅಧ್ಯಯನವೇ ಆಗ ನಡೆಯುತ್ತಿದ್ದುದು. ಬರೆಯುವ ಪದ್ಧತಿ ಹೆಚ್ಚು ತಿಳಿದಿರದಿದ್ದ ಅಂದಿನ ದಿನಗಳಲ್ಲಿ ಬಾಯಿಪಾಠದಿಂದಲೇ ವಿದ್ಯಾಭ್ಯಾಸ ನಡೆಯುತ್ತಿದ್ದುದು. ಇಂತಹ ಪರಿಸ್ಥಿತಿಯಲ್ಲಿ ಹೆಣ್ಣುಮಕ್ಕಳನ್ನು ಗುರುಕುಲಗಳಿಗೆ ಕಳುಹಿಸಿ ವಿದ್ಯೆಯನ್ನು ಕಲಿಸುವ ಸಾಧ್ಯತೆಯೇ ಇಲ್ಲದಿದ್ದರೂ, ಅಥವಾ ಅಪರೂಪವೆನಿಸುವಂತಿದ್ದರೂ ಆಶ್ಚರ್ಯ ವೆಂದೆನಿಸುವುದಿಲ್ಲ. ಇಷ್ಟಾದರೂ ಸಹ ಋಷಿಕೆಯರು ಅಥವಾ ಮಹಿಳಾದ್ರಷ್ಟಾರು ಗಳು ಋಗ್ವೇದಕ್ಕೆ[3] ತಮ್ಮದೇ ಆದ ರೀತಿಯಲ್ಲಿ ಕೊಡುಗೆಯನ್ನಿತ್ತಿರುವರೆಂಬ ವಿಚಾರ ಭಾರತೀಯ ಮಹಿಳೆಯರೆಲ್ಲರೂ ಹೆಮ್ಮೆಪಡಬಹುದಾದದ್ದು. ಋಗ್ವೇದದ ಹತ್ತನೆಯ ಮಂಡಲದ ಬಹಳಷ್ಟು ಸೂಕ್ತಿಗಳು ಐದನೆಯ ಮಂಡಲದ ಇಪ್ಪತ್ತೆಂಟನೆಯ ಸೂಕ್ತ ಮತ್ತು ಏಳನೆಯ ಮಂಡಲದ ತೊಂಭತ್ತೊಂದನೆಯ ಸೂಕ್ತ ಇವೆಲ್ಲವೂ ಸ್ತ್ರೀಋಷಿ ಗಳಿಂದ ಅಥವಾ ಮಹಿಳಾ ಋಷಿಗಳಿಂದ ರೂಪುಗೊಂಡಂತಹವು. ಅತ್ರಿಮುನಿವಂಶಜೆಯ ರಾದ ವಿಶ್ವವರಾ ಮತ್ತು ಅಪಾಲಾತ್ರೇಯಿ ಇವರುಗಳು ಮಂತ್ರದ್ರಷ್ಟಾರರುಗಳೂ ಹೌದು. ಸ್ವತಃ ಸೋಮಲತೆಯನ್ನು ಹಿಂಡಿ ಇಂದ್ರನಿಗೆ ಯಜ್ಞದಲ್ಲಿ ಅರ್ಪಿಸಲು ಇವರು ಗಳು ಯತ್ನಿಸಿದ್ದರೆಂಬುದಕ್ಕೆ ದೃಷ್ಟಾಂತಗಳಿವೆ. ಋಗ್ವೇದದ ಹತ್ತನೆಯ ಮಂಡಲದ

2. ಅಥರ್ವವೇದ, ಪುಟ 54, ಸಿ. ಜಿ. ಪುರುಷೋತ್ತಮ

3. ಋಗ್ವೇದದ ಹತ್ತನೆಯ ಮಂಡಲದ 85, 107, 125, 127, 151 ಈ ಸೂಕ್ತ ಗಳೆಲ್ಲವೂ ಮಹಿಳಾ ಋಷಿಕೆಯರಿಂದ ರೂಪುಗೊಂಡವುಗಳೆಂದು ಪ್ರಸಿದ್ಧವಾಗಿವೆ.

ಕೆಲವು ಸೂಕ್ತಗಳು ಸೂರ್ಯ, ಶ್ರದ್ಧಾ, ವಾಕ್, ದಕ್ಷಿಣಾ, ಮೊದಲಾದ ಋಷಿಕೆಯರಿಂದ ರಚಿತಗೊಂಡವೆಂಬುದನ್ನು ಸಾಯಣರೇ ಮೊದಲಾದ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಈ ಸೂಕ್ತದಲ್ಲಿ ಬರುವ ಬಹಳಷ್ಟು ವಿಷಯಗಳು ಐಹಿಕಕಾಮನೆಗಳಿಗೆ ಸೀಮಿತವಾಗಿದ್ದು ಮಹಿಳಾ ಜಗತ್ತಿನ ಸರಸ-ವಿರಸಗಳು, ಸಿಹಿ-ಕಹಿಗಳು ಈ ಋಷಿಕೆಯರ ಹೃದಯಾಂತರಾಳದಿಂದ ಪುಟಿದು ಬಂದಿವೆ. ಹಾಗೆಂದಮಾತ್ರಕ್ಕೆ ವೈದಿಕಯುಗದ ಮಹಿಳೆಯರಿಗೆ ಆಧ್ಯಾತ್ಮಿಕ ದೃಷ್ಟಿಯೇ ಇರಲಿಲ್ಲವೆಂಬುದಾಗಿ ಭಾವಿಸಲಾಗದು. ಉಪನಿಷತ್ತುಗಳಲ್ಲಿ ಬರುವ ಗಾರ್ಗಿ, ಮೈತ್ರೇಯಿಯರಂತಹ ಬ್ರಹ್ಮವಾದಿನಿಯರು ಈ ದೇಶದ ಮಣ್ಣಿನಲ್ಲಿ ಜನ್ಮತಾಳಿದವರು. ಪತಿಯಾಜ್ಞವಲ್ಕ್ಯರು ನೀಡಬಯಸಿದ್ದ ಐಹಿಕ ಸಂಪತ್ತನ್ನು ತಿರಸ್ಕರಿಸಿ ಆತ್ಮ ಸಂಪತ್ತನ್ನು ಬಯಸಿದವರು ಗಾರ್ಗಿ, ಮೈತ್ರೇಯಿಯರು. ಇಡೀ ವಿಶ್ವಕ್ಕೆ ಭಾರತೀಯ ಮಹಿಳೆಯರು ಈ ದಿಶೆಯಲ್ಲಿ ಅಗ್ರಗಣ್ಯರು. ವಿದ್ಯೆಯ ಕ್ಷೇತ್ರದಲ್ಲಿ ಭಾರತೀಯ ಮಹಿಳೆಯರದೇ ಮೇಲುಗೈ ಎಂಬುದನ್ನು ಅತಿ ಪ್ರಾಚೀನ ದಾಖಲೆಗಳಾದ ವೇದಗಳು ಹೀಗೆ ಪ್ರತಿಪಾದಿಸಿವೆ. ಕೇವಲ ಜ್ಞಾನಸತೃಷ್ಣರಾಗಿ, ತಮ್ಮ ಜೀವಮಾನವನ್ನೆಲ್ಲ ಜ್ಞಾನಸಂಪಾದನೆಯಲ್ಲಿಯೇ ಕಳೆದವರೂ ಉಂಟು. 'ಘೋಷಾ' ಎಂಬ ಋಷಿಕೆಯ ಹೆಸರನ್ನು ಇದಕ್ಕೆ ದೃಷ್ಟಾಂತವಾಗಿ ಹೆಸರಿಸಬಹುದು. ತನ್ನ ತಂದೆಯ ಮನೆಯಲ್ಲೇ ತನ್ನೆಲ್ಲಾ ಆಯುಸ್ಸನ್ನು ಬ್ರಹ್ಮಚಾರಿಣಿಯಾಗಿಯೇ ದೂಡಿದ ಘೋಷಾಳ ಹೆಸರು ಋಗ್ವೇದ ಅಥರ್ವವೇದಗಳೆರಡರಲ್ಲೂ ಕಂಡುಬರುತ್ತದೆ. ಋಗ್ವೇದದ ಹತ್ತನೆಯಮಂಡಲದ ನಲವತ್ತನೆಯ ಸೂಕ್ತದಲ್ಲಿ ಅಶ್ವಿನೀ ದೇವತೆಗಳನ್ನು ಉದ್ದೇಶಿಸಿ ಈ ಋಷಿಕೆಯು ರೂಪಿಸಿರುವ ಮಂತ್ರಗಳಲ್ಲಿ ಅವಿವಾಹಿತ ಯುವತಿಯೊಬ್ಬಳ ಕಾತರ, ಹಂಬಲಗಳು ಪ್ರತಿಧ್ವನಿತವಾಗಿವೆ.

ಋಗ್ವೇದದಲ್ಲಿ ಉಲ್ಲೇಖಿಸಲಾಗಿರುವ, ಮಹಿಳೆಯರಿಗೆ ಸಂಬಂಧಿಸಿದಂತಿರುವ ವಿಷಯಗಳನ್ನೇ ಅಥರ್ವವೇದದಲ್ಲಿಯೂ ಕಾಣಬಹುದು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸುವಂತೆ ವಿಶೇಷ ವಿಚಾರಗಳೇನೂ ಅಥರ್ವವೇದದಲ್ಲಿ ಕಂಡುಬರುವುದಿಲ್ಲ. ಅಥರ್ವವೇದದ ಕಾಲಕ್ಕೆ ಹೆಣ್ಣುಮಗು ತಂದೆತಾಯಿಯರಿಗೆ 'ಹೊರೆ' ಯೆಂಬಂತೆ ತೋರಿಬಂದುದು ಸ್ಪಷ್ಟವಾಗಿ ಕಂಡುಬರುತ್ತದೆ. ಗರ್ಭವತಿ ಮಹಿಳೆಗೆ ನೆರವೇರಿಸುವ ಕೆಲವು ವಿಶೇಷವಿಧಿಗಳಲ್ಲಿ, 'ಗಂಡುಮಗು'ವನ್ನೇ ಅವಳು ಹಡೆಯಲಿ, ಅದರ ನಂತರವೂ ಹುಟ್ಟುವ ಮಗು ಸಹ ಗಂಡೇ ಆಗಲಿ[4] ಎಂಬ ಕೋರಿಕೆಯನ್ನು ಗೃಹಸ್ಥನು ದೇವತೆಗಳ ಮುಂದಿಡುತ್ತಿದ್ದುದನ್ನು ಕಾಣುತ್ತೇವೆ. ಅರ್ಥಾತ್ ಹೆಣ್ಣುಮಗುವಿನ ಜನ್ಮಕ್ಕೆ ಅಥರ್ವವೇದದ ಸಾಮಾಜಿಕನು ತೋರಿಸುತ್ತಿದ್ದ ಪ್ರತಿಕ್ರಿಯೆ, ಋಗ್ವೇದ ಕಾಲದ ಸಾಮಾಜಿಕನಿಗಿಂತಲೂ, ಬೇಸರ ಕಳವಳಗಳಿಂದ ಬೆರೆತಂತಹ

4. "ಪುಮಾಂಸಂ ಪುತ್ರಂ ಜನಯ ತಂ ಪುಮಾನನುಜಾಯತಾಂ
ಭವಸಿ ಪುತ್ರಾಣಾಂ ಮಾತಾ ಜಾತಾನಾಂ ಜನಯಾಶ್ಚ ಯಾನ್"
ಅಥರ್ವವೇದ 3ನೇ ಕಾಂಡ. 23ನೇ ಸೂಕ್ತ, ಮಂತ್ರಸಂಖ್ಯೆ 3

ದ್ದಾಗಿತ್ತು. ಏಕೆಂದರೆ ವರದಕ್ಷಿಣೆಯ ಸಮಸ್ಯೆ ಅಥರ್ವವೇದ ಕಾಲದ ಸಮಾಜದಲ್ಲಿ ಮೆಲ್ಲಮೆಲ್ಲನೆ ಅಡಿಯಿಡಲಾರಂಭಿಸಿತ್ತು. ಮುಂದಿನ ಗೃಹ್ಯ ಸೂತ್ರ, ಸ್ಮೃತಿ ಮುಂತಾದುವುಗಳಲ್ಲಿ ಗಂಡುಮಗುವಿನ ಜನನಕ್ಕಾಗಿಯೇ, ಗರ್ಭವತಿಗೆ ನೆರವೇರಿಸುತ್ತಿದ್ದ 'ಪುಂಸವನ' ಎಂಬ ವಿಶೇಷ ವಿಧಿಗೆ ಅಥರ್ವವೇದದಲ್ಲಿನ ಸಮಾಜದ 'ಪುತ್ರ ಹಂಬಲ'ಗಳೇ ಮುಖ್ಯ ಪ್ರೇರಕಗಳಾಗಿರಬಹುದು. ಏಕೆಂದರೆ ಋಗ್ವೇದದಲ್ಲಿ ಹೆಣ್ಣು ಮಗುವಿನ ಬಗ್ಗೆ ಎದ್ದುತೋರುವಂತಹ ಅನಾದರ ಕಂಡುಬರುವುದಿಲ್ಲ. ಏಕಮಾತ್ರ ಪುತ್ರಿಯಾಗಿ ಸೋದರರೇ ಇಲ್ಲದೆ ಹುಟ್ಟಿಬೆಳೆದ ಮುದ್ದುಗುವರಿ ತಂದೆ ತಾಯಿಯರ ಸಮಸ್ತ ಆಸ್ತಿಗೆ ವಾರಸುದಾರಳು. ದಾಯಾದಿಗಳಿಗೆ ಅವಳ ಆಸ್ತಿಯ ಹಕ್ಕಿಲ್ಲ. ತಂದೆ-ತಾಯಿಯರ ಉತ್ತರ ಕ್ರಿಯೆಗಳನ್ನೂ ಅವಳೇ ನಡೆಸಬಹುದಿತ್ತು.

ಗೃಹಿಣಿಯಾಗಿ :

ವೈದಿಕ ಸಮಾಜದಲ್ಲಿ ಗೃಹಿಣಿಯ ಪಾತ್ರ ಅತ್ಯಂತ ಗೌರವಯುತವಾದುದಾಗಿತ್ತು. ಯಜ್ಞಕಾರ್ಯಗಳ ನಿರ್ವಹಣೆಗೆ ಗೃಹಿಣಿಯಿಲ್ಲದ ಗೃಹಸ್ಥ ಅನರ್ಹ. ಪತಿ-ಪತ್ನಿ ಇಬ್ಬರೂ ಸರ್ವರೀತಿಯಲ್ಲೂ ಸಮಾನರೇ. ಆಂಗ್ಲಭಾಷೆಯಲ್ಲಿ ಬಳಕೆಯಲ್ಲಿರುವ 'ವೈಫ್' (Wife) ಎಂಬ ಶಬ್ದಕ್ಕೆ 'ಹೆಂಡತಿ' (Housewife) ಎಂಬರ್ಥವಲ್ಲದೆ, 'ಸೂಲಗಿತ್ತಿ' (Midwife) ವಿಕ್ರಯಿಣಿ ಅಥವಾ ಮಾರುವವಳು (ಉದಾ : Fishwife) ಹಾಗೂ ಸೇವಕಿ ಎಂಬ ಅರ್ಥಗಳೂ ಉಂಟು. ಆದರೆ ವೇದ ಮಂತ್ರಗಳಲ್ಲಿ ಬರುವಂತಹ ಜಾಯಾ-ಜಾನೀ-ಪತ್ನೀ ಎಂಬ ಪದಗಳು 'ಹೆಂಡತಿ' ಎಂಬರ್ಥವನ್ನೇ ಸೂಚಿಸುವಂತೆ ತೋರಿಬಂದರೂ ಇವಕ್ಕೆ ಪ್ರತ್ಯೇಕವಾದ ವಿಶಿಷ್ಟತೆಯಿದೆ. 'ಜಾಯಾ' ಎಂಬುದು ಪತಿಯ ಪ್ರೇಮದ ಸಹಭಾಗಿನಿ ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. 'ಜಾನಿ' ಶಬ್ದವು ಅವನ ಮಕ್ಕಳಿಗೆ ತಾಯಿ ಎಂಬರ್ಥವನ್ನು ಸೂಚಿಸಿದರೆ 'ಪತ್ನೀ' ಶಬ್ದವು ಯಜ್ಞಕಾರ್ಯಗಳ ಪಾಲುದಾರಳೆಂಬ ವಿಶೇಷಾರ್ಥವನ್ನು ತಿಳಿಸುತ್ತದೆ. ಸ್ವತಃ, 'ದಂಪತೀ' ಎಂಬ ಸಂಸ್ಕೃತ ಪದವು ಪತಿ-ಪತ್ನಿ ಇಬ್ಬರೂ ಸಹ ಮನೆಯೊಡೆಯರೆಂದೂ, ಗೃಹಕಾರ್ಯ ನಿರ್ವಹಣೆಯಲ್ಲಿ ಇಬ್ಬರೂ ಸಮಾನರೆಂಬುದನ್ನು ಸೂಚಿಸುವುದು. ಗೃಹಸ್ಥ ಜೀವನಕ್ಕೆ ನಾಂದಿ ವಿವಾಹದಿಂದಲೇ. ಆದ್ದರಿಂದ ವಿವಾಹದ ಬಗ್ಗೆ ಸ್ಥೂಲವಾಗಿಯಾದರೂ ಕೆಲವು ವಿಚಾರಗಳನ್ನು ತಿಳಿಸದಿದ್ದಲ್ಲಿ ಅನುಚಿತವಾಗಬಹುದು.

ವಿವಾಹಗಳು ಸಾಮಾನ್ಯವಾಗಿ ಗುರುಹಿರಿಯರ ಸಮ್ಮತಿಗೆ ಅನುಗುಣವಾಗಿಯೇ ನೆರವೇರುತ್ತಿದ್ದರೂ 'ಪ್ರೇಮವಿವಾಹ'ಗಳೂ ಸಹ ವೈದಿಕಯುಗದಲ್ಲಿ ಧಾರಾಳವಾಗಿ ನಡೆಯುತ್ತಿದ್ದವು. ಅತಿಯಾದ ನಿರ್ಬಂಧ ಹೆಣ್ಣುಮಕ್ಕಳಿಗೆ ಇರಲಿಲ್ಲವೆಂಬುದಕ್ಕೆ ವೇದ ಮಂತ್ರಗಳಲ್ಲಿ ದೃಷ್ಟಾಂತಗಳಿವೆ. ಹಾಗೆಂದಮಾತ್ರಕ್ಕೆ ಸ್ವಚ್ಛಂದತೆಗೆ, ಸ್ವೈರವೃತ್ತಿಗೆ

ಅವಕಾಶವಿತ್ತೆಂದು ಅರ್ಥೈಸಲಾಗದು. ‘ಸಮನ’[5] ಎಂಬ ವಿಶೇಷ ಉತ್ಸವಗಳಲ್ಲಿ ಯುವಕ ಯುವತಿಯರು ಭಾಗವಹಿಸುತ್ತಿದ್ದರು. ‘ಸಮನ’ವೆಂಬ ಸಂತೋಷಕೂಟದಲ್ಲಿ ಬಣ್ಣಬಣ್ಣದ ಉಡುಗೆ ತೊಡುಗೆ ಧರಿಸಿ ಎಲ್ಲರೆದುರು ಮೆರೆಯುವುದೆಂದರೆ ತರುಣ ತರುಣಿಯರಿಗೆ ಬಲು ಪ್ರಿಯವಾದ ವಿಷಯವಾಗಿತ್ತು. ಎಲ್ಲ ವಯಸ್ಸಿನ ಸ್ತ್ರೀಪುರುಷರು ಮಕ್ಕಳು ಇದರಲ್ಲಿ ಭಾಗವಹಿಸುತ್ತಿದ್ದರೂ ಒನಪು, ಒಯ್ಯಾರಗಳ ಪ್ರದರ್ಶನಕ್ಕಾಗಿಯೇ ತರುಣಪೀಳಿಗೆ ‘ಸಮನ’ಗಳಲ್ಲಿ ತಪ್ಪದೆ ಭಾಗವಹಿಸುತ್ತಿತ್ತು. ಕಂಡವರ ಕಣ್ಣು ಮನ ಸೆಳೆಯುವ ಮೋಹಕ ರೂಪುಳ್ಳ ಯುವತಿಯ ವಿವಾಹ ಅವಳ ತಂದೆ ತಾಯಿಯರಿಗೆ ಸುಲಭವಾಗಿಬಿಡುತ್ತಿತ್ತು. ಇಂದು ಹೇಗೋ ಹಾಗೆ ಅಂದಿನ ಸಮಾಜದಲ್ಲೂ ಸಹ ‘ಬಿಜ್ಜೋಳಿಯ ಗೌರಮ್ಮ’ಗಳಿಗಿಂತ ಬೆಡಗಿನ ಅಂದಗಾರ್ತಿ ಯುವತಿಯರ ವಿವಾಹ ಶೀಘ್ರವಾಗಿ ನೆರವೇರುತ್ತಿತ್ತು. ‘ಸಮನ’ಗಳ ಉಲ್ಲೇಖ ಋಗ್ವೇದ ಮತ್ತು ಅಥರ್ವವೇದಗಳೆರಡರಲ್ಲೂ ಸಾಕಷ್ಟು ಕಂಡುಬರುತ್ತದೆ. ತಮ್ಮ ಮಗಳು ‘ಸಮನ’ದಲ್ಲಿ ಎಲ್ಲರಿಗೂ ‘ಪ್ರಿಯಳಾ’ಗಿದ್ದಳೆಂಬ ವಿಷಯ ತಂದೆತಾಯಿಯರಿಗೆ ಹೆಮ್ಮೆ ತರುವಂಥದಾಗಿತ್ತು. ಇಷ್ಟಾದರೂ ಸಹ ಅವಳಿಗೆ ಒಳ್ಳೆಯ ಗುಣವಂತನಾದ ‘ವರ’ ಸಿಕ್ಕಲೆಂಬ ಕಾತರ ಕಳವಳಗಳು ತಂದೆತಾಯಿಯರನ್ನು ಪೀಡಿಸದೆ ಇರಲಿಲ್ಲ. ಬೆಳೆದು ಯುವತಿಯಾಗಿ ಮದುವೆಗೆ ಸಿದ್ಧಳಾದ ಮಗಳು ತವರಿನಿಂದ ಅಗಲಿದರೂ ಸರಿಯೆ, ಆದರೆ ಗಂಡನ ಮನೆಯ ಸಂಬಂಧ ಎಂದಿಗೂ ಮುರಿಯಬಾರದೆಂಬ ಹಂಬಲವನ್ನು ಪ್ರತಿಯೊಬ್ಬ ತಂದೆಯೂ ಸಹ ದಾಂಪತ್ಯಜೀವನದ ಅಧಿದೇವತೆ ಅರ್ಯಮನ ಮುಂದಿಡುತ್ತಿದ್ದ. ಅರ್ಯಮನ ಹರಕೆ ಆಶೀರ್ವಾದಗಳು ತಮ್ಮ ಮಗಳ ಸೌಭಾಗ್ಯವನ್ನು ಎಂದಿಗೂ ಕಾಪಾಡಬೇಕೆಂದು ಅವನಿಗೆ ಪ್ರಾರ್ಥನೆ ಕಾಣಿಕೆಗಳನ್ನು ಸಮರ್ಪಿಸುತ್ತಿದ್ದರು ವೈದಿಕ ಸಮಾಜದ ತಾಯ್ತಂದೆಯರು ;

“ಅರ್ಯಮಣಂ ಯಜಾಮಹೇ ಸುಬಂಧು ಪತಿವೇದನಮ್ ।
ಉರ್ವಾರುಕಮಿವ ಬಂಧನಾತ್ ಪ್ರೇತೋ ಮುಂಚಾಮಿ ನಾಮುತಃ” ॥

ಅ.ವೇದ 14–1–17

ಬಲಿತ ಸೌತೆಯು ಬಳ್ಳಿಯಿಂದ ಕಳಚಿಕೊಳ್ಳುವಂತೆ ಬೆಳೆದ ಮಗಳು ತವರಿನಿಂದ ಅಗಲಿದರೂ, ಗಂಡನ ಮನೆಯಿಂದ ಅವಳು ಅಗಲದಿರಲಿ, ಎಲೈ ಅರ್ಯಮನೇ, ಅವಳಿಗೆ ಒಳ್ಳೆಯ ಪತಿ ದೊರೆಯಲೆಂದು ಅನುಗ್ರಹಿಸೆಂಬ ಮೊರೆ ಅವರದಾಗಿತ್ತು. ಪ್ರೇಮವಿವಾಹಕ್ಕೆ ದ್ಯೋತಕವೆನಿಸುವಂತಹ ಮಂತ್ರಗಳನ್ನು ಸಹ ನಾವು ಋಗ್ವೇದದಲ್ಲಿ ಕಾಣಬಹುದು.

---

5. ‘ಸಮನ’ ಎಂಬ ಶಬ್ದಕ್ಕೆ ವೇದಭಾಷ್ಯಕಾರರಾದ ಸಾಯಣರು ‘ಯಜ್ಞ’ ‘ಸಂಗ್ರಾಮ’ ಹಾಗೂ ಸಮವಯಸ್ಸಿನ ಗೆಳೆಯ–ಗೆಳತಿಯರ ಸಮುದಾಯ ಎಂಬುದಾಗಿ ವಿವರಣೆ ನೀಡಿರುವರು. ಪಿಶೆಲ್, ಗ್ರಿಫಿತ್, ವಿಲ್ಸನ್ ಮೊದಲಾದ ವಿದ್ವಾಂಸರುಗಳು ಉತ್ಸವವೆಂಬರ್ಥವನ್ನು ತಿಳಿಸಿರುವರು.

ಭದ್ರಾವಧೂರ್ಭವತಿ ಯತ್ಸುಪೇಶಾಃ ಸ್ವಯಂ ಸಾ ಮಿತ್ರಂ ವನುತೇ ಜನೇಚಿತ್"[6]

ರೂಪ–ಗುಣಗಳೆರಡೂ ಇರುವಂತಹ ಯುವತಿಗೆ ವರ ಸಿಕ್ಕುವುದೇನೂ ಕಷ್ಟವಿರದೆ ತನ್ನಿಚ್ಛೆಬಂದವರನ್ನೇ ಅವಳು ತನ್ನ ಪತಿಯನ್ನಾಗಿ ವರಿಸಿಕೊಳ್ಳುವ ಅವಕಾಶವಿದ್ದುದು ಮೇಲಿನ ಮಂತ್ರದಿಂದ ದೃಢೀಕೃತವಾಗುತ್ತದೆ. ಇವೆಲ್ಲಾ ಆಧಾರಗಳಿಂದ ವೈದಿಕ ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿಯಂತೂ ಜಾರಿಯಲ್ಲಿರಲಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಸಾಮಾನ್ಯವಾಗಿ ಹೆಣ್ಣುಮಕ್ಕಳ ವಿವಾಹದ ವಯೋಮಿತಿ ಎಷ್ಟೆಂಬುದರ ಬಗ್ಗೆ ವೇದಗಳಲ್ಲಿ ನೇರವಾಗಿ ತಿಳಿಸಿಲ್ಲವಾದರೂ ತೊಟ್ಟಿಲ ಕೂಸುಗಳನ್ನು ವಿವಾಹಕ್ಕೆ ಒಳಪಡಿಸುವ, ಆಡುವ ಬಾಲೆಯರನ್ನು ಮದುವೆಮಾಡಿ ತಮ್ಮ ತಲೆ ತೊಳೆದುಕೊಳ್ಳುವ ಮೂರ್ಖರು ಸ್ವಾರ್ಥಸಾಧಕರು ವೈದಿಕ ಸಮಾಜದಲ್ಲೆಲ್ಲೂ ಕಂಡು ಬರುವುದಿಲ್ಲ. ಇಂತಹ ಸಂಪ್ರದಾಯವೇನಿದ್ದರೂ ಧರ್ಮಶಾಸ್ತ್ರಗಳ ಹಾಗೂ ಪುರಾಣಗಳಕಾಲದಿಂದ ಪ್ರಾರಂಭವಾಗಿ ಆಚರಣೆಗೆ ಬಂದಿರುವುದಕ್ಕೆ ಸಾಕಷ್ಟು ಆಧಾರಗಳಿವೆ. ವೈವಾಹಿಕ ಜೀವನದ ಜವಾಬ್ದಾರಿ ಪತಿ–ಪತ್ನಿಯ ಸ್ಥಾನವನ್ನು ಅಲಂಕರಿಸುವ ಹೆಣ್ಣು ಗಂಡುಗಳಿಗೆ ಬರಬೇಕಿದ್ದಲ್ಲಿ ದೈಹಿಕವಾಗಿ ಮಾನಸಿಕವಾಗಿ ಇಬ್ಬರೂ ಪ್ರಬುದ್ಧರಿರಬೇಕೆಂಬ ಅರಿವು ಅಂದಿನ ಜನಾಂಗಕ್ಕೆ ಸಾಕಷ್ಟಿತ್ತು. ಕೆಲವೊಮ್ಮೆ ವಿವಾಹದ ಸಂದರ್ಭದಲ್ಲಿ ವಧೂವರರಿಬ್ಬರನ್ನು ಎದುರುಬದುರಾಗಿ ನಿಲ್ಲಿಸಿ ಅವರ ಮೇಲೆ ಅಗಲನೆಯ ವಸ್ತ್ರವೊಂದನ್ನು ಹೊದಿಸಿ[7] ಅವರೀರ್ವರ ನೋಟಗಳ ಮಿಲನಕ್ಕೆ ಅವಕಾಶ ಕಲ್ಪಿಸುವುದೂ ಸಹ ವಿವಾಹವಿಧಿಯ ಒಂದು ಅಂಗವಾಗಿಯೇ ರೂಢಿಯಲ್ಲಿತ್ತು. ಪಶ್ಚಿಮ ಬಂಗಾಳದಲ್ಲಿ ಈ ಸಂಪ್ರದಾಯ ಇನ್ನೂ ಸಹ ರೂಢಿಯಲ್ಲಿರುವುದು ತಿಳಿದುಬಂದಿದೆ. ವಿವಾಹವೆಂಬುದು ಕೇವಲ ಎರಡು ಬಂಧುವರ್ಗದ ನಡುವಣ ನಂಟಸ್ತಿಕೆ ಮಾತ್ರವಾಗಿರದೆ ಅದು ಜೀವಗಳೆರಡರ 'ಆತ್ಮೀಯ ಮಿಲನ'ವಾಗಬೇಕು. ಸೊಸೆಯಾಗಿ ಬರುವವಳು ತೊತ್ತಿನಂತಿರದೆ ಪತಿಗೃಹಕ್ಕೆ ಸ್ವಾಮಿನಿಯೂ ಆಗಿರಬೇಕು. ಅತ್ತೆಗೆ ಮೆಚ್ಚಿನ ಸೊಸೆಯಾಗಿ, ಮೈದುನ ನಾದಿನಿಯರ ಗೌರವವೂ ಅವಳಿಗೆ ದಕ್ಕಬೇಕು. ಮಗಳನ್ನು ಮದುವೆಮಾಡಿಕೊಟ್ಟು ತುಂಬುಹೃದಯದಿಂದ ಆಶೀರ್ವದಿಸುತ್ತಿದ್ದ ತಂದೆ ತಾಯಿ ಬಂಧುವರ್ಗದವರು ಅವಳಿಗೆ ಸಂಪೂರ್ಣವಾದ ಬದುಕನ್ನು, ಗೌರವಾದರಗಳನ್ನು ಕೋರಿ ಅತ್ತೆಯಮನೆಯಲ್ಲಿ 'ಮೆಚ್ಚಿನರಾಣಿ'ಯಂತಿರಬೇಕೆಂದು ಹಾರೈಸಿ ಹರಸುತ್ತಿದ್ದರು ;

" ಸಮ್ರಾಜ್ಞೀ ಶ್ವಶುರೇ ಭವ ಸಮ್ರಾಜ್ಞೀ 'ಶ್ವಶ್ರ್ವಾಂ ಭವ'
ನನಾಂದರಿ ಸಮ್ರಾಜ್ಞೀ ಭವ ಸಮ್ರಾಜ್ಞೀ ಅಧಿ ದೇವೃಷು "[8]—

ಎಂಬ ಮಂತ್ರವು, ಗೃಹಿಣಿಯ ಜೀವನವು ಎಲ್ಲರ ಗೌರವಾದರಗಳನ್ನು ಪಡೆದು ಬಾಳಿನ

---

6. ಋಗ್ವೇದ 10, 27, 12
7. ಅಥರ್ವವೇದ 7. 36. 37
8. ಋಗ್ವೇದ 10, 85, 46.

ಪರಿಪೂರ್ಣತೆಯನ್ನರಸುವತ್ತ ಸಾಗಬೇಕಾದಲ್ಲಿ ಅವಳಲ್ಲಿಯೂ ಸಹ ಸದ್ಗುಣಗಳಿರಬೇಕೆಂಬುದನ್ನೂ ಸಹ ಸೂಚಿಸುತ್ತದೆ. ಪತಿ ಪತ್ನಿಯರ ಬಾಳು ಚಕ್ರವಕ್ಕಿಗಳಂತೆ[9] ಇರಬೇಕೆಂಬ ಆಶಯವನ್ನು ಅಥರ್ವವೇದದಲ್ಲಿಯೂ ಕಾಣುತ್ತೇವೆ. ಎಂದೆಂದಿಗೂ ಇವರು ಅಗಲದಿರಲೆಂಬ ಹಾರೈಕೆಯನ್ನು ಸಹ ಕಾಣುತ್ತೇವೆ. ಸಾಮಾನ್ಯವರ್ಗದ ಹೆಂಗಸೊಬ್ಬಳು, ಒಕ್ಕಲು ಕಾಲದಲ್ಲಿ ಮೊರದಿಂದ ಕಾಳನ್ನು ತೂರುತ್ತಾ ತನ್ನ ಪತಿಗೆ ದೀರ್ಘಾಯುಸ್ಸನ್ನು ಕೊಡಲೆಂದು ಭಗವಂತನಲ್ಲಿ ಮೊರೆಯಿಡುವುದನ್ನು ಕಾಣುತ್ತೇವೆ. ಅಥರ್ವವೇದದ ಕಾಲಕ್ಕೆ ಬಹುಪತ್ನಿತ್ವ ರೂಢಿಗೆ ಬಂದು 'ಸವತಿದ್ವೇಷ' ಸಾಕಷ್ಟು ಹೊಗೆಯಾಡುವುದನ್ನು ಕಾಣುತ್ತೇವೆ. ಒಬ್ಬ ಸ್ತ್ರೀ ಮತ್ತೊಬ್ಬ ಸವತಿ ಸ್ತ್ರೀಯ ಮೇಲೆ ಮಾಟಮಾಡಿಸುತ್ತಿದ್ದ, ತನಗೆ ಬೇಕಾದವನನ್ನು ಒಲಿಸಿ ವರಿಸಿಕೊಳ್ಳಲು ಮಾಟದ ಮೊರೆ ಹೋಗುತ್ತಿದ್ದ ಹೆಂಗಸರೂ ಸಹ ಅಥರ್ವವೇದಿಯ ಸಮಾಜದಲ್ಲಿ ಇದ್ದುದು ಕಂಡುಬರುತ್ತದೆ ಆದರೆ ಇವೆಲ್ಲವನ್ನು ಮೀರಿದಂತೆ, ಅನ್ಯೋನ್ಯದಾಂಪತ್ಯದ ಮುಂದೆ ಭವಭೂತಿಯಂತಹ ಕವಿಗಳು ರಾಮ–ಸೀತೆಯರಲ್ಲಿ ಕಾಣಬಯಸಿದ ಅದ್ವೈತ ಭಾವದ ದಾಂಪತ್ಯಕ್ಕಾಗಿ ಉತ್ಕಟವಾದ ಅಭಿಲಾಷೆಯನ್ನೂ ಸಹ ಅಥರ್ವವೇದದಲ್ಲಿ ಕಾಣುತ್ತೇವೆ. ತನ್ನ ಪತಿ ಪರಸ್ತ್ರೀಯ ಪಾಲಾಗದೆ ಎಂದಿಗೂ ತನ್ನವನೇ ಆಗಿರಲಿ' ಎಂಬ ಮೊರೆಯನ್ನು ಅಥರ್ವವೇದದ ಮಂತ್ರಗಳಲ್ಲಿ ಅಲ್ಲಲ್ಲಿ ಕೇಳುತ್ತೇವೆ. ಮತ್ತೊಂದು ವಿಶೇಷವೆಂದರೆ ವೇದಗಳ ಕಾಲದಲ್ಲಿ 'ಮಾಂಗಲ್ಯ' ಅಥವಾ ಮಂಗಳ ಸೂತ್ರವನ್ನು ವಧುವಿನ ಕೊರಳಿಗೆ ವರನಿಂದ ಕಟ್ಟಿಸುವ ಸಂಪ್ರದಾಯವಿರಲಿಲ್ಲ. ಇದು ನಂತರ ರೂಢಿಗೆ ಬಂದದ್ದು. ಋಗ್ವೇದ ಅಥರ್ವವೇದಗಳೆರಡರಲ್ಲೂ ವಿವಾಹಕ್ಕೆ ಸಂಬಂಧಿಸಿದಂತಹ ವಿಧಿಗಳ ಬಗ್ಗೆ ವಿಸ್ತಾರವಾದ ಮಾಹಿತಿ ಇದೆ. ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಮಾತೆಯಾಗಿ ಹೆಣ್ಣು !

ಮಾತೃಸ್ಥಾನದಲ್ಲಿ ಸ್ತ್ರೀಯು ಎಲ್ಲ ಯುಗದಲ್ಲೂ ಪೂಜಾರ್ಹಳೇ, ತಾಯ್ತನವಿಲ್ಲದ ಹೆಣ್ಣಿನ ಬದುಕು ಅಪೂರ್ಣ. ಬಂಜೆತನವೆಂಬುದು ಹೆಣ್ಣಿನ ಬದುಕಿಗೊಂದು ಅಭಿಶಾಪ. ಋಗ್ವೇದದಲ್ಲಿ ಬರುವ 'ಅದಿತಿ' ದೇವತೆಯ ಕಲ್ಪನೆಯು ಮಾತೃತ್ವದ ಸಂಕೇತ. ವೇದಗಳಲ್ಲಿ ವಿವಾಹ ಸೂಕ್ತಗಳಲ್ಲಿಯೇ ಪುತ್ರಪ್ರಾಪ್ತಿಗಾಗಿ ಉಚ್ಚರಿಸಲ್ಪಡುತ್ತಿದ್ದ ಮಂತ್ರಗಳನ್ನು ಕಾಣಬಹುದು. ವಿವಾಹಿತಳಾಗುವ ವಧುವಿಗೆ ಇಂದ್ರನ ಆಶೀರ್ವಾದ ಅನುಗ್ರಹಗಳು ಬೇಕೆಂಬ ಪ್ರಾರ್ಥನೆ ಈ ಮಂತ್ರಗಳಲ್ಲಿದ್ದು, ದಶಪುತ್ರರನ್ನು ಆಕೆ ಹಡೆಯುವಂತಾಗಲಿ, ಪತಿಯು ಅವರೊಡನೆ ಏಕಾದಶನಾಗಿರಲೆಂಬ ಹಾರೈಕೆಯನ್ನು ಕಾಣಬಹುದಾಗಿದೆ.

9. "ಇಹೇಮಾವಿಂದ್ರ ಸಂನುದ ಚಕ್ರವಾಕೇವ ದಂಪತೀ ಪ್ರಜಯೈನೌ ಸ್ವಸ್ತಕೌ ವಿಶ್ವಮಾಯುರ್ವ್ಯಶ್ನುತಾಮ್" ಅಥರ್ವವೇದ 14.2.64.

ಹೀಗೆ ವಿವಾಹ, ತಾಯ್ತನಗಳಂತಹ, ಹೆಣ್ಣಿನ ಬದುಕಿನ ಮುಖ್ಯ ಹಂತಗಳನ್ನು ವೈದಿಕಸಮಾಜದಲ್ಲಿ ಕಾಣುವಂತೆಯೇ, ಬದುಕಿನ ಏರುಪೇರುಗಳ ಚಿತ್ರಣವನ್ನು ಕಾಣುತ್ತೇವೆ. ಋಗ್ವೇದ, ಅಥರ್ವವೇದಗಳಲ್ಲಿ ಬಿಂಬಿತವಾಗಿರುವ ಸಮಾಜಕ್ಕೆ ಸೇರಿದ ಸ್ತ್ರೀಯರು ತಪ್ಪುಗಳನ್ನೇ ಎಸಗುತ್ತಿರಲಿಲ್ಲವೆಂದು ಭಾವಿಸಲಾಗದು. ಋಗ್ವೇದದ ಸಮಾಜದಲ್ಲಿ 'ದೇವದಾಸಿ' ಪದ್ಧತಿ ಇತ್ತೆಂಬುದಕ್ಕೆ ಅಸ್ಪಷ್ಟವಾದ ಆಧಾರಗಳಿವೆ. ಋತಕ್ಕೆ, ಸತ್ಯಕ್ಕೆ, ಸ್ತ್ರೀಪುರುಷರಿಬ್ಬರೂ ಬದ್ಧರಾಗಿರಬೇಕೆಂಬುದನ್ನು ವೇದಗಳು ಸಾಕಷ್ಟು ಒತ್ತಿಹೇಳಿವೆ. ವೇದಗಳಲ್ಲಿನ 'ಋತ'ದ ಕಲ್ಪನೆಯೇ ಮುಂದೆ 'ಧರ್ಮ'ದ ಕಲ್ಪನೆಯಾಗಿ ಪರಿಣಮಿಸಿತೆನ್ನಬಹುದು. ಆಕಸ್ಮಿಕವಾಗಿಯೋ ಅಥವಾ ಮಾನಸಿಕ ದೌರ್ಬಲ್ಯದ ಒತ್ತಡದಿಂದಾಗಿಯೋ ಒಮ್ಮೊಮ್ಮೆ ತಪ್ಪುಮಾಡಿದಂತಹ ಮಹಿಳೆಯರನ್ನು ದಯೆ ಹಾಗೂ ಮಾನವತೆಯ ದೃಷ್ಟಿಯಿಂದ ನೋಡಲು ಹಾಗೂ ಅವರಲ್ಲಿ ಮಾನಸಿಕವಾಗಿ ಉತ್ತಮ ಸಂಸ್ಕಾರವನ್ನು ಮೂಡಿಸಲು ವೈದಿಕಸಮಾಜ ಪ್ರಯತ್ನಿಸಿದೆ.

ವೈದಿಕ ಸಮಾಜದಲ್ಲಿನ ಮತ್ತೊಂದು ವಿಶೇಷ ಅಂಶವೆಂದರೆ, ವೈಧವ್ಯದಂತಹ ಸಂಕಟಕ್ಕೆ ಗುರಿಯಾದ ಮಹಿಳೆಯರನ್ನು ಪುರುಷವರ್ಗ ಕರುಣೆಯಿಂದ ನಡೆಸಿಕೊಂಡದ್ದು. ವಿಧವೆಯರಾದ ಸ್ತ್ರೀಯರನ್ನು ಋಗ್ವೇದ ಮತ್ತು ಅಥರ್ವವೇದಕಾಲಿನ ಸಮಾಜವು 'ಸಹಗಮನ' ಅಥವಾ ಪತಿಯ ಮೃತದೇಹದೊಡನೆ ಜೀವಂತ ಸುಡುವ 'ಕ್ರೂರವಿಧಿಗೆ' ಒಳಪಡಿಸಿರಲಿಲ್ಲ. ಇದಕ್ಕೆ ಸ್ಪಷ್ಟವಾದ ಆಧಾರಗಳು ಋಗ್ವೇದದ ಹತ್ತನೆಯ ಮಂಡಲದ ಹದಿನೆಂಟನೆಯ ಸೂಕ್ತದಲ್ಲಿ ಹಾಗೂ ಅಥರ್ವವೇದದ ಹದಿನೆಂಟನೆಯ ಕಾಂಡದ 3ನೆಯ ಸೂಕ್ತದಲ್ಲಿ ಕಂಡುಬರುತ್ತವೆ.

> "ಉದೀರ್ಷ್ವ ನಾರ್ಯಭಿಜೀವಲೋಕಂ ಗತಾಸುಮೇತಂ ಉಪಶೇಷ ಏಹಿ;
> ಹಸ್ತಗ್ರಾಭಸ್ಯ ದಿಧಿಷೋಸ್ತವೇದಂ ಪತ್ಯುರ್ಜನಿತ್ವಂ ಅಭಿ ಸಂ ಬಭೂಥ "[10]

"ಎಲೈ ಸ್ತ್ರೀಯೇ, ಗತಪ್ರಾಣನಾಗಿರುವ ಈ ನಿನ್ನ ಪತಿಯ ಪಾರ್ಶ್ವದಿಂದೇಳು, ನಿನ್ನ ಮಕ್ಕಳಿರುವ ಜೀವಲೋಕ (ಭೂಲೋಕ) ದತ್ತ ನೀನು ಬರುವವಳಾಗು, ನಿನ್ನ ಪಾಣಿಗ್ರಹಣಮಾಡಿದವನಾದ, ನಿನ್ನ ಮಕ್ಕಳಿಗೆ ಜನಕನಾದ ನಿನ್ನ ಪತಿಯೊಡನೆ ಮರಣಿಸಲು ನೀನು ನಿಶ್ಚಯಿಸಿರುವೆ. ಅದನ್ನು ಬಿಟ್ಟು ನೀನು ಬರುವವಳಾಗು."

ಈ ಮೇಲಿನ ಮಂತ್ರವನ್ನು ಸಾಮಾನ್ಯವಾಗಿ ಮೃತಪಟ್ಟ ವ್ಯಕ್ತಿಯ ತಮ್ಮನಿಂದ ಹೇಳಿಸಲಾಗುತ್ತಿತ್ತು, ಹಾಗೂ ಅವನು ಆಕೆಯ ಬಲಗೈಯನ್ನು ಹಿಡಿದು ಚಿತೆಯಿಂದ ಮೇಲೆಬ್ಬಿಸಿ ಕರೆತರುತ್ತಿದ್ದನು, ನಂತರ ಅಗ್ನಿ ಜ್ವಲಿಸುವಂತೆ ಮಾಡಲಾಗುತಿತ್ತು. ವಿಧವೆಯಾದ ಹೆಂಗಸು ಚಿಕ್ಕಪ್ರಾಯದವಳಾಗಿದ್ದಲ್ಲಿ ಹಾಗೂ ಅವಳು ಅನುಮತಿ ಇತ್ತಲ್ಲಿ ಅವಳ ಮೈದುನನಿಗೆ ಅವಳನ್ನು ವಿವಾಹಮಾಡುತ್ತಿದ್ದರು ಅಥವಾ ಅವಳನ್ನು ಕೈಹಿಡಿದೆಬ್ಬಿಸಿ ಚಿತೆಯಿಂದ ಕೆಳಕ್ಕೆ ಕರೆತರುವ ಬೇರೆಯ ಯುವಕನಿಗೆ

10. ಋಗ್ವೇದ 10.18.8.

ಅವಳನ್ನು ಒಪ್ಪಿಸುತ್ತಿದ್ದರು. ಆದರೆ ಆಕೆಯ ಮೈದುನನಿಗೆ ಆದ್ಯತೆಯನ್ನು ನೀಡಲಾಗುತ್ತಿತ್ತು. ಈ ಕ್ರಮ ಬಹುಶಃ ಆಕೆಯ ಮಕ್ಕಳ ಶ್ರೇಯಸ್ಸಿಗಾಗಿ, ಆಸ್ತಿಪಾಸ್ತಿಗಳ ಸಂರಕ್ಷಣೆ ಹಾಗೂ ವೃದ್ಧ ಅತ್ತೆ-ಮಾವಂದಿರ ಹಿತದೃಷ್ಟಿಯಿಂದ ಅಂದಿನ ದಿನಗಳಲ್ಲಿ ವಿಹಿತವೆನಿಸಿರಬಹುದು. ದೇವರ ಅಥವಾ ಮೈದುನನಿಗೆ ವಿಧವೆಯಾದ ಯುವತಿಯನ್ನು ಒಪ್ಪಿಸುತ್ತಿದ್ದರೆಂಬುದಕ್ಕೆ "ಕೋ ವಾಶಯುತ್ರಾ ವಿಧವೇವ ದೇವರಂ[11]" ಎಂಬ ಮಂತ್ರಭಾಗವು ಆಧಾರವಾಗಿದೆ.

ಒಟ್ಟಿನಲ್ಲಿ ವೈದಿಕಭಾರತದ ಮಹಿಳೆಯರು ತಮ್ಮ ನಂತರದ ಮಹಿಳೆಯರಿಗಿಂತ ಕೆಲವು ವಿಶೇಷ ಸವಲತ್ತುಗಳನ್ನು ಅನುಭವಿಸಿದ್ದು ಋಗ್ವೇದ ಮತ್ತು ಅಥರ್ವವೇದಗಳ ಕೂಲಂಕಷ ಅಧ್ಯಯನದಿಂದ ತಿಳಿದುಬರುತ್ತದೆ. ಮಹಿಳೆಯರ ಮೇಲಿನ ವಿಶೇಷ ನಿರ್ಬಂಧಗಳು ಬಹುಶಃ ಆಕೆಯ ಶೀಲ-ಚಾರಿತ್ರ್ಯಗಳ ರಕ್ಷಣೆಯ ದೃಷ್ಟಿಯಿಂದ ಕಾಲಕ್ರಮದಲ್ಲಿ ರೂಪುಗೊಂಡವಾಗಿರಬಹುದು. ನೀತಿ-ನಿಯಮಗಳ ಚೌಕಟ್ಟಿನಲ್ಲಿರುವ ಬದುಕು ಶಾಂತಿ ನೆಮ್ಮದಿಗಳಿಂದ ಕೂಡಿರುವುದಾದರೂ ದಯೆ ಹಾಗೂ ಮಾನವತೆಯ ದೃಷ್ಟಿಯಿಂದ, ಕೆಲವು ನಿರ್ಬಂಧಗಳನ್ನು ಸಡಿಲಗೊಳಿಸಿಕೊಳ್ಳುವುದು ತಪ್ಪಲ್ಲವೆನಿಸುತ್ತದೆ.

---

11. ಋಗ್ವೇದ 10.40.2.

ಎಂ. ಎಸ್. ಚಂದ್ರಶೇಖರಪ್ಪ

ಸಮಾಜಕಾರ್ಯ ಹಾಗೂ ಕ್ಷೇತ್ರಕಾರ್ಯ ದಾಖಲೆ

ಕ್ಷೇತ್ರಕಾರ್ಯದಲ್ಲಿ ಸಮಾಜಕಾರ್ಯ ವಿದ್ಯಾರ್ಥಿಗಳು ವಿವಿಧ ನಮೂನೆಯ ವರದಿ/ದಾಖಲೆ*ಗಳನ್ನು ಬರೆಯುವುದು ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ. ವಿದ್ಯಾರ್ಥಿಯು ವ್ಯಕ್ತಿಯ, ವೃಂದದ ಅಥವಾ ಸಮುದಾಯದ ಜೊತೆಗೂಡಿ ಸಮಾಜ ಕಾರ್ಯ ಪ್ರಕ್ರಿಯೆಯಲ್ಲಿ ತೊಡಗಿದಾಗ ಅನೇಕ ವಿಷಯಗಳ ಹಾಗೂ ವಿಶಿಷ್ಟ ಘಟನೆಗಳ ಬಗ್ಗೆ ದಾಖಲೆಯನ್ನು ತಯಾರಿಸಬೇಕು. ಇದನ್ನು ಒಂದು 'ಸಾಧನ' (tool) ಎಂದೂ ಪರಿಗಣಿಸಲಾಗಿದೆ. ಅರ್ಥಿ/ಗಳ ಸಮಸ್ಯೆಗಳು 'ಮನೋ-ಸಾಮಾಜಿಕ' ಹಾಗೂ 'ಆರ್ಥಿಕ' ಅಂಶಗಳನ್ನೊಳಗೊಂಡಿದ್ದು ಕ್ಲಿಷ್ಟವಾದವುಗಳಾಗಿರುವುದರಿಂದ ಅವುಗಳಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳಲಾಗುವುದಿಲ್ಲ ಎಂದೇ ಹೇಳಬಹುದು. ಆದುದರಿಂದ ಅಂಥ ಮಾಹಿತಿಯನ್ನೊಳಗೊಂಡ ದಾಖಲೆಯನ್ನು ತಯಾರಿಸುವುದು ಬಹಳ ಸಮಂಜಸ ಹಾಗೂ ಅನಿವಾರ್ಯ.

ವಿದ್ಯಾರ್ಥಿಗಳು ತಯಾರಿಸಿದ ದಾಖಲೆಗಳು ಅನೇಕರಿಗೆ ವಿವಿಧ ರೀತಿಯಲ್ಲಿ ಉಪಯೋಗಕ್ಕೆ ಬರುತ್ತವೆ. ಮೊಟ್ಟಮೊದಲನೆಯದಾಗಿ, ಇವು ಇತರ ಕಾರ್ಯಕರ್ತರಿಗೆ/ವಿದ್ಯಾರ್ಥಿಗಳಿಗೆ ಅವರ ಕಾರ್ಯಾಚರಣೆಯಲ್ಲಿ ನೆರವಾಗುತ್ತವೆ. ಉದಾಹರಣೆಗೆ, ಒಬ್ಬ ವಿದ್ಯಾರ್ಥಿಯು ಕ್ಷೇತ್ರಕಾರ್ಯ ಮಾಡುವಾಗ ಅದು ಕಷ್ಟಕರವೆನಿಸಿದರೆ, ಹೆಚ್ಚು-ಕಡಮೆ ಅದೇ ರೀತಿಯ ಕ್ಷೇತ್ರಕಾರ್ಯದಲ್ಲಿ ತೊಡಗಿ ತಯಾರಿಸಿದ ದಾಖಲೆಯನ್ನು ಪರಿಶೀಲಿಸಿ ಅದರಿಂದ ಉಪಾಯವನ್ನು ಕಂಡುಕೊಳ್ಳಬಹುದಾಗಿದೆ ಇಂಥ ದಾಖಲೆಗಳು ಸಂಶೋಧನೆಯಲ್ಲಿ ತೊಡಗಿದವರಿಗೂ, ಸಾಮಾಜಿಕ ಮತ್ತು ಸಮಾಜ

---

* (1) ವರದಿ ಎಂದರೆ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ/ಸದಸ್ಯನ ಅಥವಾ ವಿಶೇಷ ಘಟನೆಯ ಬಗ್ಗೆ ಲಿಖಿತ ಅಥವಾ ಬೇರೆ ಮಾಧ್ಯಮದ ಮೂಲಕ ತಿಳಿಸುವುದು. ಇದು ಔಪಚಾರಿಕವಾದುದು.

(2) ದಾಖಲೆ ಎಂದರೆ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ/ಸದಸ್ಯನ ಅಥವಾ ವಿಶಿಷ್ಟ ಘಟನೆಯ ಬಗ್ಗೆ ಲಿಖಿತ ರೂಪದಲ್ಲಿ ವಿವರವನ್ನು ತಿಳಿಸುವುದು. ಇದೂ ಕೂಡ ಔಪಚಾರಿಕವಾದದ್ದು.

ಕಲ್ಯಾಣ 'ನೀತಿಗಳನ್ನು' ಹಾಗೂ 'ಯೋಜನೆಯನ್ನು' ರೂಪಿಸುವವರಿಗೂ ಬಹಳ ಉಪಯುಕ್ತವಾಗಿವೆ.

ಸಮಾಜಕಾರ್ಯ ಶಿಕ್ಷಣವು ಎರಡು ನಮೂನೆಯ ದಾಖಲೆಗಳನ್ನು ವಿದ್ಯಾರ್ಥಿಗಳಿಂದ ನಿರೀಕ್ಷಿಸುತ್ತದೆ. ಅವು ಯಾವುವೆಂದರೆ: (೧) ಸಂಕ್ಷಿಪ್ತದಾಖಲೆ, ಮತ್ತು (೨) ವಿವರಣಾತ್ಮಕ ದಾಖಲೆ. ಸಂಕ್ಷಿಪ್ತ ದಾಖಲೆಯಲ್ಲಿ ವಿದ್ಯಾರ್ಥಿಯು ಒಂದು ದಿನದ ಕ್ಷೇತ್ರಕಾರ್ಯದಲ್ಲಿ ಏನು ಮಾಡಿದನು ಎಂಬುದರ ಬಗ್ಗೆಯಷ್ಟೇ ಇರುತ್ತದೆ. ಈ ದಾಖಲೆಯನ್ನು ಕ್ಷೇತ್ರಕಾರ್ಯದ ಮರುದಿನವೇ ಅವರವರ ಮೇಲ್ವಿಚಾರಕರಿಗೆ ಸಲ್ಲಿಸುವರು. ವಿವರಣಾತ್ಮಕ ದಾಖಲೆಯಲ್ಲಿ ವಿದ್ಯಾರ್ಥಿಯು ಒಂದು ವಾರದ ಕ್ಷೇತ್ರ ಕಾರ್ಯದಲ್ಲಿ ಏನು ಮಾಡಿದನು ಎಂಬ ಬಗ್ಗೆ ವಿವರವಾಗಿ ಬರೆದು ಆತನ ಸಂಬಂಧಪಟ್ಟ ಮೇಲ್ವಿಚಾರಕರಿಗೆ ವಾರಕ್ಕೊಮ್ಮೆ ನಿಗದಿತ ದಿನದಂದು ಒಪ್ಪಿಸುವನು. ಇವುಗಳಲ್ಲದೆ ವ್ಯಕ್ತಿಗತ ಹಾಗೂ ವೃಂದಗತ ಸಮ್ಮೇಳನಗಳ ಬಗ್ಗೆಯೂ ವರದಿ ಒಪ್ಪಿಸಬೇಕು. ದಾಖಲೆಗಳು ಬಹು ಮುಖ್ಯವಾದವು ಏಕೆಂದರೆ, ವಿದ್ಯಾರ್ಥಿಗಳಿಗೆ ಸಂಬಂಧ ಪಟ್ಟಂತೆ ಕ್ಷೇತ್ರಕಾರ್ಯದ ಅಂತಿಮ ಮೌಲ್ಯಮಾಪನ ಮಾಡುವಾಗ ಈ ದಾಖಲೆಗಳು ಮಹತ್ವದ ಪಾತ್ರ ವಹಿಸುತ್ತವೆ ಇಂತಹ ದಾಖಲೆಗಳು ಮೇಲ್ವಿಚಾರಕನಿಗೆ ತನ್ನ ವಿದ್ಯಾರ್ಥಿಯು ಆತನ ಕ್ಷೇತ್ರಕಾರ್ಯದಲ್ಲಿ ಏನು ಮಾಡುತ್ತಿದ್ದಾನೆ ಎಂಬುದರ ಬಗ್ಗೆ ಪರಿಪೂರ್ಣವಾದ ಮಾಹಿತಿಯನ್ನು ಒದಗಿಸುತ್ತವೆ. ದಾಖಲೆಗಳನ್ನು ಬರೆಯುವುದು ಅಷ್ಟು ಸುಲಭ ವಲ್ಲ; ಆದಕ್ಕಾಗಿ ಹೆಚ್ಚು ಕಾಲವನ್ನು ವ್ಯಯಮಾಡಬೇಕಾಗುತ್ತದೆ. ಅಂದಹಾಗೆ ದಾಖಲೆಗಳನ್ನು ಬರೆಯುವ ಸಾಮರ್ಥ್ಯವನ್ನು ಬೆಳಸಿಕೊಳ್ಳಬೇಕು. ಆದಕಾರಣ ವಿದ್ಯಾರ್ಥಿಗೆ ನಾನು ಏನು ಮಾಡುತ್ತಿದ್ದೇನೆ ಎಂಬುದರ ಸ್ಪಷ್ಟ ಕಲ್ಪನೆ ಇರಬೇಕು. ವಿದ್ಯಾರ್ಥಿಗಳಿಗೆ ತಾವು ಬರೆದ ದಾಖಲೆಗಳನ್ನು ಪದೇ ಪದೇ ಅಧ್ಯಯನ ಮಾಡಲು ಸಂಬಂಧಪಟ್ಟ ಮೇಲ್ವಿಚಾರಕರು ಸಲಹೆ ಕೊಡಬೇಕು ಇದರಿಂದ ಅವರಿಗೆ ವಿಶ್ಲೇಷಣಾತ್ಮಕ ಮತ್ತು ಸಂಪೂರ್ಣ ಮಾಹಿತಿಯನ್ನೊಳಗೊಂಡ ದಾಖಲೆಗಳನ್ನು ಸಿದ್ಧಪಡಿಸಲು ಬಹಳ ಅನುಕೂಲವಾಗುವುದು. ಸಮಾಜಕಾರ್ಯ ಶಿಕ್ಷಣ ಸಂಸ್ಥೆಗಳು ಕ್ಷೇತ್ರಕಾರ್ಯಕ್ಕೆ ಸಂಬಂಧಪಟ್ಟ ರೂಪು-ರೇಷೆಗಳನ್ನು ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ಕ್ಷೇತ್ರಕಾರ್ಯ ಪ್ರಾರಂಭಿಸುವ ಮೊದಲೇ ಅವುಗಳನ್ನು ಒದಗಿಸಲಾಗುವುದು. ಈ ರೂಪು-ರೇಷೆಗಳ ಪ್ರಕಾರ ವಿದ್ಯಾರ್ಥಿಗಳು ಕ್ಷೇತ್ರಕಾರ್ಯವನ್ನು ಸಂಬಂಧಪಟ್ಟ ಮೇಲ್ವಿಚಾರಕರ ಮಾರ್ಗದರ್ಶನದಲ್ಲಿ ಮುಂದುವರಿಸುವರು.

ಸಮಾಜಕಾರ್ಯ ವಿಧಾನಗಳು ಹಾಗೂ ದಾಖಲೆ

(ಅ) ವ್ಯಕ್ತಿಗತ ಸಮಾಜಕಾರ್ಯದಲ್ಲಿ ದಾಖಲೆ

ಗಾರ್ಡನ್ ಹ್ಯಾಮಿಲ್‌ಟನ್‌ರವರು ಹೇಳಿರುವ ಪ್ರಕಾರ ದಾಖಲೆಗಳನ್ನು ಸಿದ್ಧಪಡಿಸಬೇಕಾದರೆ ವ್ಯಕ್ತಿಗೆ ಸಂಬಂಧಪಟ್ಟ ಎಲ್ಲ ರೀತಿಯ 'ಮನೋ-ಸಾಮಾಜಿಕ'

ಹಾಗೂ ಇತರೆ ಅಂಶಗಳನ್ನೊಳಗೊಂಡ ಸತ್ಯಾಂಶಗಳನ್ನು ಸಂಗ್ರಹಿಸುವುದು ಬಹಳ ಮುಖ್ಯ. ವಿದ್ಯಾರ್ಥಿಯು ಅರ್ಥಿಯ 'ಗುರುತಿನ-ಮಾಹಿತಿಯಾದಂಥ ಹೆಸರು, ವಿಳಾಸ, ಲಿಂಗ, ಧರ್ಮ, ವಯಸ್ಸು, ಮಾತೃಭಾಷೆ, ತಂದೆ-ತಾಯಿಯ ಹೆಸರು, ವಿಳಾಸ—ಮುಂತಾದ ವಿವರಗಳನ್ನು ಸಂಗ್ರಹಿಸಬೇಕು. ಮೇಲೆ ಕಾಣಿಸಿದ 'ಗುರುತಿನ-ಮಾಹಿತಿಯನ್ನು ಹೊಂದಿದನಂತರ ಅರ್ಥಿಯ ಶಾರೀರಿಕ ಬಾಹ್ಯ ಗುಣಲಕ್ಷಣಗಳಾದ ಬಣ್ಣ, ಎತ್ತರ, ಭಾರ, ಗುರುತಿನ-ಚಿನ್ಹೆಗಳು, ಇತ್ಯಾದಿ ಅಂಶಗಳೊಂದಿಗೆ ಆತ/ಆಕೆಯ ಕುಟುಂಬ-ರಚನೆಯ ಬಗೆಗೂ ಅಧ್ಯಯನ ಮಾಡಿ ದಾಖಲೆಮಾಡಿಕೊಂಡಿರಬೇಕು. ಇದಲ್ಲದೆ, ಅರ್ಥಿಯು ಸಂಸ್ಥೆಯ ಸಿಬ್ಬಂದಿ, ಇತರ ಅರ್ಥಿಗಳು, ಸಹಪಾಠಿಗಳು, ಶಾಲಾ-ಕಾಲೇಜಿನ ಅಧ್ಯಾಪಕ ವರ್ಗ (ಅರ್ಥಿ ವಿದ್ಯಾಭ್ಯಾಸದಲ್ಲಿ ತೊಡಗಿದ್ದರೆ), ಸ್ನೇಹಿತರು, ಕುಟುಂಬ ಸದಸ್ಯರು, ಸಂಬಂಧಿಗಳು ಹಾಗೂ ನೆರೆಹೊರೆಯವರೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿದ್ದಾನೆ/ಳೆ ಎಂಬುದರ ಬಗ್ಗೆ ವಿವರವಾಗಿ ವಿಚಾರಿಸಿ ದಾಖಲೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಯು 'ಅರ್ಥಿಯ ಕುಟುಂಬ'ಕ್ಕೆ ಭೇಟಿಕೊಟ್ಟು, ಕುಟುಂಬ ಸದಸ್ಯರಿಂದ ಆತನ ಹಿನ್ನೆಲೆಯ ಬಗ್ಗೆ ವಿಚಾರಿಸಿ ದಾಖಲೆ ಮಾಡುವುದೂ ಸಹ ಮುಖ್ಯವಾದುದು. ಏಕೆಂದರೆ ಅರ್ಥಿ ಮೊದಲ ಸಂದರ್ಶನ ಕಾಲದಲ್ಲಿ ಒದಗಿಸಿದ ಮಾಹಿತಿಯನ್ನು ವಿದ್ಯಾರ್ಥಿಯು 'ಭೇದಕ-ಪರೀಕ್ಷೆ' (cross-examination)ಗೆ ಗುರಿಪಡಿಸುತ್ತಾನೆ. ಇಂಥ ಪರೀಕ್ಷೆಯಿಂದ ಅರ್ಥಿಯು ಕೊಟ್ಟಿರುವ ಮಾಹಿತಿಯಲ್ಲಿ ಯಾವುದು ಸತ್ಯ ಹಾಗೂ ಅಸತ್ಯ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಅನುಕೂಲವಾಗುವುದು.

ಮೇಲೆ ನಮೂದಿಸಲ್ಪಟ್ಟ ಎಲ್ಲ ಮಾಹಿತಿಯನ್ನು ಸಂಗ್ರಹಿಸಿ, ದಾಖಲೆಯನ್ನು ತಯಾರಿಸಿದಮೇಲೆ ಅರ್ಥಿಯ ಸಮಸ್ಯೆ ಯಾವ ಸ್ವರೂಪದ್ದು ಎಂದು ಗುರುತಿಸುವುದು ಅಷ್ಟು ಕಷ್ಟಕರವಲ್ಲ. ಇದನ್ನು ನಾವು 'ರೋಗನಿದಾನ' (Diagnosis) ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ವಿದ್ಯಾರ್ಥಿಗೆ ಮೇಲ್ವಿಚಾರಕರು ಅರ್ಥಿಯ ಬಗ್ಗೆ "ಸಂಕ್ಷೇಪ-ವರದಿ"ಯನ್ನು ತಯಾರಿಸಲು ಹೇಳುವರು. ಇಂಥ 'ಸಂಕ್ಷೇಪ-ವರದಿ'ಯಲ್ಲಿ ವಿದ್ಯಾರ್ಥಿಯು ಅರ್ಥಿಯ ಬಗೆಗಿನ ಎಲ್ಲ ಮಾಹಿತಿಯನ್ನು ನಮೂದಿಸುವನು. ಅರ್ಥಿಯ ಸಮಸ್ಯೆಯ ಸ್ವರೂಪಕ್ಕನುಗುಣವಾಗಿ ಯಾವ ಚಿಕಿತ್ಸಾಕ್ರಮವನ್ನು/ಗಳನ್ನು ಅನುಸರಿಸಬೇಕು ಎಂಬುದರ ಬಗ್ಗೆ ಯೋಜನೆಯನ್ನು ವಿದ್ಯಾರ್ಥಿಯು ಮೇಲ್ವಿಚಾರಕರ ಮಾರ್ಗದರ್ಶನದಲ್ಲಿ ರೂಪಿಸುವನು, ನಂತರ ಅಂಥ 'ಚಿಕಿತ್ಸಾ-ಕ್ರಮ'ವನ್ನು ವಿದ್ಯಾರ್ಥಿಯು ಅನುಷ್ಠಾನಗೊಳಿಸಬೇಕು. ಅಂದರೆ ವಿದ್ಯಾರ್ಥಿಯು ಅರ್ಥಿಯನ್ನು ಮೊಟ್ಟಮೊದಲು ಭೇಟಿಯಾದಾಗಿನಿಂದ ಪ್ರಕ್ರಿಯೆಯನ್ನು ಅಂತ್ಯಗೊಳಿಸುವವರೆಗಿನ ಎಲ್ಲ ಉಪಯುಕ್ತ ಮಾಹಿತಿಯನ್ನು ದಾಖಲೆ ಮಾಡಬೇಕು.

ವೃಂದಗತ ಸಮಾಜಕಾರ್ಯದಲ್ಲಿ ದಾಖಲೆ :

ವೃಂದಗತ ಸಮಾಜಕಾರ್ಯವೂ, ವ್ಯಕ್ತಿಗತ ಸಮಾಜಕಾರ್ಯದಂತೆ ಸಮಾಜ ಕಾರ್ಯದ ಒಂದು ಮೂಲ ವಿಧಾನವಾಗಿದೆ. ಇಲ್ಲಿ ವಿದ್ಯಾರ್ಥಿಯು ಪ್ರತಿಯೊಬ್ಬ ವೃಂದದ ಸದಸ್ಯನ ಬಗೆಗೂ 'ಸಂಕ್ಷಿಪ್ತ-ಟಿಪ್ಪಣಿ'ಯನ್ನು ತಯಾರಿಸುವುದು ಆತನ ಕರ್ತವ್ಯ. ಈ 'ಸಂಕ್ಷಿಪ್ತ-ಟಿಪ್ಪಣಿ'ಯಲ್ಲಿ ಸದಸ್ಯರ ಹೆಸರುಗಳು, ವಯಸ್ಸು, ವಿದ್ಯಾಭ್ಯಾಸಮಟ್ಟ, ಕುಟುಂಬದ ವಾತಾವರಣ, ಇತ್ಯಾದಿ ಅಂಶಗಳನ್ನೊಳಗೊಂಡಿರುತ್ತದೆ. ವೃಂದದ ಸದಸ್ಯರನ್ನು ಹೇಗೆ ಆರಿಸಿಕೊಳ್ಳಲಾಯಿತು ಎಂಬುದನ್ನೂ ಕೂಡ ವಿವರವಾಗಿ ದಾಖಲಿಸಬೇಕು. ವೃಂದದ 'ಕಾರ್ಯಕ್ರಮ/ಗಳನ್ನು' ಕಾರ್ಯಕ್ರಮಾಭಿವೃದ್ಧಿಯಾಧಾರದ ಮೇಲೆ ಅನುಷ್ಠಾನಗೊಳಿಸಬೇಕು. ವೃಂದಗತ ಸಮಾಜ ಕಾರ್ಯದಲ್ಲಿ 'ಕಾರ್ಯಕ್ರಮಾಭಿವೃದ್ಧಿ' ಹಾಗೂ ಅದರ ಅನುಷ್ಠಾನ ಬಹು ಮುಖ್ಯವಾದವು. ಕಾರ್ಯಕ್ರಮ ನಡೆಯುವಾಗ ವಿದ್ಯಾರ್ಥಿಯು ಬಹಳ ಸೂಕ್ಷ್ಮವಾಗಿ ಪ್ರತಿಯೊಬ್ಬ ವೃಂದ ಸದಸ್ಯನ ಚಲನ-ವಲನಗಳ ಬಗ್ಗೆ ನಿಗಾ ಇಟ್ಟಿರಬೇಕು. ಪ್ರತಿಯೊಬ್ಬನೂ ಹೇಗೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾನೆ ಹಾಗೂ ಆತನ ಮತ್ತು ಇತರ ಸದಸ್ಯರ ನಡುವೆ ಇರುವ 'ಪಾರಸ್ಪರಿಕ-ಕ್ರಿಯೆ' (Interaction) ಎಂಥದ್ದು ಎಂಬುದನ್ನೂ ಕೂಡ ಗಮನಿಸಿ ದಾಖಲೆಯನ್ನು ಸಿದ್ಧಪಡಿಸಬೇಕು ಸದಸ್ಯರಲ್ಲಿ ಯಾರಾದರೂ ಸಕ್ರಿಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿಲ್ಲ ಎಂದು ಕಂಡು ಬಂದಾಗ, ಅಂಥವರನ್ನು 'ವ್ಯಕ್ತೀಕರಣ'ಕ್ಕೊಳಪಡಿಸಿ ಸೂಕ್ತ ಕ್ರಮವನ್ನು ತೆಗೆದುಕೊಂಡು ತಿದ್ದುವುದು ವಿದ್ಯಾರ್ಥಿಯ ಕರ್ತವ್ಯ ಹಾಗೂ ಇದರ ಬಗೆಗಿನ ವಿಷಯಗಳನ್ನು ದಾಖಲೆಯಲ್ಲಿ ಸೇರಿಸುವುದನ್ನು ಮರೆಯಬಾರದು.

ಸಮುದಾಯ ಕಾರ್ಯ ಸಂಘಟನೆಯಲ್ಲಿ ದಾಖಲೆ :

ಈ ವಿಧಾನವು ಸಮುದಾಯದ ಜನರು ಅನುಭವಿಸುತ್ತಿರುವ ಸಂಕಷ್ಟಗಳನ್ನು ಪ್ರಮುಖವಾಗಿ ದೃಷ್ಟಿಯಲ್ಲಿಟ್ಟುಕೊಂಡು ಅವುಗಳ ಪರಿಹಾರ ಮಾರ್ಗವನ್ನು/ಗಳನ್ನು ಕಲ್ಪಿಸಿ, ಅನುಷ್ಠಾನಗೊಳಿಸುತ್ತದೆ. ವಿದ್ಯಾರ್ಥಿಯು ಈ ವಿಧಾನದಡಿಯಲ್ಲಿ ಕೆಲಸಮಾಡಬೇಕಾದರೆ ಸಮುದಾಯದ ಬಗ್ಗೆ ಎಲ್ಲ ಮಾಹಿತಿಯನ್ನು ಸಂಗ್ರಹಿಸಬೇಕು. ಮುಖ್ಯವಾಗಿ ಅದರ ಭೌಗೋಳಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ, ಭೂ-ವಿಂಗಡನೆ, ಸಂವಹನ, ಸಾರಿಗೆ, ಆರೋಗ್ಯ, ಪಶುಸಂಗೋಪನೆ, ವ್ಯವಸಾಯ, ಕರಕುಶಲ, ಸಣ್ಣಪ್ರಮಾಣದ ಕೈಗಾರಿಕೆಗಳು ಹಾಗೂ ಸಾಮಾಜಿಕ ಸೇವಾ ಸಂಸ್ಥೆಗಳ ಬಗ್ಗೆ ಕೂಲಂಕಷವಾಗಿ ಸಂಗ್ರಹಿಸಿ ದಾಖಲೆಯನ್ನು ಸಿದ್ಧಪಡಿಸಬೇಕು. ಇದರ ಜೊತೆಗೇ, ಸಮುದಾಯದಲ್ಲಿನ ಬೇಡಿಕೆಗಳೇನೆಂಬುದನ್ನು ಪತ್ತೆಮಾಡಿ, ಅವುಗಳ ಸ್ವರೂಪದ ಬಗ್ಗೆ ಅಧ್ಯಯನ ಮಾಡಿದ ಮೇಲೆ ಅವುಗಳ ಪರಿಹಾರಕ್ಕೆ ಎಂಥ 'ಕಾರ್ಯಕ್ರಮ' ಸೂಕ್ತವಾದುದು ಎಂದು ತಿಳಿದುಕೊಳಬೇಕು. ನಂತರ 'ಕಾರ್ಯ

ಕ್ರಮ–ಯೋಜನೆ'ಯನ್ನು ರೂಪಿಸಿ, ಅನುಷ್ಠಾನಗೊಳಿಸಬೇಕು. ವಿದ್ಯಾರ್ಥಿಯು ಈ ಪ್ರಕ್ರಿಯೆಯ ವಿವಿಧ ಸ್ಥರದಲ್ಲಿ 'ಸಮುದಾಯದ ಜನರು ತಮ್ಮ ಬೇಕು ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಯಾವ ರೀತಿ ಭಾಗವಹಿಸುತ್ತಿದ್ದಾರೆ ಎಂಬುದನ್ನು ಪರಾಮರ್ಶಿಸಿ ದಾಖಲೆಯನ್ನು ತಯಾರಿಸಬೇಕು. ಅಂದಹಾಗೆ ಯಾರಾದರೂ ಸಕಾರಣವಿಲ್ಲದೆ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲದಿದ್ದರೆ ಅಥವಾ ಅದಕ್ಕೆ ಅಡ್ಡಿಯೊಡ್ಡುತ್ತಿದ್ದರೆ, ಅಂಥವರನ್ನು ವೈಯಕ್ತಿಕವಾಗಿ ಭೇಟಿಯಾಗಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಬೇಕಾದುದು ವಿದ್ಯಾರ್ಥಿಯ ಕರ್ತವ್ಯದಲ್ಲೊಂದು. ಇಂತಹ ಘಟನೆಗಳ ಬಗ್ಗೆಯಂತೂ ವಿದ್ಯಾರ್ಥಿಯು ಕೂಲಂಕಷವಾಗಿ ದಾಖಲೆ ಬರೆಯಬೇಕು.

ನಮೂನೆಗಳು ಹಾಗೂ ತತ್ವಗಳು:

ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದಂತೆ ಎರಡು ನಮೂನೆಯ ದಾಖಲೆಗಳನ್ನು ವಿದ್ಯಾರ್ಥಿಯು ಬರೆದು, ಸಿದ್ಧಪಡಿಸಬೇಕಾಗುವುದು. ಅವು ಯಾವುವೆಂದರೆ: (೧) ವೃತ್ತಾಂತ ದಾಖಲೆ (Narrative Form) ಮತ್ತು ಸಂಕ್ಷೇಪ ದಾಖಲೆ (Summary Form). ವೃತ್ತಾಂತ ದಾಖಲೆಯಲ್ಲಿ ವಿದ್ಯಾರ್ಥಿಯು, ಅರ್ಥಿ/ವೃಂದ/ಸಮುದಾಯ ಹಾಗೂ ಆತನ ನಡುವೆ ನಡೆದ ಸಂಭಾಷಣೆ ಹಾಗೂ ಇತರ ಘಟನೆಗಳ ಬಗ್ಗೆ ಹೆಚ್ಚು–ಕಡಮೆ ಯಥಾವತ್ತಾಗಿ ಪ್ರಸ್ತಾಪಿಸುವನು. ವಿದ್ಯಾರ್ಥಿಯು ಅರ್ಥಿಯ/ಸದಸ್ಯರ ಭಾವನೆಗಳನ್ನು (ಅವರ ಶಾರೀರಿಕ ಬದಲಾವಣೆಯಿಂದ) ಅರ್ಥ ಮಾಡಿಕೊಳ್ಳಬೇಕಾದರೆ, ಇಂಥ ದಾಖಲೆಯು ಬಹಳ ಉಪಯುಕ್ತವಾಗುವುದು ಎಂದು ಬೇರೆ ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ಎಲ್ಲ ನಮೂನೆಯ ದಾಖಲೆಗಳನ್ನು ಸಂದರ್ಭಕ್ಕನುಗುಣವಾಗಿ ಬರೆಯುವುದನ್ನು ವಿದ್ಯಾರ್ಥಿಯು ಕಲಿಯಬೇಕು.

ಇನ್ನು ದಾಖಲೆಯನ್ನು ಬರೆಯುವಾಗ ಸಾಮಾನ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದ ತತ್ತ್ವಗಳ ಬಗ್ಗೆ ಹೇಳಬೇಕೆಂದರೆ, ಕೆಳಗೆ ಕಾಣಿಸಿದವು ಬಹಳ ಮುಖ್ಯವಾದುವು. ಅವು ಯಾವುವೆಂದರೆ: (೧) ಆಯ್ಕೆ ತತ್ವ—ಇದರ ಅರ್ಥ ವಿದ್ಯಾರ್ಥಿಯು ಆತನ ಹಾಗೂ ಅರ್ಥಿ/ಸದಸ್ಯರ ನಡುವೆ ನಡೆದ ಎಲ್ಲ ಮಾತುಗಳನ್ನು ಕೇಳುವಷ್ಟು ಸಹನಶೀಲತೆಯನ್ನು ಹೊಂದಿರಬೇಕು. ನಂತರ ವಿದ್ಯಾರ್ಥಿಗೆ ಬೇಕಾದ ಮಾಹಿತಿಯನ್ನಷ್ಟೇ ಗಮನದಲ್ಲಿಟ್ಟುಕೊಂಡು ದಾಖಲೆಯನ್ನು ತಯಾರಿಸಬೇಕಾಗುವುದು; (೨) ವಾಚನೀಯ ತತ್ತ್ವ—ವಿದ್ಯಾರ್ಥಿಯು ಬರೆದ ದಾಖಲೆಯನ್ನು ಬೇರೆಯವರು ಓದಿ, ಅರ್ಥಮಾಡಿಕೊಳ್ಳುವಂತಿರಬೇಕು; (೩) ಭರವಸೆಯ ತತ್ತ್ವ—ಅರ್ಥಿ/ಸದಸ್ಯರಿಂದ ಸಂಗ್ರಹಿಸಿದ ಮಾಹಿತಿಯನ್ನು ಗುಪ್ತವಾಗಿಡಬೇಕಾದುದು ವಿದ್ಯಾರ್ಥಿಯ ಕರ್ತವ್ಯದಲ್ಲೊಂದು. ಅಂಥ ಮಾಹಿತಿಯನ್ನು ಯಾವ ಕಾರಣಕ್ಕೂ ಬಹಿರಂಗಪಡಿಸಬಾರದು; (೪) ಒಪ್ಪಿಗೆಯ ತತ್ತ್ವ—ವಿದ್ಯಾರ್ಥಿಯು ಬರೆದ ದಾಖಲೆ ವಾಸ್ತವಿಕತೆಯಿಂದ ಕೂಡಿದ್ದು, ಒಪ್ಪಿಗೆಗೆ ಅರ್ಹವಾಗಿರಬೇಕು; ಮತ್ತು

(೫) ವಿದ್ಯಾರ್ಥಿಯು ತನ್ನ ದಾಖಲೆಯನ್ನು ಪ್ರಕ್ರಿಯೆಗೆ ಅನುಗುಣವಾಗಿ ಬದಲಾಗಿಸಲು ಅವಕಾಶವಿರಬೇಕು.

ಉಪಸಂಹಾರ :

ಒಟ್ಟಿನಲ್ಲಿ ಹೇಳಬಹುದಾದರೆ, ದಾಖಲೆಯು ವಿದ್ಯಾರ್ಥಿಗೆ ಹಾಗೂ ಮೇಲ್ವಿಚಾರಕರಿಗೆ ಒಂದು ದಿಕ್ಸೂಚಿ ಇದ್ದಂತೆ. ದಾಖಲೆಗಳು ಇತರರಿಗೆ ಬಹಳ ಉಪಯುಕ್ತವಾಗಿವೆ. ವಿದ್ಯಾರ್ಥಿಯು ದಾಖಲೆ ಬರೆಯುವಾಗ ಮೇಲೆ ಕಾಣಿಸಿದ ಎಲ್ಲ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಹಾಗೂ ಉಪಯೋಗಿಸುವ ಭಾಷೆ ಬಹಳ ಚೊಕ್ಕವಾಗಿದ್ದು ಮತ್ತು ಸ್ಪಷ್ಟತೆಯಿಂದ ಕೂಡಿರಬೇಕು. ಅಂದ ಹಾಗೆ, ನಾವು ಇಲ್ಲಿ ಇನ್ನೊಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದೇನೆಂದರೆ, ವೃತ್ತಿಪರ ಸಮಾಜಕಾರ್ಯದಲ್ಲಿ ಇತ್ತೀಚಿನ ಹೊಸ ದೃಷ್ಟಿಕೋನವಾದ 'ಸಮಗ್ರ ಮಾರ್ಗ' (Unitary-Approach)ವೇ ಆಗಿದೆ. ಈ ಹೊಸ ದೃಷ್ಟಿಕೋನದ ಪ್ರಕಾರ ಎಲ್ಲ ವಿದಧ ಸಮಾಜಕಾರ್ಯ ವಿಧಾನಗಳನ್ನು ಯಾವುದಾದರೊಂದು ಪರಿಸರದ ಸಮಸ್ಯೆಗಳನ್ನು ಬಗೆಹರಿಸಲು ಉಪಯೋಗಿಸುವುದು. (ಉದಾ : ಒಂದು ಸಮುದಾಯದಲ್ಲಿನ ಸಮಸ್ಯೆಗಳು). ಅದರಂತೆಯೇ ಎಲ್ಲ ನಮೂನೆಯ ದಾಖಲೆಗಳನ್ನು ಸಿದ್ಧಪಡಿಸಲು ಸೂಕ್ತ ಅನುಭವವನ್ನು ಪಡೆಯುವುದು ವಿದ್ಯಾರ್ಥಿಗಳಕರ್ತವ್ಯ.

ಉಪಯುಕ್ತ ಗ್ರಂಥಗಳು ಹಾಗೂ ಲೇಖನಗಳು :

1. Gangrade K. D. 1966 — *Community Organization in India* Asia Publishing House, Bombay
2. Konopka G. 1954 — *Group Work in the Institutions : A Modern Challenges*, Associate Press, New York
3. Hamilton G. 1951 — *Theory and Practical of Social Case Work*, Columbia University Press, New York
4. Trecker H. B. 1955 — *Social Group Work : Principles and Practice*, Associate Press, New York
5. ಚಂದ್ರಶೇಖರಪ್ಪ ಎಂ.ಎಸ್. 1984 — ಕ್ಷೇತ್ರಕಾರ್ಯ : ಪರಿಕಲ್ಪನೆ ಹಾಗೂ ಸಮಸ್ಯೆಗಳು, ಮಾನವಿಕ ಕರ್ನಾಟಕ, ಸಂಪುಟ, 14, ಸಂಚಿಕೆ 4, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಚಂದ್ರಶೇಖರಪ್ಪ ಎಂ.ಎಸ್. 1987 — ಕ್ಷೇತ್ರಕಾರ್ಯ ಹಾಗೂ ಸಮಾಜಕಾರ್ಯ ಮಾನವಿಕ ಕರ್ನಾಟಕ, ಸಂಪುಟ 17, ಸಂಚಿಕೆ 4, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕೆ.ಸಂ. ೩೧೪೫೨—ಎಂಯುಪಿಎಂ—೪೨೫ ಪ್ರತಿಗಳು—೨೮-೮-೯೦

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ
★ ಮಾನವಿಕ ಕರ್ಣಾಟಕ
★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
' ಪ್ರಸಾರಾಂಗ '
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬